ಕಸ್ತೂರಿ

ಫೆಬ್ರವರಿ, ೧೯೫೮



ಬೆಲೆ : ೪ ಆಣೆ
(೨೫ ನಯೇ ಪೈಸೆ)

ಜ್ಞಾನ ಮತ್ತು ಮನೋರಂಜನ

ಕಸ್ತೂರಿ

ಕನ್ನಡ ಡೈಜೆಸ್ಟ್

ಪ್ರತಿತಿಂಗಳ ೧ನೆ ದಿನಾಂಕ ಪ್ರಕಟವಾಗುವದು.

ಮುಖ್ಯ ಸಂಪಾದಕರು :

ಮೊಹರೆ ಹನುಮಂತರಾಯರು

ಪ್ರಕಾಶಕರು :

ಲೋಕಶಿಕ್ಷಣ ಟ್ರಸ್ಟ್-ಹುಬ್ಬಳ್ಳಿ

ಕಚೇರಿ :

ಸಂಯುಕ್ತ ಕರ್ನಾಟಕ ಕಾರ್ಯಾಲಯ
ಹುಬ್ಬಳ್ಳಿ

ಮುದ್ರಕರು :

ಸಂಯುಕ್ತ ಕರ್ನಾಟಕ ಮುದ್ರಣಾಲಯ
ಹುಬ್ಬಳ್ಳಿ

ಮುಖಪುಟ ಚಿತ್ರ :

ಜಪಾನದ ಒಂದು ಪರ್ವತದ ಶಿಖರ

ಚಂದಾ ದರ :

ವಾರ್ಷಿಕ (ಅಂಚೆಸೇರಿ)		ರೂ. ೮.೦೦
ಅರ್ಧ ವರ್ಷ	—	ರೂ. ೪,೫೦
ಬಿಡಿ ಸಂಚಿಕೆ	—	ರೂ. ೦.೭೫

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟನೆಗಾಗಿ ಲೇಖ ಪ್ರಬಂಧ, ಕಥೆ ಮೊದಲಾದವನ್ನು ಸ್ವೀಕರಿಸಲಾಗುವದು. ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದು ಕಳಿಸಬೇಕು. ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖಗಳಾದರೆ ಅವುಗಳ ಮೂಲ ಲೇಖಕ ಹಾಗು ಪ್ರಕಾಶಕರ ಹೆಸರು ವಿಳಾಸಗಳನ್ನೂ ಒದಗಿಸಬೇಕು. ಮೂಲ ಲೇಖಕರ ಅನುಮತಿ ಪಡೆದೇ ಲೇಖಗಳನ್ನು ಕಳಿಸಿದರೆ ಅವುಗಳ ಮೇಲೆ ಬೇಗನೆ ನಿರ್ಣಯಕ್ಕೆ ಬರಲು ಸುಲಭವಾಗುವದು. ಅಸ್ವೀಕೃತ ಲೇಖಗಳು ತಿರುಗಿ ಬೇಕಾಗಿದ್ದರೆ **ಲೇಖಗಳ ಸಂಗಡವೇ** ತಿರುಗಿ ಕಳಿಸಲು ಅವಶ್ಯಬೀಳುವಷ್ಟು ಅಂಚೆ ತಿಕೀಟುಗಳನ್ನೂ ಕಳಿಸಿರಬೇಕು. ಲೇಖ ಸ್ವೀಕೃತವಾದರೆ ಯಥಾವಕಾಶ ಪ್ರಕಟಿಸಲಾಗುವದು; ಆದರೂ ಸಾಮಾನ್ಯವಾಗಿ ಸ್ವೀಕೃತ ಲೇಖಗಳ ಸ್ವೀಕಾರದ ಸುದ್ದಿಯನ್ನು ಲೇಖ ತಲುಪಿದ ನಾಲ್ಕು ವಾರದೊಳಗಾಗಿ ಲೇಖಕರಿಗೆ ತಿಳಿಸಲಾಗುವದು. ಲೇಖಕರು ತಮ್ಮ ಲೇಖಗಳ ಸ್ಥಳಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವದೊಳಿತು.

ಲೇಖ ಪ್ರಕಟವಾದರೆ "ಕಸ್ತೂರಿ" ಯು ಆಗಿಂದಾಗ್ಗೆ ಗೊತ್ತುಪಡಿಸಿಕೊಂಡ ಕ್ರಮದಲ್ಲಿ ಪ್ರತಿಫಲವನ್ನು ಆದಷ್ಟು ಬೇಗ ಕೊಡಲಾಗುವದು. ಲೇಖಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

ಚಂದಾದಾರರಿಗೆ ಸೂಚನೆ

ಪ್ರತಿತಿಂಗಳ "ಕಸ್ತೂರಿ" ಆಯಾ ತಿಂಗಳ ೧ನೇ ದಿನಾಂಕದೊಳಗೇ ಪ್ರಕಟವಾಗುವುದು. ಅದು ಚಂದಾದಾರರಿಗೆ ಆಯಾ ತಿಂಗಳ ೫ ನೇ ದಿನಾಂಕದೊಳಗೆ ತಲಪುವದು. ಹಾಗೆ ಬಾರದಿದ್ದರೆ ಚಂದಾದಾರರು ತಮ್ಮ ಟಪಾಲು ಕಟ್ಟೆಯಲ್ಲಿ ಮೊದಲು ವಿಚಾರಿಸಿ ನಮಗೆ ತಿಳಿಸಬೇಕು. ಚಂದಾದಾರರು ಕಾರ್ಯಾಲಯದೊಡನೆ ಪತ್ರವ್ಯವಹಾರ ಮಾಡುವಾಗ್ಗೆ ತಮ್ಮ ಚಂದಾ ನಂಬರು ಕಾಣಿಸಲು ಮರೆಯಬಾರದು.

ಈ ಸಂಚಿಕೆಯಲ್ಲಿ

ಕಸ್ತೂರಿ

ವರ್ಷ ೨ ಫೆಬ್ರುವರಿ ೧೯೫೮ ಸಂಚಿಕೆ ೬

ಏನ ಬೇಡಲಿ ನಿನ್ನ ಬಳಿಗೆ ಬಂದು?

ಶ್ರೀ ವಿವೇಕಾನಂದರ ಜೀವನದ ಒಂದು ಪ್ರಸಂಗ

ಸ್ವಾಮಿ ವಿವೇಕಾನಂದರು ಇನ್ನೂ ತಾರುಣ್ಯದಲ್ಲಿ ಕಾಲಿಟ್ಟಿದ್ದಾಗ ನಡೆದ ಸಂಗತಿ ಇದು. ಅವರು ಆಗ ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸಬೇಕಾದ ಪ್ರಸಂಗವಿದ್ದಿತು. ಅವರಿನ್ನೂ ಆಗ ಸ್ವಾಮಿ ವಿವೇಕಾನಂದರಾಗಿರದೆ ಬರಿಯ ನರೇಂದ್ರನಾಥರಾಗಿದ್ದರು. ತಂದೆಯ ಆಕಸ್ಮಿಕ ಮರಣದಿಂದ ಸಂಸಾರದ ಭಾರವೆಲ್ಲ ಅವರ ಮೇಲೆ ಬಿದ್ದಿತ್ತು. ನೌಕರಿಯನ್ನು ಸಂಪಾದಿಸಲು ಅವರು ವಿಶ್ವಪ್ರಯತ್ನ ಮಾಡಿದರು. ಆದರೆ ಅವು ಫಲಿಸಲಿಲ್ಲ. ಅನ್ನ-ಅರಿವೆಗಳ ಬಗ್ಗೂ ಚಿಂತಿಸ ಬೇಕಾದ ಪ್ರಸಂಗ ಬಂದಿತು. ಶೋಕಸಂತಪ್ತಳಾದ ತಾಯಿ ಮತ್ತು ಬಂಧು ಭಗಿನಿಯರು ಅರೆಹೊಟ್ಟೆಯುಂಡು ಬಳಲುವದನ್ನು ಕಂಡು ಅವರ ಹೃದಯಕ್ಕೆ ಅಸಹ್ಯ ವೇದನೆಯುಂಟಾಗುತ್ತಿತ್ತು. "ಅಯ್ಯೋ! ನಾನು ಜೀವಂತನಾಗಿದ್ದೂ ಇವರು ಈ ರೀತಿ ಬಳಲಬೇಕೇ? ಅಂದ ಮೇಲೆ ನಾನು ಜೀವಿಸಿ ಪ್ರಯೋಜನವೇನು?" ಎಂದವರು ಪರಿತಪಿಸಿದರು. ಅವರು ಕೆಲವೊಂದು ಪುಸ್ತಕಗಳ ಭಾಷಾಂತರವನ್ನು ಮಾಡಿಕೊಟ್ಟಿದ್ದರು; ಅಟಾರ್ನಿಯೊಬ್ಬರ ಕಚೇರಿಯಲ್ಲಿ ಕೆಲ ದಿನ ಕೆಲಸ ಮಾಡಿದ್ದರು; ಆದರೆ ಸಂಸಾರದ ಕೊರತೆ ತಗ್ಗಿರಲಿಲ್ಲ, ತಗ್ಗುವ ಲಕ್ಷಣಗಳೂ ಇರಲಿಲ್ಲ.

ಸಕಲ ಬಗೆಗಳಿಂದಲೂ ನಿರಾಶನಾದ ನರೇಂದ್ರನಾಥನು ಆತ್ಮಹತ್ಯೆಯ ನಿರ್ಧಾರವನ್ನೂ ಒಮ್ಮೆ ಮಾಡಿದನು. ಆದರೆ ಅಷ್ಟರಲ್ಲಿ ಆತನಿಗೆ ಸಹಸಾ ಶ್ರೀರಾಮಕೃಷ್ಣ ಪರಮಹಂಸರ ಇಷ್ಟ ದೇವಿ, ಮಹಾಮಾಯೆ ದುರ್ಗಾದೇವಿಯ ನೆನಪು ಬಂದಿತು. "ದುರ್ಗಾಮಾತೆ ಬಹು ದಯಾಮಯಳು, ಸದಾ ಸಂಸಾರದ ಕಷ್ಟ-ದುಃಖಗಳನ್ನು ದೂರಮಾಡುವವಳು. ಶ್ರೀರಾಮಕೃಷ್ಣರ ಮೇಲೆ ಅವಳ ಕೃಪೆ ವಿಶೇಷವಾಗಿದೆ. ಶ್ರೀರಾಮಕೃಷ್ಣರಿಗೆ ಹೇಳಿ ದುರ್ಗಾಮಾತೆಯ ಮೂಲಕ ನೌಕರಿಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ತ್ರಿಭುವನವನ್ನು ಪಾಲಿಸಿ ಪೋಷಿಸುವ ಅನ್ನಪೂರ್ಣಾ ಮಾತೆಗೆ ನನಗೆ ಒಂದು ದೊಡ್ಡ ನೌಕರಿಯನ್ನು ಕೊಡಿಸುವದೇನು ಮಹಾ ಕಾರ್ಯ?" ಎಂದು ನರೇಂದ್ರನಾಥ ಯೋಚಿಸಿದ.

ಅಂತರಂಗದಲ್ಲಿ ಈ ಪ್ರೇರಣೆಯಾದದ್ದೇ ತಡ, ನರೇಂದ್ರನಾಥ ದಕ್ಷಿಣೇಶ್ವರಕ್ಕೆ ತೆರಳಿ ಶ್ರೀರಾಮಕೃಷ್ಣರನ್ನು ಭೆಟ್ಟಿಯಾದ. ಸಮಯ ನೋಡಿ

ಕೊಂಡು ಮೆಲ್ಲಗೆ " ನೀವೊಮ್ಮೆ ಮಾತೆಗೂ ನನ್ನ ವಿಷಯವನ್ನು ಹೇಳಿರಲ್ಲ " ಎಂದ.

ಶ್ರೀರಾಮಕೃಷ್ಣರು ಅವಾಕ್ಕಾಗಿ ನರೇಂದ್ರ ನಾಥನ ಮುಖವನ್ನು ದಿಟ್ಟಿಸಿ ನೋಡತೊಡಗಿದರು. ಒಂದು ಕ್ಷಣದ ನಂತರ, '' ಏನೆಂದು ಹೇಳಲಿ, ನರೇಂದ್ರ ? '' ಎಂದರು.

" ಅಮ್ಮ ಮತ್ತು ನನ್ನ ಬಂಧು ಭಗಿನಿಯರ ದಾರುಣ ದುಃಖವನ್ನು ನನ್ನಿಂದ ಇನ್ನು ನೋಡುವದು ಸಾಧ್ಯವಿಲ್ಲ '' ನರೇಂದ್ರ ದುಃಖಿತ ಕಂಠದಿಂದ ಹೇಳಿದ.

ಶ್ರೀರಾಮಕೃಷ್ಣರು ತಮ್ಮ ಸ್ವಾಭಾವಿಕವಾದ ಪರಮಸ್ನೇಹದ ಸ್ನಿಗ್ಧ ದೃಷ್ಟಿಯಿಂದ ನರೇಂದ್ರನನ್ನು ನೋಡುತ್ತ '' ನರೇಂದ್ರ, ಮಾತೆ ಕೇವಲ ನನ್ನೊಬ್ಬನ ಮಾತೇಯೆನು ? ಅವಳು ನಿನಗೇನೂ ಅಲ್ಲವೇ ? '' ಎಂದು ಕೇಳಿದರು.

ನರೇಂದ್ರನಿಗೆ ಉತ್ತರಕೊಡುವದಾಗಲಿಲ್ಲ. ಆತ ಸುಮ್ಮನೆ ತಲೆ ತಗ್ಗಿಸಿಕೊಂಡು ಕುಳಿತ. ಕೊನೆಗೆ ಮೆಲ್ಲಗೆ " ಅವಳು ಸರ್ವಸ್ವೀ ನಿಮ್ಮವಳು. ನಿಮ್ಮ ಮಾತನ್ನು ಅವಳೆಂದಿಗೂ ಮೀರಲಾರಳು '' ಎಂದನು.

'' ನಾನವಳಲ್ಲಿ ಹಣದ ಯಾವ ಮಾತನ್ನೂ ಎತ್ತಲಾರೆ. ''

'' ಇಲ್ಲ. ಇಂದು ನೀವು ಹೇಳಲೇಬೇಕು. ಇಲ್ಲವಾದರೆ ನಾನಿಲ್ಲಿ ಎಂದೂ ಕಾಲಿಡುವದಿಲ್ಲ '' ನರೇಂದ್ರ ಹಟ ಹಿಡಿದು ಹೇಳಿದ.

ಅಪಾರ ಕರುಣೆಯ ಸಾಗರವಾಗಿದ್ದ ರಾಮಕೃಷ್ಣರ ಕಣ್ಣುಗಳು ಹನಿಗೂಡಿದವು. ಅವರು ಗದ್ಗದಿತ ಸ್ವರದಲ್ಲಿ ಹೇಳಿದರು: "ನಿನಗೆ ಗೊತ್ತಿಲ್ಲ ನರೇಂದ್ರ, ನಾನೆಷ್ಟು ಸಲ ಮಾತೆಯ ಬಳಿ ಹಟ ಹಿಡಿದಿದ್ದೇನೆನ್ನುವದು ! ' ಅಮ್ಮಾ, ನರೇಂದ್ರನ ಕಷ್ಟವನ್ನು ದೂರ ಮಾಡು. ಅವನನ್ನು ಪೋಷಿಸು' ಎಂದು ಬೇಡಿಕೊಂಡಿದ್ದೇನೆಂದು ! ಆದರೆ ಮಾತೆ ನನ್ನ ಮಾತನ್ನು ಕೇಳಲೊಲ್ಲಳು—ನೀನೇ ಅವಳನ್ನು ಕೇಳಿಕೊಳ್ಳಬೇಕು ಎಂದು ಅವಳ ಮನಸ್ಸಿನಲ್ಲಿದೆಯೋ ಏನೋ. ನೀನೇ ಸ್ವತಃ ಅವಳನ್ನು ಕೇಳು. ನಿನ್ನ ಮೇಲೆ ಅವಳ ವಾತ್ಸಲ್ಯವೇನೂ ಕಡಿಮೆಯಿಲ್ಲ. "

ಕಣ್ಣನ್ನೊರಸಿಕೊಂಡು ಮತ್ತೆ ಶ್ರೀ ರಾಮಕೃಷ್ಣರು ಹೇಳಿದರು : " ಇಂದು ಮಂಗಳವಾರ. ರಾತ್ರಿ ಕಾಲೀ ಮಂದಿರಕ್ಕೆ ಹೋಗಿ ಮಾತೆಗೆ ನಮಸ್ಕಾರ ಮಾಡಿ ಮನದಲ್ಲಿ ಬಂದದ್ದನ್ನು ಬೇಡಿಕೊ. ನಿನಗೆ ಬೇಡಿದ್ದೆಲ್ಲ ಸಿಗುವದು. ಇಂದು ಎಷ್ಟು ಸಾಧ್ಯವಿದೆಯೊ ಅಷ್ಟನ್ನೂ ಅವಳಿಂದ ಲೂಟಿ ಮಾಡಿಕೊ. ಮಾತೆಯ ಅಕ್ಷಯ ಭಾಂಡಾರವು ಅದರಿಂದೆಂದೂ ಕ್ಷೀಣಿಸಲಾರದು. ''

'' ನಿಜವಾಗಿ ? ''

" ನೀ ಕೇಳಿ ನೋಡಲ್ಲ. "

ಸಾವಕಾಶವಾಗಿ ಆ ಮಂಗಲಮಯ ರಾತ್ರಿ ಬಂತು. ರಾತ್ರಿಯ ಒಂದು ಪ್ರಹರ ಕಳೆದ ಬಳಿಕ ಶ್ರೀರಾಮಕೃಷ್ಣರು ಬಂದು ನರೇಂದ್ರನಿಗೆ "ಈಗ ಹೋಗು ಮಂದಿರದೊಳಗೆ. ಮನಃಪೂರ್ವಕವಾಗಿ ನಮಸ್ಕರಿಸಿ ಹೃದಯಕಾಮನೆಯನ್ನು ಬೇಡಿಕೊ" ಎಂದರು.

ಮಂದಿರದಲ್ಲಿ ಮತ್ತಾರೂ ಇರಲಿಲ್ಲ. ಭಕ್ತಜನರು ಮಾತೆಯ ಅಭಯದಾನ ಪಡೆದು ತಂತಮ್ಮ ಮನೆಗಳಿಗೆ ಹೊರಟುಹೋಗಿದ್ದರು. ಒಳಗೆ ಬಂದು ನರೇಂದ್ರ ನೋಡಿದ: ತ್ರಿಭುವನದ ಸಂತೋಷ—ವಾತ್ಸಲ್ಯಗಳು ಭುವನಮೋಹನ ರೂಪ ತಾಳಿ ವಿರಾಜಿಸಿದಂತಿತ್ತು. ಸಹಸ್ರನಯನೋಜ್ವಲಾ, ತ್ರಿಪುರಸುಂದರಿ, ಮಹಾಮಾಯೆ ಮಾತೆಯು ಅಭಯಮುದ್ರಾಧಾರಣ ಮಾಡಿ ಆಸೀನಳಾಗಿದ್ದಳು. ಅವಳ ಒಡ್ಡೋಲಗದಲ್ಲಿ ಎಲ್ಲಿಯ ದುಃಖ, ಎಲ್ಲಿಯ ಶೋಕ, ಎಲ್ಲಿಯ ಅಭಾವ!

ಕ್ಷೇಮಮಯಿ ಮಾತೆಯ ಮೂರ್ತಿಯ ಬಳಿಗೆ ಹೋಗಿ ನರೇಂದ್ರ ನಿಂತುಕೊಂಡ. ಮಾತೆಯ ಮುಖಕಮಲವನ್ನು ದಿಟ್ಟಿಸಿ ನೋಡುತ್ತ ನಿಂತುಕೊಂಡ. ಆತನ ತನು-ಮನಗಳೆರಡೂ ಅರ್ಪಣೆಯ ಭಾವದಲ್ಲಿ ತಲ್ಲೀನವಾಗಿಹೋದವು. ತನ್ನ ದೇಹದ ಪ್ರತಿಯೊಂದು ಕಣದಲ್ಲಿ ಮಾತೆಯ ವಾತ್ಸಲ್ಯಝರಿ ಹರಿಯುತ್ತಿದೆಯೆಂದು ಅವನಿಗನಿಸಿತು. ಇಂಥ ಸಂತೋಷಸಮಾಧಿ ಭಾವದಲ್ಲಿ ಬಾಯಿಯಿಂದ ಹೇಳುವದಾದರೂ ಏನನ್ನು ? ಮಾತೆಗೆ ನಮಸ್ಕರಿಸಿ ಭಕ್ತಿವಿಹ್ವಲ ಹೃದಯ

ದಿಂದ, "ತಾಯಿ, ನನಗೆ ಜ್ಞಾನವನ್ನು ದಯಪಾಲಿಸು, ಭಕ್ತಿಯನ್ನು ದಯಪಾಲಿಸು, ವೈರಾಗ್ಯವನ್ನು ದಯಪಾಲಿಸು" ಎಂದನು. ಅದೇ ತನ್ಮಯಭಾವದಲ್ಲಿ ಮುಳುಗಿ ಪ್ರಸನ್ನ ಮುಖದಿಂದ ಹೊರಗೆ ಬಂದನು.

"ಏನೋ, ಮಾತೆಯ ಬಳಿಗೆ ಹೋಗಿದ್ದೆಯಾ? ಮನೋವಾಂಛಿತವನ್ನು ಬೇಡಿಕೊಂಡೆಯಾ?" ಎಂದು ಶ್ರೀರಾಮಕೃಷ್ಣರು ಕೇಳಲು ನರೇಂದ್ರನು ದಿಙ್ಮೂಢನಂತೆ ಅವರನ್ನು ನೋಡತೊಡಗಿದ.

"ಹೋಗು ಹೋಗು, ಮತ್ತೊಮ್ಮೆ ಹೋಗು" ಎಂದು ನರೇಂದ್ರನನ್ನು ಮಂದಿರದತ್ತ ದೂಡುತ್ತ ಶ್ರೀರಾಮಕೃಷ್ಣರು, "ಮತ್ತೊಮ್ಮೆ ಹೋಗಿ ಪ್ರಾರ್ಥನೆ ಮಾಡು. ಮನಸ್ಸಿನ ಮಾತನ್ನು ಮಾತೆಯ ಬಳಿ ಹೇಳದಿದ್ದರೆ ಮತ್ತಾರ ಹತ್ತಿರ ಹೇಳುವೆ?" ಎಂದರು.

ನರೇಂದ್ರ ಮತ್ತೆ ಮಂದಿರದೊಳಗೆ ಬಂದ. ಆದರೆ ಅಖಿಲೇಶ್ವರಿಯಾದ, ದಯಾರ್ದ್ರಚಿತ್ತೆಯಾದ, ಸಮಸ್ತ ಬ್ರಹ್ಮಾಂಡದ ಪಾಲನಕರ್ತ್ರಿಯಾದ ಮಾತೆಯ ಹತ್ತಿರ ನರೇಂದ್ರ ಏನನ್ನು ಬೇಡಬೇಕು? ಮತ್ತೆ ಮೊದಲಿನ ಪ್ರಾರ್ಥನೆಯೇ ಮುಖದಿಂದ ಹೊರಬಿತ್ತು— "ತಾಯಿ, ನನಗೆ ಜ್ಞಾನವನ್ನು ದಯಪಾಲಿಸು, ಭಕ್ತಿಯನ್ನು ದಯಪಾಲಿಸು, ವೈರಾಗ್ಯವನ್ನು ದಯಪಾಲಿಸು."

ತಿರುಗಿಬಂದ ನರೇಂದ್ರನನ್ನು, "ಈ ಸಲವಾದರೂ ಮರೆಯಲಿಲ್ಲವಷ್ಟೇ? ಮಾತೆಯ ಬಳಿ ಸರಿಯಾಗಿ ಬೇಡಿಕೊಂಡೆಯೋ ಇಲ್ಲವೋ?" ಎಂದು ಶ್ರೀರಾಮಕೃಷ್ಣರು ಕೇಳಿದರು.

ನರೇಂದ್ರ ಅವಾಕ್ಕಾದವನಂತೆ "ಅಲ್ಲಿ ನನ್ನಿಂದ ಏನೂ ಬೇಡಿಕೊಳ್ಳುವದಾಗಲಿಲ್ಲ. ಮಾತೆಯನ್ನು ನೋಡಿದೊಡನೆ ಅದು ಹೇಗೋ ನನಗೆ ಎಲ್ಲವೂ ಮರೆತುಹೋಯಿತು" ಎಂದ.

ಶ್ರೀರಾಮಕೃಷ್ಣರು ತುಸು ಕಠೋರರಾಗಿ "ಇಂಥ ಸ್ವರ್ಣಸಂಧಿಯನ್ನು ಕಳೆದುಕೊಂಡು ಜನ್ಮವಿಡೀ ಪಶ್ಚಾತ್ತಾಪಪಟ್ಟುಕೊಂಡೀಯೇ ನರೇಂದ್ರ. ಇನ್ನೂ ಒಮ್ಮೆ ಹೋಗು. ಸರಿಯಾಗಿ ಎಚ್ಚರವಿಟ್ಟುಕೊಂಡು ಸ್ಥಿರಚಿತ್ತನಾಗಿ ಮನೋವಾಂಛಿತವನ್ನು ಕೇಳಿಕೋ" ಎಂದರು.

ಶ್ರೀರಾಮಕೃಷ್ಣರ ಮಾತನ್ನು ಶಿರಸಾವಹಿಸಿ ನರೇಂದ್ರ ಮತ್ತೆ ಮಾತೆಯ ಬಳಿಗೆ ಬಂದ. ಮಾತೆ ಮೋಕ್ಷರೂಪಿಣಿಯಾಗಿ ಕುಳಿತಿರುವದನ್ನು ಕಂಡ. ಆಕಾಶದಿಂದ ಭೂಮಿಯ ವರೆಗೆ ಅವಳ ಆಸನ ವಿಸ್ತೀರ್ಣವಾಗಿದ್ದಿತು. ದೇಹ, ಬುದ್ಧಿ ರೂಪದಲ್ಲೂ ಅವಳೇ, ಮನೋರೂಪದಲ್ಲೂ ಅವಳೇ, ಸುಖದುಃಖಭೋಕ್ತೃವಾದ ಪ್ರಾಣರೂಪದಲ್ಲಿ ಅವಳೇ, ವಿಶುದ್ಧ ಚೈತನ್ಯರೂಪದಲ್ಲಿಯೂ ಅವಳೇ ವ್ಯಾಪಿಸಿದ್ದಳು. ಅವಳು ಸರ್ವಸ್ವರೂಪ ಸರ್ವೇಶ್ವರಿಯಾಗಿದ್ದಳು.

•

ಈ ಸರ್ವವ್ಯಾಪಿನಿ ಮಾತೆಯ ಸೃಷ್ಟಿಯಲ್ಲಿ ವಾತ್ಸಲ್ಯ ಇಲ್ಲದಿರುವ ಎಡೆಯಾದರೂ ಇದೆಯೆ? ಇಲ್ಲಿ, ಅಲ್ಲಿ, ಎಲ್ಲೆಡೆಯಲ್ಲಿ ಮಾತೆಯ ಸ್ತನ್ಯದ ಪ್ರಾಣಧಾರೆಗಳು ಹರಿಯುತ್ತಿವೆ. ಮಾತೆಯೆಂದಾದರೂ ತನ್ನ ಆಶ್ರಿತರನ್ನು ಉಪೇಕ್ಷೆ ಮಾಡುತ್ತಾಳೆಯೆ? ನನಗೇನಾಗಿದೆ? ಮಾತೆಯ ವಾತ್ಸಲ್ಯದಲ್ಲಿ ನಂಬಿಗೆಯೇಕೆ ಹಾಳಾಯಿತು? ನಾನೆಂಥ ಮೂರ್ಖ! ನಾನೆಂಥ ಅಜ್ಞಾನಿ!

ಗದ್ಗದ ಕಂಠದಿಂದ ನರೇಂದ್ರ ಮಾತೆಯ ಬಳಿ ತನ್ನ ಅಂತರಂಗದ ಕಾಮನೆಯನ್ನು ಬೇಡಿಕೊಂಡ: "ಮತ್ತೇನೇನೂ ಬೇಡ ತಾಯಿ, ನನಗೆ ಜ್ಞಾನವನ್ನು ದಯಪಾಲಿಸು, ಭಕ್ತಿಯನ್ನು ದಯಪಾಲಿಸು, ವೈರಾಗ್ಯವನ್ನು ದಯಪಾಲಿಸು."

ಹೊರಗೆ ಶ್ರೀರಾಮಕೃಷ್ಣರು "ಏನೋ, ಈ ಸಲ ಬೇಕಾದ್ದೆಲ್ಲವನ್ನೂ ಬೇಡಿಕೊಂಡೆಯಾ?" ಎಂದು ಕೇಳಿದರು.

"ತಾಯಿಯ ಹತ್ತರ ಏನನ್ನಾದರೂ ಬೇಡಿಕೊಳ್ಳುವದು ಸಾಧ್ಯವಿದೆಯೆ? ತಾಯಿಯ ಹತ್ತಿರ ಹೇಳಿಕೊಳ್ಳಲು ನನಗೆ ನಾಚಿಕೆಯೆನಿಸುತ್ತದೆ" ಎಂದ ನರೇಂದ್ರ.

"ನಾಚಿಕೆಯೆನಿಸುತ್ತದೆ!" ಶ್ರೀರಾಮಕೃಷ್ಣರ ಕಂಗಳಲ್ಲಿ ಆನಂದಜಲದ ಝರಿ ಚಿಮ್ಮಿತು.

• • •

ದಾರಿ ದೀಪಗಳು

ಮಾನವನ ಆತ್ಮ ಎಷ್ಟು ಅದ್ಭುತವಾದದ್ದು ! ಎಷ್ಟೇ ದೋಷಗಳಿದ್ದರೂ ಮನುಷ್ಯ ಯುಗಯುಗಾಂತರಗಳಿಂದ ತನ್ನ ಧ್ಯೇಯಗಳಿಗಾಗಿ, ವಿಶ್ವಾಸಗಳಿಗಾಗಿ, ಸತ್ಯಕ್ಕಾಗಿ, ದೇಶಕ್ಕಾಗಿ ಮತ್ತು ಆತ್ಮಗೌರವಕ್ಕಾಗಿ ತನ್ನ ಪ್ರಾಣಗಳನ್ನೂ ತನಗೆ ಪ್ರಿಯವಾದುದೆಲ್ಲವನ್ನೂ ಬಲಿ ಕೊಟ್ಟಿದ್ದಾನೆ. ಅವನ ಧ್ಯೇಯ ಬದಲಾಗುತ್ತಿರಬಹುದು, ಆದರೆ ಆತ್ಮಯಜ್ಞದ ಶಕ್ತಿಯನ್ನು ಮಾನವ ಕಳೆದುಕೊಂಡಿಲ್ಲ. ಈ ಕಾರಣದಿಂದ ಅವನ ಎಷ್ಟೋ ತಪ್ಪುಗಳು ಕ್ಷಮ್ಯವಾಗಿ ಕಾಣಿಸುತ್ತವೆ. ಮಾನವನನ್ನು ಕುರಿತು ಎಂದೂ ನಿರಾಶೆಗೊಳ್ಳಲು ಎಡೆಯೇ ಇಲ್ಲ. ದೇವತೆಗಳೆಂಬವರು ಇದ್ದರೋ ಇಲ್ಲವೋ. ಆದರೆ ಮಾನವನಲ್ಲಂತೂ ಖಂಡಿತವಾಗಿ ದೇವಾಂಶವಿದೆ. —ಜವಾಹರಲಾಲ ನೆಹರು (ಭಾರತ ದರ್ಶನದಲ್ಲಿ)

ಬಾಲ್ಯದಿಂದಲೂ ನನ್ನ ಮನಸ್ಸನ್ನು ಆವರಿಸಿದ ವಿಚಾರವಿದು. ನನ್ನ ಸುತ್ತಮುತ್ತಲೂ ಇರುವ ಇಷ್ಟೆಲ್ಲ ಜನರು ಚಿಂತೆಯಿಂದಲೂ ದುಃಖದಿಂದಲೂ ನವೆಯುತ್ತಿರುವಾಗ್ಗ ನಾನು ಇಷ್ಟು ಸುಖವಾಗಿ ಜೀವನ ಮಾಡುವುದು ಶುದ್ಧ ಅರ್ಥರಹಿತವಲ್ಲವೆ ? ಸಾಂಪತ್ತಿಕ ಪರಿಸ್ಥಿತಿಯಿಂದಾಗಲಿ ಆರೋಗ್ಯದ ಅಭಾವದಿಂದಾಗಲಿ ಸುಖಜೀವನಕ್ಕೆರವಾದ ಜನರ ಯೋಚನೆ ನಿರಂತರವಾಗಿ ನನ್ನನ್ನು ಕಾಡುತ್ತಿತ್ತು.

೧೯೦೪ ರಲ್ಲಿ ಒಂದು ದಿನ ನನಗೊಂದು ವಿಚಾರ ಹೊಳೆಯಿತು. ನನಗೆ ಪ್ರಾಪ್ತವಾದ ಈ ಸುಖವನ್ನೆಲ್ಲ ನಾನು ನನ್ನ ಹಕ್ಕಿನ ಸುಖ ಎಂದು ಅನುಭವಿಸುವುದು ಸರಿಯಲ್ಲ ; ಅದಕ್ಕೆ ಪ್ರತಿಯಾಗಿ ಏನನ್ನಾದರೂ ಕೊಡಬೇಕು—ಎಂದು. ಅಂದಿನಿಂದ ಮಾನವಕುಲದ ಪ್ರತ್ಯಕ್ಷ ಸೇವೆಗಾಗಿ ನನ್ನ ಜೀವನವನ್ನು ಮುಡಿಪಾಗಿಡಬೇಕೆಂದು ನಿರ್ಧರಿಸಿಕೊಂಡೆ.

೩೦ ವಯಸ್ಸಿನ ಮೇಲೆ ನಾನು ವೈದ್ಯಶಾಸ್ತ್ರ ಕಲಿಯುವ ಕಠಿನವಾದ ಭಾರವನ್ನು ಸ್ವೀಕರಿಸಿದ್ದು ನೋಡಿ ನನ್ನ ಗೆಳೆಯರು ಚಕಿತರಾದರು. ಆದರೆ ನನಗೆ ಮಾತಾಡದೆ ಕೆಲಸ ಮಾಡುವ ಅಪೇಕ್ಷೆಯಿತು . ಅದಕ್ಕಾಗಿಯೇ ಡಾಕ್ಟರನಾಗಬೇಕೆಂದೆ.

ಮಧ್ಯ ಆಫ್ರಿಕದಲ್ಲಿ ಉಳಿದೆಲ್ಲದಕ್ಕಿಂತ ಡಾಕ್ಟರರ ಅಗತ್ಯವಿತ್ತು. ರೋಗಗ್ರಸ್ತರಾಗಿ ಡಾಕ್ಟರರ ಕಡೆ ಬರುವ ಅಲ್ಲಿನ ಮೂಲನಿವಾಸಿಗಳನ್ನು ಕೈಬಿಡುವುದು ಸರಿಯಲ್ಲ. ಈ ಬಡಪಾಯಿಗಳಿಗೆ ಅಗತ್ಯವಾದ ಡಾಕ್ಟರನಾಗಿ ಸೇವೆ ಸಲ್ಲಿಸಬೇಕೆಂದು ನಾನು ವೈದ್ಯಶಾಸ್ತ್ರದ ವಿದ್ಯಾರ್ಥಿಯಾದೆ.

" ಯಾವಾತನು ತನ್ನ ಜೀವವನ್ನು ಜೋಪಾನ ಮಾಡುವನೋ ಅವನು ಅದನ್ನು ಕಳೆದುಕೊಳ್ಳುವನು. ಯಾವಾತನು ನನಗಾಗಿ ಮತ್ತು ಧರ್ಮಕ್ಕಾಗಿ ಜೀವಕಳೆದುಕೊಳ್ಳುವನೋ ಅವನು ಅದನ್ನು ಉಳಿಸಿಕೊಳ್ಳುವನು, " ಎಂಬೀ ಕ್ರಿಸ್ತವಚನದ ಅರ್ಥ ನನಗೀಗ ತಿಳಿದಿದೆ. ಬಾಹ್ಯ ಸುಖದೊಡನೆ ಅಂತರಂಗದ ಸುಖವನ್ನೂ ನಾನು ಪಡೆದಿದ್ದೇನೆ.

[ಮಧ್ಯಆಫ್ರಿಕದ ಗೊಂಡಾರಣ್ಯದಲ್ಲಿ ಆಸ್ಪತ್ರೆ ತೆರೆದು ಸಂತ್ರಸ್ತ ಅನಾಗರಿಕ ಆಫ್ರಿಕನ್ನರ ಸೇವೆ ಮಾಡುತ್ತಿರುವ ದಯಾಳು ಅಲ್ಬರ್ಟ ಶ್ವೈತ್ಸರರ ಆತ್ಮಚರಿತ್ರದಿಂದ]

೧೧ ಜನರು ಜಗತ್ತಿನ ಅತಿ ಚಳಿ ಪ್ರದೇಶವನ್ನು
ನೆಲ ಮಾರ್ಗವಾಗಿ ದಾಟಹೊರಟದ್ದಾರೆ.

ಅಂಟಾರ್ಕ್ಟಿಕಾ ಗೆಲ್ಲಹೊರಟ ಸಾಹಸಿಗಳು

ದಕ್ಷಿಣ ಧ್ರುವ ಖಂಡ— ಅಂಟಾರ್ಕ್ಟಿಕಾ! ಭೂಮಿಯ ಅತಿ ಚಳಿ ಪ್ರದೇಶ—ಪ್ರಾಣಿಮಾತ್ರದ ಅಸ್ತಿತ್ವವಿಲ್ಲದ ವಿಸ್ತಾರ ಭೂಖಂಡ-೧,೫೦೦ ಅಡಿ ದಪ್ಪದ ಬರ್ಫದ ಹಾಳೆ ಹಾಸಿದ ಪೀಠಭೂಮಿ! ಅದು ದುರ್ಗಮಪ್ರದೇಶಗಳಲ್ಲಿ ಪ್ರವಾಸಮಾಡಬೇಕೆಂಬ ಸಾಹಸಿಗಳ ಕೊನೆಯ ಕನಸು. ೧೯೫೩ರಲ್ಲಿ ಎವರೆಸ್ಟ್ ಶಿಖರವನ್ನು ಏರಿದ ನಂತರ ಮಾನವನ ಪಾದ ಮುದ್ರೆ ಬೀಳದ ಏಕಮಾತ್ರ ದುರ್ಗಮ ಭೂಭಾಗ.

೬೦,೦೦,೦೦೦ ಚದರ ಮೈಲು ವಿಸ್ತಾರವಾದ ಅಂಟಾರ್ಕ್ಟಿಕಾ ಖಂಡವನ್ನು ಭೂಮಾರ್ಗವಾಗಿ ಈ ವರೆಗೆ ಯಾರೂ ದಾಟಿಲ್ಲ. ಈ ವರ್ಷ ಅದನ್ನು ಮುಗಿಸಿಬಿಡಬೇಕೆಂದು ೧೧ ಜನರ ಒಂದು ಬ್ರಿಟಿಶ ತಂಡ ಟೊಂಕಕಟ್ಟಿದೆ.

ಇದು ೨,೦೦೦ ಮೈಲುದ್ದದ ಸುದೀರ್ಘ ಯಾತ್ರೆ. ಅದನ್ನು ಕೈಕೊಂಡವರು ಬಹುಶಃ ಮೂರು ತಿಂಗಳ ಕಾಲ ತಮ್ಮ ಒಳ ಅಂಗಿಗಳನ್ನು ಕೂಡ ಬಿಚ್ಚಲಾರರು. ಈ ೨,೦೦೦ ಮೈಲುಗಳಲ್ಲಿ ೧,೫೦೦ ಮೈಲುಗಳು ಮನುಷ್ಯನ ಹೆಜ್ಜೆಯನ್ನು ಇನ್ನೂ ನೋಡಿಲ್ಲ.

ಅಂಟಾರ್ಕ್ಟಿಕಾ ಖಂಡದ ಪರಿಶೀಲನದ ಕಥೆ ೨೦೦ ವರ್ಷಗಳ ಹಿಂದೆ ಪ್ರಾರಂಭವಾಯಿತು. ೧೮ ನೇ ಶತಮಾನದಲ್ಲಿ ಕ್ಯಾಪ್ಟನ್ ಕುಕ್ಕನು ಆ ಖಂಡದ ತಡಿಯನ್ನು ಪ್ರಥಮತಃ ತಲಪಿದನು. ಅನಂತರ ಅದರ ಕೆಲ ಕೆಲ ಭಾಗಗಳನ್ನು ಬೇರೆ ಸಾಹಸಿಗಳು ಕಂಡುಹಿಡಿದರು. ಆದರೆ ಇವೆಲ್ಲ ಈ ಖಂಡದ ಬದಿಬದಿಯ ಭಾಗಗಳು. ದಕ್ಷಿಣ ಧ್ರುವವನ್ನು—ಭೂಮಿಯ ದಕ್ಷಿಣ ತುದಿಯನ್ನು—ತಲಪುವುದು ಯಾರಿಗೂ ಸಾಧ್ಯವಾಗಿರಲಿಲ್ಲ.

—೧೯೧೧ರ ವರೆಗೆ. ಆ ವರ್ಷ ಬ್ರಿಟನ್ನಿನ ಕ್ಯಾಪ್ಟನ್ ರಾಬರ್ಟ್ ಫಾಕನ್ ಸ್ಕಾಟ್ ದಕ್ಷಿಣ ಧ್ರುವಬಿಂದುವನ್ನು ತಲಪಲು ನಾಲ್ಕು ಜನರ ತಂಡವೊಂದನ್ನು ಸಂಘಟಿಸಿ ಅದಕ್ಕೆ ತಾನೇ ಮುಂದಾಳಾದನು. ಆದರೆ ಉತ್ತರ ಧ್ರುವ ಭಾಗದಲ್ಲಿ ತುಂಬ ಶೋಧಗಳನ್ನು ನಡೆಸುತ್ತಿದ್ದ ನಾರ್ವೇ ದೇಶದವನಾದ ರೋವಾಲ್ಡ್ ಆಮುಸ್ಡೆನ್ನನು ಒಮ್ಮೆಲೇ ತಾನೂ ದಕ್ಷಿಣ ಧ್ರುವವನ್ನು ಮುಟ್ಟಲು ಹೊರಡುವೆನೆಂದು ಸಾರಿದನು.



ಈ ಇಬ್ಬರು ಸಾಹಸಿಗಳು ಬೇರೆ ಬೇರೆ ಸ್ಥಾನಗಳಿಂದ ದಕ್ಷಿಣ ಧ್ರುವದತ್ತ ಧಾವಿಸತೊಡಗಿದರು. ಯಾತ್ರೆ ಅತಿ ಭೀಕರವಾಗಿತ್ತು. ಎತ್ತೆತ್ತಲೂ ಬರ್ಫದ ನಿರ್ಜನ ಬಟ್ಟಬಯಲು. ಈ ಇಬ್ಬರು ಸಾಹಸಿಗಳಲ್ಲಿ ಆಮುಸ್‌ಡೆನ್ನನೇ ಸುದೈವಿಯಾಗಿದ್ದ. ಬರ್ಫ ಪ್ರದೇಶಗಳಲ್ಲಿ ಜೀವಿಸುವ ನಾಯಿಗಳಿಂದ ಎಳೆಯಲ್ಪಟ್ಟ ಗಾಡಿಗಳನ್ನುಪಯೋಗಿಸಿ ಆತ ೧೯೧೧ ಡಿಸೆಂಬರ ೧೪ ರಂದು ದಕ್ಷಿಣ ಧ್ರುವಬಿಂದುವನ್ನು ತಲಪಿದ.

"ಸಂಜೆ ಮೂರು ಗಂಟೆಯಾಗಿತ್ತು. ಒಮ್ಮೆಲೇ ನಮ್ಮ ಗಾಡಿಯಾಳುಗಳು 'ನಿಲ್ಲಿಸಿರಿ' ಎಂದು ಕೂಗಿದರು. ಅವರ ದೂರಮಾಪಕ ಯಂತ್ರಗಳೆಲ್ಲವೂ ನಾವು ದಕ್ಷಿಣ ಧ್ರುವ ಬಿಂದುವನ್ನು ಮುಟ್ಟಿದ್ದೇವೆಂದು ತೋರಿಸುತ್ತಿದ್ದವು. ಗುರಿಯನ್ನು ತಲಪಿದ್ದಾಗಿತ್ತು-ಯಾತ್ರೆ ಮುಗಿದಿತ್ತು" ಎಂದು ಆಮುಸ್‌ಡೆನ್ ತನ್ನ ಪುಸ್ತಕದಲ್ಲಿ ಬರೆದಿದ್ದಾನೆ.

ಆಮುಸ್‌ಡೆನ್ ದಕ್ಷಿಣ ಧ್ರುವವನ್ನು ತಲಪಿದ —ಮತ್ತು ತನ್ನ ಕಥೆ ಹೇಳಲು ಮರಳಿ ಬಂದ. ಆದರೆ ಕ್ಯಾಪ್ಟನ್ ಸ್ಕಾಟ್‌ನ ಯಾತ್ರೆಗೆ ನಿಸರ್ಗ ಅಡಚಣೆ ತಂದಿತು. ಅಂಟಾರ್ಕ್ಟಿಕಾ ಭಾಗದಲ್ಲಿ ಬೀಸುವ ಭೀಕರ ಗಾಳಿಗಳನ್ನು ಆತ ಎದುರಿಸಬೇಕಾಯಿತು. ಈ ಎಲ್ಲ ಆತಂಕಗಳನ್ನು ಎದುರಿಸಿ ಜನೆವರಿಯಲ್ಲಿ ಆತನ ತಂಡ ದಕ್ಷಿಣ ಧ್ರುವವನ್ನು ಮುಟ್ಟಿದಾಗ, ಅಲ್ಲಿ ಹಾರಾಡುತ್ತಿದ್ದ ನಾರ್ವೇ ದೇಶದ ಧ್ವಜವನ್ನು ಕಂಡು ಆತನ ಎದೆ ಕುಸಿಯಿತು. "ನಾರ್ವೇಯವರು ಮೊದಲು ಇಲ್ಲಿ ತಲುಪಿದ್ದಾರೆ" ಎಂಬ ಚೀಟಿಯೊಂದು ಅವನನ್ನು ಅಣಕಿಸುತ್ತಿತ್ತಲ್ಲಿ!

ನಿರಾಶನಾದ ಸ್ಕಾಟ್ ತನ್ನ ಶಿಬಿರಸ್ಥಾನದತ್ತ ತಿರುಗಿ ಹೊರಟ. ಅದೊಂದು ದುಃಸ್ವಪ್ನದಂಥ ಅನುಭವವಾಗಿತ್ತು. ಚಳಿ ವಿಪರೀತವಾಗಿತ್ತು. (ಅಂಟಾರ್ಕ್ಟಿಕಾದ ಚಳಿ —೯೦ ಅಂಶಗಳ ವರೆಗೂ ಹೋಗಬಲ್ಲದು). ಹಿಮಗಾಳಿ ಕೊರೆಯುತ್ತಿತ್ತು. (ತಾಸಿಗೆ ೯೦ ಮೈಲು ವೇಗದ ಹಿಮಗಾಳಿ ಅಲ್ಲಿ ಅತಿ ಸಾಮಾನ್ಯ). ಆಹಾರ ಪೂರೈಕೆ ಮುಗಿಯುತ್ತ ಬಂದಿತ್ತು. ತಡೆಯಲಾರದ ತುರಿಕಜ್ಜಿಯ ತಿಂಡಿ ಎದ್ದಿತ್ತು. ತಂಡದಲ್ಲಿ ಒಬ್ಬೊಬ್ಬನೇ ಕುಸಿದು ಬಿದ್ದು ಸತ್ತ. ವರದಿ ಹೇಳಲು ಒಬ್ಬನೂ ಉಳಿಯಲಿಲ್ಲ. ಅದೇ ನವಂಬರದಲ್ಲಿ ಶೋಧಕರ ತಂಡವೊಂದಕ್ಕೆ ಸ್ಕಾಟನನ್ನೊಳಗೊಂಡು ಮೂವರ ಹೆಣಗಳೂ ಸ್ಕಾಟನ ದಿನಚರಿಗಳೂ ಸಿಕ್ಕಿದವು. ಶಿಬಿರದಿಂದ ಕೆಲವೇ ಮೈಲು ಅಂತರದಲ್ಲಿ ಸ್ಕಾಟನ ಮರಣವಾಗಿದ್ದುದು ವಿಧಿಯ ವಿಲಾಸ.

ಅದು ೪೬ ವರ್ಷಗಳ ಹಿಂದೆ. ಅಂದಿನಿಂದ ಇಂದಿನ ವರೆಗೂ ಭೂಮಾರ್ಗವಾಗಿ ಯಾರೂ ದಕ್ಷಿಣಧ್ರುವವನ್ನು ತಲಪಿಲ್ಲ—ಇಡೀ ಖಂಡವನ್ನು ದಾಟಿ ಹೋಗುವುದು ದೂರ ಉಳಿಯಿತು. ೧೯೧೭ ರಲ್ಲಿ ಬ್ರಿಟನ್ನಿನ ಅರ್ನೆಸ್ಟ ಶಾಕಲ್‌ಟನ್ನನು ಈ ಪ್ರಯತ್ನ ಮಾಡಿ ವಿಫಲನಾದನು.

ಈ ವರ್ಷ ಮತ್ತೆ ಧ್ರುವವನ್ನು ಮುಟ್ಟುವ ಸಾಹಸ ಪ್ರಾರಂಭವಾಯಿತು. ಬ್ರಿಟಿಶ ವಿಜ್ಞಾನಿಗಳಾದ ಡಾ. ವೈವಿಯನ್ ಫುಶ್ ಈ ತಂಡದ ನಾಯಕರು. ಎವರೆಸ್ಟ್ ವೀರರಲ್ಲೊಬ್ಬರಾದ ಸರ್ ಎಡ್ಮಂಡ್ ಹಿಲಾರಿ ಅವರ ತಂಡವನ್ನು ಬೇರೊಂದು ಮಾರ್ಗದಿಂದ ಸೇರಿ ಒಟ್ಟಿಗೆ ದಕ್ಷಿಣ ಧ್ರುವದತ್ತ ಸಾಗಬೇಕೆಂದು ನಿರ್ಧಾರವಾಗಿತ್ತು. ಆದರೆ ಫುಶ್ಶರ ತಂಡ ಕೆಟ್ಟ ಹವೆಯಿಂದ ತಡೆಯಲ್ಪಟ್ಟಿದ್ದರಿಂದ ಹಿಲಾರಿಯವರು ತಾವೊಬ್ಬರೇ ದಕ್ಷಿಣ ಧ್ರುವವನ್ನು ಮುಟ್ಟಿ ಬಂದರು. (ಜನೆವರಿ ೩) ಫುಶ್ಶರ ತಂಡ ಎರಡು ವಾರ ತಡವಾಗಿ (ಜನವರಿ ೨೦) ಧ್ರುವವನ್ನು ತಲಪಿತು.

ಹೀಗೆ ದಕ್ಷಿಣ ಧ್ರುವವನ್ನು ಭೂಮಾರ್ಗವಾಗಿ ಸೇರಿದ ಎರಡನೆಯವರು ಸರ್ ಎಡ್ಮಂಡರಾದರೂ ಅವರಿಗೆ ಆಮುಸ್‌ಡೆನ್ ಅಥವಾ ಸ್ಕಾಟನನ್ನೆದುರಿಸಿದ ಕಷ್ಟಗಳು ಅಷ್ಟಾಗಿ ಇರಲಿಲ್ಲೆಂದು ಮರೆಯಲಾರದು.

ಸ್ಕಾಟ್ ಮತ್ತು ಶಾಕಲ್‌ಟನ್ ಇಬ್ಬರೂ ಮೋಟಾರ್ ಮತ್ತು ಟ್ರಾಕ್ಟರುಗಳಲ್ಲಿ ದಕ್ಷಿಣ ಧ್ರುವಯಾತ್ರೆ ಮಾಡಲು ಯತ್ನಿಸಿದ್ದರು. ಆದರೆ ಆ ಖಂಡದಲ್ಲಿ ೧೦ ಮೈಲು ಸಾಗುವುದರೊಳಗೆ ಎಂಜಿನುಗಳು ಸಂಪು ಹೂಡಿದವು, ಚಕ್ರಗಳು ಹಿಮದಲ್ಲಿ ತೊಡಕಿಕೊಂಡವು. ಆದರೆ ಇಂದು ದಕ್ಷಿಣ ಧ್ರುವದ ಚಳಿಯಲ್ಲಿಯೂ ನಡೆಯಬಲ್ಲ

ಎಂಜಿನುಗಳು ಸಿದ್ಧವಾಗಿವೆ.

ದಕ್ಷಿಣ ಧ್ರುವವೂ ೧೯೧೧ ರಲ್ಲಿದ್ದಂತೆ ಇಂದು ಬಟ್ಟಬಯಲಾಗಿಲ್ಲ. ೧೯೨೯ ರಲ್ಲಿ ಅಮೇರಿಕದ ಅಡ್ಮಿರಲ್ ಬರ್ಡರು ವಿಮಾನ ಮೂಲಕ ಅಂಟಾರ್ಕ್ಟಿಕವನ್ನು ದಾಟಿದ ಮೇಲೆ ಆಕಾಶಮಾರ್ಗವಾಗಿ ದಕ್ಷಿಣ ಧ್ರುವ ಅಷ್ಟು ದುರ್ಗಮವಾಗಿ ಉಳಿದಿಲ್ಲ ಅಲ್ಲಿ ಈ ವರ್ಷ ಅಂಟಾರ್ಕ್ಟಿಕಾ ಸಂಶೋಧಕ ತಂಡಗಳಿಗೆ ನೆರವಾಗುವುದಕ್ಕಾಗಿ ಅಮೇರಿಕನ್ನರು ವಿಮಾನದಿಂದ ಸಾಮಗ್ರಿಗಳನ್ನು ಸಾಗಿಸಿ ಒಂದು ಚಿಕ್ಕ "ಪಟ್ಟಣ"ವನ್ನೇ (ಚಳಿ ನಿರೋಧಿಸುವ ಚಿಕ್ಕ ಗುಡಿಸಲುಗಳು) ಕಟ್ಟಿದ್ದಾರೆ. ಅಲ್ಲಿ ಈ ಧ್ರುವಸಾಹಸಿಗಳಿಗೆ ಆಹಾರ ಮೊದಲಾದ ಸೌಕರ್ಯಗಳು ದೊರಕುವವು.

ವಿಮಾನದಲ್ಲಿ ಸರಾಗವಾಗಿ ಹೋಗಿ ಬರಬಹುದಾದ ಈ ಪ್ರದೇಶದಲ್ಲಿ ಈ ಜನರು ಕಷ್ಟದಾಯಕವಾದ ಭೂಯಾತ್ರೆಯನ್ನು ಏಕೆ ಕೈಕೊಳ್ಳಬೇಕು? ಬ್ರಿಟಿಶ ಕಾಮನ್‌ವೆಲ್ತ್ ಅಂಟಾರ್ಕ್ಟಿಕಾ (ಡಾ. ಫುಶ್ಶರ) ತಂಡವು ಆಮುಸ್‌ಡೆನ್ನನಂತೆ ಸಾಹಸದಿಂದಲೂ ಪ್ರೇರಿತವಾಗಿದೆ. ಆದರೂ ವಿಜ್ಞಾನಿಗಳು ಈ ಪ್ರದೇಶದ ಅನೇಕ ಸಂಗತಿಗಳನ್ನು ಕಂಡುಹಿಡಿಯಬೇಕೆನ್ನುತ್ತಾರೆ. ಭೂಮಾರ್ಗದಿಂದಲ್ಲದೆ ಅವುಗಳನ್ನು ಕಂಡುಹಿಡಿಯಲು ಸಾಧ್ಯವಿಲ್ಲ.

ಈ ಪ್ರದೇಶದಲ್ಲಿ ಪರಮಾಣು ಶಕ್ತಿ (ಮತ್ತು ಬಾಂಬು) ನಿರ್ಮಾಣಕ್ಕೆ ಅತ್ಯವಶ್ಯವಾದ ಯುರೇನಿಯಂ ಧಾತುವಿದೆಯೇ ಎಂದು ಅವರಿಗೆ ಬೇಕಾಗಿದೆ. ಅಂಟಾರ್ಕ್ಟಿಕಾದ ಬಿರುಗಾಳಿಗಳ ದೆಸೆಯಿಂದ ಅಲ್ಲಿನ ಬಂಡೆಗಲ್ಲುಗಳು ಹಿಮಮುಕ್ತವಾಗಿರುತ್ತವೆ. ಈ ಬಂಡೆಗಳನ್ನು ಪರೀಕ್ಷಿಸಿದರೆ ಯುರೇನಿಯಂ ಅಸ್ತಿತ್ವದ ಸಮಸ್ಯೆ ಬಗೆಹರಿಯಬಲ್ಲದು.

ಬಂಗಾರ, ಬೆಳ್ಳಿ, ಪ್ಲಾಟಿನಂ ಮತ್ತು ಇತರ ಅಮೂಲ್ಯ ಖನಿಜಗಳ ಶೋಧವನ್ನೂ ಅವರು ಮಾಡುತ್ತಿದ್ದಾರೆ.

ಅಲ್ಲಿ ೧,೫೦೦ ಅಡಿ ದಪ್ಪವಾದ ಬರ್ಫದ ಹಾಳೆ ಹಬ್ಬಿದೆಯೆಂದು ಅಂದಾಜು ಇದ್ದರೂ ಅದು ನಿಜವಾಗಿ ಎಷ್ಟು ದಪ್ಪವಾಗಿದೆಯೆಂದು ಸರಿಯಾಗಿ ಗೊತ್ತಿಲ್ಲ. ಅದೇ ಪ್ರಕಾರ ಅಂಟಾರ್ಕ್ಟಿಕಾ ಒಂದು ಮಹಾ ಭೂಖಂಡವೆಂಬ ನಂಬಿಕೆಯಿದ್ದರೂ ಅದು ನಿಜವಾಗಿ ಖಂಡವೋ ಅಸಂಖ್ಯ ದ್ವೀಪಗಳ ಮೇಲೆ ಬರ್ಫದ ಹಾಳೆ ಅಖಂಡವಾಗಿ ಹಾಸಿರುವುದರಿಂದ ಖಂಡದಂತೆ ಕಾಣುವುದೋ ಗೊತ್ತಿಲ್ಲ. ಈ ತಂಡವು ದಾರಿಯುದ್ದಕ್ಕೂ ೨೦ ನಿಮಿಷಕೊಮ್ಮೆ ಸ್ಫೋಟಕಗಳನ್ನು ಹಾರಿಸಲಿದೆ. ಆ ಶಬ್ದ ಕಂಪವು ಅಧೋಮುಖವಾಗಿ ಸಾಗಿ ಬರ್ಫವನ್ನು ದಾಟಿ ನೆಲಕ್ಕೆ ಬಡಿದು ಹಿಂತಿರುಗಿ ಪ್ರತಿಧ್ವನಿಸುವುದು. ಈ ಪ್ರತಿಧ್ವನಿಗೆ ಹಿಡಿಯುವ ವೇಳೆಯನ್ನು ಸೂಕ್ಷ್ಮ ಉಪಕರಣಗಳಿಂದ ಅಳೆದು ಪ್ರತಿ ಸ್ಥಳದಲ್ಲಿರುವ ಬರ್ಫದ ದಪ್ಪವನ್ನು ಕಂಡುಹಿಡಿಯಬಹುದು. ಇದರ ಮೇಲಿಂದ ಅದು ಖಂಡವೋ ದ್ವೀಪಸ್ತೋಮವೋ ಎಂದು ತಿಳಿದೀತು.

ಇದಲ್ಲದೆ ಅಂಟಾರ್ಕ್ಟಿಕಾದ ಭೂಲಕ್ಷಣಗಳ ನಕಾಶೆಯನ್ನೂ ಅವರು ತೆಗೆಯಬೇಕೆನ್ನುತ್ತಾರೆ.

ಫುಶ್ಶರ ತಂಡ ಸುರಕ್ಷಿತವಾಗಿ ದಕ್ಷಿಣ ಧ್ರುವವನ್ನು ಸೇರಿತೆಂದು ಈಗ ವರದಿ ಬಂದಿದೆ ಆದರೆ ಇಲ್ಲಿಗೆ ಅರ್ಧ ಕಥೆ ಮಾತ್ರ ಮುಗಿದಂತಾಯಿತಷ್ಟೇ. ಅವರು ಖಂಡವನ್ನು ದಾಟಿ ಆ ಬದಿಯನ್ನು ತಲಪಬೇಕಾದರೆ ಇನ್ನೊಂದು ಸಾವಿರ ಮೈಲು ಸಾಗಬೇಕು. ಇಂದು ಅವರಿಗೆ ವಿಮಾನ ಮೂಲಕ ಸಹಾಯ ದೊರಕಬಲ್ಲದು. ಅವರ ಹತ್ತಿರ ಉತ್ತಮ ಉಪಕರಣಗಳೂ ಇವೆ. ಆದರೂ ಈ ಜನರು ಕೈಕೊಂಡ ಉದ್ಯಮ ಅತ್ಯಂತ ಅಪಾಯಕರವೇ ಆಗಿದೆ.

ಅವರು ರಾತ್ರಿಗಳನ್ನು ಡೇರೆಗಳಲ್ಲೇ ಕಳೆಯಬೇಕಾಗುವುದು. ಆ ಚಳಿಯನ್ನು ಎಂಥ ಉಣ್ಣೆಯ ಅಂಗಿಗಳನ್ನು ಹಾಕಿಕೊಂಡಿದ್ದರೂ ತಾಳಿಕೊಳ್ಳಲು ಕಷ್ಟವೇ. ಇದಕ್ಕಾಗಿ ಅವರು ಚಳಿಗಾಲದಲ್ಲಿ ಅಂಟಾರ್ಕ್ಟಿಕಾದಲ್ಲಿ ಡೇರೆಗಳಲ್ಲಿ ರಾತ್ರಿಗಳನ್ನು ಕಳೆದು "ತಾಲೀಮು" ಮಾಡಿಕೊಳ್ಳಬೇಕಾಯಿತು.

ಇತರ ಅನಿರೀಕ್ಷಿತ ತೊಂದರೆಗಳೂ ಅವರಿಗೊದಗಿ ಅವರನ್ನು ಕೊಲ್ಲದಿದ್ದರೂ ಅವರ ಯೋಜನೆಯನ್ನು ಕೆಡಿಸಬಹುದು. ಅಂಟಾರ್ಕ್ಟಿಕಾದಲ್ಲಿ

ನಿರಂತರವಾಗಿ ಮತ್ತಾವುದೇ ಖಂಡಕ್ಕಿಂತ ಇಮ್ಮಡಿ ವೇಗದಿಂದ ಗಾಳಿ ಬೀಸುತ್ತಿರುತ್ತದೆ. ಬೇಸಿಗೆಯಲ್ಲಿ ಅಲ್ಲಿ ನಸುಬೆಚ್ಚನ್ನ ಬಿರುಗಾಳಿ ಬೀಸಿ ಹಿಮದ ಮಳೆಗರೆದು ಅವರನ್ನೂ ಅವರ ವಾಹನಗಳನ್ನೂ ಹುಗಿದುಬಿಡಬಹುದು.

ಆಮುಸ್‌ಡೆನ್ "ದೆವ್ವಗಳ ರಣರಂಗ"ಗಳು ಅಂಟಾರ್ಕ್ಟಿಕದಲ್ಲಿವೆಯೆಂದಿದ್ದಾನೆ. ಇಲ್ಲಿ ಬರ್ಫದ ಗುಂಡುಗಳು ಚಲ್ಲಾಪಿಲ್ಲಿಯಾಗಿ ಕೆದರಿ ಬಿದ್ದು ದೆವ್ವಗಳು ಈ ಗುಂಡುಗಳಿಂದ ಹೋರಾಡಿದವೋ ಎನಿಸುತ್ತದೆ. ಅವುಗಳ ನಡುವೆ ಕಾಲಿಡಲಿಕ್ಕೂ ಸ್ಥಳವಿರುವುದಿಲ್ಲ.

ಇದಲ್ಲದೆ ಕೆಲವೆಡ ಅತ್ತ ಪ್ರಪಾತ, ಇತ್ತ ಪ್ರಪಾತ, ನಡುವೆ ಮಾತ್ರ ಇಕ್ಕಟ್ಟಾದ ಬರ್ಫದ ಸೇತುವೆ ಇರುವ ಪ್ರದೇಶಗಳೂ ಉಂಟೆಂದು ಆತ ಬರೆದಿದ್ದಾನೆ. ಅಲ್ಲಿ ಅತಿ ಜಾಗರೂಕತೆಯಿಂದ ಸಾಗಬೇಕಾಗುತ್ತದೆ.

ಇಷ್ಟೆಲ್ಲ ದಿವ್ಯಗಳನ್ನು ಗೆದ್ದು ಅವರು ತಮ್ಮ ಯಾತ್ರೆಯನ್ನು ಪೂರೈಸಿದರೆ ಜಗತ್ತಿನ ಅತ್ಯಂತ ಘೋರ ಪ್ರಯಾಣವನ್ನು ಮಾಡಿದ ವೀರರಾಗುತ್ತಾರೆ.

ಅದಕ್ಕಿಂತಲೂ ಹೆಚ್ಚೆಂದರೆ ಇದು: ಅಲ್ಲಿ ಯುರೇನಿಯಂ, ಚಿನ್ನ, ಪ್ಲಾಟಿನಂ ಏನಾದರೂ ಸಿಕ್ಕುವುದೆಂದು ಗೊತ್ತಾದರೆ ಈ ನಿರ್ಜನ ಭೂಮಿ ಒಂದು ಘನಘೋರ ರಾಜಕೀಯ ಸ್ಪರ್ಧೆಯ ಕ್ಷೇತ್ರವಾಗಬಹುದು. ರಶಿಯವನ್ನೊಳಗೊಂಡು ೧೨ ರಾಷ್ಟ್ರಗಳು ಈ ಖಂಡದ ಬೇರೆ ಬೇರೆ ಭಾಗಗಳ ಮೇಲೆ ಹಕ್ಕು ಮಂಡಿಸಿವೆ. ಈ ಹಕ್ಕುಗಳ ಬಗ್ಗೆ ರಾಷ್ಟ್ರ ರಾಷ್ಟ್ರಗಳಲ್ಲಿ ವಿವಾದಗಳೂ ಇವೆ. ಅಲ್ಲಿ ಅಮೂಲ್ಯ ಖನಿಜಗಳಿರುವುದೇ ಆದಲ್ಲಿ ಈ ಹಕ್ಕುಗಳ ತಿಕ್ಕಾಟದಿಂದ ಪ್ರಪಂಚದ ಅತ್ಯಂತ ಚಳಿ ಪ್ರದೇಶವೆನಿಸಿದ ಈ ಖಂಡವು ತುಂಬಾ ಬಿಸಿಯೇರಬಹುದು!

ಇಬ್ಬರೂ ಒಂದೇ

"ಸ್ವಾಮಿ, ಏನಾದರೂ ಸಹಾಯ ಮಾಡಿ. ಮೂರು ದಿನಗಳಿಂದ ನಾನು ಊಟ ಮಾಡಿಲ್ಲ. ಒಂದೇ ಒಂದು ಸಹಾನುಭೂತಿಯ ಶಬ್ದವನ್ನೂ ಕೇಳಿಲ್ಲ."

"ನೀನು ಅದೃಷ್ಟವಂತನಪ್ಪಾ. ನಾನು ಈ ಮೂರು ದಿನಗಳಲ್ಲಿ ಮೂರು ಕಡೆ ಭೋಜನ ಸಮಾರಂಭಗಳಿಗೆ ಹೋಗಿ ಮೂವತ್ತು ಸ್ತುತಿಪರ ಭಾಷಣಗಳನ್ನು ಕೇಳಿದ್ದೇನೆ."

*　　*　　*　　*

ಸಾವಿನ ಸತ್ಯ

ತರುಣ ಡಾಕ್ಟರ ತಾನಿತ್ತ ಮೃತ್ಯು ಸರ್ಟಿಫಿಕೇಟನಲ್ಲಿ ತುಸು ಬದಲಾವಣೆ ಮಾಡಲು ಅವಕಾಶ ಕೊಡಬೇಕೆಂದು ವಿನಂತಿ ಮಾಡಿಕೊಂಡ. ಮ್ಯಾಜಿಸ್ಟ್ರೇಟರ ಕಾರಕೂನ "ಛೆ! ಛೆ! ಅದು ಕಾಯದೆಗೆ ವಿರುದ್ಧ ಸ್ವಾಮೀ" ಎಂದ.

ಡಾಕ್ಟರ "ನನಗೆ ಗೊತ್ತಿದೆ. ಆದರೆ ಮಿಸ್ಟರ್, ಇಲ್ಲಿ ನೋಡಿ. ಸರ್ಟಿಫಿಕೇಟ ಬರೆಯುವಾಗ ಪ್ರಮಾದವಶಾತ್ ಒಂದು ತಪ್ಪಾಗಿಹೋಗಿದೆ. ಸಾವಿನ ಕಾರಣ ಎಂಬ ಕಲಮಿನ ಮುಂದೆ ನಾನು ನನ್ನ ಸಹಿ ಹಾಕಿಬಿಟ್ಟಿದ್ದೇನೆ."

ಭಾರತದ ಈ ಪ್ರಾಚೀನ ಕಲಾ ಭಂಡಾರದ ಅಸ್ತಿತ್ವ ಒಂದು ಸಾವಿರ ವರ್ಷ ಭಾರತೀಯರಿಗೇ ಗೊತ್ತಿರಲಿಲ್ಲ.

ಗಂಧರ್ವ ಕುಟುಂಬ →



ಅಜಂತಾದ ರೋಮಾಂಚಕ ಕಥೆ

ಗಂಗಾಧರ ಭಟ್ಟ

೧೮೧೯-೨೦ ರಲ್ಲಿ ಬ್ರಿಟಿಶರು ದಕ್ಷಿಣದಲ್ಲಿ ತಮ್ಮ ವರ್ಚಸ್ಸನ್ನು ವಿಸ್ತರಿಸುತ್ತಿದ್ದಾಗ ಬ್ರಿಟಿಶ ಸೈನ್ಯದ ತುಕಡಿಯೊಂದು ಹೈದರಾಬಾದ ರಾಜ್ಯದ ಒಂದೆಡೆಯಲ್ಲಿ ಬೀಡು ಬಿಟ್ಟಿತ್ತು. ಅದರ ಅಧಿಕಾರಿಯೊಬ್ಬನಿಗೆ ಒಂದು ದಿನ ಹೊತ್ತು ಹೋಗದ್ದಕ್ಕೆ ಬೇಟೆಯಾಡುವ ಮನಸಾಯಿತು. ಬಂದೂಕು ಹೆಗಲ ಮೇಲೆ ಹಾಕಿಕೊಂಡು ಆತ ಅರಣ್ಯ ಪ್ರದೇಶದಲ್ಲಿ ಹೊಕ್ಕು ಒಂದು ನರಿಯನ್ನು ಬೆನ್ನಟ್ಟತೊಡಗಿದ. ಈ ನರಿಗೆ ಭಾರತೀಯ ಸಂಸ್ಕೃತಿಯ ಚರಿತ್ರೆಯಲ್ಲಿ ಒಂದು ಅಮರಸ್ಥಾನ ಸಿಗಬೇಕಾದ್ದು ವಿಹಿತ. ಯಾಕೆಂದರೆ ಅದು ೧೩ ಶತಮಾನಗಳಿಂದ ಮರೆವಿನ ಮರೆಯಲ್ಲಿ ಮುಳುಗಿದ್ದ ಭಾರತದ ಅಪೂರ್ವ ಕಲಾಲೋಕವೊಂದು ಬೆಳಕಿಗೆ ಬರಲು ಕಾರಣವಾಯಿತು.

ಬೆನ್ನಟ್ಟಿದ್ದ ಸೈನ್ಯಾಧಿಕಾರಿಯನ್ನು ಆ ನರಿ ಅರಣ್ಯಗಳಿಂದ ಹೊರಗೆ ಗುಡ್ಡ ಗಾಡಿನ ಪ್ರದೇಶಗಳಿಗೆ ಒಯ್ದು ತಪ್ಪಿಸಿಕೊಂಡು ಕಣ್ಮರೆಯಾಯಿತು. ಆದರೆ ಬೇಟೆ ಕೈಬಿಟ್ಟರೇನಾಯಿತು, ಆತ ಆ ಗುಡ್ಡದ ಬುಡದಲ್ಲಿ ಕಂಡದ್ದರ ಮುಂದೆ ನರಿ ಏತರ ಮಾತು? ಮಹಾ ಬಂಡೆಗಲ್ಲುಗಳಲ್ಲಿ ಕೊರೆದ ಗುಹೆಗಳ ಸಾಲೇ ಆತನನ್ನು ಎದುರುಗೊಂಡಿತಲ್ಲಿ. ಎಚ್ಚರದಿಂದ ಅವನು ಗುಹೆಗಳನ್ನು ಹೊಕ್ಕು ಪರಿಕಿಸಿದ. ಅದೊಂದು ಮಾಯಾಲೋಕವೇ ಆಗಿತ್ತು. ಕಗ್ಗಲ್ಲ ಬಂಡೆಗಳಲ್ಲಿ ಕೊರೆದ ವಿಸ್ತಾರವಾದ ಗುಹೆಗಳಲ್ಲಿ ಸಾಲು ಕಂಬಗಳು, ಜೀವಕಳೆ ತುಂಬಿದ ಶಿಲಾಮೂರ್ತಿಗಳು, ಗೋಡೆಗಳ ಮೇಲೆ ನಾನಾವರ್ಣ ನಾನಾ ಭಂಗಿಗಳಿಂದ ಯಾವುದೋ ಅತೀತ ಕಾಲದ ಪ್ರಪಂಚವನ್ನು ಪ್ರತ್ಯಕ್ಷಗೊಳಿಸುವ ಚಿತ್ರಗಳು--ಎಲ್ಲವನ್ನೂ ಕಾಣುತ್ತಿದ್ದಂತೆ ಅವನ ಸ್ಥಿತಿ ಪಾತಾಳಕ್ಕೆ ಹೋದ ಪಾಪಚ್ಚಿಯಂತಾಯಿತು. ಮರಳಿ ಬಂದವನೇ ಆತ ಹಿಡಿಸಲಾರದ ಸಂಭ್ರಮದಿಂದ ತನ್ನ ಸಂಶೋಧನೆಯನ್ನು ಮೇಲಧಿಕಾರಿಗೆ ನಿವೇದಿಸಿದ.



ಅಜಂತಾದ ೧೯ ನೇ ಗುಹೆಯ ಮುಖ

ಹೀಗೆ ಬೆಳಕಿಗೆ ಬಂತು ಮೊದಲನೇ ಬಾರಿ ಅಜಂತಾ ಗುಹಾಲಯಗಳ ಕೌತುಕ; ಜಗತ್ತಿನ ಚಿತ್ರಕಲಾ ಪ್ರಪಂಚದಲ್ಲಿ ಭಾರತಕ್ಕೆ ಉಚ್ಚಸ್ಥಾನವನ್ನು ದೊರಕಿಸಿ ಕೊಟ್ಟ ಪ್ರಾಚೀನ ಅವಶೇಷ. ಸುದ್ದಿ ಕೇಳಿ ವಿದೇಶೀ ಕಲಾಭಿಜ್ಞರು ಅಜಂತಾಕ್ಕೆ ಯಾತ್ರೆ ಮಾಡಿದರು ಅದರ ದಿವ್ಯ ಭವ್ಯ ಕಲಾಸೃಷ್ಟಿಯನ್ನು ನೋಡಿ ಬೆರಳು ಕಚ್ಚಿದರು.

ಅಜಂತಾ ಔರಂಗಾಬಾದಿನಿಂದ ೬೦ ಮೈಲು ದೂರದಲ್ಲಿರುವ ಒಂದು ಗ್ರಾಮ. ಆದರೆ ಬಿಳಿಯರು ಅದನ್ನು ತಿರುಗಿ ಕಂಡುಹಿಡಿಯುವ ವರೆಗೂ ಅಲ್ಲಿಯೇ ಇದ್ದ ಈ ಅದ್ವಿತೀಯ ಗುಹಾಲಯಗಳ ಅಸ್ತಿತ್ವವು ನೆರೆಯ ಹಳ್ಳಿಗರಿಗೂ ಗೊತ್ತಿರಲಿಲ್ಲ. ಸಹ್ಯಾದ್ರಿಯ ರಮಣೀಯ ಸನ್ನಿವೇಶದಲ್ಲಿ, ವಾಘೋರೆ ನದಿಯ ತಡಿಯಲ್ಲಿ ರುಕ್ಷ ಬಂಡೆಗಲ್ಲನ್ನು ನಿಗೂಢಕಾವ್ಯವಾಗಿ ಕೆತ್ತಿ ರಚಿಸಿದ ಎಂಟು ಶತಮಾನಗಳ ಭಾರತೀಯ ಶಿಲ್ಪಿಗಳ ಮತ್ತು ಚಿತ್ರಕಾರರ ಈ ಕೃತಿಗಳನ್ನು ಸುತ್ತಮುತ್ತಲ ಹಳ್ಳಿಗರು ಅರಿತಿದ್ದುದು ಬರಿ ಹುಲಿ ಕರಡಿಗಳ, ಭೂತ ಪಿಶಾಚಿಗಳ ಆವಾಸವೆಂದು!

ಅಜಂತಾದ ಏಳು ಬೀಳುಗಳ ಕಥೆ ಭಾರತೀಯರ ಉನ್ನತಿ, ಅಧಃಪತನ ಮತ್ತು ಪುನರುತ್ಥಾನದ ಕಥೆಯೇ ಆಗಿದೆ. ಅರ್ಧಚಂದ್ರಾಕಾರದಲ್ಲಿ ಕೆತ್ತಿದ ೨೯ ಗುಹೆಗಳ ಶ್ರೇಣಿಯಲ್ಲಿ ಬೌದ್ಧ ಧರ್ಮದ ಉತ್ಕರ್ಷದ ಚರಮ ಸೀಮೆಯನ್ನು ಕಾಣುತ್ತೇವೆ. ಮತ್ತು ಬೌದ್ಧ ಧರ್ಮವು ಈ ನಾಡಿನ ಜನ ಜೀವನದಲ್ಲಿ ಎಂಥ ಆತ್ಮಿಕ ಸ್ಫೂರ್ತಿಯನ್ನು ತುಂಬಿ ಎಂಟು ಶತಮಾನಗಳ ವರೆಗೆ ಕಲೆಯ ಸೆಲೆಯಾಯಿತೆಂದೂ ಈ ಗುಹಾಲಯಗಳು ತೋರಿಸುತ್ತವೆ.

೨೫೦ ಅಡಿ ಎತ್ತರದ ಬಂಡೆಗಲ್ಲಿನ ಪಾರ್ಶ್ವದಲ್ಲಿ ಈ ಗುಹಾಲಯಗಳನ್ನು ಕೊರೆಯಲಾಗಿದೆ. ಈ ಇಪ್ಪತ್ತೊಂಭತ್ತೂ ಗುಹಾಲಯಗಳನ್ನು ಒಂದೇ ಕಾಲದಲ್ಲಿ ಕೊರೆಯಲಾಗಿಲ್ಲ. ಕ್ರಿಸ್ತ ಪೂರ್ವ ಎರಡನೇ ಅಥವಾ ಮೂರನೇ ಶತಮಾನದಿಂದಲೇ ಈ ಕಲ್ಲುಬಂಡೆಯ ಮೇಲೆ ಶಿಲ್ಪಿಯ ಚಾಣದ ಪ್ರಯೋಗ ಪ್ರಾರಂಭವಾಗಿರಬೇಕು. ಸಮ್ರಾಟ್ ಅಶೋಕ ಬೌದ್ಧ ಧರ್ಮವನ್ನು ದಕ್ಷಿಣಕ್ಕೆ ತಂದಾಗ ಬೌದ್ಧ ಭಿಕ್ಷುಗಳ ಕೇಂದ್ರವಾಗಿ ಈ ಗುಹೆಗಳ ಕೆಲಸ ಪ್ರಾರಂಭವಾಯಿತು. ಅಂದಿನಿಂದ ದಕ್ಷಿಣದಲ್ಲಿ ಬಾದಾಮಿಯ ' ಚಾಲುಕ್ಯರ ಅಭ್ಯುದಯದ ಕಾಲದ ವರೆಗೂ (ಕ್ರಿ. ಶ. ೭ ನೇ ಶತಮಾನ) ಹೊಸ ಹೊಸ ಗುಹೆಗಳು ಕೊರೆಯಲ್ಪಟ್ಟವು.

ಅಜಂತದ ಗುಹೆಗಳನ್ನು, ಅವುಗಳನ ಕೊರೆದ ಕಾಲವನ್ನನುಸರಿಸಿ ಒಂದೊಂದಾಗಿ ನಿರೀಕ್ಷಿಸಿದರೆ ಬೌದ್ಧಧರ್ಮದ ವಿಕಾಸದ ಪುರಾಣವೇ ನಮ್ಮ ಮುಂದೆ ವಿಕಸಿತವಾಗುತ್ತದೆ. ಕ್ರಿ. ಪೂ. ಎರಡರಿಂದ ಕ್ರಿ. ಶ. ಎರಡನೇ ಶತಮಾನಗಳ ನಡುವಣ ಅವಧಿಯ ೮, ೯, ೧೦, ೧೨,

೧೩ ನೇ ಗುಹೆಗಳಲ್ಲಿ ಬೌದ ಧರ್ಮದ ಹೀನಯಾನ ಶಾಖೆಯ ಜೀವನದ ಎಳೆಗಳನ್ನು ಕಾಣುತ್ತೇವೆ. ಹೀನಯಾನವು ಬಲು ಕಟ್ಟರ ಪಂಥ. ಅದರಲ್ಲಿ ಮೂರ್ತಿಪೂಜೆ ನಿಷಿದ್ಧ, ಕಲೆಗಳು ಐಹಿಕ ಜೀವನದತ್ತ ಸೆಳೆಯುವುವೆಂಬ ನಂಬಿಕೆಯಿದ್ದುದರಿಂದ ಅವುಗಳನ್ನು ಪ್ರೋತ್ಸಾಹಿಸುವಂತಿರಲಿಲ್ಲ. ಆದ್ದರಿಂದ ಈ ಗುಹೆಗಳಲ್ಲಿ ಶಿಲ್ಪಕಲೆಯ ಚಾತುರ್ಯದ ಪ್ರದರ್ಶನವಿಲ್ಲ. ಚಿತ್ರಗಳೂ ಇಲ್ಲವೆನ್ನಬಹುದು. ಇಲ್ಲಿ ಮೊದಲು ವಾಸಿಸುತ್ತಿದ್ದ ಬೌದ್ಧ ಭಿಕ್ಷುಗಳು ಕಠಿನವಾದ ವ್ರತದಿಂದ ಜೀವಿಸುತ್ತಿದ್ದ ಪರಿಯನ್ನು ನಾವು ಮನದಲ್ಲಿ ಸುಲಭವಾಗಿ ಚಿತ್ರಿಸಿಕೊಳ್ಳಬಹುದು.

ಆ ಮೇಲೆ ಮಹಾಯಾನ ಬೌದ್ಧಧರ್ಮ ಮೆರೆಯತೊಡಗಿತು. ಮಹಾಯಾನ ಕಲಾವಿರೋಧಿಯಲ್ಲ. ಜೀವನದಲ್ಲಿ ಕಲೆಯಿಂದ ಆಧ್ಯಾತ್ಮಿಕ ಸಾರ್ಥಕ್ಯವನ್ನು ಪಡೆದು ಮನುಷ್ಯ ನಿರ್ವಾಣ ಪದದತ್ತ ಸಾಗಬಲ್ಲನೆಂದು ಅದು ಒಪ್ಪಿಕೊಂಡಿತ್ತು. ಈ ಕಾಲದ ಗುಹಾಲಯಗಳಲ್ಲಿ ಪ್ರತಿಯೊಂದು ಕಂಬದ ಮೇಲೆ, ಮಂಟಪದಲ್ಲಿ ಕಲ್ಲರಳಿ ಹೂವಾಗುವ ಕಲಾಸಿದ್ಧಿಯ ವಿಕಾಸವನ್ನು ಕಂಡು ಮರುಳಾಗುತ್ತೇವೆ. ಗೋಡೆಗಳ ಮೇಲೆ ವರ್ಣಚಿತ್ರ ಪರಂಪರೆಗಳು ತಥಾಗತನ ಜನ್ಮಜನ್ಮಾಂತರಗಳ ಜೀವನವನ್ನು ಕಣ್ಮುಂದೆ ನಿಲ್ಲಿಸಿ ನಮ್ಮನ್ನು ಬೆರಗುಗೊಳಿಸುತ್ತವೆ.

ಅಜಂತಾ ಗುಹಾಲಯಗಳು ಚಿತ್ರಕಲೆಗಾಗಿ ಪ್ರಸಿದ್ಧವಾಗಿದ್ದರೂ ಅವುಗಳ ಶಿಲ್ಪ ಸೌಂದರ್ಯದ ಭವ್ಯತೆ ಕಡಿಮೆಯದೇನೂ ಅಲ್ಲ. ಇಲ್ಲಿ ಬುದ್ಧ ದೇವನ ನಾನಾ ಭಂಗಿಗಳಲ್ಲಿರುವ ಮೂರ್ತಿಗಳು ತಥಾಗತನ ಮೋಹಕ ವ್ಯಕ್ತಿತ್ವವನ್ನು ದಿಗ್ಗೆಂದು ನಮ್ಮೆದುರು ನಿಲ್ಲಿಸುತ್ತವೆ: ನಾಗರಾಜ, ಯಕ್ಷ, ಗಂಧರ್ವರ ಆಕೃತಿಗಳು ವೈವಿಧ್ಯದಿಂದ ಮೋಹಕವಾಗಿವೆ, ಉನ್ನತವಾದ ಸ್ತಂಭಗಳ ಕೆತ್ತನೆ ಕೆಲಸ ಚಮತ್ಕಿತಗೊಳಿಸುತ್ತದೆ. ಒಂದನೇ ಮತ್ತು ೧೬ ನೇ ಗುಹಾಲಯಗಳು ಅಜಂತಾ ಶಿಲ್ಪಕಲೆಯ ಚರಮಸಿದ್ಧಿಯ ಉದಾಹರಣೆಗಳಾಗಿವೆ.

ಆದರೆ ಅಜಂತಾ ಗುಹೆಗಳನ್ನು ಜಗತ್ಪ್ರಸಿದ್ಧವಾಗಿ ಮಾಡಿದ್ದು ಅವುಗಳಲ್ಲಿರುವ ಭಿತ್ತಿ ಚಿತ್ರಗಳು ೨೯ ಗುಹೆಗಳಲ್ಲಿ ೧೬ ಗುಹೆಗಳ ಗೋಡೆ ತುಂಬ ಚಿತ್ರಗಳಿವೆ. ಗೋಡೆಗಳ ಮೇಲಷ್ಟೇ ಅಲ್ಲ, ಸೀಲಿಂಗುಗಳ ಮೇಲೂ ಚಿತ್ರಗಳನ್ನು ಬರೆಯಲಾಗಿದೆ

ಕೆತ್ತನೆಯ ಕೆಲಸ ಹೇಗೋ ಹಾಗೆ ಇಲ್ಲಿನ ಚಿತ್ರಕಲೆಯೂ ಏಳುನೂರು ವರ್ಷಗಳ ವಿಕಾಸವನ್ನು ಪ್ರದರ್ಶಿಸುತ್ತದೆ. ಗುಪ್ತಕಾಲೀನ ಕಲಾಸಿದ್ಧಿ ಇಲ್ಲಿ ಜೀವಂತವಾಗಿ ಬಾಳುತ್ತಿದೆ. ಅಜಂತದ ಕೊನೆ ಕೊನೆಯ ಚಿತ್ರಗಳನ್ನು ಬರೆದು ಇಂದಿಗೆ ೧,೩೦೦ ವರ್ಷಗಳು ಕಳೆದಿರಬೇಕು. ಕಾಲರಾಯನ ಎಲ್ಲ ಕೈವಾಡವೂ ಅವುಗಳ ಮೇಲೆ

ಅಜಂತಾದ ಒಂದು ನೃತ್ಯಚಿತ್ರ



ಮಾಳಿಯಿಟ್ಟಿದೆ. ಹವೆ, ಮೃಗ ಪಕ್ಷಿಗಳು, ಮನುಷ್ಯ—ಎಲ್ಲರೂ ಈ ಗುಹೆಗಳ ವೈಭವಕ್ಕೆ ಕೊಡಲಿಯೇಟು ಹಾಕಲು ಯತ್ನಿಸಿದ್ದಾರೆ. ಕಣ್ಣುಕಪ್ಪಡಿಗಳೂ ಜೇನ್ನೊಣಗಳೂ ಹುಲಿ ಕರಡಿ ನರಿ ಮೃಗಗಳೂ ಇಲ್ಲಿ ವಸತಿ ಮಾಡಿ ತಮ್ಮ ಮಲ ಮೂತ್ರ ವಿಸರ್ಜನೆಯಿಂದ ಕಲಾಕೃತಿಗಳ ಬಣ್ಣಗೆಡಿಸಿವೆ. ಮನುಷ್ಯ ಸಾವಿರ ವರ್ಷಕಾಲ ಇದನ್ನು ಸಂಪೂರ್ಣ ಮರೆತು, ಮತ್ತೆ ತಿರುಗಿ ಕಂಡುಹಿಡಿದಾಗ ಕೆಲವು ಚಿತ್ರಗಳ ಮೇಲೆ ತನ್ನ ಹೆಸರುಗಳನ್ನು ಬರೆದು ಅಂದಗೆಡಿಸಿದ್ದಾನೆ. ಒಬ್ಬಾನೊಬ್ಬ ಪರದೇಶಿ ಯಾತ್ರಿಕ ಸಂಧಿ ಸಾಧಿಸಿ ಇಲ್ಲಿನ ಒಂದು ಚಿತ್ರದ ಒಂದು ಭಾಗದ ಪ್ಲಾಟಿನಷ್ಟು ಅಂಶವನ್ನು ಚೂರಿಯಿಂದ ಅಚ್ಚುಕಟ್ಟಾಗಿ ಕೊರೆದು ಗಿಲಾಯಿ ಸಹಿತ ಎಬ್ಬಿಸಿ ಕಿತ್ತು ಸಾಗಿಸಿ ಯುರೋಪಿನಲ್ಲಿ ೧,೫೦೦ ಪೌಂಡುಗಳಿಗೆ ಮಾರಿದನಂತೆ! ಈ ಸಂಯೋಜಿತ ಹಾವಳಿಯಿಂದ ಅನೇಕಾನೇಕ ಚಿತ್ರಗಳು ಕಿತ್ತು ಬಿದ್ದಿವೆ; ಅನೇಕ ಚಿತ್ರಗಳು ಅಂದಗೆಟ್ಟಿವೆ ಆದರೂ ಅಳಿದುಳಿದ ಚಿತ್ರಗಳು ನಿನ್ನೆ ಮೊನ್ನೆಯ ಚಿತ್ರಗಳಂತೆ ಸ್ಫುಟವಾಗಿ, ಸುಂದರವಾಗಿ ತಾಜಾ ಆಗಿ ಉಳಿದಿವೆ. ಈಗ ಕೆಲ ದಿನಗಳಿಂದಷ್ಟೇ ಸರಕಾರ ಇವುಗಳನ್ನು ಸಂರಕ್ಷಿಸಲು ಉಪಾಯಗಳನ್ನು ಕೈಕೊಂಡಿದೆ.

ಕಲ್ಲಿನ ಗೋಡೆಗಳ ಮೇಲೆ, ಸುಣ್ಣ ಸೇರಿಸದೆ ಬರಿ ಮಣ್ಣು, ಸೆಗಣಿ, ಭತ್ತದ ಹೊಟ್ಟುಗಳನ್ನು ಬೆರಸಿ ಮಾಡಿದ ಗಿಲಾಯಿಯನ್ನು ಸಾರಿಸಿ ಅದರ ಮೇಲೆ ಕಾಂತಿವಿಲಾಸವನ್ನು ಮೆರೆಸಿ ಮೂಡಿಸಿದ ಈ ಚಿತ್ರಗಳ ಚೆಲುವನ್ನು ಏನ ಬಣ್ಣಿಸೋಣ! ಇವುಗಳ ಪ್ರತಿ ತೆಗೆಯಲು ಎಷ್ಟೆಷ್ಟೋ ದೇಶಿ-ವಿದೇಶಿ ಕಲಾಕಾರರು ಯತ್ನಿಸಿ ಮೂಲ ಚಿತ್ರಗಳ ಜೀವವನ್ನು ಪಡಮೂಡಿಸಲಾರದೆ ನಿರಾಶರಾಗಿದ್ದಾರೆ. "ಈ ಚಿತ್ರಗಳ ಸರಿಸಮಾನವಾದ ಕಲಾಸಿದ್ಧಿಯನ್ನು ಯುರೋಪಿನಲ್ಲಿ Giotto ನ ಕಾಲದ ವರೆಗೂ ನಾವು ಕಾಣಲಾರೆವು" ಎಂದು ಯುರೋಪ್ಯ ಕಲಾ ವಿಮರ್ಶಕರು ಹೇಳಿದ್ದಾರೆ.

ಈ ಚಿತ್ರಗಳನ್ನು ಕೆತ್ತಲಾಗಿರುವ ಗುಹೆಗಳು ಹೇಗೆ ಏಕೆ ಅನಿಂದ್ಯವಾಗಿ ಒಣ ಕೊಟ್ಟರೋ ಎಂಬ ಸಮಸ್ಯೆ ಇಂದಿಗೂ ಬಿಟ್ಟಿಲ್ಲ.

"ಕಗ್ಗಲ್ಲನ್ನು ಕೊರೆದು ರಚಿಸಿದ ನೂರಾರು ಗೋಡೆಗಳ ಮತ್ತು ಕಂಬಗಳ ಮೇಲೆ ಒಂದು ಮಹಾ ನಾಟಕವು ನಮ್ಮ ಕಣ್ಮುಂದೆ ನಡೆದಂತಾಗುತ್ತದೆ" ಎಂದು ಸರ್ ವಿಲಿಯಮ್ ರೋಥೆನ್‌ಸ್ಟೈನರು ಬರೆದಿದ್ದಾರೆ. ಇಲ್ಲಿ ಗಂಧರ್ವರೂ ವಿದ್ಯಾಧರರೂ ಯಕ್ಷರೂ ಅಪ್ಸರೆಯರೂ ನಾನಾದೇಶೀಯ ವೇಷೀಯರೂ ತಮ್ಮ ಲೋಕೋತ್ತರತೆಯನ್ನು ಪ್ರಕಟಿಸಿರುತ್ತಾರೆ; ಇಲ್ಲಿ ರಾಜರೂ ಭಿಕಾರಿಗಳೂ ತಮ್ಮ ವೈಭವವನ್ನೂ ಕಾರ್ಪಣ್ಯವನ್ನೂ ಮೂರ್ತಿಮತ್ತಾಗಿ ತೋರಿಸುತ್ತಾರೆ; ಇಲ್ಲಿ ನಿಸ್ಸೀಮ ಸೌಂದರ್ಯದ ರಾಜ ರಮಣಿಯರು, ಅಸಹ್ಯರೂಪದ ಕುಡುಕರು ಸಜೀವವಾಗಿ ಮೂಡಿದ್ದಾರೆ; ಇಲ್ಲಿ ದಂಪತಿಗಳ ಪ್ರಣಯ ಪ್ರದರ್ಶನದ ಚಿತ್ರಗಳಿವೆ, ಚತುರಂಗ ಬಲದ ಯುದ್ಧದ ಚಿತ್ರಗಳಿವೆ, ನಾನಾ ಮೃಗ ಪಕ್ಷಿಗಳನ್ನು ತೋರಿಸುವ ಬೇಟೆಗಳ ಚಿತ್ರಗಳಿವೆ.

ವಿಶೇಷವಾಗಿ ಬುದ್ಧನ ಪೂರ್ವಜನ್ಮಗಳ (ಜಾತಕ) ಕಥೆಗಳನ್ನೂ ಬುದ್ಧನ ಜೀವನ ಚಿತ್ರಗಳನ್ನೂ ಅತ್ಯಂತ ಚಾತುರ್ಯದಿಂದ ಇಲ್ಲಿ ಚಿತ್ರಿಸಿದ್ದಾಗಿದೆ. ೧, ೨, ೧೬, ೧೭ ಮತ್ತು ೧೯ನೇ ಗುಹೆಗಳ ಚಿತ್ರಗಳೇ ಸರ್ವಶ್ರೇಷ್ಠವಾದವುಗಳು ಬುದ್ಧನನ್ನು ಕಾಮದೇವನೂ ನಾನಾ ರಾಕ್ಷಸರೂ ಆತ್ಮಪಥದಿಂದ ವಿಚಲಿತಗೊಳಿಸಲು ನಡೆಸಿದ ಯತ್ನಗಳು, ಸಿದ್ಧಾರ್ಥನು ಗೃಹತ್ಯಾಗ ಮಾಡಿದ, ರಾಹುಲನನ್ನು ಬಗಲದಲ್ಲಿರಿಸಿಕೊಂಡು ನಿದ್ರಿಸಿದ ಯಶೋಧರೆಯು, ತಂದೆಯ ನಗರದಲ್ಲೇ ಭಿಕ್ಷು ಬುದ್ಧ ಭಿಕ್ಷಾಟನೆ ಮಾಡುವ, ಯಶೋಧರೆ ಮಗನನ್ನು ಬುದ್ಧನಿಗೆ ದಾನಮಾಡುವ—ಚಿತ್ರಗಳು ನಮ್ಮನ್ನು ನವೇ ನವೋ ಅನಿಸುತ್ತವೆ. ಸಾಯುತ್ತಿರುವ ರಾಜಕುಮಾರಿಯ ಚಿತ್ರವನು ಸರಿಗಟ್ಟುವ ಚಿತ್ರಗಳು ಪ್ರಪಂಚದ ಕಲಾಭಂಡಾರದಲ್ಲಿ ವಿರಳ.

ಆದರೆ ಬುದ್ಧ ಜೀವನವನ್ನು ಮಾತ್ರವೇ ಇವು ಚಿತ್ರಿಸುವುವೆಂದಲ್ಲ. ಅಂದಿನ ಜನಗಳ ಸಂಸ್ಕೃತಿ ಮತ್ತು ಜೀವನದ ಮಹಾ ಪ್ರದರ್ಶನವೇ ಇಲ್ಲಿದೆ.

ಎಷ್ಟೆಷ್ಟು ಬಗೆಯ ಅಲಂಕಾರಗಳು, ಎಂಥೆಂಥ ವಸ್ತ್ರ ಧಾರಣವಿಧಾನಗಳು, ನೂರಾರು ಬಗೆಯ ಕೂದಲು ಕಟ್ಟುವ ಕ್ರಮಗಳು ಅಲ್ಲಿ ಕಾಣಿಸುತ್ತವೆ! ಕುಪ್ಪಸ ಹಾಕಿದ ರಮಣಿಯರು, ಬಿಡುಮೊಲೆಯ ನಾರಿಯರು, ಮೈತುಂಬ ಸೀರೆಯುಟ್ಟವರು, ಟೊಂಕಕ್ಕಷ್ಟೇ ಗೇಣಗಲದ ಬಟ್ಟೆ ಸುತ್ತಿದವರು— ಹೆಚ್ಚು ಕಡಿಮೆ ನಗ್ನರೂಪಿಯರಾದ ಸ್ತ್ರೀಯರೇ ಬಹಳ. ಈ ಚಿತ್ರಕಾರರ ಸಾತ್ವಿಕ ಔಚಿತ್ಯ ಜ್ಞಾನವನ್ನು ಹೊಗಳಿದಷ್ಟು ಕಡಿಮೆಯೇ. ಬಹುಭಾಗ ನಗ್ನೆಯರಾಗಿದ್ದರೂ ಈ ಸುಂದರಿಯರು ಪಾಶುಬುದ್ಧಿಯನ್ನು ಪ್ರಚೋದಿಸುವುದಿಲ್ಲ.

ಹ್ಯಾವೆಲ್ಲನು ಹೇಳಿದಂತೆ, "ಚಿತ್ರಕಲೆ, ಮೂರ್ತಿಶಿಲ್ಪ ಮತ್ತು ವಾಸ್ತುಶಿಲ್ಪಗಳೆಂಬ ತ್ರಿವಿಧ ಕಲೆಗಳು ಇಷ್ಟು ಸಮರಸವಾಗಿ ಸಂಗಮಿಸಿದ ಉದಾಹರಣೆ ಅಜಂತದಲ್ಲಿ ಹೊರತು ಜಗತ್ತಿನಲ್ಲಿ ಬೇರೆಡೆ ಅತಿ ದುರ್ಲಭವಾಗಿದೆ." ಆದರೆ ಈ ಮಹಾಕೃತಿಯನ್ನು ರಚಿಸಲು ನೆರವಾದವರಾರು? ದುರ್ದೈವದಿಂದ ನಾವು ಅರಿಯೆವು. ಬುದ್ಧನಲ್ಲಿ ಪರಮ ಭಕ್ತಿಯಿಂದ ಪ್ರೇರಿತರಾಗಿ ಇದನ್ನು ಎಂಟು ಶತಮಾನಗಳ ಅವಧಿಯಲ್ಲಿ ನಿರ್ಮಿಸಿದ ರಾಜರನ್ನಾಗಲಿ, ಶ್ರೀಮಂತರನ್ನಾಗಲಿ, ಶಿಲ್ಪಿಗಳನ್ನಾಗಲಿ, ಚಿತ್ರಕರನ್ನಾಗಲಿ ಎಲ್ಲಿಯೂ ಹೆಸರಿಸಿಲ್ಲ. ಸಿಕ್ಕಿದ ಒಂದೆರಡು ಶಾಸನಗಳು ಈ ವಿಷಯದಲ್ಲಿ ವಿಶೇಷ ಬೆಳಕು ಬೀರುವುದಿಲ್ಲ. ರಾಜನು ಇರಾಣದ ರಾಯಭಾರಿಯನ್ನು ಬರಮಾಡಿಕೊಳ್ಳುವ ಒಂದು ಚಿತ್ರವು ಚಾಲುಕ್ಯ ಶಿರೋಮಣಿ ಎರಡನೇ ಪುಲಿಕೇಶಿಯದಾಗಿರಬೇಕೆಂದು ತೀರ್ಮಾನಿಸಲ್ಪಟ್ಟಿದೆ. ಆತ ಆ ಕಾಲದಲ್ಲಿ ದಕ್ಷಿಣಾಪ ಚಕ್ರವರ್ತಿಯಾಗಿದ್ದನಷ್ಟೇ. ಈ ಮಹಾ ಕೃತಿಗಳ ನಿರ್ಮಾಪಕರು ಕೇವಲ ಭಕ್ತಿ ಪ್ರೇರಿತರಾಗಿದ್ದುದರಿಂದ ತಮ್ಮ ಹೆಸರುಗಳನ್ನು ಪ್ರಕಟಿಸುವ ಮೋಹವನ್ನು ವರ್ಜಿಸಿರಬೇಕು. ಅವರ ತ್ಯಾಗ ಇತಿಹಾಸಕ್ಕೆ ಮಾತ್ರ ಬಹಳ ಹಾನಿಯನ್ನುಂಟುಮಾಡಿದೆ

ಕ್ರಿ. ಪೂ. ೩ನೇ ಶತಕದಿಂದ ಪ್ರಾರಂಭವಾಗಿ ನನೆಯಿಂದ ಮುಗುಳಾಗಿ ಅರಳಾಗಿ ರೂಪುಗೊಂಡ



ಅಜಂತಾದ ಒಂದು ನಾರೀ ಚಿತ್ರ

ಅಜಂತದ ವೈಭವ ಪಾರಿಜಾತ ೭ನೇ ಶತಮಾನದ ಮಧ್ಯದಲ್ಲಿ ತಟ್ಟನೆ ಉರುಳಿ ಹೋದಂತೆ ಕಾಣುತ್ತದೆ. ಕೊನೆಯ ಗುಹೆಯೊಂದು ಅರ್ಧ ಕೊರೆದು ಅದೇ ಸ್ಥಿತಿಯಲ್ಲಿ ಉಳಿದುಕೊಂಡಿದೆ. ಹೀಗೇಕಾಯಿತು? ಬೌದ್ಧ ಧರ್ಮಕ್ಕೆ ದಕ್ಷಿಣದಲ್ಲಿ ಏಕಾಏಕಿ ಅವಸಾನ ಬಂದಿರಬಹುದೆ? ಈ ಚೈತ್ಯ-ವಿಹಾರಗಳ ಆಶ್ರಯದಾತ ರಾಜವಂಶಗಳು ಹಠಾತ್ತಾಗಿ ನಷ್ಟವಾಗಿರಬಹುದೆ? ಅಥವಾ ಬೇರಾವ ವಿಪತ್ತು ಒದಗಿರಬಹುದೆ? ನಾವು ಊಹಾಪೋಹಗಳನ್ನಷ್ಟೇ ಮಾಡಬಹುದು.

ನಿಜವನ್ನು ಯಾರೂ ಅರಿಯರು. ಈಗೊಂದು ಸಾವಿರ ವರ್ಷಗಳ ಹಿಂದೆ ಈ ಗುಹೆಗಳು ನಿರ್ಜನವಾಗಿ, ಬರಬರುತ್ತ ಸೆನಪಿನಿಂದಲೂ ದೂರವಾಗಿ ಹೋದವೆಂದೂ "ಬುದ್ಧಂ ಶರಣಂ ಗಚ್ಛಾಮಿ" ಘೋಷಗಳಿಂದ ಪ್ರತಿಧ್ವನಿಸುತ್ತಿದ್ದ ಸಾವಿರಾರು ಭಿಕ್ಷುಗಳ ಈ ನಿವಾಸ, ವಿದ್ಯಾರ್ಥಿಗಳ ವಿಶ್ವವಿದ್ಯಾಲಯ ಕೊನೆಗೆ ಹುಲಿಕರಡಿಗಳ ಆಶ್ರಯಸ್ಥಾನವಾಯಿತೆಂದೂ ಮಾತ್ರ ನಮಗೆ ಗೊತ್ತು.

ಆದರೆ ಹೀಗಾದುದೂ ಒಂದು ವಿಚಿತ್ರ ರೀತಿಯಿಂದ ಹಿತಕರವೇ ಆಯಿತೇನೋ. ಔರಂಗಜೇಬನು ದಕ್ಷಿಣದ ಮೇಲೆ ದಂಡಯಾತ್ರೆ ಮಾಡಿದಾಗ ಧರ್ಮ ದುರಾಗ್ರಹದಿಂದ ಇಂಥದೇ ಇನ್ನೊಂದು ಗುಹಾಲಯವಾದ ಎಲ್ಲೋರಾದ ಭವನಗಳನ್ನು ಹಾರಿಸಿ ಬಿಡಲು ಕಡಸಿ ಮದ್ದು ತುಂಬಿ ಸ್ಫೋಟಗೊಳಿಸಿದನಂತೆ. ಆದರೆ ಕಲ್ಲುಬಂಡೆ ಕದನಿಗೆ ಸೊಪ್ಪು ಹಾಕಲಿಲ್ಲ. ಆ ಮೇಲೆ ಹುಲ್ಲು ತುಂಬಿ ಬೆಂಕಿ ಹಚ್ಚಿದನಂತೆ. ಇದರಿಂದ ಗುಹಾಲಯದೊಳಗಿನ ಶಿಲ್ಪವೂ ಚಿತ್ರಗಳೂ ಒಣಗಿ ರೂಪುಗೆಟ್ಟು ಹಾಳಾಗಿ ಹೋದವು ಆದರೆ ಅಜಂತಾ ಗುಹೆಗಳ ಅಸ್ತಿತ್ವವೇ ಆಗ ಯಾರಿಗೂ ತಿಳಿದಿರಲಿಲ್ಲವಾಗಿ ಅವು ಔರಂಗಜೇಬನ ಮೂರ್ತಿಭಂಜಕ ಕಲಾದ್ವೇಷದ ತಾಪದಿಂದ ಉಳಿದುಕೊಂಡವು. ಹೀಗಾಗಿ ಭಾರತೀಯರ ಅಸಮಾನವಾದ ಕಲಾ ಭಂಡಾರವೊಂದು ಇಷ್ಟಾದರೂ ಉಳಿದುಕೊಂಡಿದೆ.



ಯೌವನ-ಮುಪ್ಪು

ಯೌವನವು ಜೀವನದ ಒಂದು ಅವಧಿಯಲ್ಲ, ಅದೊಂದು ಮಾನಸಿಕ ಅವಸ್ಥೆ. ಅದೊಂದು ಇಚ್ಛಾಶಕ್ತಿಯ ಪರೀಕ್ಷೆ, ಭಾವನೆಯ ಚೈತನ್ಯ, ದೈನ್ಯವನ್ನು ಗೆದ್ದ ಧೈರ್ಯದ ಪ್ರಭಾವ, ಐಷ ಆರಾಮದ ಆಶೆಯನ್ನು ಹತ್ತಿಕ್ಕಿ ನಿಂತ ಸಾಹಸಪ್ರಿಯತೆ.

ಇಂತಿಷ್ಟು ವರ್ಷ ಬದುಕಿದನೆಂದಾಕ್ಷಣ ಯಾರೂ ಮುದುಕರಾಗುವುದಿಲ್ಲ. ನಾವು ನಮ್ಮ ಆದರ್ಶಗಳಿಗೆ ತಿಲಾಂಜಲಿಯಿತ್ತಂದಿನಿಂನಲೇ ಮುಪ್ಪು ಆರಂಭವಾಗುತ್ತದೆ. ವಯಸ್ಸು ಚರ್ಮವನ್ನು ಸುಕ್ಕುಗಟ್ಟಿಸುತ್ತದೆ, ಆದರೆ ಉತ್ಸಾಹ ನಾಶದಿಂದ ಆತ್ಮವೇ ಸುಕ್ಕುಗಟ್ಟುತ್ತದೆ. ಚಿಂತೆ, ಸಂಶಯ, ಆತ್ಮ-ಅವಿಶ್ವಾಸ, ಭೀತಿ ಮತ್ತು ನಿರಾಶೆ-ಇವೇ ಆತ್ಮಕ್ಕೆ ಮುಪ್ಪುತರುವ "ವರ್ಷ"ಗಳು.

ಬಾಗಿಲುಗಳೆಲ್ಲ ಮುಚ್ಚಿದಂತಾದಾಗ, ಹೃದಯದ ಕೇಂದ್ರಗಳು ನಿರಾಶಾವಾದದ ಮಂಜು ಮತ್ತು ಶಾತ್ಯದ ಹಿಮದಿಂದ ಮುಸುಕಲ್ಪಟ್ಟಾಗ, ಆಗಷ್ಟೇ ನೀವು ಮುದುಕರಾದಂತೆ. ಆಮೇಲೆ ದೇವರೇ ನಿಮ್ಮನ್ನು ರಕ್ಷಿಸಬಲ್ಲ.

—ಅಜ್ಞಾತ

*   *   *

ಗೆದ್ದವರ ಜಂಬವನ್ನು ಜಗತ್ತು ಸಹಿಸುತ್ತದೆ—ಇತರರ ಜಂಬವನ್ನು ಕೇಳುವುದಿಲ್ಲ.

—ಜಾನ್ ಬ್ಲೇಕ್

ಪ್ರಸಿದ್ಧ ಚೀನೀ ತತ್ವಜ್ಞಾನಿ ಹೇಳುತ್ತಾರೆ—

ನಾನು ಸುಖಿ

ಲಿಂಗ್ ಉಟಾಂಗ್

ಸಂಪೂರ್ಣ ಸುಖಿಯಾದ ಮನುಷ್ಯ ಪ್ರಪಂಚದಲ್ಲಿ ಇಲ್ಲವೇ ಇಲ್ಲೆಂದು ಜನರು ಹೇಳುತ್ತಾರೆ. ಉಳಿದವರ ಮಾತು ಹಾಗಿರಲಿ, ನನ್ನ ಮಟ್ಟಿಗೆ ನಾನಂತೂ ಪೂರ್ಣ ಸುಖಿಯೆಂದೇ ಹೇಳಬಲ್ಲೆ.

ಸುಖಿ ಎಂಬ ತಾತ್ಪರ್ಯವಿಷ್ಟೇ. ಸಾಮಾನ್ಯವಾಗಿ ಯಾವಾತ ಸುಖಿಯೋ ಆತ ಹಾಗೆ ಹೇಳಿಕೊಳ್ಳಲಾರ. ಅಸುಖಿ ಅಥವಾ ದುಃಖಿಯೆನಿಸುವ ಮನುಷ್ಯ ಮಾತ್ರ ತನ್ನ ಅವಸ್ಥೆಯನ್ನು ಹಾಡಿ ಹಾಡಿ ಹೇಳಿಕೊಳ್ಳುತ್ತಾನೆ. ಚಿಲ್ಲರೆ ತೊಂದರೆಗಳ ಚಿತ್ರವನ್ನೂ ದೊಡ್ಡದು ಮಾಡಿ ತೋರಿಸಲು ಅವನು ಆತುರಪಡುತ್ತಾನೆ.

ಆದರೆ ನಾನು ಸುಖಿಯೆಂದು ಹೇಗೆ ಹೇಳಿಕೊಳ್ಳುತ್ತೇನೆ? ನನ್ನ ಆತ್ಮೀಯರಲ್ಲೆಷ್ಟೋ ಜನರನ್ನು ಮೃತ್ಯು ಸೆಳೆದೊಯ್ದಿದೆ. ನನ್ನ ಎಷ್ಟೋ ಹೃತ್ಪೂರ್ವಕ ಪ್ರಯತ್ನಗಳು ವಿಫಲವಾಗಿವೆ. ಜನರಿಂದ ನನಗೆ ನಿರಾಶೆಯೇ ದೊರೆತಿದೆ. ನಾನೂ ಅವರನ್ನು ನಿರಾಶೆಗೊಳಿಸಿರಬಹುದು. ಇಂದಿನ ವಿಕಟ ರಾಜಕೀಯ ಪರಿಸ್ಥಿತಿಯಲ್ಲಿ, ಅಣು ಬಾಂಬುಗಳ ಯುಗದಲ್ಲಿ, ನಾನು ವಾಸಿಸುವ ಪ್ರಪಂಚ ಯಾವ ಗಳಿಗೆಯಲ್ಲಿ ನಿರ್ನಾಮವಾದೀತೆಂಬ ನಿಯಮವಿಲ್ಲೆಂದೂ ನಾನು ಬಲ್ಲೆ. ಇಷ್ಟಿದ್ದರೂ ನಾನು ಸುಖಿಯೆಂದು ಹೇಳಿಕೊಳ್ಳುತ್ತೇನೆ. ಕಾರಣವಿಷ್ಟೆ-ಸುಖದಲ್ಲಿ ನನಗೆ ವಿಶ್ವಾಸವಿದೆ.

ಈ ವಿಶ್ವಾಸವೇ ನನ್ನ ಜೀವನದ ಆಶೆಯ ಬಳ್ಳಿ. ಬಾಳುವೆಯು ಅನೇಕ ವೈಫಲ್ಯಗಳ ನಡುವೆಯೂ ಕೆಲ ಸಾಫಲ್ಯಗಳು ಪ್ರಾಪ್ತವಾಗಿವೆಯಲ್ಲ. ಅವುಗಳ ಬಲದಿಂದಲೇ ನನ್ನ ಬಳ್ಳಿ ಬೆಳೆಯುತ್ತಿದೆ. ಈ ಎಲ್ಲ ಕೆಡಕುಗಳಿದ್ದರೂ ಅವುಗಳನ್ನು ಮೀರಿ ಕೊನೆಗ ಒಳಿತಿಗೇ ಜಯ ಖಂಡಿತ ಎಂಬ ನನ್ನ ವಿಶ್ವಾಸವೇ ನನಗೆ ಧೈರ್ಯ ಕೊಡುತ್ತಿದೆ.

ಸುಖ-ದುಃಖಗಳೂ ಆಶೆ-ನಿರಾಶೆಗಳೂ ಜೀವನದ ಎರಡು ರೂಪಗಳು ಮಾತ್ರ. ಒಂದಿಲ್ಲದೆ ಇನ್ನೊಂದು ವ್ಯರ್ಥ; ಒಂದಿಲ್ಲದೆ ಇನ್ನೊಂದು ಇರಲೇ ಆರದು ಒಳಿತೂ ಕೆಡುಕೂ ಕೊನೆಗೆ ಒಂದಾಗಿ ಬೆರೆತುಬಿಡುವವು. ಮೆಲುಪು-ಚೆಲುವುಗಳನ್ನು, ಗೆಲುವು-ನಲಿವುಗಳನ್ನು ನಾವು ಕಡುಪು-ಕುರೂಪಗಳಿಂದ, ಸೋಲು-ಕಣ್ಣೀರುಗಳಿಂದ ದೂರವಿಟ್ಟೊಡನೆ ಅವು ನಿರ್ಜೀವವಾಗಿ ಹೋದಾವು, ಜೀವನ ನೀರಸವಾದೀತು. ಆಗ ನಾವೇ ಗಾಬರಿಗೊಂಡೇವು.

ಜಗತ್ತು ಯಾವಾಗಲೂ ಅಪರಿಪೂರ್ಣವೇ. ಆದರಿಂದಲೇ ಅದಕ್ಕೆ ಜೀವಕಳೆ. ಅದು ಎಂದು ಪೂರ್ಣವಾಯಿತೋ ಅಂದು ಅದರ ನಡೆ ಸ್ತಂಭಿತವಾಗಿ ಅದು ನಿಶ್ಚಲ ನಿಷ್ಪಂದವಾಗುವುದು. ಪರಿಪೂರ್ಣತೆಯನ್ನರಸುತ್ತ ಅಪೂರ್ಣತೆ ಧಾವಿಸುತ್ತದೆ. ಅದೇ ಬಾಳುವೆಯ ಪ್ರವಾಹ. ಈ ಅಪೂರ್ಣತೆಯನ್ನು ಒಪ್ಪಿಕೊಳ್ಳದ ಮನುಷ್ಯನಿಗೆ ಆನಂದ ಎಂದೂ ಲಭ್ಯವಾದೀತೆಂದು ನನಗನಿಸುವುದಿಲ್ಲ ಮಾನವನೇ ಅಪರಿಪೂರ್ಣ. ಇದನ್ನು ನಾವು ಒಪ್ಪಿಕೊಂಡುಬಿಡಬೇಕು. ಎಲ್ಲರೂ ಅಪರಿಪೂರ್ಣರೇ ತಾನೆ. ಆದರೆ ಅಪೂರ್ಣತೆಯನ್ನು ನೆನೆದುಕೊಂಡು ನಿರಾಶೆಯ ಕಾವಿ ಬಟ್ಟೆಯನ್ನು ಹೊತ್ತು ತನ್ನ ಆಸೆಯನ್ನೂ ಉತ್ಸಾಹ

ವನ್ನೂ ತ್ಯಜಿಸಿಬಿಡುವುದು ಮಾತ್ರ ಮಹಾ ಮೂರ್ಖತನ.

ನಿಸರ್ಗವು ಮನುಷ್ಯನಿಗಿಂತ ಎಷ್ಟೋ ಹಿಂದಿನದು. ಆದರೂ ಅದು ಪೂರ್ಣವಾಗಿಲ್ಲ. ಬಹುಕಾಲ ಭೂಮಿ ಕಾಯ್ದು ಒಣಗಿದ ಮೇಲೆಯೇ ನಿಸರ್ಗ ಮಳೆಯನ್ನು ಕಳಿಸುತ್ತದೆ. ಒಮ್ಮೊಮ್ಮೆ ಅದರ ರಭಸ ಮಿತಿಮೀರಿ ಭೂಮಿಯ ತೃಷೆಯನ್ನು ಹಿಂಗಿಸುವ ಬದಲು ಎಲ್ಲವನ್ನೂ ಕೊಚ್ಚಿಕೊಂಡೊಯ್ದು ಬಿಡುತ್ತದೆ. ಆದರೆ ನಿಸರ್ಗ ಯಾರ ಅಂಕೆಯಲ್ಲಿಯೂ ಉಳಿಯುವುದಲ್ಲ. ಅದು ಅನಾದಿಯಿಂದ ಹೀಗೆ ಅಪೂರ್ಣಾವಸ್ಥೆಯಲ್ಲೇ ಸಾಗುತ್ತಿದೆ. ಅಂದ ಮೇಲೆ ಮನುಷ್ಯನಿಗೆ ತನ ಯತ್ನಗಳಿಗೆ ಯಶ ದೊರೆಯದಿದ್ದಾಕ್ಷಣ ಏನು ಮಹಾ? ಅದಕ್ಕಾಗಿ ಕೊರಗುತ್ತ ಉಳಿತರೆ ಫಲವಿಲ್ಲ ಇದ್ದದ್ದರಲ್ಲೆ ಸುಖವನ್ನು ಹುಡುಕಬೇಕು. ಬಾಳನ್ನು ಇದ್ದಕಿದ್ದಂತೆ ಒಪ್ಪಿಕೊಂಡರೆ ಮಾತ್ರ ಮುನ್ನಡೆ ಸಾಧ್ಯವಾದೀತು, ಸುಖವೂ ದೊರೆತೀತು. ಏಳು ಬೀಳುಗಳೆರಡನ್ನೂ ಸಮದೃಷ್ಟಿಯಿಂದ ನೋಡುವುದೇ ನಮ-ನಿಮಗಿರುವ ತಾರಣೋಪಾಯ.

ಆದ್ದರಿಂದಲೇ ಸುಖದಲ್ಲಿ ನನಗೆ ವಿಶ್ವಾಸ ಎಂದು ನನ್ನೀ ವಿಶ್ವಾಸ ಮುರಿಯಿತೋ ಅಂದು ನನ್ನ ವಿನಾಶವಾದಂತೆ. ಇಂದು ನಿರಾಶೆಯ ಮೋಡಗಳ ನಡುವೆ ತಲೆ ಹಾಕುತ್ತಿರುವ ಆಶೆಯ ರೇಖೆಗಳು. ಆಗ ಮಾಯವಾಗಿ ನಾನು ದಿಕ್ಕೆಟ್ಟು ಅಲೆದಲೆದು ಅಳಿದುಹೋದೇನು.

ತಾಯಿ-ಮಗು

'ಅಮ್ಮ, ನಾನೆಲ್ಲಿಂದ ಬಂದೆ, ನೀನೆಲ್ಲಿಂದ ನನ್ನನಾರಿಸಿ ತಂದೆ?''
ಮಗು ತಾಯಿಯನ್ನು ಕೇಳಿತ್ತು.
ಅಳು-ನಗುವು ಬೆರೆತ ಕಾಮನಬಿಲ್ಲ ಪಸರಿಸುತ
ಮಗುವನೆದೆಗವಚಿಕೊಂಡು
ಆ ತಾಯಿ ನುಡಿದಳಿಂತೆಂದು:
''ನೀನೆನ್ನ ಎದೆಯಲ್ಲಿ ಬಯಕೆಯಾಕಾರದಲಿ ಅವಿತುಕೊಂಡಿದ್ದೆ;
ನನ್ನ-ಮಕ್ಕಳಾಟಗಳಲ್ಲಿ ಗೊಂಬೆ ರೂಪನು ಧರಿಸಿ ಹುದುಗಿಕೊಂಡಿದ್ದೆ;
ಮಣ್ಣ ಮುದ್ದೆಗಳಿಂದ ಮೂರ್ತಿಗಳ ನಾನಂದು ಮಾಡುತಿದ್ದಾಗ
ನಿನ್ನನ್ನೆ ನಾ ಸವೆಯುತಿದ್ದೆ;
ಮನೆಯ ದೇವರ ಮುಂದೆ ಪೊಡಮಡುತಲಿದ್ದಾಗ
ನೀ ನನ್ನ ದೇವರಾಗಿದ್ದೆ.
ಹುಡುಗಿಯಾಗಿದ್ದಾಗ ನನ್ನೆದೆಯು ಪಕಳೆಗಳು ಬಿರಿಯುತಿದ್ದಾಗ
ನೀ ಗಂಧವಾಗಿ ಇಡುಗಿದ್ದೆ;
ಯೌವನದ ಸಿರಿ ನನ್ನ ಮೈದುಂಬಿ ಹರಿಯುತಿದ್ದಾಗ
ನೀ ನಿನ್ನ ಮುಂಬೆಳಗ ಪಸರಿಸಿದ್ದೆ.
ನೀ ನಾಕ ಯುವರಾಜ, ಅರುಣನಿಗೆ ಸಹಜಾತ
ಭೂಲೋಕಕಾವ ಗಂಗೆಯಲಿ ತೇಲುತ ಬಂದು
ನನ್ನೆದೆಯ ತಡಿಯಲ್ಲಿ ತಡೆದು ನಿಂದ್ಯೋ!''

—ರವೀಂದ್ರನಾಥ ಠಾಕುರ



ಉಸ್ತಾದ ಅಲ್ಲಾಉದ್ದೀನ ಖಾನರ

ಸಂಗೀತ ತಪಸ್ಸು

ಭಾರತದ ಮಹಾ ಸಂಗೀತಾಚಾರ್ಯರೊಬ್ಬರ ಆತ್ಮಚರಿತ್ರೆ

ಹೆಂಡತಿ ಸತ್ತ ನಂತರ ದೀನಾನಾಥ ದೇವ ಶರ್ಮರಿಗೆ ತಮ್ಮ ಊರಿನಲ್ಲಿರುವದು ಅಸಹ್ಯವಾಗಿ ಅವರು ತಮ್ಮ ಏಕಮಾತ್ರ ಪುತ್ರನೊಡನೆ ಹೊರಟರು. ಅಲೆಯುತ್ತ ಅಲೆಯುತ್ತ ಅವರು ಕೂಕಾ ಜನರ ವಸತಿಗೆ ಬಂದರು. ಈ ಕೂಕಾ ಜನರು ನರಭಕ್ಷಕರು. ತಮ್ಮ ತಂದೆ ತಾಯಿಯರೇ ಮುದುಕರಾದ ಬಳಿಕ, "ತಂದೆ ತಾಯಿ ಒಂದು ಕಾಲದಲ್ಲಿ ನಮ್ಮನ್ನು ತಮ್ಮ ಹೊಟ್ಟೆಯಲ್ಲಿಟ್ಟುಕೊಂಡಿದ್ದರು; ಈಗ ನಾವು ಅವರನ್ನು ನಮ್ಮ ಹೊಟ್ಟೆಯಲ್ಲಿ ಇಟ್ಟುಕೊಳ್ಳುತ್ತೇವೆ" ಎಂದು ಅವರನ್ನು ತಿಂದು ಬಿಡುತ್ತಿದ್ದರು ಈ ಜನ. ದೀನಾನಾಥ ಶರ್ಮರು ಈ ಜನರ ನಡುವೆ ವಾಸಿಸತೊಡಗಿ ಅಲ್ಲಿಯ ಕಾಳೀ ಮಂದೀರದಲ್ಲಿ ಪೂಜಾರಿಗಳಾದರು ಕಾಳೀ ಮಾತೆಯು ಪೂಜಾರಿಯ ಮೇಲೆ ಅವಳ ಭಕ್ತರಾದ ಕೂಕಾ ಜನರು ಹೇಗೆ ತಮ್ಮ ವಕ್ರದೃಷ್ಟಿಯನ್ನು ಬೀರಿಯಾರು? ಕೂಕಾ ಜನರು ದೀನಾನಾಥರಿಗೆ ಆಹಾರವನ್ನೂ ಕಾಣಿಕೆಗಳನ್ನೂ ತಂದೊಪ್ಪಿಸತೊಡಗಿದರು.

ದೀನಾನಾಥರು ಬ್ರಾಹ್ಮಣರು. ಆದರೆ ಅವರ ಮಗ ವಯಸ್ಸಿಗೆ ಬಂದ ಬಳಿಕ ಬೇರೊಂದು ಮಾರ್ಗ ಹಿಡಿದ. ಆತ ಕೂಕಾ ಜನರ ಟೋಳಿಯೊಂದನ್ನು ಕಟ್ಟಿಕೊಂಡು ಬಡವರನ್ನು ಸುಲಿಯುವ ಜಮೀನುದಾರರು ಮತ್ತು ಶ್ರೀಮಂತರನ್ನು ಲೂಟಿಮಾಡಿ ಕೈಗೆ ದೊರೆತ ಸಂಪತ್ತನ್ನು ಬಡಬಗ್ಗರಲ್ಲಿ ಹಂಚತೊಡಗಿದ. ಇದೇ ಸಮಯದಲ್ಲಿ ಕ್ಲೈವನು ವಿಜಯಿಯಾಗಿ ಈ ದರೋಡೆಗಾರರನ್ನು ಹಿಡಿದವರಿಗೆ ಲಕ್ಷಾಂತರ ರೂಪಾಯಿಗಳ ಬಹುಮಾನ ಕೊಡುವದಾಗಿ ಸಾರಿದ. ಈ ಸಂಕಟ ಸಮಯದಲ್ಲಿ ಈ ಬ್ರಾಹ್ಮಣಪುತ್ರನು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿ "ಸಿರಾಜು"

ಹಿಂದೀ "ನವನೀತ" ದಿಂದ; ಚಿತ್ರ : ವಿ. ಎಸ್. ಓಕೇ

ಎಂಬ ಹೆಸರನ್ನಿಟ್ಟುಕೊಂಡನು. ಸಿರಾಜು ಡಕಾಯಿತನ ಹೆಸರು ಕೇಳಿದೊಡನೆ ಆ ಕಾಲದ ಜನರು ಗಡಗಡ ನಡುಗುತ್ತಿದ್ದರು.

ಒಂದು ದಿನ ಸಿರಾಜು ಸಿಲಹಟದ ಒಬ್ಬ ಜಮೀನುದಾರನ ಮನೆಗೆ ದರೋಡೆ ಹಾಕಿದ. ಅಲ್ಲಿ ಅವನಿಗೆ ಹಾಸಿಗೆಯ ಮೇಲೆ ಮಲಗಿಸಿದ್ದ ಚಿಕ್ಕ ಬಾಲಿಕೆಯೊಬ್ಬಳು ಕಣ್ಣಿಗೆ ಬಿದ್ದಳು. ದರೋಡೆ ಹಾಕುತ್ತಾರೆಂಬ ಸುಳಿವು ಗೊತ್ತಾದ್ದರಿಂದ ಮನೆಯವರೆಲ್ಲ ಓಡಿಹೋಗಿದ್ದರು. ಅವಸರದಲ್ಲಿ ಬಹುಶಃ ಅವರು ಈ ಹುಡುಗಿಯನ್ನು ಮರೆತು ಬಿಟ್ಟು ಹೋಗಿರಬೇಕು. ಸಿರಾಜು ಆ ಹುಡುಗಿಯನ್ನು ಕರತಂದು ತನ್ನ ಮಗನ ಜೊತೆಯಲ್ಲಿಯೆ ಸಾಕತೊಡಗಿದ. ಮುಂದೆ ಅವಳನ್ನು ತನ್ನ ಮಗನಿಗೆ ವಿವಾಹ ಮಾಡಿಕೊಟ್ಟ. ತಾನು ದರೋಡೆಗಾರನ ವೃತ್ತಿಯನ್ನು ಬಿಟ್ಟುಕೊಟ್ಟು ತ್ರಿಪುರಾದ ಶಿವಪುರ ಎಂಬ ಊರಿನಲ್ಲಿ ಸಂಭಾವಿತ ನಾಗರಿಕನಂತೆ ಜೀವಿಸತೊಡಗಿದ.

ಸಿರಾಜುವಿನ ಮಗನಿಗೆ ಮೂವರು ಗಂಡುಮಕ್ಕಳು– ಅಲಿ ಅಹಮದ, ಸಾಲಿ ಅಹಮದ ಮತ್ತು ಜಾಫರ ಮುಹಮ್ಮದ– ಹುಟ್ಟಿದರು. ಜಾಫರ ಮುಹಮ್ಮದನಿಗೆ ಮಾದರ ಹುಸೇನ ಎಂಬಾತನೂ ಅವನಿಗೆ ಸದೂ ಖಾನನೂ ಹುಟ್ಟಿದರು. ಸದೂ ಖಾನನಿಗೆ ಶಮೀರುದ್ದೀನ, ಆಫತಾಬ ಉದ್ದೀನ, **ಅಲ್ಲಾ ಉದ್ದೀನ,** ನಾಯಬ ಉದ್ದೀನ ಮತ್ತು ಹಯಾತ ಅಲಿ ಎಂಬ ಐವರು ಗಂಡು ಮಕ್ಕಳು ಹುಟ್ಟಿದರು. ಇದೇ ನನ್ನ ವಂಶ ಪರಿಚಯ.

ನನ್ನ ತಂದೆ ತುಂಬಾ ಸಂಗೀತಪ್ರೇಮಿಗಳು. ಒಳ್ಳೆಯ ಸಂಗೀತ ಕೇಳಲು ಸಿಗುತ್ತದೆ ಎಂದರೆ ಅವರು ನಡೆದುಕೊಂಡೇ ೨೦–೨೫ ಮೈಲು ದೂರದ ಸ್ಥಳಕ್ಕೂ ಹೋಗುತ್ತಿದ್ದರು. ನನ್ನ ಅಣ್ಣ ಆಫತಾಬ ಉದ್ದೀನರೂ ಸಂಗೀತ ಸಾಧಕರೇ. ಇಬ್ಬರು ಉಸ್ತಾದರು ಅವರಿಗೆ ಸಂಗೀತವನ್ನು ಹೇಳಿಕೊಡುತ್ತಿದ್ದರು. ಇಂಥ ವಾತಾವರಣದಲ್ಲಿ ನಾನಾದರೂ ಹೇಗೆ ಸಂಗೀತಪ್ರೇಮಿಯಾಗದೆ ಉಳಿದೇನು ? ದಿನದಿನವೂ ನನ್ನ ಸಂಗೀತದ ಹುಚ್ಚು ಬೆಳೆದು ಕಡೆಗೆ ನಾನು ಶಾಲೆಗೆ ಹೋಗುವ ನೆಪದಲ್ಲಿ ಶಿವಮಂದಿರಕ್ಕೆ ಹೋಗಿ ಅಲ್ಲಿ ಸಾಧುಗಳ ಭಜನಾಸಂಗೀತವನ್ನು ಕೇಳುತ್ತ ಕೂಡ್ರುತ್ತಿದ್ದೆ.

ಒಂದು ದಿನ ನನ್ನ ಕಳ್ಳತನ ಹೊರಬಿತ್ತು. ಶಾಲೆಯ ಹೆಡ್‌ಮಾಸ್ತರರು ಮನೆಗೆ ಹೋಗಿ ನಾನು ಶಾಲೆಗೆ ಬರುತ್ತಿಲ್ಲವೆಂಬ ಸಮಾಚಾರವನ್ನು ತಿಳಿಸಿದರು. ಆದರೆ ನನ್ನ ತಂದೆ ಇದನ್ನು ಕೇಳಿ ಏನೂ ಹೇಳಲಿಲ್ಲ. ಇಷ್ಟೇ ಅಲ್ಲ, ಸಾಧುಗಳ ಜೊತೆ ನಡೆಯುತ್ತಿದ್ದ ನನ್ನ ಸಂಗೀತ ಕಾರ್ಯಕ್ರಮಗಳ ವಿಷಯವನ್ನು ಕೇಳಿ ಸಂತೋಷಗೊಂಡರು. ತಾಯಿಯ ಮತ ಮಾತ್ರ ಬೇರೆಯೇ ಆಗಿತ್ತು. ವಾಸ್ತವವಾಗಿ ಅವಳೇ ಮನೆಗೆ ಒಡತಿಯಾಗಿದ್ದಳು. ಅವಳು ಮೂರು ದಿನಗಳ ವರೆಗೆ ನನ್ನ ಕೈಕಾಲು ಕಟ್ಟಿಹಾಕಿ ಅನ್ನ ನೀರುಗಳನ್ನು ಕೊಡದೆ ಉಪವಾಸ ಕೆಡವಿದ್ದಲ್ಲದೆ ಮನದಣಿಯೆ ಬಡಿದಳು. ಮೂರನೆಯ ದಿನ ನನ್ನ ಅಕ್ಕ ಮಧುಮಾಲತಿ ತಾಯಿಯ ಕ್ರೋಧದಿಂದ ನನ್ನನ್ನು ರಕ್ಷಿಸಿದಳು.

ಇದಾದ ಬಳಿಕ ನಾನು ತಾಯಿಯ ಪೆಟ್ಟಿಗೆಯಿಂದ ೧೦-೧೨ ರೂಪಾಯಿಗಳನ್ನು ಕದ್ದುಕೊಂಡು ಓಡಿಹೋದೆ. ಎಷ್ಟಾದರೂ ದರೋಡೆಗಾರನ ವಂಶಜನಲ್ಲವೇ! ನಾನು ಊರಿನಿಂದ ಮಾಣಿಕ ನಗರ ಸ್ಟೇಶನ್ನಿಗೆ ಬಂದು ಅಲ್ಲಿಂದ ನಾರಾಯಣಗಂಜದ ಮಾರ್ಗವಾಗಿ ಸಿಯಾಲದಹಕ್ಕೆ ರೇಲ್ವೆಯಲ್ಲಿ ಪ್ರವಾಸ ಮಾಡಿದೆ. ನಾನೀಗ ಕಲಕತ್ತೆಗೆ ಬಂದಿದ್ದೆ. ಇಷ್ಟು ದೊಡ್ಡ ಊರಿನಲ್ಲಿ ನನ್ನವರೆನ್ನುವವರು ಯಾರೂ ಇಲ್ಲದೆ, ಯಾವದೊಂದು ಆಶ್ರಯಸ್ಥಾನವಿಲ್ಲದೆ ಒಬ್ಬಂಟಿಗನಾಗಿದ್ದೆ. ಹ್ಯಾರಿಸನ್ ರೋಡ್ ಹಿಡಿದುಕೊಂಡು ಹೊರಟೆ. ಗಂಗಾ ನದಿಯ ತೀರಕ್ಕೆ ಬಂದು ರಾತ್ರಿ ಅಲ್ಲಿಯೇ ಮಲಗಿಕೊಂಡೆ.

ಮುಂಜಾನೆ ಎದ್ದು ನೋಡುತ್ತೇನೆ, ನನ್ನ ರೂಪಾಯಿಗಳಿದ್ದ ಚೀಲ ಕಾಣದಂತಾಗಿತ್ತು. ನನಗೆ ಅಳು ಬಂತು. ನನಗಿದ್ದ ಒಂದೇ ಒಂದು ಆಧಾರವೂ ಇಲ್ಲದಂತಾಗಿತ್ತು ಈಗ. ನಾನು ಅಳುವದನ್ನು ಕಂಡು ಒಬ್ಬ ಪೋಲೀಸ ಸಿಪಾಯಿ ನನ್ನ ಬಳಿಗೆ ಬಂದ. ನನ್ನ ದುಃಖದ ಕಥೆಯನ್ನು

ಕೇಳಿಕೊಂಡನಂತರ "ಮೂರ್ಖ ಮುಂಡೇದೆ, ರೂಪಾಯಿಗಳನ್ನು ಹಾಗೆಲ್ಲ ಇಟ್ಟುಕೊಳ್ಳುತ್ತಾರೇನು ?" ಎಂದು ಗದರಿಸಿ ಹೋಗಿಬಿಟ್ಟ.

ನನ್ನ ಅಳು ನಿಲ್ಲಲಿಲ್ಲ.

ಅಳುತ್ತಲೇ ನೀಮತಲ್ಲಾ ಘಾಟನ್ನು ನಡೆಯುತ್ತ ತಲುಪಿದೆ. ಅಲ್ಲಿ ಸಾಧುಗಳ ಗುಂಪೊಂದು ಕುಳಿತು ಗಾಂಜಾ ಸೇವನೆಯ ಪದ್ಧತಿ ನಡೆಸಿತ್ತು. ಅವರಲ್ಲೊಬ್ಬ ನನ್ನ ಕಥೆಯನ್ನು ಕೇಳಿಕೊಂಡು, "ಏನೂ ಚಿಂತಿಸಬೇಡ. ಗಂಗೆಯಲ್ಲಿ ಸ್ನಾನ ಮಾಡು. ಅಲ್ಲಿ ಎದುರಿಗೆ ನೋಡು, ಜನರಿಗೆ ಊಟಹಾಕುತ್ತಿದ್ದಾರಲ್ಲ, ಅಲ್ಲಿಗೆ ಹೋಗಿ ಹೊಟ್ಟೆ ತುಂಬ ಊಟಮಾಡು" ಎಂದನು. ಹಾಗೆಯೇ ಮಾಡಿದೆ. ಆ ಕುರುಡ, ಕುಂಟ, ರೋಗಿ ಭಿಕ್ಷುಕರ ಜೊತೆಗೆ ಕುಳಿತು ಊಟಮಾಡಿ ರಾತ್ರಿ ಒಬ್ಬ ಡಾಕ್ಟರರ ಅಂಗಡಿಯ ಹೊರಗೆ ಕಟ್ಟೆಯ ಮೇಲೆ ಮಲಗಿಕೊಂಡೆ.

ಇದೇ ರೀತಿ ದಿನಗಳು ಕಳೆಯತೊಡಗಿದವು. "ಭಿಕ್ಷುಕರ ಭೋಜನ" ಸ್ಥಾನಕ್ಕೆ ಹೋಗಿ ಹೊಟ್ಟೆ ತುಂಬಿಕೊಳ್ಳುವದು, ರಾತ್ರಿ ಡಾಕ್ಟರರ ಅಂಗಡಿಯ ಕಟ್ಟೆಯ ಮೇಲೆ ಮಲಗಿಕೊಳ್ಳುವದು. ಅನೇಕರು ನಾನು ಯಾರು, ಎಲ್ಲಿಯವನು, ಏಕೆ ಬಂದಿದ್ದೇನೆ ಎಂದೆಲ್ಲ ಕೇಳಿದರು. ಎಲ್ಲರಿಗೂ "ನಾನು ಸಂಗೀತಾಭ್ಯಾಸಕ್ಕಾಗಿ ಬಂದಿದ್ದೇನೆ, ಗುರುವನ್ನು ಹುಡುಕುತ್ತಿದ್ದೇನೆ" ಎಂದು ಉತ್ತರ ಕೊಡುತ್ತಿದ್ದೆ. ನನ್ನಷ್ಟೇ ವಯಸ್ಸಿನ ಬಾಲಕರು ಕೂಡ ತುಂಬ ಉತ್ಸುಕತೆಯಿಂದ ನನಗೆ ಇಂಥವೇ ಪ್ರಶ್ನೆಗಳನ್ನು ಹಾಕುತ್ತಿದ್ದರು. ಅವರಿಗೂ ನನ್ನ ಉದ್ದೇಶವನ್ನು ವಿವರಿಸಿ ಹೇಳುತ್ತಿದ್ದೆ.

ಒಂದು ದಿನ ಒಬ್ಬ ಹುಡುಗ ನನಗೆ, "ನಾನೊಬ್ಬ ಉಸ್ತಾದರಲ್ಲಿ ಸಂಗೀತ ಕಲಿಯುತ್ತಿದ್ದೇನೆ. ಬರುವ ಮನಸ್ಸಿದ್ದರೆ ಅಲ್ಲಿಗೆ ಬಾ" ಎಂದ. ಸಂತೋಷದಿಂದ ಅವನೊಡನೆ ಹೋದೆ. ಉಸ್ತಾದರ ಹೆಸರು ಲುಲು ಗೋಸ್ವಾಮಿಯೆಂದಿತ್ತು. ಅವರು ವಿಖ್ಯಾತರಾದ ದ್ರುಪದ ಗಾಯಕರಾಗಿದ್ದರು. ಖಯಾಲನ್ನೂ ಹಾಡುತ್ತಿದ್ದರು. ನನ್ನನ್ನು ಕಂಡು ಅವರು "ಹನ್ನೆರಡು ವರ್ಷಗಳವರೆಗೆ ಸ್ವರಸಾಧನೆ ಮಾಡಬೇಕಾಗುವದು" ಎಂದರು. ನಾನು ತಡಮಾಡದೆ "ಜೀವನವಿಡೀ ಮಾಡುತ್ತೇನೆ" ಎಂದುಬಿಟ್ಟೆ.

ಅವರು ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಈಗ ನಾನು ದಿನಕ್ಕೊಮ್ಮೆಯೇ "ಭಿಕ್ಷುಕ ಭೋಜನ" ವನ್ನುಂಡು ಸಂಗೀತ ಕಲಿಯತೊಡಗಿದೆ. ಗುರುಗಳು ಬಹಳ ನಿಷ್ಠೆಯಿಂದ ಕಲಿಸುತ್ತಿದ್ದರು. ಅವರು ನನಗೆ ೩೬೦ ತಾನಗಳನ್ನೂ ಜೊತೆಗೆ ತಾಳಗಳನ್ನೂ ಕಲಿಸಿದರು. ಆದರೆ ಮುಂದೊಂದು ದಿನ ಅಕಸ್ಮಾತ್ತಾಗಿ ಗುರುದೇವರು ಪ್ಲೇಗ್ ಬೇನೆಗೆ ತುತ್ತಾಗಿ ಸ್ವರ್ಗವಾಸಿಗಳಾದರು. ನನಗೆ ವಜ್ರಾಘಾತವಾಯಿತು.

ಬಳಿಕ ನಾನು ವಿವೇಕಾನಂದಜಿಯವರ ಬಂಧು ಹಾಬು ದತ್ತರ ಬಳಿಗೆ ಹೋದೆ. ವಿವೇಕಾನಂದಜಿಯವರ ಪರಿವಾರವೆಲ್ಲ ಸಂಗೀತ ಪ್ರೇಮಿಯಾಗಿತ್ತು. ಅವರು ಸ್ವತಃ ಒಳ್ಳೆಯ ದ್ರುಪದ ಗಾಯಕರಾಗಿದ್ದರು. ಹಾಬು ದತ್ತರು ಕ್ಲಾರೊನೆಟ್, ಸಿತಾರ ಮತ್ತು ಇನ್ನಿತರ ಕೆಲ ವಾದ್ಯಯಂತ್ರಗಳನ್ನು ಬಾರಿಸುತ್ತಿದ್ದರು. ನ್ಯಾಶನಲ್ ಥಿಯೇಟರಿನ ಸಮೂಹವಾದನ ಗೋಷ್ಠಿಗಳನ್ನು ಅವರೇ ನಡೆಸುತ್ತಿದ್ದರು. ಅವರಲ್ಲಿ ನಾನು "ಬೇಹಲಾ" ಕಲಿಯತೊಡಗಿದೆ. ಬಳಿಕ ಇಂಗ್ಲಿಷ್ ಬ್ಯಾಂಡ್ ಮತ್ತು ಶಹನಾಯಿ ನನ್ನನ್ನು ಆಕರ್ಷಿಸಿದ್ದರಿಂದ ಅವನ್ನೂ ಕಲಿಯತೊಡಗಿದೆ. ಹಾಬು ದತ್ತರ ಸಮೂಹವಾದನದಲ್ಲಿ "ಯಮುನ" ರಾಗ ನುಡಿಸಲ್ಪಡುತ್ತಿತ್ತು. ನಾನು ದಿನವೂ ಅವರಿಂದ ನಾಲ್ಕೈದು "ಗತ್ತು"ಗಳನ್ನು ಕಲಿಯುತ್ತಿದ್ದೆ. ಪ್ರಗತಿಪಥದಲ್ಲಿ ನಾನು ವೇಗವಾಗಿ ನಡೆಯತೊಡಗಿದೆ.

ನದೂ ಬಾಬು ಎಂಬ ಇನ್ನೊಬ್ಬ ಸದ್ಗೃಹಸ್ಥರಿದ್ದರು. ಅವರು ಲುಲು ಬಾಬುಗಳ ಜೊತೆಯಲ್ಲಿ ಮೃದಂಗ ಮತ್ತು ತಬಲಾಗಳನ್ನು ಬಾರಿಸುತ್ತಿದ್ದರು. ನನಗೆ ಅವುಗಳ ಮೋಹವೂ ಉಂಟಾಗಿ ನದೂ ಬಾಬುಗಳಲ್ಲಿ ತಬಲಾ ಮತ್ತು ಮೃದಂಗಗಳನ್ನು ಬಾರಿಸಲು ಕಲಿಯತೊಡಗಿದೆ. ಸಂಗೀತದಲ್ಲಿ ನನಗಿರುವ ಅಪಾರ ಅಭಿರುಚಿಯನ್ನು

ಕಂಡು ಹಾಬು ಬಾಬುಗಳು ತುಂಬ ಪ್ರಭಾವಿತರಾದರು. ಎಲ್ಲ ವಾದ್ಯಗಳನ್ನೂ ಬಾರಿಸಲು ಕಲಿಸುವದಾಗಿ ಅವರು ನನಗೆ ವಚನವಿತ್ತುದಲ್ಲದೆ ತಮ್ಮ ಮಿತ್ರರಾದ ಗಿರೀಶ ಘೋಷರ ಮಿನರ್ವಾ ಥೇಟರಿನಲ್ಲಿ ತಿಂಗಳಿಗೆ ಹನ್ನೆರಡು ರೂಪಾಯಿ ವೇತನದ ನೌಕರಿಯೊಂದನ್ನು ಕೊಡಿಸಿದರು.

ಇತ್ತ ಥೇಟರಿನಲ್ಲಿ ಕೆಲಸಮಾಡುತ್ತಿದ್ದಂತೆ ಅತ್ತ ಕಲಿಯುತ್ತಲೂ ಇದ್ದೆ. ಸಂಬಳ ಸಿಗತೊಡಗಿದ ನಂತರವೂ "ಭಿಕ್ಷುಕ ಭೋಜನ"ವನ್ನು ನಾನು ತ್ಯಜಿಸಲಿಲ್ಲ. ಈ ಸಮಯದಲ್ಲಿ ನಾನು ಪ್ರಖ್ಯಾತ ವಾಯೋಲಿನ್ ವಾದಕ ಲೋಬೊ ಸಾಹೇಬರಿಂದ ವಾಯೊಲಿನ್ ಬಾರಿಸಲು ಮತ್ತು ಅವರ ಶಿಷ್ಯರೊಬ್ಬರಿಂದ ಕಾರ್ನೆಟ್ ಬಾರಿಸಲು ಕಲಿತೆ. ಹಾಬು ದತ್ತರು ಕ್ಲಾರೋನೆಟ್ಟನ್ನೂ ಹಜರಿ ಉಸ್ತಾದರು ಶಹನಾಯಿ ಮತ್ತು ನಗಾಡಾವನ್ನು ಬಾರಿಸಲು ಕಲಿಸುತ್ತಿದ್ದರು. ಎರಡೂವರೆ ವರ್ಷಗಳ ವರೆಗೆ ಈ ರೀತಿ ಕಲಿಯುವದು ನಡೆಯಿತು. ಈಗ ನನಗ ನನ್ನ ಸಂಗೀತ ಪಾಂಡಿತ್ಯಕ್ಕಾಗಿ ಅಹಂಕಾರವೂ ಉಂಟಾಗತೊಡಗಿತ್ತು.

ಒಂದು ದಿನ ಮುಕ್ತಗಾಛಾದ ರಾಜರ ಬಳಿಗ ಹೋದೆ. ಅವರು ನನ್ನ ವಿಷಯ ಕೇಳಿದಾಗ "ನನ್ನಂಥ ಉಸ್ತಾದರು ನಿಮಗೆ ದೇಶದಲ್ಲೆಲ್ಲೂ ದೊರೆಯಲಾರರು. ಪ್ರಪಂಚದಲ್ಲಿರುವ ವಾದ್ಯಗಳೆಲ್ಲವನ್ನೂ ನಾನು ಬಾರಿಸಬಲ್ಲೆ" ಎಂದು ಗರ್ವದಿಂದ ಹೇಳಿದೆ. ಥೇಟರಿನ ದುಸ್ಸಹವಾಸವೇ ಈ ಅಹಂಕಾರಕ್ಕೆ ಕಾರಣವಾಗಿತ್ತು. ನನ್ನ ಮಾತನ್ನು ಕೇಳಿ ರಾಜಾಸಾಹೇಬರು ಮರುದಿನ ಮುಂಜಾನೆ ೮ ಗಂಟೆಗೆ ತಮ್ಮಲ್ಲಿಗೆ ಬರಲು ಹೇಳಿದರು. ಆಗ ನನಗೆ ೧೬-೧೭ ವರ್ಷಗಳಾಗಿದ್ದವು.

ಮರುದಿನ ನಾನು ರಾಜಾಸಾಹೇಬರಲ್ಲಿ ಹೋದಾಗ ಅಲ್ಲಿ ದೊಡ್ಡದೊಂದು ಸಭೆಯೇ ಸೇರಿರುವದನ್ನು ಕಂಡೆ. ಉದ್ದ ಗಡ್ಡದ ಒಬ್ಬ ಸದ್ಗೃಹಸ್ಥರು "ಸರೋದ"ದ ಸ್ವರವನ್ನು ಕೂಡಿಸತೊಡಗಿದ್ದರು. ಅವರು "ತೋಡಿ" ರಾಗವನ್ನು ಬಾರಿಸತೊಡಗಿದಾಗ ನನಗ ರೋಮಾಂಚನವಾಯಿತು. ನೋಡನೋಡುತ್ತ ನಾನು ಚೀತ್ಕಾರಗೈದು ಅಳತೊಡಗಿದೆ. ಅವರ ಕಾಲಿಗೆ ಬಿದ್ದು "ನೀವು ನನ್ನ ಗುರುಗಳು, ನಾನು ನಿಮ್ಮ ಮನೆಯನ್ನು ಗುಡಿಸುವೆ. ನಿಮ್ಮ ಎಲ್ಲ ಕೆಲಸ-ಬೊಗಸೆಗಳನ್ನು ಮಾಡುವೆ. ನನಗೆ ಈ ವಾದ್ಯವಾದನದ ಶಿಕ್ಷಣವನ್ನು ಕೊಡಿರಿ" ಎಂದು ಪ್ರಾರ್ಥಿಸಿಕೊಂಡೆ. ಆತ್ಮಗ್ಲಾನಿಯಿಂದ ನಾನು ಕಂಗೆಟ್ಟಿದ್ದೆ ಅಂದೇ ನಾನು ಆ ಗೃಹಸ್ಥರ ಶಿಷ್ಯನಾದೆ. ಅವರು ರಾಮಪುರದ ಸುಪ್ರಸಿದ್ಧ ಸಂಗೀತಗಾರರಾದ ಅಹಮ್ಮದ ಅಲಿಯಾಗಿದ್ದರು

ನಾನು ಅವರ ಜೊತೆಯಲ್ಲಿಯೆ ಇದ್ದು ಸಂಗೀತ ಶಿಕ್ಷಣ ಪಡೆಯತೊಡಗಿದೆ. ಅವರಿಗಾಗಿ ನಾನೇ ಅಡಿಗೆ ಮಾಡುತ್ತಿದ್ದೆ, ಮನೆಯ ಇತರ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದೆ. ಅವರು ನಸುಕಿನಲ್ಲಿಯೇ ಚಹ ಕುಡಿದು ಕಲಕತ್ತೆಗೆ ಹೋಗುತ್ತಿದ್ದರು. ನಾನು ಅಡಿಗೆ ಮನೆಯಲ್ಲಿ ಕುಳಿತು ಕದ್ದು ಮುಚ್ಚಿ ಸರೋದ ಬಾರಿಸಲು ಕಲಿಯುತ್ತಿದ್ದೆ. ಕದ್ದು ಮುಚ್ಚಿ ಏಕೆಂದರೆ ಒಂದು ವರ್ಷದ ವರೆಗೆ ಅವರು ನನಗೆ ಕೇವಲ "ಸ ರಿ ಗ ಮ"ವನ್ನೇ ಕಲಿಸುತ್ತ ಬಂದಿದ್ದರು. ಕೆಲವು ಸಲ ಅವರು ನನ್ನನ್ನು ತಮ್ಮ ಜೊತೆಯಲ್ಲಿ ಹೊರಗೆ ಕರೆದುಕೊಂಡು ಹೋಗುತ್ತಿದ್ದರು. ಅಂಥ ಪ್ರಸಂಗಗಳಲ್ಲಿ ತಬಲಾ ಅಥವಾ ಬೇಹಲಾ ಬಾರಿಸಿದ್ದರ ಪ್ರತಿಫಲವೆಂದು ನನಗೂ ೨೫-೩೦ ರೂಪಾಯಿಗಳು ಸಿಗುತ್ತಿದ್ದವು ಇನ್ನೂ ಒಂದು ಮಾತು ಹೇಳಬೇಕು. ಅವರು ತಮಗೆ ದೊರೆತ ರೂಪಾಯಿಗಳೆಲ್ಲವನ್ನೂ ಇಟ್ಟುಕೊಳ್ಳಲು ನನ್ನ ಹತ್ತಿರ ಕೊಡುತ್ತಿದ್ದರು. ತಮಗೆ ಬೇಕಾದಾಗ ನನ್ನ ಹತ್ತಿರ ಕೇಳಿ ಇಸಿದುಕೊಳ್ಳುತ್ತಿದ್ದರು. ಈ ರೀತಿಯಾಗಿ ನಾಲ್ಕು ವರ್ಷಗಳು ಕಳೆದವು

ಒಮ್ಮೆ ಎರಡು ಮೂರು ದೊಡ್ಡ ನಗರಗಳಲ್ಲಿ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ನಂತರ ಅವರು ನನ್ನನ್ನು ರಾಮಪುರಕ್ಕೆ ಕರೆದುಕೊಂಡು ಹೋದರು. ಅಲ್ಲಿ ಅವರ ಮನೆ ಮಣ್ಣಿನ ಗೋಡೆಗಳದಾಗಿತ್ತು. ಮೇಲೆ ತಗಡು ಹೊದಿಸಿದ್ದರು. ಒಂದು ದಿನ "ನಿಮ್ಮ ರೂಪಾಯಿ ನನ್ನ ಹತ್ತರ ಬಹಳಷ್ಟು ಕೂಡಿಬಿದ್ದಿದೆ. ಲೆಕ್ಕ

ಮಾಡಿಕೊಂಡಿದ್ದರೆ ಒಳ್ಳೆಯದಾಗುತ್ತಿತ್ತು'' ಎಂದೆ.

ಅವರು ಆಶ್ಚರ್ಯದಿಂದ, ''ರೂಪಾಯಿ! ಯಾವ ರೂಪಾಯಿಗಳು!'' ಎಂದು ಕೇಳಿದರು. ಇದುವರೆಗೂ ಯಾವ ನೌಕರನೂ ತಮಗೆ ರೂಪಾಯಿಗಳ ಲೆಕ್ಕವನ್ನು ಕೊಟ್ಟಿಲ್ಲವೆಂದು ಅವರು ಹೇಳಿದರು.

ಅವರೆದುರು ರೂಪಾಯಿಗಳಿಂದ ತುಂಬಿದ ಪೆಟ್ಟಿಗೆಯನ್ನಿಟ್ಟೆ. ಅದರಲ್ಲಿ ಗುರುದಕ್ಷಿಣೆಯೆಂದು ನನ್ನವೂ ಕೆಲವು ರೂಪಾಯಿಗಳನ್ನಿಟ್ಟಿದ್ದೆ. ಎಲ್ಲ ಕೂಡಿಸಿ ಸುಮಾರು ೧೦,೦೦೦ ರೂಪಾಯಿಗಳಷ್ಟಿದ್ದವು. ಇಷ್ಟು ರೂಪಾಯಿಗಳನ್ನು ಕಂಡು ಅವರ ತಂದೆ-ತಾಯಿ ತುಂಬ ಸಂತೋಷಗೊಂಡರಲ್ಲದೆ ಹೊಸ ಮನೆಯನ್ನು ಕಟ್ಟುವ ಕಾರ್ಯವನ್ನು ಶೀಘ್ರದಲ್ಲಿ ಪ್ರಾರಂಭಿಸಿದರು.

ಆದರೆ ಮುಂದೊಂದು ದಿನ ನನ್ನ ಮುಂದೆ ಮತ್ತೆ ಭೀಕರ ಸಮಸ್ಯೆಯೊಂದು ಬಂದು ನಿಂತಿತು. ಉಸ್ತಾದರ ತಂದೆ ಆಬಿದ ಅಲಿಯವರು ನನ್ನನ್ನು ಕರೆದು, "ನನ್ನ ಮಗನಿಂದ ಎಷ್ಟನ್ನು ಕಲಿಯಬೇಕಾಗಿತ್ತೋ ಅಷ್ಟನ್ನೂ ನೀನು ಕಲಿತಿರುವಿ. ಇನ್ನು ವಜೀರ ಖಾನರ ಬಳಿಗೆ ಹೋಗಿ ಅವರಲ್ಲಿಯೂ ಒಂದಿಷ್ಟು ಕಲಿ. ಒಂದೇ ವ್ಯಕ್ತಿಯ ಬಳಿ ಕಲಿತು ಸಂಗೀತದ ಪೂರ್ಣಜ್ಞಾನವನ್ನು ಪಡೆಯಲಾರೆ'' ಎಂದರು

ವಜೀರ ಖಾನರನ್ನು ಭೆಟ್ಟಿಯಾಗುವದೇನೂ ಸುಲಭದ ಮಾತಾಗಿರಲಿಲ್ಲ ಅನೇಕ ಪ್ರಯತ್ನಗಳನ್ನು ಮಾಡಿದರೂ ಅವರ ದೌಲತಖಾನೆಯನ್ನು ಪ್ರವೇಶಿಸುವದು ಶಕ್ಯವಾಗಲಿಲ್ಲ. ಕೊನೆಗೆ ಸೋತು ನಿರಾಶನಾಗಿ ಆತ್ಮಹತ್ಯೆ ಮಾಡಿಕೊಳ್ಳಲು ನಿರ್ಧರಿಸಿದೆ. ಆದರೆ ಹಾಗೆ ಮಾಡಲಾಗಲಿಲ್ಲ. ಮೌಲ್ವಿ ಸಾಹೇಬರೊಬ್ಬರು ನನ್ನನ್ನು ರಕ್ಷಿಸಿ ರಾಮಪುರದ ನವಾಬ ಸಾಹೇಬರ ಭೆಟ್ಟಿಯ ಯೋಗವನ್ನು ನನಗೆ ಒದಗಿಸಿಕೊಟ್ಟರು. ಆ ಕಾಲದಲ್ಲಿ ರಾಮಪುರದ ದರಬಾರದಲ್ಲಿ ೭೦೦ ಜನ ಗಾಯಕ-ವಾದಕರಿದ್ದರು ನವಾಬ ಸಾಹೇಬರು ಸ್ವತಃ ಒಳ್ಳೆಯ ಸಂಗೀತ ತಜ್ಞರಾಗಿದ್ದರು.

"ನಾನು ಹಾಡುತ್ತೇನೆ ನೀನು ಬೇಹಲಾದ ಸಾಥಿ ಕೊಡು.'' ಎಂದವರು ನನಗೆ ಹೇಳಿದರು. ನಾನವರ ಹಾಡುಗಾರಿಕೆಯನ್ನು ಮೆಚ್ಚಿದೆ ಅವರು ನನ ಬೆಹಲಾವಾದನವನ್ನು ಮೆಚ್ಚಿದರು. ನನಗೆ ನೌಕರಿಯನ್ನು ಕೊಡಲು ಅವರು ಬಯಸಿದರು. ಆದರೆ ನಾನು ಅದನ್ನು ತಿರಸ್ಕರಿಸಿ ವಜೀರ ಖಾನ ಸಾಹೇಬರಲ್ಲಿ ಕಲಿಯಬೇಕೆಂಬ ನನ್ನ ಇಚ್ಛೆಯನ್ನು ಪ್ರಕಟಿಸಿದೆ. ಅವರು ಕೂಡಲೇ ವಜೀರಖಾನರನು ಕರೆಸಿ ನನ್ನನ್ನು ಶಿಷ್ಯನ ರೂಪದಲ್ಲಿ ಅವರ ವಶಕ್ಕೆ ಒಪ್ಪಿಸಿದರು.

ಶಿಷ್ಯನಾಗುವಾಗ ವಜೀರಖಾನರು ನನ್ನಿಂದ ಪ್ರತಿಜ್ಞೆ ಮಾಡಿಸಿದರು: "ನನ್ನ ವಿದ್ಯೆಯನ್ನು ಕುಪಾತ್ರನಿಗೆಂದೂ ಕೊಡುವದಿಲ್ಲ. ದುಸ್ಸಹವಾಸ ಮಾಡುವದಿಲ್ಲ. ನನ್ನ ವಿದ್ಯೆಗೆ ಬದಲಾಗಿ ಯಾರಲ್ಲಿಯೂ ಏನನ್ನೂ ಬೇಡುವದಿಲ್ಲ. ಯಾವ ವೇಶ್ಯೆಗೂ ವಿದ್ಯಾದಾನ ಮಾಡುವದಿಲ್ಲ."

ನಾನು ನನ್ನ ಗುರು ವಜೀರಖಾನ ಸಾಹೇಬರೊಂದಿಗೆ ಇರತೊಡಗಿದೆ. ದಿನವಿಡೀ ಅವರ ಪಾದತ್ರಾಣಗಳು, ಹುಕ್ಕಾ, ವೀಳ್ಯದ ತಾಟು ಮೊದಲಾದವುಗಳನ್ನು ಒರಸಿ ಸ್ವಚ್ಛವಾಗಿಡುತ್ತಿದ್ದೆ. "ನಿನ್ನ ಗುರುವಿನ ಸೇವೆಯನ್ನು ಮನಃಪೂರ್ವಕವಾಗಿ ಸರ್ವವಿಧದಲ್ಲಿ ಮಾಡು. ಸೇವೆಯ ಬಲದಿಂದಲೇ ಈ ವಿದ್ಯೆಯನ್ನು ಕಲಿಯುವದು ಸಾಧ್ಯ" ಎಂದು ನವಾಬ ಸಾಹೇಬರು ನನಗೆ ಹೇಳಿದ್ದರು. ಅದರಂತೆಯೇ ನಾನು ವಜೀರಖಾನರ ಸೇವೆಯಲ್ಲಿ ತೊಡಗಿರುತ್ತಿದ್ದೆ

ರಾತ್ರಿ ೧೨ ಗಂಟೆಗೆ ವಜೀರಖಾನರು ಹಾಡಲು ಬಾರಿಸಲು ಪ್ರಾರಂಭಿಸಿ ಬೆಳಗಾಗುವಾಗ ಮಲಗಿ ಮುಂಜಾನೆ ೮ ಗಂಟೆಗೆ ಏಳುತ್ತಿದ್ದರು. ಅವರು ಏಳುವ ಮೊದಲೇ ಪಾಯಖಾನೆಯನ್ನು ಫಿನಾಯಿಲದಿಂದ ತೊಳೆದಿಡುತ್ತಿದ್ದೆ. ಆಗಿನಿಂದ ಪ್ರಾರಂಭವಾದ ನನ್ನ ಸೇವಾಕಾರ್ಯ ದಿನವಿಡೀ ನಡೆಯುತ್ತಿತ್ತು. ಅವರ ಯಾವ ಕೆಲಸದಲ್ಲೂ ನಾನು ಬೇಸರಪಟ್ಟುಕೊಳ್ಳಲಿಲ್ಲ. ಮೈಗಳ್ಳತನ ಮಾಡಲಿಲ್ಲ.

ಗುರುದೇವರ ಮನೆಯ ಮಗ್ಗಲಿನ ಮನೆಯೊಂ-

ದರಲ್ಲಿ ನಾನಿರುತ್ತಿದ್ದೆ. ಅವರ ಸೇವಾ ಕಾರ್ಯಗಳಲ್ಲಿ ತೊಡಗಿರುತ್ತಿದ್ದ ನನಗೆ ಹಗಲು ಸಮಯ ಸಿಗುತ್ತಿರಲಿಲ್ಲ. ಸಾಯಂಕಾಲ ೭ ಗಂಟೆಗೆ ಅಭ್ಯಾಸಕ್ಕೆ ಕೂಡುತ್ತಿದ್ದೆ. ಬೆಳಿಗ್ಗೆ ಚಹ ಕುಡಿದ ನಂತರವೂ ಸಮಯ ಸಾಧಿಸಿಕೊಂಡು ತುಸು ಹಾಡುವದು, ಬಾರಿಸುವದು ಮಾಡುತ್ತಿದ್ದೆ. ಭೈರವಿ ನನಗೆ ಪ್ರಿಯವಾದ ರಾಗ. ಮುಂಜಾನೆ ಯಾವಾಗಲೂ ಅದನ್ನೇ ಹಾಡುತ್ತಿದ್ದೆ, ನುಡಿಸುತ್ತಿದ್ದೆ. ಗುರುದೇವರು ಇನ್ನೂ ನನಗೆ ಕಲಿಸಲು ಆರಂಭಿಸಿದ್ದಿಲ್ಲ. ಒಂದೂವರೆ ವರ್ಷ ಕಳೆಯಿತು ಹೀಗೆಯೇ. ಆ ದಿನಗಳಲ್ಲಿ ನಾನು ಕೇವಲ ಕಡಲೆ ತಿಂದು ನೀರು ಕುಡಿದಿರುತ್ತಿದ್ದೆ.

ಒಂದು ದಿನ ನನ್ನ ಮನೆಯಿಂದ ಗುರುದೇವರಿಗೆ ಒಂದು ತಂತಿ ಬಂತು. ನನ್ನ ಎಳಸೆಯ ವಯಸ್ಸಿನಲ್ಲಿಯೆ ನನ್ನ ವಿವಾಹವಾಗಿದ್ದಿತು. ನನ್ನ ಹೆಂಡತಿ ಇಷ್ಟು ದಿನಗಳ ಅವಧಿಯಲ್ಲಿ ಮೂರು ಸಲ ಆತ್ಮಹತ್ಯೆಯ ಪ್ರಯತ್ನ ಮಾಡಿದ್ದಳು. ಈ ತಂತಿಯನ್ನು ಕಂಡ ಬಳಿಕ ಗುರುದೇವರ ಕೃಪೆ ನನ್ನ ಮೇಲಾಯಿತು. ಅವರು ಸ್ವತಃ ಮತ್ತು ತಮ್ಮ ಮಕ್ಕಳ ಮುಖಾಂತರ ನನಗೆ ಸರೋದ ಬಾರಿಸಲು ಕಲಿಸತೊಡಗಿದರು.

ನನಗೆ ಕಲಿಸುವದರಲ್ಲಿ ಅವರು ತುಂಬ ಶ್ರಮ ವಹಿಸತೊಡಗಿದರು. ನನ್ನ ಊಟದ ವ್ಯವಸ್ಥೆಯನ್ನೂ ಅವರು ತಮ್ಮ ಮನೆಯಲ್ಲಿಯೇ ಮಾಡಿಸಿದರು. ಈ ಅವಧಿಯಲ್ಲಿ ರಾಮಪುರದ ಬ್ಯಾಂಡ್ ತಂಡದಲ್ಲಿ ದಿನಾಲು ಒಂದು ತಾಸು ಬೇಹಲಾ ಬಾರಿಸುವ ಕೆಲಸವೂ ಸಿಕ್ಕಿ ಅದರಿಂದ ಪ್ರತಿ ತಿಂಗಳು ನನಗೆ ೧೨ ರೂಪಾಯಿಗಳು ದೊರೆಯತೊಡಗಿದವು.

ಈ ಬಗೆಯಿಂದ ಶಿಕ್ಷಣ ೩೦ ವರ್ಷಗಳವರೆಗೆ ನಡೆಯಿತು. ಅನೇಕ ವಾದ್ಯಯಂತ್ರಗಳ ಪರಿಚಯ ನನಗಾಯಿತು. ಆಗೊಂದು ದಿನ ಗುರುದೇವರು ನನಗೆ " ಹೋಗು, ದೇಶಾಟನ ಮಾಡು. ಶಿಕ್ಷಾ, ದೀಕ್ಷಾ ಮತ್ತು ಪರೀಕ್ಷಾ ಇವು ಮೂರು ವಿದ್ಯೆಗಳು. ವಿದ್ವಾಂಸರ ಸಂಗೀತವನ್ನು ಕೇಳು. ಅವರಿಗೆ ನಿನ್ನ ಸಂಗೀತವನ್ನು ಕೇಳಿಸು" ಎಂದರು.

ದೇಶಸಂಚಾರಕ್ಕೆ ಹೊರಟೆ. ಕೆಲ ಊರುಗಳ ಪ್ರವಾಸ ಮುಗಿಸಿಕೊಂಡು ಕಲಕತ್ತೆಗೆ ಹೋದೆ. ಅಲ್ಲಿ ಭವಾನಿಪುರದಲ್ಲಿ ನಡೆಯಲಿದ್ದ ಸಂಗೀತ ಸಮ್ಮೇಲನವೊಂದಕ್ಕೆ ನನಗೂ ಆಮಂತ್ರಣ ಸಿಕ್ಕಿತು. ಅಲ್ಲಿ ಹೋದೆ. ಆದರೆ ಅಲ್ಲಿ ಮಹಾ ಮಹಾ ಸಂಗೀತಗಾರರ ಎದುರು ನನ್ನನ್ನಾರು ಕೇಳಬೇಕು? ಅಲ್ಲದೆ ನನ್ನ ಉಡಿಗೆ ತೊಡಿಗೆಯೂ ತೀರ ಸಾಮಾನ್ಯವಾಗಿತ್ತು. ಆದರೆ ನನ್ನ ಸರತಿ ಬಂದು, ನಾನು "ತಾನಪುರಾ" ದ ಒಂದು ತಾನು ಹೊಡೆದಾಗ ಜನರ ಲಕ್ಷ್ಯ ನನ್ನಕಡೆ ಹೊರಳಿತು. ಇಡೀ ಅರ್ಧ ಗಂಟೆ 'ವಿಲಂಬಿತ' ಆಲಾಪನೆಯಲ್ಲಿ ತೊಡಗಿದ್ದೆ. ನನಗೂ ಸಂಗೀತ ಬರುತ್ತದೆಂದು ಜನರಿಗೆ ವಿಶ್ವಾಸವಾಯಿತು. ಬಾಯಿಗೆ ಹಾಕಿಕೊಳ್ಳಲೆಂದು ಎತ್ತಿದ್ದ ಎಲೆ ಎತ್ತಿದ ಕೈಯಲ್ಲಿಯೇ ಉಳಿಯಿತು. ಬಾಯಲ್ಲಿ ಸಿಗರೇಟು ಇಟ್ಟುಕೊಂಡವರು ಅದನ್ನು ಹೊತ್ತಿಸಲು ಮರೆತರು. ನಾಲ್ಕು ತಾಸು ಹಾಡಿದೆ ಎಲ್ಲರೂ ಚಕಿತರಾದರು. ತಬಲಾ ಬಾರಿಸುತ್ತಿದ್ದವರ ಅವಸ್ಥೆಯನ್ನಂತೂ ಹೇಳಲಾಗದು. ಎಲ್ಲರೂ ನನ್ನನ್ನು ಹೊಗಳಿದರು. ನನ್ನ ಮನಸ್ಸು ನನ್ನ ಗುರುಗಳ ಬಗ್ಗೆ ಆದರದಿಂದ ತುಂಬಿಹೋಯಿತು. ನನ್ನ ತಪಸ್ಸು ವ್ಯರ್ಥವಾಗಲಿಲ್ಲವೆನ್ನುವದಕ್ಕೆ ಇದು ನಿದರ್ಶನವಾಗಿತ್ತು.

ಮುಂದೆ ಕೆಲ ಸಮಯದ ನಂತರ ಶ್ಯಾಮಲಾಲ ಖತ್ರಿಯವರ ಹೇಳಿಕೆಯ ಮೇರೆಗೆ ನಾನು ಮೆಹರ ರಾಜ್ಯಕ್ಕೆ ಬಂದು ಅಲ್ಲಿಯ ರಾಜರಿಗೆ ಸಂಗೀತ ಕಲಿಸತೊಡಗಿದೆ. ಅವರು ನನ್ನ ಸಂಬಳವನ್ನು ಗೊತ್ತುಪಡಿಸಲು ಬಯಸಿದಾಗ " ಸಂಗೀತ ಕಲಿಸಲು ನಾನು ಏನನ್ನೂ ತೆಗೆದುಕೊಳ್ಳಲಾರೆ" ಎಂದೆ. ಆಗ ಅವರು ನನ್ನನ್ನು ದೇವರ ಸೊತ್ತಿನ ವ್ಯವಸ್ಥಾಪಕನನ್ನಾಗಿ ಮಾಡಿದರು. ಅದರಿಂದ ನನಗ ತಿಂಗಳಿಗೆ ೧೫೦ ರೂಪಾಯಿಗಳು ದೊರೆಯತೊಡಗಿದವು ರಾಜಾಸಾಹೇಬರಿಗೆ ಸಂಗೀತ ಕಲಿಸಿ ಬಳಿಕ ಅವರ ಪರಿವಾರದ ಸಂಗೀತ ಶಿಕ್ಷಕನಾದೆ.

ದೇಶದಲ್ಲಿ ಅನೇಕರು ನನ್ನ ಪ್ರಶಂಸೆಯನ್ನು

ಮಾಡಿದರು. ನನ್ನ ಉತ್ಸಾಹ ಹೆಚ್ಚುತ್ತ ನಡೆಯಿತು. ಸಂಗೀತ ಸಾಧನೆ ನಡೆದೇ ಇತ್ತು. ಮೈಹರದಲ್ಲಿ ಒಂದು ಬ್ಯಾಂಡ್ ತಂಡವನ್ನು ಕಟ್ಟಿದೆ. ಆದರಿಂದ ಕೂಡ ತುಸು ಸಂಗೀತ ಸೇವೆ ನಡೆಯುತ್ತಿದೆಯೆಂದು ತಿಳಿದುಕೊಂಡಿದ್ದೇನೆ. ಇದೇ ವಿಶ್ವಾಸದಿಂದ ಜೀವನದ ದಿನಗಳನ್ನು ಕಳೆಯುತ್ತಿದ್ದೇನೆ.

ಕೊನೆಯಲ್ಲಿ ನನ್ನ ಪರಿವಾರದ ಬಗ್ಗೂ ನಾಲ್ಕು ಮಾತುಗಳನ್ನು ಹೇಳುತ್ತೇನೆ. ನಾನು ೧೮೭೦ ಲ್ಲಿ ಹುಟ್ಟಿದೆ. ನನಗೆ ಒಬ್ಬ ಮಗ, ಮೂವರು ಹೆಣ್ಣು ಮಕ್ಕಳು ಇದ್ದಾರೆ. ಈಗ ನನಗೆ ೮೭ ವರ್ಷ ವಯಸ್ಸು. ಮಗ ಅಲಿ ಅಕಬರ ನಿಮಗೆಲ್ಲ ಪರಿಚಿತನೇ ಆಗಿದ್ದಾನೆ. ಸರೋಜಿನಿ, ಅನ್ನಪೂರ್ಣಾ ಮತ್ತು ಜಹನಾರಾ ಎಂದು ಹೆಣ್ಣು ಮಕ್ಕಳಿಗೆ ಹೆಸರಿಟ್ಟಿದ್ದೇನೆ. ಅನ್ನಪೂರ್ಣೆಯ ಯೋಗದಿಂದ ನನಗೆ ಅಳಿಯನ ರೂಪದಲ್ಲಿ ಇನ್ನೊಬ್ಬ ಸಂಗೀತಗಾರ ಮಗ—ರವಿ ಶಂಕರ—ಸಿಕ್ಕಿದ್ದಾನೆ. ನನ್ನ ಹೆಣ್ಣು ಮಕ್ಕಳ ಹೆಸರು ಮತ್ತು ಹಿಂದೂ ಅಳಿಯನ ವಿಚಾರ ಕೇಳಿ ನಿಮಗೆ ಆಶ್ಚರ್ಯವಾಗಬಹುದು.

ನಿಜವಾಗಿ ನಾನು ಹಿಂದು ಮುಸಲ್ಮಾನ ಎಂಬ ಭೇದವನ್ನೆಣಿಸುವದಿಲ್ಲ. ನಾನು ಹಿಂದುವೂ ಹೌದು, ಮುಸಲ್ಮಾನನೂ ಹೌದು. ನನ್ನ ಮೊಮ್ಮಗನ ಹೆಸರನ್ನು ಕೂಡ ಮಹಮ್ಮದ ಆಶೀಶ ಎಂದಿಟ್ಟಿದ್ದೇನೆ. ಮುಸಲ್ಮಾನನಾದ್ದರಿಂದ ಮಹಮ್ಮದ ಮತ್ತು ಹಿಂದುವಾದ್ದರಿಂದ ಆಶೀಶ. ನಾನೆಂದೂ ಮಾಂಸಭಕ್ಷಣ ಮಾಡಿಲ್ಲ-ಬೇಕಾದರೆ ಅದನ್ನು ನನ್ನ ಹಿಂದುತ್ವವೆನ್ನಿ, ಅಥವಾ ಇನ್ನೇನೆಂದಾದರೂ ಕರೆಯಿರಿ. ಸರಸ್ವತೀ ಮಾತೆಯ ಒಬ್ಬ ದೀನ ಭಕ್ತ ನಾನು. ವಾಸ್ತವವಾಗಿ ಅದೇ ನನ್ನ ಧರ್ಮ, ಜಾತಿ, ಎಲ್ಲವೂ.



ಯಾವ ಅವತಾರ?

ಸ್ವಾಮಿ ವಿವೇಕಾನಂದರು ಬಲು ವಿನೋದಪ್ರಿಯರು. ಅವಿಶ್ವಾಸಿಗಳಾಗಿದ್ದೂ ತರ್ಕಮಾಡುವವರನ್ನು ನಿರುತ್ತರರನ್ನಾಗಿ ಮಾಡುವದರಲ್ಲಿ ಅವರಿಗೆ ವಿಶೇಷ ಮೋಜೆನಿಸುತ್ತಿತ್ತು.

ಒಮ್ಮೆ ಅವರು ಕೆಲ ಜನರೊಡನೆ ಧರ್ಮಚರ್ಚೆ ನಡೆಸಿದ್ದರು. ಆಗ ಅಲ್ಲಿಗೆ ಜಯಪುರದ ವಿಖ್ಯಾತ ಪಂಡಿತ ಸೂರ್ಯನಾರಾಯಣರು ಬಂದರು. ಚರ್ಚೆಯ ಮಧ್ಯದಲ್ಲಿ ಅವರು “ ನಾನೊಬ್ಬ ವೇದಾಂತಿ. ಅವತಾರಪುರುಷರ ಹೆಚ್ಚಿನ ಆಧ್ಯಾತ್ಮಿಕ ಶಕ್ತಿಯಲ್ಲಿ ನನಗೆ ನಂಬಿಗೆಯಿಲ್ಲ. ಪೌರಾಣಿಕ ಅವತಾರಗಳಲ್ಲೂ ನನ್ನ ನಂಬಿಗೆಯಿಲ್ಲ. ನಾವೆಲ್ಲರೂ ಬ್ರಹ್ಮ ಎಂದೇ ನಾನು ನಂಬುತ್ತೇನೆ. ನನಗೂ ಯಾವದೇ ಅವತಾರಕ್ಕೂ ಏನು ಅಂತರವಿದೆ ಹೇಳಿ ನೋಡೋಣ ” ಎಂದರು.

ಸ್ವಾಮಿ ವಿವೇಕಾನಂದರು “ ನಿಮ್ಮ ಮಾತು ನಿಜ. ಆದರೆ ಹಿಂದುಗಳು ಮತ್ಸ್ಯವನ್ನೂ ಕೂರ್ಮವನ್ನೂ ವರಾಹವನ್ನೂ ಅವತಾರವೆನ್ನುತ್ತಾರೆ. ಇವುಗಳಲ್ಲಿ ನೀವು ಯಾರು ಎಂದು ಹೇಳಬಲ್ಲಿರಾ? ” ಎಂದರು. ಈ ಮಾತು ಕೇಳಿ ಸುತ್ತಲಿದ್ದವರೆಲ್ಲ ಗಟ್ಟಿಯಾಗಿ ನಕ್ಕರು. ಪಂಡಿತರು ಲಜ್ಜೆಯಿಂದ ಮುಖ ಕೆಳಗೆ ಹಾಕಿ ಕುಳಿತುಕೊಂಡರು.

ಕದರಪ್ಪ ನಾಯಕನ ಕೆಚ್ಚೆದೆ

ಕನ್ನಡ ವೀರರ ಕೆಚ್ಚನ್ನು ತೋರಿಸುವ ಈ ಸ್ವಾರಸ್ಯ ಪ್ರಸಂಗ ವಿಜಯನಗರದ ನರಸಪ್ಪ ನಾಯಕರ ಕಾಲದಲ್ಲಿ ಘಟಿಸಿದ್ದು. ಇದನ್ನು ದಿವಂಗತ ಎಂ. ಎಸ್. ಪುಟ್ಟಣ್ಣನವರ "ಗುಮ್ಮನಾಯಕನಪಾಳ್ಯದ ಪಾಳೆಯಗಾರರ ಚರಿತ್ರೆ'' ಯಿಂದ ಆಯ್ದಿದೆ.

ನವರಾತ್ರಿಯಲ್ಲಿ ಒಡ್ಡೋಲಗ ಜರಗತಕ್ಕದ್ದು ಉಂಟಷ್ಟೆ. ಆಗ ರಾಜನು ಸಿಂಹಾಸನದ ಮೇಲೆ ಕೂತುಕೊಂಡಾಗ, ಆ ಸಭೆಯಲ್ಲಿ ಅನೇಕ ದೇಶಾಧಿಪತಿಗಳು, ಪ್ರಧಾನರು, ಮಂತ್ರಿಗಳು, ವೀರರಾದ ಸೇನಾನಾಯಕರು, ಪಾಳಯಗಾರರು, ಅನೇಕ ಜನ ವಿದ್ವಾಂಸರು, ನಟವಿಟಗಾಯಕರು, ಗಣಿಕಾಸ್ತ್ರೀಯರು, ಭಟರಾಜರು ಮೊದಲಾಗಿ ಎಲ್ಲರೂ ಇರುತಾ ಮಹಾಚಕ್ರವರ್ತಿಯ ಆ ಸಭೆಯನ್ನು ಅಲಂಕರಿಸುತ್ತಿದ್ದರು ಆ ನವರಾತ್ರಿ ಮಹೋತ್ಸವದಲ್ಲಿ ಒಂದು ದಿನ ಇಂಥಾ ಮಹಾಸಭೆಯು ಸೇರಿರುವಾಗ ಆಶ್ಚರ್ಯಕರವಾದ ಒಂದು ಸಂಗತಿ ನಡೆಯಿತು. ಈ ಮಹಾಸಭೆಯ ಮಧ್ಯದಲ್ಲಿ ಬಂಗಾರು ಯಾಚವ ನಾಯಕರ ಸಂಸ್ಥಾನದಿಂದ ಬಂದು ಕೂತಿದ್ದ ಒಬ್ಬ ಭಟರಾಜನು ಎದ್ದು ನಿಂತುಕೊಂಡು, ತನ ಕೈಯಲ್ಲಿ ಹಿಡಿದಿದ್ದ ಅತಿ ತೀಕ್ಷ್ಣವಾದ ಕಠಾರಿಯೊಂದನ್ನು ಒರೆಯಿಂದ ಹಿರಿದು ಮುಷ್ಟಿಯಲ್ಲಿ ಹಿಡಿದು ಅದನ್ನು ಝುಳಪಿಸುತ್ತಾ ಆ ಸಭೆಯನ್ನು ಕುರಿತು—"ಈ ಮಹಾಸಭೆಯಲ್ಲಿ ಅನೇಕ ಜನ ಮಹಾ ವೀರಾಧಿವೀರರು ನೆರೆದಿದ್ದಾರೆ. ಇವರಲ್ಲಿ ನನ್ನ ಕಠಾರಿಯ ಏಟಿಗೆ ತಮ್ಮ ಎದೆಯನ್ನು ಒಡ್ಡತಕ್ಕ ಶೂರರು ಯಾರಾದರೂ ಇದ್ದರೆ ಅಂಥಾ ಕ್ಷಾತ್ರವುಳ್ಳ ಧೀರರನ್ನು ನಾನು ಹೊಗಳುತ್ತೇನೆ" ಎಂದು ಪದ್ಯರೂಪವಾಗಿ ಹೇಳಿದನು. ಈ ಆಶ್ಚರ್ಯಕರ ಮಾತನ್ನು ಕೇಳಿ ಯಾರೂ ಮಾತನಾಡದೆ ಸುಮ್ಮನೆ ಕೂತಿದ್ದರು. ಆದರೆ ಇಂಥಾ ಮಾತು ನಿಜವಾದ ಪರಾಕ್ರಮಶಾಲಿಗಳಿಗೆ ಸಹಿಸುವುದಿಲ್ಲ. ಆಗ ಅದೇ ಸಭೆಯಲ್ಲಿ ಕೂತಿದ್ದ ಗುಮ್ಮನಾಯಕನಪಾಳಯದ ದೊರೆಯಾದ ಕದರಪ್ಪ ನಾಯಕನು ಎದ್ದು ನಿಂತುಕೊಂಡು,

''ಛಿ, ಖೂಳ, ಎಂಥಾ ಅಲ್ಪವಾರ್ತೆಯನ್ನಾಡಿದೆ? ಅನೇಕ ವೀರರೂ ಶೂರರೂ ಧೀರರೂ ಇರುವ ಇಂಥಾ ಮಹಾ ಆಸ್ಥಾನದಲ್ಲಿ ಇಂಥಾ ಸಭೆಗೆ ಅವಮಾನವಾಗುವ ಮಾತನ್ನಾಡಕೂಡದು. ಈ ಪೊಳ್ಳು ಹರಟೆಗೆ ಇದು ಸ್ಥಳವಲ್ಲ. ನಾನು ನನ್ನೆದೆಯನ್ನು ನಿನ್ನೆದುರಿಗೆ ಹಿಡಿಯುತ್ತೇನೆ, ಬೇಕಾದ್ದು ಮಾಡು" ಎಂದು ಧೈರ್ಯವಾಗಿ ಗರ್ಜಿಸಲು, ಆ ಭಟರಾಜುವು ಅರ್ಭಟಿಸುತಾ ತನ್ನ ಕೈಯಲ್ಲಿದ್ದ ಕಠಾರಿಯಿಂದ ಧೀರನಾದ ಆ ಪಾಳಯಗಾರ ಕದರಪ್ಪ ನಾಯಕನ ಎದೆಯ ಮೇಲೆ ತಿವಿದನು ದೇಹವೆಲ್ಲಾ ರಕ್ತಮಯವಾಯಿತು. ಸ್ತಂಭೀಭೂತವಾಗಿ ಕಣ್ಣು ಮಿಟುಕಿಸದೆ ಕೂತಿದ್ದ ಸಭೆಯ ಜನರೆಲ್ಲಾ ಗಾಬರಿಯಾದರು. ಬಹಳ ಹಾಹಾಕಾರ ಹುಟ್ಟಿತು. ಆದರೆ ಪರೀಕ್ಷಿಸಿ ನೋಡುವಲ್ಲಿ ಆ ಕಠಾರಿಯು ಬಹು ಚಮತ್ಕಾರದಿಂದ ಕೃತ್ರಿಮವಾಗಿ ಮಾಡಲ್ಪಟ್ಟದ್ದಾಗಿತ್ತು. ನೋಡುವುದಕ್ಕೆ ಲೇಶವೂ ಅನುಮಾನ ತೋರದ ಹಾಗೆ ಒಳಗೆ ಔಕುಳಿಯನ್ನು ತುಂಬಿ ಮೇಲೆ ಕಠಾರಿಯ ಹಾಗೆ ಕಾಣುತಿದ್ದ ಆ ಕೃತಕವು ಅತ್ಯಂತ ಆಶ್ಚರ್ಯಕರವಾಗಿತ್ತು. ಅಲ್ಲಿ ಚಲ್ಲಾಡಿ ರಕ್ತದ ಹಾಗೆ ಕಾಣುತ್ತಿದ್ದುದು ಔಕುಳಿಯಾಗಿತ್ತು ಆ ತಂತ್ರವನ್ನು ಕಂಡು ಎಲ್ಲರೂ ಬೆರಗಾದ್ದಲ್ಲದೆ ಆ ಮಹಾ ಸಭೆಯಲ್ಲಿದ್ದವರೆಲ್ಲರೂ ಕದರಪ್ಪ ನಾಯಕನ ಶೌರ್‍ಯವನ್ನೂ ಧೈರ್ಯವನ್ನೂ ಕೊಂಡಾಡಿದರು. ಅದೇ ಸಮಯದಲ್ಲಿ ಆ ಭಟರಾಜುವು ಆ ಮಹಾ ಸಭಾಮಧ್ಯೆ ನಿಂತು ಕೈಯನ್ನು ಎತ್ತಿ ಕದರಪ್ಪ ನಾಯಕನ ಧೈರ್ಯವನ್ನು ಕುರಿತು ಆ ದಕ್ಷಣ

ಲ್ಲಿಯೇ ಪದ್ಯಗಳನ್ನು ಹೇಳುತ್ತಾ ಹೊಗಳಿದನು.

ಕದರಪ್ಪ ನಾಯಕನು ಆ ಭಟರಾಜುವಿನ ಯುಕ್ತಿಗೂ ತಂತ್ರಕ್ಕೂ ಮೆಚ್ಚಿ ಸಂತೋಷಪಟ್ಟು ತನ್ನ ಕೊರಳಲ್ಲಿದ್ದ ಮುತ್ತಿನ ಕಂಠಿಯನ್ನೂ ತಾನು ಹೊದ್ದಿದ್ದ 'ಶಾಲ್' ಜೋಡಿಯನ್ನೂ ಅವನಿಗೆ ಇನಾಮವಾಗಿ ಕೊಟ್ಟನು. ಸಿಂಹಾಸನಾರೂಢನಾಗಿ ಕೂತಿದ್ದ ಚಕ್ರವರ್ತಿಯಾದ ನರಪತಿಯು ಇದೆಲ್ಲವನ್ನೂ ನೋಡಿ ಬಹಳ ಸಂತೋಷಗೊಂಡು ಕದರಪ್ಪ ನಾಯಕನ ಪರಾಕ್ರಮವನ್ನು ಬಹಳವಾಗಿ ಶ್ಲಾಘನೆ ಮಾಡಿದನು.

ಮನುಷ್ಯನೇಕೆ ಅಧಿಕಾರ ಕಳೆದುಕೊಂಡ?

ಆ ಕಾಲದಲ್ಲಿ ಪೃಥ್ವಿಯ ಮೇಲೆ ಮನುಷ್ಯರ ಅಧಿಕಾರ ನಡೆಯುತ್ತಿತ್ತು. ಜನರು ಸದಾಚಾರಿಗಳೂ ಪ್ರಾಮಾಣಿಕರೂ ನಿಷ್ಠಾವಂತರೂ ಆಗಿರುತ್ತಿದ್ದರು. ನದಿಗಳು, ಪರ್ವತಗಳು, ಪ್ರಾಣಿಗಳು, ಪಕ್ಷಿಗಳು ಎಲ್ಲವುಗಳ ಮೇಲೆ ಅವರ ಅಧಿಕಾರ ನಡೆಯುತ್ತಿತ್ತು. ಅವರ ಆದೇಶವನ್ನು ಯಾರೂ ಉಲ್ಲಂಘಿಸುತ್ತಿರಲಿಲ್ಲ.

ಆ ಸಮಯದಲ್ಲಿ ಯುರೋಪದ ನಗರವೊಂದರಲ್ಲಿ ಕಟ್ಟಿಗೆ ಮಾರಿ ಜೀವಿಸುವವನೊಬ್ಬನಿದ್ದ. ಆತ ಬಲು ಸೋಮಾರಿಯಾಗಿದ್ದ. ಒಂದು ದಿನ ಅಡವಿಯಲ್ಲಿ ಕಟ್ಟಿಗೆ ಕಡಿದು ಹೊರೆ ಕಟ್ಟಿದ ಬಳಿಕ ಆತ ಆ ಹೊರೆಗೆ "ನಡೆ ಮನೆಗೆ" ಎಂದು ಆಜ್ಞಾಪಿಸಿದ. ಕಟ್ಟಿಗೆಯ ಹೊರೆ ನಡೆಯತೊಡಗಿತು. ತುಸು ದೂರ ಅದರ ಹಿಂದೆಯೆ ನಡೆದ ಬಳಿಕ ಆ ಸೋಮಾರಿ ಆ ಹೊರೆಯನ್ನೇರಿ ಕುಳಿತು "ನನ್ನನ್ನೂ ಹೊತ್ತುಕೊಂಡು ಹೋಗು" ಎಂದ. ಕಟ್ಟಿಗೆಯ ಹೊರೆ ಸರಕ್ಕನೆ ನಿಂತು ಮುಂದೆ ಹೋಗಲು ನಿರಾಕರಿಸಿತು.

ಕಟ್ಟಿಗೆ ಮಾರುವಾತ ಸಿಟ್ಟಿಗೆದ್ದು ಕೊಡಲಿಯ ಏಟುಗಳನ್ನು ಹಾಕತೊಡಗಿದ. ನೋವಿನಿಂದ ಹೊರೆ ಚೀರತೊಡಗಿತು. ಅದರ ಪ್ರತಿಧ್ವನಿ ಎಲ್ಲೆಡೆಗಳಲ್ಲಿ ಕೇಳಿಸತೊಡಗಿತು. ಆಗ ಆಕಾಶವಾಣಿಯಾಯಿತು: "ಮಾನವಾ, ನೀನು ಅನ್ಯಾಯವನ್ನೆಸಗಿದೆ. ನೀನು ಸದಾ ಪೃಥ್ವಿಯ ಮೇಲೆ ಅಧಿಕಾರ ನಡೆಸುವಂತೆ ಪರಮಾತ್ಮನು ನಿನಗೆ ಶಕ್ತಿಯನ್ನಿತ್ತಿದ್ದ. ಆದರೆ ನೀನು ಸ್ವಾರ್ಥಿಯೂ ಸೋಮಾರಿಯೂ ಆದೆ. ಎಲಡಸೆಯುವರಿಂದ ನೀನು ಸ್ವತಃ ಮಾಡಬೇಕಾದ್ದನ್ನೂ ಮಾಡಿಸಬಯಸುತ್ತಿರುವೆ. ಪರಮಾತ್ಮ ಕುಪಿತನಾಗಿ ನಿನಗೆ ಕೊಟ್ಟ ಶಕ್ತಿಯನ್ನು ಹಿಂತೆಗೆದುಕೊಂಡಿದ್ದಾನೆ."

ಅಂದಿನಿಂದ ಮನುಷ್ಯಜಾತಿ ತನ್ನ ವಿಲಕ್ಷಣ ಶಕ್ತಿಯನ್ನು ಕಳೆದುಕೊಂಡು ಪ್ರಕೃತಿಯ ಅಧೀನದಲ್ಲಿದೆ.

— ಸಂಕಲಿತ

ಕೀರ್ತಿಗಾಗಿ ಅಪೇಕ್ಷೆಪಡುವವನು ಟೀಕೆಗಳಿಗೆ ಹೆದರುವವನಾಗಬಾರದು. ಟೀಕೆಯ ಭಯ ಪ್ರತಿಭೆಗೆ ಮೃತ್ಯು.

— ಸಿವರ್ಸ್

ಗಂಡಸರ ಗಂಧರ್ವಲೋಕ, ಹೆಂಗಸರ ರೌರವನರಕ—

ಅಫಗಾನಿಸ್ತಾನ

ಅಫಗಾನಿಸ್ತಾನದ ಜನರ ಜೀವನವನ್ನು ಕಂಡಾಗ "ಗಂಡಸಾಗಿ ಹುಟ್ಟಿದರೆ ಅಫಗಾನಿಸ್ತಾನದಲ್ಲಿ ಹುಟ್ಟಬೇಕು" ಎಂಬ ವಿಚಾರ ತಲೆಯಲ್ಲಿ ಸುಳಿದು ಹೋದರೆ ಆಶ್ಚರ್ಯವೇನಲ್ಲ.

ಅಫಗಾನಿಸ್ತಾನದ ಪುರುಷ ಎತ್ತರದ ಆಳು. ಗಟ್ಟಿಮುಟ್ಟಾದ ದೊಡ್ಡ ಮೈಕಟ್ಟಿನವ. ಮುಖಕ್ಕೆ ಒಂದು ಬಗೆಯ ಸೌಂದರ್ಯವನ್ನೂ ಭೀಕರತೆಯನ್ನೂ ತರುವ ಗಡ್ಡ ಬೆಳೆಸಿರುವ ಆತ ಸದಾ ಒಂದು ಬಂದೂಕನ್ನು ಧರಿಸಿಯೇ ಇರುತ್ತಾನೆ ಸರಕಾರದ ಶಾಸನಗಳು ಅವನ ಮಟ್ಟಿಗೆ ಇದ್ದೂ ಇಲ್ಲದಂತೆಯೇ ಎನ್ನಬಹುದು. ಆತ ಅತಿಥಿ ಸತ್ಕಾರದಲ್ಲಿ ಬಲು ಮುಂದು. ಅತಿಥಿಯೊಬ್ಬ ಮನೆಗೆ ಬಂದೊಡನೆ ಮೇಜವಾನಿಗಾಗಿ ಆತ ಒಂದು ಆಡನ್ನು ಕೊಲ್ಲುತ್ತಾನೆ. ಹಾಡುವದು, ಕುಣಿಯುವದು ಮತ್ತು ಸ್ವಚ್ಛಂದ ಜೀವನವು ಅವನಿಗೆ ಎಷ್ಟು ಮೈಗೂಡಿದೆಯೊ ಅಷ್ಟೇ ಹೊಡೆದಾಟ ಬಡೆದಾಟಗಳೂ ಮೈಗೂಡಿರುತ್ತವೆ. ಅವನದು ಸ್ವತಂತ್ರ ಜೀವನ

ಬಿಳಿಯ, ಸಡಿಲಾದ ಇಜಾರಗಳು, ಕಸೂತಿ ಹಾಕಿದ ಶರ್ಟು, ತಲೆಗೆ ಹಾಕಿದ ಟೊಪ್ಪಿಗೆಯನ್ನು ಬಳಸಿ ಸುತ್ತಿದ ರುಮಾಲು, ಜಾಕೀಟು ಮತ್ತು ಕೋಟು ಅವರ ಉಡುಪು. ಸೆಕೆ ೧೧೫ ರಿಂದ ೧೨೦ ಡಿಗ್ರಿಗಳ ವರೆಗಿದ್ದರೂ ಇವರು ನಿಲುವಂಗಿಗಳನ್ನು ತೊಟ್ಟುಕೊಳ್ಳುತ್ತಾರೆ.

ರಶಿಯ, ಪಾಕಿಸ್ತಾನ ಮತ್ತು ಇರಾಣಗಳಿಂದ ಸುತ್ತುವರಿಯಲ್ಪಟ್ಟ ನಾಡು ಅಫಗಾನಿಸ್ತಾನ. ೨೫,೦೦೦ ಚದರ ಮೈಲು ವಿಸ್ತೀರ್ಣವಾಗಿರುವ ಈ ದೇಶದ ಭೂಮಿಯಲ್ಲಿ ೧೦೦ಕ್ಕೆ ೯೨ ರಷ್ಟು ಪ್ರದೇಶ — ಸಹಜವಾಗಿ ಸಾಗಾಗಬಹುದಾದ, ಆದರೆ ವರ್ಷದಲ್ಲಿ ಮಳೆಯೇ ಬೀಳುವದಿಲ್ಲ ಎನ್ನಬಹುದಾದ– ಬಂಜರು ಭೂಮಿ ವಾಯುವ್ಯದಲ್ಲಿ ಹಿಂದುಕುಶ ಪರ್ವತದಿಂದ ಇಲ್ಲಿಯ ಭೂಮಿ ನೈಋತ್ಯದಲ್ಲಿರುವ "ಸಾವಿನ ಮರುಭೂಮಿ" ಯತ್ತ ಇಳಿಜಾರಾಗಿದೆ ಬರ್ಫಾಚ್ಛಾದಿತವಾದ ಪರ್ವತಗಳಿಂದ ಹರಿಯುವ ಅಸಂಖ್ಯ ನದಿಗಳಿಂದ ಇಲ್ಲಿ ಮನುಷ್ಯ ಜೀವಿಸುವದು ಸಾಧ್ಯವಾಗಿದೆ. ನದಿಗಳ ಕಾಲುವೆಗಳು ಹರಿಯುವಲ್ಲಿ ಭತ್ತ, ಗೋದಿ, ಹಣ್ಣುಹಂಪಲುಗಳ ಬೆಳೆಯಿಂದಲೂ ದನಕರುಗಳಿಂದಲೂ ನಾಡು ಸಮೃದ್ಧವಾಗಿದೆ.

ನೀರಿನ ಝರಿಗಾಗಿ ಕೆಲಸಲ ೨೦ ಅಡಿಗಳ ವರೆಗೂ ನೆಲವನ್ನು ಅಗೆಯಬೇಕಾಗುತ್ತದೆ. ನೀರಿನ ಝರಿ ಸಿಕ್ಕ ಬಳಿಕ ಅದರ ಪ್ರವಾಹದ ಗುಂಟ ನೆಲದಲ್ಲಿ ಸುರಂಗವನ್ನು ತೋಡುತ್ತಾರೆ. ಈ ಕೆಲಸ ಮಾಡುವದಕ್ಕೆ ಉಕ್ಕಿನಂಥ ಜನರೇ ಬೇಕು. ಈ ಅಪಾಯಕಾರಿ ಕೆಲಸವನ್ನು ಮಾಡುವವರಿಗೆ ಹೆಚ್ಚಿನ ಸಂಬಳ, ಅನ್ನವಸ್ತ್ರ, ಹೆಂಗಸರನ್ನು ಕೊಡುತ್ತಾರೆ. ಕೆಲಸ ಮಾಡುವಾಗ ಅಪಘಾತದಲ್ಲಿ ಕೆಲಸಗಾರರು ಸತ್ತರೆ ಅವರ ಬಟ್ಟೆ-ಬರೆಗಳನ್ನೂ ಹೆಂಗಸರನ್ನೂ ಹೊಸದಾಗಿ ಬರುವವರಿಗೆ ಕೊಡುತ್ತಾರೆ. ಇಂಥ ಸುರಂಗ ಕಾಲುವೆಗಳು ಅತ್ಯಗತ್ಯವಾಗಿರುವದರಿಂದ ಅದರ ಕೆಲಸ ನಿಲ್ಲಿಸುವಂತಿಲ್ಲ.


ಇಲ್ಲಿಯ ಜೀವನ ಈಗ ಸಾವಿರಾರು ವರ್ಷಗಳ ಹಿಂದಿನ ಜೀವನದಂತೆಯೆ ಇದ್ದರೂ ಇಲ್ಲಿಯವರಿಗೆ ವಿದೇಶೀಯರ ಆಗಮನ ನಿರ್ಗಮನಗಳೇನೂ ಹೊಸ ಮಾತೆನ್ನಿಸುವದಿಲ್ಲ. ಪೂರ್ವಕಾಲದಿಂದಲೂ ಭಾರತದ ಮೇಲೆ ದಾಳಿ ಮಾಡಿದವರು ಅಫಗಾನಿಸ್ತಾನದ ಮಾರ್ಗವಾಗಿಯೇ

ಬಂದಿದ್ದಾರೆ.

ಅಫಗಾನರ ಸಾಮಾಜಿಕ ಜೀವನದ ನಾಡಿಯಿರುವದು ಅಲ್ಲಿರುವ ಅಸಂಖ್ಯ ಚಹದಂಗಡಿಗಳಲ್ಲಿ. ಒಂದು ತಾಸಿನಲ್ಲಿ ೧೫ ಕಪ್ಪು ಚಹ ಕುಡಿಯುವ ಅಫಗಾನರೂ ಇದ್ದಾರೆ. ಭಾರತದಿಂದ ಒಂಟೆಗಳ ಮೇಲೆ ಚಹದ ಸೊಪ್ಪು ಇಲ್ಲಿಗೆ ಬರುತ್ತದೆ. ಹೊಸಬರು ಈ ಚಹದಂಗಡಿಗಳಲ್ಲಿ ಕಾಲಿರಿಸಿದೊಡನೆ ಸ್ಥಳಿಕರು ಅವರನ್ನು ಆದರದಿಂದ ಸ್ವಾಗತಿಸಿ ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಆಮಂತ್ರಣವೀಯುತ್ತಾರೆ.

ಒಂದು ಗುಂಪಿನವರು ಇನ್ನೊಂದು ಗುಂಪಿನ ಮೇಲೆ ದಾಳಿ ಮಾಡುವದು, ಆಸ್ತಿಯ ಅಪಹರಣ ಇತ್ಯಾದಿಗಳ ವಾತಾವರಣವಿರುವ ಅಫಗಾನಿಸ್ತಾನದಲ್ಲಿ ಆಸ್ತಿಯ ರಕ್ಷಣೆಗಾಗಿ ಬಹಳ ಜಾಗ್ರತೆ ವಹಿಸಬೇಕಾಗುತ್ತದೆ. ಹೊಲದಲ್ಲಿ ಬೆಳೆ ಬೆಳೆಯುವಾಗ ಮೊದಲು ಹೊಲದ ಒಡೆಯ ಹೊಲದ ನಡುವೆ ಒಂದು ಸಣ್ಣ ಮನೆ ಕಟ್ಟಿಕೊಳ್ಳುತ್ತಾನೆ. ಸುಗ್ಗಿಯ ಕಾಲದಲ್ಲಿ ಮನೆಯವರೆಲ್ಲರೂ ಹೊಲದಲ್ಲಿ ಕಾವಲು ನಡೆಸುತ್ತಾರೆ. ಕಾವಲು ಸಡಿಲಾದ ಕ್ಷಣದಲ್ಲಿ ಬೆಳೆ ಮಾಯವಾಗಿಬಿಡುತ್ತದೆ.

ಅಫಗಾನಿಸ್ತಾನದ ಗಂಡಸರ ಜೀವನ ಎಷ್ಟು ಸ್ವತಂತ್ರವೋ ಹೆಂಗಸರದು ಅಷ್ಟೇ ಅತಂತ್ರವಾದದ್ದು. ಹದಿಮೂರು ವರ್ಷ ವಾಯಿತೋ ಅಲ್ಲಿಂದ ಮುಂದೆ ಅಫಗಾನ ಹೆಣ್ಣು ಕಾಲಿನಿಂದ ತಲೆಯ ವರೆಗೆ ಇಡೀ ದೇಹವನ್ನು ಮುಚ್ಚುವ ಬುರಖಾದಲ್ಲಿ ಮಾತ್ರ ಕಣ್ಣಿಗೆ ಬೀಳುತ್ತಾಳೆ. ಅವಳಿಗೆ ಕಾಣಲೆಂದು ಕಣ್ಣಿನ ಹತ್ತರ ಎರಡು ಚಿಕ್ಕ ತೂತುಗಳನ್ನು ಮಾಡಿದ್ದರೂ ಅಲ್ಲಿ ಕೂಡ ತೆಳ್ಳನ್ನ ಪರದೆಗಳನ್ನು ಹೊಲಿದಿರುತ್ತಾರೆ. ಕೈಗಳನ್ನು ಪರರ ದೃಷ್ಟಿಗೆ ಹಾಕುವದು ಅಕ್ಷಮ್ಯವಾದುದರಿಂದ ಅವುಗಳನ್ನು ಕೂಡ ಮೈಮೇಲಿನ ಬುರಖಾದೊಳಗೆ ಬಚ್ಚಿಟ್ಟುಕೊಳ್ಳಬೇಕಾಗುತ್ತದೆ. ವರ್ಷ ಎರಡು ವರ್ಷಗಳ ವರೆಗೆ ನೀವು ಅಫಗಾನಿಸ್ತಾನದಲ್ಲಿದ್ದರೂ ಅಫಗಾನ ಹೆಂಗಸೊಬ್ಬಳ ಮುಖವನ್ನು ಕಾಣಲಾರಿರಿ.



ಯಾವ ಸಾಮಾಜಿಕ ಚಟುವಟಿಕೆಯಲ್ಲಾಗಲಿ, ಸಮಾರಂಭದಲ್ಲಿಯಾಗಲಿ ಸ್ತ್ರೀಯರಿಗೆ ಪ್ರವೇಶವಿಲ್ಲ. ಸಿನೇಮಾಗಳಲ್ಲಿ, ಆಟಪಾಟಗಳಲ್ಲಿ, ಉತ್ಸವಗಳಲ್ಲಿ ಭೋಜನ ಸಮಾರಂಭದಲ್ಲಿ ಹೆಂಗಸರನ್ನು ಬರಗೊಡುವದಿಲ್ಲ. ಆಗೊಮ್ಮೆ ಈಗೊಮ್ಮೆ ಕೇವಲ ಸ್ತ್ರೀಯರಿಗಾಗಿ ಚಿತ್ರಪಟಗಳನ್ನು ತೋರಿಸತೊಡಗಿದ್ದಾರೆ. ಈಗ ಒಮ್ಮೆ ಒಬ್ಬ ಹೋಟೆಲಿನವ ಬುಧವಾರದ ದಿನವನ್ನು ಕೇವಲ ಸ್ತ್ರೀಯರಿಗೆ ಮಾತ್ರ ಮೀಸಲಿಟ್ಟಿದ್ದರಿಂದ ಪೋಲೀಸರು ಅವನನ್ನು ಬಂಧಿಸಿದರು.

ಸ್ತ್ರೀಯರು ಬೇನೆ ಬಿದ್ದಾಗ ಡಾಕ್ಟರರು ಅವರನ್ನು ತಪಾಸಿಸುವಂತಿಲ್ಲ. ಬೇನೆ ಬಿದ್ದವಳು ಒಂದು ಕೋಣೆಯಲ್ಲಿದ್ದರೆ ಡಾಕ್ಟರರು ಇನ್ನೊಂದು ಕೋಣೆಯಲ್ಲಿ ಕೂಡ್ರಬೇಕು. ಗಂಡ ಎರಡೂ ಕೋಣೆಗಳ ನಡುವೆ ಅಡ್ಡಾಡುತ್ತ

ಹೆಂಡತಿಯ ರೋಗಲಕ್ಷಣಗಳನ್ನು ಡಾಕ್ಟರರಿಗೆ ತಿಳಿಸುತ್ತಾನೆ. ಗಂಡನಾದ ತನ್ನ ಅಭಿಮಾನ ಅಥವಾ ಧರ್ಮಕ್ಕೆ ಯಾವದೊಂದು ಶೋಭಿಸುವದಿಲ್ಲ ಎಂದೆನಿಸಿದರೆ ಆತ ಅಂಥ ಲಕ್ಷಣಕ್ಕೆ ಕತ್ತರಿ ಪ್ರಯೋಗ ಮಾಡಿ ಅದನ್ನು ಡಾಕ್ಟರರಿಗೆ ಹೇಳುವದೇ ಇಲ್ಲ. ಡಾಕ್ಟರರು ರೋಗದ ಅಂದಾಜು ಕಟ್ಟಿ ಸೂಚಿಸಿದ ಚಿಕಿತ್ಸೆ ತುಂಬ ವೆಚ್ಚದ್ದೆನಿಸಿದರೆ ರೋಗ ಅಷ್ಟು ಕಠಿಣವಾದದ್ದಲ್ಲ ಎಂದು ಗಂಡ ವಾದಿಸುತ್ತಾನೆ. ಅಫಗಾನಿಸ್ತಾನದಲ್ಲಿ ಕೆಲವೆಡೆ ಸ್ತ್ರೀಯರಿಗೆ ಬೇನೆ ಬಂದಾಗ ಅವರು ಡಾಕ್ಟರರಿಂದ ಚಿಕಿತ್ಸೆಯನ್ನು ಪಡೆಯುವದೇ ಇಲ್ಲ. ಆಯುಷ್ಯವಿದ್ದರೆ ಬದುಕಿಕೊಳ್ಳುತ್ತಾರೆ, ಇಲ್ಲವಾದರೆ ಇಲ್ಲ.

ಅಫಗಾನಿಸ್ತಾನದ ಉತ್ತರ ಭಾಗದಲ್ಲಿರುವ ಬಾಮೇನ ಕಣಿವೆ ನಿಸರ್ಗದಿಂದ ಆಶೀರ್ವಾದ ಪಡೆದಿರುವ ಪ್ರದೇಶ ಅದು ಗಿಡ ಮರಗಳಿಂದಲೂ ಫಲವತ್ತಾದ ಹೊಲಗಳಿಂದಲೂ ಸಮೃದ್ಧವಾಗಿದೆ. ಅದಕ್ಕೂ ಹೆಚ್ಚೆಂದರೆ ಬೌದ್ಧ ಧರ್ಮವು ಜಗತ್ತಿನಲ್ಲೆಲ್ಲ ಪ್ರಸಾರವಾದದ್ದು ಇಲ್ಲಿಂದಲೇ. ಇಲ್ಲಿಯ ಗುಡ್ಡಗಳಲ್ಲಿ ಬೌದ್ಧ ಮತೀಯರು ಸಾವಿರಾರು ಗುಹೆಗಳನ್ನೂ ಗುಪ್ತಸ್ಥಾನಗಳನ್ನೂ ಕೊರೆದಿದ್ದಾರೆ. ಪ್ರತಿಯೊಂದು ಗುಹೆಯಲ್ಲಿಯೂ ಬಗೆಬಗೆಯ ಚಿತ್ರಗಳು ಕೊರೆಯಲ್ಪಟ್ಟಿವೆ. ಬಾಮೇನ ಕಣಿವೆಯ ಸೌಂದರ್ಯ ಅದರದೇ.

ಉತ್ತರದ ನಾಡಿಗಿಂತ ತೀರ ಭಿನ್ನವಾದದ್ದು ದಕ್ಷಿಣದ ಪ್ರದೇಶ. ದಕ್ಷಿಣ ಅಫಗಾನಿಸ್ತಾನವೆಂದರೆ ಅತಿ ವಿಶಾಲವಾದ ಒಂದು ಮರುಭೂಮಿ. ಇಲ್ಲಿ ಪ್ರಚಂಡ ಗಾಳಿ ಸದಾ ಬೀಸುತ್ತಿರುತ್ತದೆ. ಇದಕ್ಕೆ ಸಾವಿನ ಮರುಭೂಮಿ (ದಸ್ತ—ಇ—ಮಾರ್ಗೋ) ಎಂದು ಹೆಸರಿದ್ದು ಅದು ಅನ್ವರ್ಥಕವಿದೆ.

ಈ ಮರುಭೂಮಿಯಲ್ಲಿ ಸಾವಿರಾರು ವರ್ಷಗಳ ಹಿಂದೆ ಅಲ್ಲಿದ್ದ ದೊಡ್ಡ ದೊಡ್ಡ ನಗರಗಳ ಅವಶೇಷಗಳಿವೆ. ಕೋಟೆ-ಕೊತ್ತಳ, ಅರಮನೆಗಳ ಭಗ್ನಗೋಡೆಗಳಿವೆ. ಇಪ್ಪತ್ತಡಿ ಎತ್ತರದ, ಒಂಬತ್ತು ಮೈಲುದ್ದದ, ಆರಡಿ ದಪ್ಪವಾದ ಗೋಡೆಯೊಂದನ್ನು ಕ್ವಾಲಾ ಬಿಸ್ತದ ಅವಶೇಷಗಳಲ್ಲಿ ಕಾಣಬಹುದು. ಏನಿಲ್ಲೆಂದರೂ ೬ ಕೋಟಿಗಿಂತ ಹೆಚ್ಚಿಗೆ ಇಟ್ಟಂಗಿಗಳು ಇದನ್ನು ಕಟ್ಟಲು ಬೇಕಾಗಿರಬಹುದೆಂದು ಅಂದಾಜು ಮಾಡಿದ್ದಾರೆ. ಹಾಗಿದ್ದರೂ ಇದು ಈ ಮರುಭೂಮಿಯಲ್ಲಿ ಕಂಡುಬರುವ ಭಗ್ನಾವಶೇಷಗಳಲ್ಲಿ ಒಂದು ಸಣ್ಣ ಅಂಶ ಮಾತ್ರವಾಗಿದೆ.

ಈ ವಿಶಾಲವಾದ ಮರುಭೂಮಿಯಲ್ಲಿ ರಸ್ತೆಯೆನ್ನುವದೇ ಇಲ್ಲ. ಒಮ್ಮೆ ಈ ಮರುಭೂಮಿಯಲ್ಲಿ ಪ್ರವಾಸ ಹೊರಟಿದ್ದ ಒಂದು ಕಾರು ನಡುವೆ ಕೆಟ್ಟು ನಿಂತಿತು. ಎರಡೇ ದಿನಗಳಲ್ಲಿ ಅದರಲ್ಲಿದ್ದ ಜನರು ಒಣ ಗಾಳಿಯಿಂದ ಶೋಷಿತರಾಗಿ ಸತ್ತು ಹೋದರು.

ಅಫಗಾನ ಮರುಭೂಮಿಯಲ್ಲಿ ಹಾದಿತಪ್ಪಿ, ನೀರಿಲ್ಲದೆ ಅಥವಾ ಗಾಳಿಯ ಹೊಡೆತಕ್ಕೆ ಸಿಕ್ಕು ಸಾಯುವವರಿಗಿಂತ ಮುಳುಗಿ ಸಾಯುವವರು ಹೆಚ್ಚು. ವರ್ಷಕ್ಕೊಂದು ಅಥವಾ ಎರಡು ಸಲ ಮರುಭೂಮಿಯ ಅಂಚಿನಲ್ಲಿ ಪ್ರಚಂಡ ಮಳೆ ಸುರಿದು ೩೦ ಅಡಿ ಆಳದ ವರೆಗೆ ನೀರು ಮರುಭೂಮಿಯಲ್ಲಿ ನುಗ್ಗಿ ಎದುರು ಸಿಕ್ಕಿದ್ದನ್ನೆಲ್ಲ ನಾಶ ಮಾಡಿಬಿಡುತ್ತದೆ.

ಈ ಮರುಭೂಮಿಯಲ್ಲಿ ಚಾಖನಸುರ ಅವಶೇಷಗಳು ನಿಜವಾಗಿ ಪ್ರೇಕ್ಷಣೀಯವಾದವುಗಳು. ಅಲೆಗ್ಝಾಂಡರ ದಿ ಗ್ರೇಟ ಈ ಮಾರ್ಗವಾಗಿ ಕ್ರಿ. ಪೂ. ೩೨೯ ರಲ್ಲಿ ಪ್ರಯಾಣ ಮಾಡಿದ್ದ. ಆ ಕಾಲದಲ್ಲಿ ಇಲ್ಲಿ ಅನೇಕಾನೇಕ ಕೋಟೆ ಕೊತ್ತಲಗಳಿದ್ದವು. ಸುಮಾರು ೧೦ ಲಕ್ಷ ಜನ ಇಲ್ಲಿ ವಾಸಿಸುತ್ತಿದ್ದರು. ಕ್ರಿ. ಶ ೧೨೦೦ರ ವರೆಗೂ ಸುಮಾರು ೧೦೦ ಮೈಲುದ್ದದವರೆಗೆ ಈ ಪ್ರದೇಶದಲ್ಲಿ ಜನವಸತಿ ಇದ್ದಿತು.

ಇಲ್ಲಿಯ ಕಾಲುವೆಗಳಲ್ಲಿ ಹರಿದು ಬಂದ ಉಪ್ಪಿನಿಂದ ಈ ಪ್ರದೇಶ ಬಂಜರಾಯಿತೆಂದೂ ಅದು ಮತ್ತು ಚೆಂಘಿಸಖಾನನು ನಡೆಸಿದ ಕಗ್ಗೊಲೆಯೂ ಈ ಪ್ರದೇಶವು ನಿರ್ಮಾನುಷವಾಗಲು ಕಾರಣವಾಯಿತೆಂದೂ ಹೇಳುತ್ತಾರೆ. ಚೆಂಘಿಸಖಾನನು ಒಮ್ಮೆ ಇಲ್ಲಿ ೧೨ ಲಕ್ಷ ಜನರನ್ನು ಕೊಲ್ಲಿಸಿದನೆಂದು ಇತಿಹಾಸದಲ್ಲಿ ಉಲ್ಲೇಖವಿದೆ. ಆಡುಗಳು ಅನಿರ್ಬಂಧವಾಗಿ ಮೇಯಲು ಅವಕಾಶವಿದ್ದರೂ

ಗಿಡಮರಗಳ ಸಮೂಲ ನಾಶಕ್ಕೆ ಕಾರಣವಾಗಿ ಈ ಪ್ರದೇಶ ಮರುಭೂಮಿಯಾಗಿಹೋಯಿತು.

ಈ ವಿಶಾಲವಾದ ಸಾವಿನ ಮರುಭೂಮಿಯಲ್ಲಿಯೂ ಒಂದು ಆಶ್ಚರ್ಯವಿದೆ. ನೈಋತ್ಯ ಮೂಲೆಯಲ್ಲಿ ನೀರು, ಗಿಡಗಳಿಂದ ಸಮೃದ್ಧವಾದ ಒಂದು ಸಣ್ಣ ರಾಜ್ಯವಿದೆ. ಇಪ್ಪತ್ತನೆಯ ಶತಮಾನ ನಡೆಯುತ್ತಿದೆ ಎಂಬುದರ ಅರಿವೂ ಇಲ್ಲದೆ ಇಲ್ಲಿ ಸರದಾರ ಮಹಮ್ಮದ ಅಲಂಖಾನ ರಾಜ್ಯಭಾರ ನಡೆಸುತ್ತಾನೆ.

ಈತ ತನ್ನ ರಾಜ್ಯಕ್ಕೆ ಸಾರ್ವಭೌಮ. ಅವನದೇ ಸೈನ್ಯ, ಸುಂಕದ ಪದ್ಧತಿ, ಕರ ಪದ್ಧತಿ ಇದೆ. ಇವನ ರಾಜ್ಯದಲ್ಲಿ ರಸ್ತೆಯೆಂದು ಕರೆಯಬಹುದಾದ ರಸ್ತೆಯಿರುವದು ಒಂದೇ ಒಂದು ಮೈಲು ಮಾತ್ರ. ಆದರೂ ಇವನ ಹತ್ತರ ಮೂರು ಮೋಟರ ಕಾರುಗಳಿವೆ. ಈತ ತನ್ನ ರಾಜ್ಯದಲ್ಲಿ ಸಂಚರಿಸುವಾಗ ಅಥವಾ ಬೇರೆಕಡೆಗೆ ಹೋಗುವಾಗ ಅವನ ಜನರು ಅವನಿಗಾಗಿ ಒಂದು ರಸ್ತೆ ತಯಾರಿಸುತ್ತಾರೆ. ಈ ರಸ್ತೆಗಳ ಆಯುಷ್ಯ ಹೆಚ್ಚೆಂದರೆ ಆರು ತಿಂಗಳಷ್ಟಿರುತ್ತದೆ.

ಎಂದಾದರೊಮ್ಮೆ ತನ್ನ ರಾಜ್ಯಕ್ಕೆ ಬರುವ ವಿದೇಶೀ ಅತಿಥಿಗಳ ಸತ್ಕಾರವನ್ನು ಸರದಾರ ಮಹಮ್ಮದ ಅಲಂಖಾನ ಮಾಡುತ್ತಾನೆ ಅತಿಥಿಗಳ ಎಲ್ಲ ವೆಚ್ಚವನ್ನು ತಾನೇ ಕೊಡುವ ಆಗ್ರಹ ತೊಟ್ಟು ಕೊಡುತ್ತಾನೆ.

ಅನೇಕ ರೀತಿಗಳಲ್ಲಿ ಅಫಗಾನಿಸ್ತಾನವು ಆಧುನಿಕ ಜಗತ್ತಿನ ಮಟ್ಟಕ್ಕೆ ಬಂದು ಮುಟ್ಟಲು ಪ್ರಯತ್ನಿಸುತ್ತಿದೆ. ದೊಡ್ಡ ಸಕ್ಕರೆ ಕಾರಖಾನೆ ಮತ್ತು ನೂಲಿನ ಗಿರಣಿಗಳು ವಿದ್ಯುಚ್ಛಕ್ತಿಯಿಂದ ನಡೆಯುತ್ತಿವೆ. ಶಾಲೆ-ಕಾಲೇಜುಗಳಲ್ಲಿ ಸುಧಾರಣೆ ಮಾಡಲ್ಪಡುತ್ತಿದೆ. ತೀರ ಒಳನಾಡಿನಲ್ಲಿ ಕೂಡ ಫ್ರೆಂಚ್ ಮತ್ತು ಜರ್ಮನ್ ಪ್ರೊಫೆಸರರು ಶಿಕ್ಷಣ ಕಾರ್ಯದಲ್ಲಿ ಮಗ್ನರಾಗಿರುವದನ್ನು ಕಾಣಬಹುದು. ಆರೋಗ್ಯ ವಿಚಾರ ತುಂಬ ಮಹತ್ವದ್ದಾಗಿದ್ದು ಇನ್ನು ಕೆಲವರ್ಷಗಳಲ್ಲಿ ಅಫಗಾನಿಸ್ತಾನದಲ್ಲಿ ಪ್ರಥಮ ದರ್ಜೆಯ ಆಸ್ಪತ್ರೆಗಳು ತೆರೆಯಲ್ಪಡುವದರ ಜೊತೆಗೆ ಅಲ್ಲಿ ಕೆಲಸ ಮಾಡಲ ಸಾಕಷ್ಟು ಸ್ಥಳೀಯ ಡಾಕ್ಟರರೂ ಲಭ್ಯವಾಗಬಹುದು ಎಂಬಾಶೆಯನ್ನು ಹಿಡಿಯುವಂಥ ಪರಿಸ್ಥಿತಿಯಿದೆ.

ಅಫಗಾನ ಮರುಭೂಮಿಯ ಹೃದಯ ಮಧ್ಯದಲ್ಲಿ ಹಾಯ್ದು ಹರಿಯುತ್ತಿರುವ ಜಗತ್ತಿನಲ್ಲಿಯೇ

ಅಫಗಾನಿಸ್ತಾನ ಒಂದಾನೊಂದು ಕಾಲದಲ್ಲಿ ಭಾರತದ ಅಂಗವಾಗಿತ್ತು. ಭಾರತದ ಗಾಂಧಾರಿ ಅಫಗಾನಿಸ್ತಾನಕ್ಕೆ ಸೇರಿದ ಕಂದಹಾರದವಳು. ಗಂಧರ್ವ ಜನರು ಅಲ್ಲಿಯವರೇ ಎಂದು ನಂಬಲಾಗಿದೆ. ಬೌದ್ಧ ಧರ್ಮ ಅಲ್ಲಿ ಬೇರೂರಿ ಅದ್ಭುತವಾದ ಅವಶೇಷಗಳನ್ನು ಬಿಟ್ಟು ಹೋಗಿದೆ. ಭಾರತದ ಎಲ್ಲ ಪ್ರಮುಖ ಧರ್ಮಗಳ ಪ್ರಭಾವ ಅಲ್ಲಿ ಒಂದಲ್ಲ ಒಂದು ಕಾಲದಲ್ಲಿ ಇದ್ದೇ ಇತ್ತು. ಆದರೆ ಇಸ್ಲಾಮದ ಆಗಮನವಾದೊಡನೆ ಇಲ್ಲಿನ ಉಗ್ರ ಪರ್ವತವಾಸಿ ಜನತೆಯ ಮನಸ್ಸನ್ನು ಅದು ತನ್ನ ಕ್ಷಾತ್ರವೃತ್ತಿಯಿಂದ ಆಕರ್ಷಿಸಿದಂತೆ ಕಾಣುತ್ತದೆ. ಮೊಗಲ ಕಾಲದ ವರೆಗೂ ಭಾರತದ ಅಂಕೆಯೊಳಗೆ ಆಗಾಗ್ಗೆ ಬಂದರೂ ಅಫಗಾನಿಸ್ತಾನ ತನ್ನ ದುರ್ಗಮತೆಯಿಂದ ದಿಲ್ಲಿಯ ಚಕ್ರವರ್ತಿಗಳಿಗೆ ತಲೆನೋವನ್ನು ತರುತ್ತಲೇ ಇತ್ತು. ಬ್ರಿಟಿಶರು ಕೂಡ ಎರಡು ಬಾರಿ ಅಫಗಾನರೊಡನೆ ಯುದ್ಧ ಹೂಡಬೇಕಾಯಿತು.

ಇಂದು ಇಸ್ಲಾಮಿ ರಾಷ್ಟ್ರವಾದರೂ ಅಫಗಾನಿಸ್ತಾನ ಭಾರತದೊಡನೆ ಮೈತ್ರಿಯಿಂದಿದೆ. ವಿಚಿತ್ರವೆಂದರೆ ಪಾಕಿಸ್ತಾನದೊಡನೆ ಅದರ ಸಂಬಂಧ ಅಷ್ಟು ಚೆನ್ನಾಗಿಲ್ಲ. ಇದಕ್ಕೆ ಕಾರಣ ಪಾಕಿಸ್ತಾನವು ಗಡಿನಾಡ ಪಠಾಣ ಬಂಧುಗಳಿಗೆ ಸ್ವಯಂನಿರ್ಣಯಾಧಿಕಾರವನ್ನು ನಿರಾಕರಿಸಿರುವುದು.

ವಿಚಿತ್ರವೆನ್ನಬಹುದಾದ ಒಂದು ನದಿಯಿದೆ. ಈ ಹೆಲ್ಮಂದ ನದಿ ಮಧ್ಯ ಅಫಗಾನಿಸ್ತಾನದ ಪರ್ವತಗಳಲ್ಲಿ ಹುಟ್ಟಿ ಮುಂದೆ ಸಾವಿರ ಗಜಗಳ ಅಂತರದಲ್ಲಿ ಅಬ್ಬರದಿಂದ ಹರಿಯುವ ಪ್ರವಾಹವಾಗಿದೆ. ಹಾವಿನಂತೆ ಸುತ್ತುತ್ತ ತಿರುಗುತ್ತ ಅದು ಮರುಭೂಮಿಯಲ್ಲಿ ನುಗ್ಗಿ ಸುಂದರವಾದ ವರ್ತುಲಾಕಾರವಾಗಿ ರೂಪುಗೊಂಡು ಮುಂದೆ ಚೌಖನಸುರದ ಪಶ್ಚಿಮದಲ್ಲಿರುವ ಸಿಯಸ್ತನ್ ಸರೋವರದಲ್ಲಿ ಲೀನವಾಗುತ್ತದೆ.

ಐದು ಸಾವಿರ ವರ್ಷಗಳ ಹಿಂದೆ ಈ ನದಿಯ ದಂಡೆಗುಂಟ ಜನ ವಾಸಿಸುತ್ತಿದ್ದರು. ಈಗ ಅವರ ಹಳ್ಳಿಗಳ ಅವಶೇಷಗಳು ಅಗೆದರೆ ಮಾತ್ರ ಕಾಣಸಿಗುತ್ತವೆ. ಆ ಕಾಲದಲ್ಲಿ ಕೂಡ ಜನರು ಹೆಲ್ಮಂಡನದಿಯ ಕಾಲುವೆಗಳಿಂದ ಭೂಮಿಗೆ ನೀರುಣಿಸಿ ಬೆಳೆ ಬೆಳೆಯುತ್ತಿದ್ದರು. ಈ ನದಿಯೆ ಚೌಖನಸುರದ ಈ ಗತ ನಗರಗಳನ್ನು ಜೀವಂತವಿಟ್ಟಿತ್ತು. ಆದರೆ ವರ್ಷವರ್ಷವೂ ಹೆಚ್ಚೆಚ್ಚು ನೀರು ಮರುಭೂಮಿಗೆ ಹರಿದು ಮಾಯವಾಗತೊಡಗಿತು.

ಈಗ ಈ ಹೆಲ್ಮಂದ ನದಿಯನ್ನು ಪಳಗಿಸಿಕೊಳ್ಳುತ್ತಿದ್ದಾರೆ. ಅದರ ದಂಡೆಗುಂಟ ಮತ್ತೆ ಹೊಸ ನಗರಗಳು ತಲೆಯೆತ್ತುವವು ಎಂದು ಅಫಗಾನರು ಆಶಿಸಿದ್ದಾರೆ. ಈ ನದಿಯ ನೀರು ಇನ್ನೂ ವಿಪುಲವಾಗಿರುವ ಪರ್ವತ ಪ್ರದೇಶದಲ್ಲಿ ಒಂದು ಅಮೇರಿಕನ್ ಕಂಪನಿ ಜಗತ್ತಿನಲ್ಲಿಯೆ ಅತ್ಯುನ್ನತವಾದ ಅಣೆಕಟ್ಟೊಂದನ್ನು ಕಟ್ಟಿದೆ. ಮೈಲುಗಟ್ಟಲೆ ಮರುಭೂಮಿ ಪ್ರದೇಶದಲ್ಲಿ ಕಾಲುವೆಗಳು ಹರಿಯತೊಡಗಿವೆ ಮಾದರಿ ಹಳ್ಳಿಗಳು ನಿರ್ಮಿತವಾಗಿವೆ. ಹೊಸಬಗೆಯ ಬೆಳೆಗಳು ಕಾಣಿಸತೊಡಗಿವೆ.

ಜನರೇನೋ ಕಷ್ಟಪಟ್ಟು ಉತ್ಸಾಹದಿಂದ ದುಡಿಯುವರಾದರೂ ಸಾರಿಗೆ-ಸಂಪರ್ಕ ಸಾಧನಗಳು ಇಲ್ಲದ ಅಫಗಾನಿಸ್ತಾನದ ಪ್ರಗತಿ ಮಂದವಾಗಿದೆ. ತಿಬೇಟನ್ನು ಬಿಟ್ಟರೆ ಈ ಜಗತ್ತಿನಲ್ಲಿ ರೇಲ್ವೆಯಿಲ್ಲದ ಎದ್ದು ಕಾಣುವ ದೇಶವೆಂದರೆ ಅಫಗಾನಿಸ್ತಾನವೇ. ಪಾಕಿಸ್ತಾನದಿಂದ ಎರಡು ರೇಲ್ವೆ ಮಾರ್ಗಗಳು, ರಶಿಯದಿಂದ ಒಂದು, ಇರಾಣದಿಂದ ಒಂದು — ಹೀಗೆ ನಾಲ್ಕು ರೇಲ್ವೆ ಮಾರ್ಗಗಳು ಅದರ ಗಡಿಯ ವರೆಗೆ ಬಂದಿವೆ. ಆದರೆ ಈಗೆಷ್ಟೋ ವರ್ಷಗಳ ಹಿಂದೆಯೇ ತನಗೆ ರೇಲ್ವೆಗಳು ಬೇಡ ಎಂದು ಅಫಗಾನಿಸ್ತಾನವು ನಿರ್ಧರಿಸಿತು. ಒಮ್ಮೆ ಬ್ರಿಟಿಶ್ ಇಂಜನಿಯರರು ಗಡಿಯಲ್ಲಿ ಒಂದು ಸುರಂಗ ಮಾರ್ಗ ತೋಡಿದಾಗ ಅಫಗಾನಿಸ್ತಾನದ ಅರಸು "ಇವರು ನನ್ನ ಹೊಕ್ಕುಳದಲ್ಲಿ ದಬ್ಬಣವನ್ನು ಚುಚ್ಚುತ್ತಿದ್ದಾರೆ" ಎಂದಿದ್ದ.

ಅಫಗಾನಿಸ್ತಾನದ ರಸ್ತೆಗಳೋ, ದೇವರೇ ಗತಿ. ಮೋಟರುಗಳಿಗೆ ಪ್ರತಿ ೫೦ ಮೈಲುಗಳಿಗೆ ಒಂದು ಹೊಸ ಸ್ಪ್ರಿಂಗ್ ಬೇಕೇ ಬೇಕಾಗುತ್ತದೆ. ಕೆಲ ರಸ್ತೆಗಳಲ್ಲಿ ಸಂಚರಿಸುವ ಕಾರಿನ ಸಂಖ್ಯೆಗಳಿಗಿಂತಲೂ ಕೆಟ್ಟು ಕೆಲಸಕ್ಕೆ ಬಾರದೆ ನಿಂತಿರುವ ಕಾರುಗಳ ಸಂಖ್ಯೆಯೆ ಹೆಚ್ಚಾಗಿರುವದು ಕಂಡುಬರುವದು. ಕಾರು ರಸ್ತೆಯಲ್ಲಿ ಕೆಟ್ಟಾಗ ಎಲ್ಲಿಯೂ ಗ್ಯಾರೇಜುಗಳು ಇರುವದಿಲ್ಲವಾದ್ದರಿಂದ ಡ್ರಾಯವರರು ಸಮೀಪದ ಊರುಗಳಿಗೆ ಹೋಗಿ ತಮಗೆ ಬೇಕಾದ ಸಾಮಾನು ಸಿಗುತ್ತದೆಯೋ ಎಂದು ಹುಡುಕಾಡುವದು ದಿನನಿತ್ಯದ ಮಾತು.

ಆದರೆ ಅಫಗಾನ ಡ್ರಾಯವರರು ಬಲು ಮೇಧಾವಿಗಳು ಒಂದು ತುಣುಕು ದಾರ, ಒಂದಿಷ್ಟು ಮೊಳೆಗಳು, ಒಂದು ಕಟ್ಟಿಗೆಯ ತುಂಡು ಇವಿಷ್ಟಿದ್ದರೆ ಅವರು ಕಲ್ಪನಾತೀತವಾದ ದುರಸ್ತಿಗಳನ್ನು ಮಾಡುವರು.

ರಾಜಧಾನಿಯಾದ ಕಾಬೂಲ ನಗರವು U ಆಕಾರದಲ್ಲಿ ಕಟ್ಟಲ್ಪಟ್ಟಿದೆ. ನಡುವೆ ಇರುವ ಪರ್ವತದ ಒಂದು ಮಗ್ಗಲಲ್ಲಿ ಮಸೀದೆಗಳು, ಅಂಗಡಿ ಬೀದಿಗಳು ಮತ್ತು ಹಳೆಯ ನಗರ ಇವೆ. ಇನ್ನೊಂದು ಮಗ್ಗಲಲ್ಲಿ ಯುರೋಪಿಯನ್ ಮಾದರಿಯ ಸುಂದರ ಮನೆಗಳಿವೆ. ಆದರೆ ಪ್ರತಿಯೊಂದು ಮನೆಯು ಒಂದು ಮಣ್ಣಿನ ಗೋಡೆಯ ಹಿಂದೆ ಅಡಗಿದೆ.

ಕಾಬೂಲದಲ್ಲಿ ಧೂಳೋಧೂಳು. ಅತಿಸಾರ ರೋಗ ನಿತ್ಯದ ಮನೆಮಾತು. ಕಳ್ಳಕಾಕರಿಂದ ರಕ್ಷಣೆ ಪಡೆಯಲೆಂದು ನೇಮಿಸಿರುವ ಕಾವಲುಗಾರನು ಹೆಬ್ಬಾಗಿಲು ತೆಗೆಯಬೇಕಾದರೆ ಮನೆಯ

ಮಾಲಿಕನು ಕೂಡ ಬಾಗಿಲನ್ನು ಒಡೆಯುವಂತೆ ಬಡಿಯಬೇಕಾಗುವದು. ಕಾಬೂಲದಲ್ಲಿ ಆಧುನಿಕ ಮಾದರಿಯ ಅಂಗಡಿಗಳಿಲ್ಲ ಸಾರ್ವಜನಿಕ ಹೊಟೆಲ್ಲುಗಳು, ನಾಯಿಟ್ ಕ್ಲಬ್ಬುಗಳು ಅಥವಾ ಪಾಶ್ಚಾತ್ಯರು ಹೋಗಬಹುದಾದಂಥ ಸಿನೇಮಾ ಥೇಟರುಗಳಿಲ್ಲ.

ಹಾಗಿದ್ದರೂ ಅಲ್ಲಿಯ ಸಾಮಾಜಿಕ ಜೀವನ ಉಲ್ಲಾಸಕರವಾದದ್ದು. ಮನರಂಜನೆ ಮನುಷ್ಯನಿಗೆ ಅಗತ್ಯವಾದ ವಸ್ತುವಾಗಿರುವದರಿಂದಲೂ ಕಾಬೂಲದಲ್ಲಿ ಅನೇಕ ದೇಶಗಳ ಜನರು ಇರುವದರಿಂದಲೂ (ಅವರಲ್ಲಿ ಜರ್ಮನರೇ ಹೆಚ್ಚು. ಜರ್ಮನರೆಂದರೆ ಅಫಗಾನ ಜನರಿಗೆ ಹೆಚ್ಚು ಇಷ್ಟ) ಬಗೆಬಗೆಯ ಸಮಾರಂಭ ಕೂಟಗಳು ಜರುಗುವವು. ಕಾಬೂಲದಲ್ಲಿ ಇದುವಷ್ಟು ಸುಂದರ ಅಮೇರಿಕನ್ ಮತ್ತು ಯುರೋಪಿಯನ್ ತರುಣಿಯರು ಅದರಷ್ಟೇ ದೊಡ್ಡದಾದ ಏಶಿಯದ ಮತ್ತಾವ ನಗರದಲ್ಲೂ ಇಲ್ಲ.

ಇಂದು ಅಫಗಾನಿಸ್ತಾನದ, ಭಾರತದ, ಇರಾಣದ, ಹಾಲಂಡಿನ ಮತ್ತು ರಶಿಯದ ವಿಮಾನ ಸಾರಿಗೆಗಳ ಮೂಲಕ ನೀವು ಕಾಬೂಲಕ್ಕೆ ಹಾರಬಹುದು. ಆದರೆ ಹಾಗೆ ಹೋಗುವದಕ್ಕಿಂತ ಹೋಗದಿರುವದೇ ಒಳಿತು. ಪಾಕಿಸ್ತಾನದಿಂದ ಪೇಶಾವರಕ್ಕೆ ರೈಲಿನಲ್ಲಿ, ಮುಂದೆ ಖೈಬರ ಖಣಿವೆಯ ಖಟಾರ್ ಬಸ್ ಮಾರ್ಗದಲ್ಲಿ ಬಸ್ಸಿನಿಂದ ಮತ್ತು ಮುಂದೆ ಮನುಷ್ಯ ಕಾಣಬಹುದಾದ ತೀರ ಕೆಟ್ಟ ರಸ್ತೆಯಲ್ಲಿ ಕಾರು ಇತ್ಯಾದಿಗಳಿಂದ ಪ್ರಯಾಣ ಮಾಡಿದರೇನೆ ನಿಜವಾದ ಸವಿ ಸಿಕ್ಕೀತು

ಮೋಟರನ್ನು ಹೆಚ್ಚೆಂದರೆ ತಾಸಿಗೆ ೮ ಮೈಲು ವೇಗದಿಂದ ಬಿಡಬಹುದು. ಮೊದಮೊದಲಂತೂ ಈ ಪ್ರವಾಸ ತರಿಸುವ ಅತಿ ಬೇಸರದಿಂದ ಎಷ್ಟೋ ಜನ ತಾವು ತಿರುಗಿ ಹೋಗುತ್ತೇವೆ ಎನ್ನುತ್ತಾರೆ. ಆದರೆ ಮುಂದೆ ಬರ್ಫಾಚ್ಛಾದಿತವಾದ ಪರ್ವತ ಶಿಖರಗಳು ಕಂಗೊಳಿಸತೊಡಗುವವು. ರಸ್ತೆ ತುಸು ಉತ್ತಮಗೊಳ್ಳುತ್ತ ಹೋಗುವದು. ಮತ್ತೂ ತುಸು ಮುಂದಕ್ಕೆ ಹಿಂದುಕುಶ ಮಹಾ ಪರ್ವತ ಕಂಗೊಳಿಸತೊಡಗುವದು. ಅಲ್ಲಿಂದಾಚೆ ನೆನಸಿದರೆ ವೈನವಿರೇಳುವಂಥ ತಿರುವುಮುರುವಿನ ರಸ್ತೆಯಲ್ಲಿ ಸಾಗಿದರೆ ಬರುವದು ಕಾಬೂಲ.

ಆದರೆ ಅಫಗಾನಿಸ್ತಾನವನ್ನು ಕಂಡು ಬಂಧ ಬಳಿಕ ಬಹಳ ದಿನಗಳವರೆಗೆ ನೆನಪಿನಲ್ಲಿರುವದು ಕಾಬೂಲವಲ್ಲ, ಪರ್ವತ ಪ್ರದೇಶಗಳಲ್ಲ, ಮರುಭೂಮಿಯಲ್ಲ, ಭಗ್ನಾವಶೇಷಗಳಲ್ಲ, ಆದರೆ ಕಚಿಯರದು.

ಅಫಗಾನಿಸ್ತಾನದ ಯಾವದೊಂದು ಧೂಳುಮಯ ರಸ್ತೆಯಲ್ಲಿ ಒಂದು ಮುರುವಿನಲ್ಲಿ ತಿರುಗಿದಾಗ ಆಕಸ್ಮಾತ್ತಾಗಿ ಈ ಕಚಿ ಜನ ಕಣ್ಣಿಗೆ ಬೀಳಬಹುದು. ಅವರ ಸಾಮಾನು ಸರಂಜಾಮುಗಳನ್ನು ಹೊತ್ತುಕೊಂಡ ಒಂಟೆಗಳ ದೊಡ್ಡ ತಂಡವೊಂದು ಮುಂದೆ ಸಾಗಿರುತ್ತದೆ. ಅವುಗಳ ಹಿಂದೆ ಈ ಜನ ಎಲ್ಲಿಂದಲೋ ಬಹುಶಃ ಅಪಹರಿಸಿಕೊಂಡು ಬಂದ ಕುದುರೆಗಳು, ಕತ್ತೆಗಳು, ಆಡುಗಳು, ನೂರಾರು ನಾಯಿಗಳು ಇರುವವು. ಒಂದೊಂದು ಸಮಯ ಸಾಧು ಮಾಡಿದ ತೋಳವೊಂದು ಇವರ ಹಿಂಡಿನಲ್ಲಿರುವದೂ ಉಂಟು ಈ ಪಶುಗಳ ಗುಂಪಿನಲ್ಲಿ ಇರುವ ಇನ್ನೊಂದು ವಿಶೇಷವೇನೆಂದರೆ, ದಪ್ಪ ಬಾಲದ ಕುರಿಗಳು. ಈ ಕುರಿಗಳನ್ನು ಕಂಡಾಗ ನಗುಬಾರದವರು ತೀರ ವಿರಳ. ಏಕೆಂದರೆ ಈ ಕುರಿಗಳಿಗೆ ತಲೆದಿಂಬಿನಷ್ಟು ದಪ್ಪವಾದ ಬಾಲಗಳಿರುವವು. ೪೦ ಪೌಂಡು ತೂಕದ ಬಾಲವಿರುವ ಕುರಿಗಳೂ ಇರುತ್ತವೆ.

ಈ ಆಡು, ಕುರಿ, ಒಂಟೆ, ಕತ್ತೆ, ಕುದುರೆ, ನಾಯಿಗಳ ಹಿಂಡಿನ ನಡುವೆ ಕಚಿ ಜನರು ನಡೆಯುತ್ತಿರುತ್ತಾರೆ. ಗಂಡಸರು ಎತ್ತರವಾಗಿ, ಭೀಕರರಾಗಿ ಕಾಣಿಸುತ್ತಾರೆ. ಪ್ರತಿಯೊಬ್ಬನ ಬಳಿ ಒಂದು ರಾಯಫಲ್ ಇದ್ದೇ ಇರುತ್ತದೆ. ಹೆಂಗಸರು ಬಲು ಸುಂದರರೂ ಉಗ್ರನಯನೆಯರೂ ಆಗಿದ್ದು ಬುರಖಾ ಎಂದರೆ 'ಶ್ಶಿ' ಎನ್ನುತ್ತಾರೆ. ಶಾಲೆಗಳೆಂದರೇನು, ಮಸೀದೆಗಳೆಂದರೇನು ಎಂದು ಗೊತ್ತಿಲ್ಲದ ನೂರಾರು ಗಟ್ಟಿಮುಟ್ಟಾದ ಹುಡುಗರು ಅತ್ತಿತ್ತ ಹೋಗುವ ಆಡನ್ನೊ, ಕುದುರೆಯನ್ನೊ ಇನ್ನಾವದನ್ನೊ ಮತ್ತೆ ಹಿಂಡಿಗೆ ಸೇರಿಸಲು ಸಹಾಯ ಮಾಡುತ್ತಿರುತ್ತಾರೆ.

ಚಳಿಗಾಲವನ್ನು ಪಾಕಿಸ್ತಾನದಲ್ಲೋ ಭಾರತದಲ್ಲೋ ಕಳೆಯುವ ಕಚಿ ಜನರು ಬೇಸಿಗೆ ಬಂದೊಡನೆ ಅಫಗಾನಿಸ್ತಾನವನ್ನು ಪ್ರವೇಶಿಸುತ್ತಾರೆ.

ಅವರನ್ನು ಯಾರೂ ತಡೆಯಲಾರರು. ಅವರಿಗೆ ಯಾವದೇ ಕರ ತೆರಿಗೆ ಕೊಟ್ಟು ಗೊತ್ತಿಲ್ಲ. ಗಡಿಗಳ ನಿರ್ಬಂಧವಿಲ್ಲ. ಕಾಯದೆ-ಕಾನೂನುಗಳಿಗೆ ಅವರು ಕೊಡುವ ಮನ್ನಣೆಯೂ ಅಷ್ಟಕಷ್ಟೆ. ಅವರಿಗೆ ಊರು ಬೇಡ, ಮನೆ ಬೇಡ. ಬಯಲಿನ ಆಕಾಶವೇ ಅವರಿಗೆ ಆಚ್ಛಾದನ. ಸ್ವತಂತ್ರ, ಸ್ವಚ್ಛಂದ ವೃತ್ತಿಯ ಜನರಿವರು. ಯಾರಾದರೂ ಸಾಹಸಿಗಳು ಕಚಿ ಹುಡುಗಿಯನ್ನು ಅಪಹರಿಸಿ ಒಯ್ದು ಮಾರಿದರೆ ಕಂದಹಾರದಲ್ಲಿ ಅವಳಿಗೆ ಸುಮಾರು ೨-೩ ಸಾವಿರ ರೂಪಾಯಿ ಬೆಲೆ ಬರುತ್ತದೆ.

ಅಫಗಾನಿಸ್ತಾನದ ಬಗ್ಗೆ ಎರಡೇ ಮಾತುಗಳನ್ನು ಹೇಳು ಎಂದು ಅದನ್ನು ಕಂಡು ಬಂದವನನ್ನು ಕೇಳಿದರೆ ಅವನು ಬಾಮೇನ ಕಂದಕ ಮತ್ತು ಕಚಿ ಕಾರವಾನ್ ಎನ್ನಬೇಕಾಗುತ್ತದೆ.

ಅಫಗಾನಿಸ್ತಾನದಲ್ಲಿ ರಶಿಯದ ಪ್ರಭಾವ ಈಗೀಗ ಹೆಚ್ಚಾಗಿ ಕಾಣತೊಡಗಿದೆ. ಅದು ರಶಿಯದ ಕೈ ಸೇರುತ್ತದೆ ಎಂದು ಅಭಿಪ್ರಾಯ ಪಡುವವರಿದ್ದರೂ ವಸ್ತುಸ್ಥಿತಿ ಹಾಗೇನಿಲ್ಲ.

ಅಫಗಾನಿಸ್ತಾನವನ್ನು ಪ್ರವೇಶಿಸುವದು ಸುಲಭವಲ್ಲ; ಅಲ್ಲಿ ಪ್ರವಾಸ ಮಾಡುವದು ಯಾವಾಗಲೂ ಸುಖಕಾರಿಯೂ ಅಲ್ಲ. ಆದರೆ ಬರುವ ಅನುಭವ ಮಾತ್ರ ಮರೆಯಲಾರದ್ದು. ಅಫಗಾನ ಜನರ ಆದರಾತಿಥ್ಯ ಅಪ್ರತಿಮವಾದುದು.

ಯಾರಿವರು ?

೧. "ಇದು ಹೊಸ ಫ್ಯಾಶನ್ನಿನ ನಿಷ್ಪ್ರಯೋಜಕ ಯಂತ್ರ" ಎಂದು ಟೆಲಿಫೋನನ್ನು ತನ್ನ ಮನೆಯಲ್ಲಿ ಹಾಕಿಸಿಕೊಳ್ಳಲು ಈತ ನಿರಾಕರಿಸಿದ.

೨. ಗಣಿತವೆಂದರೆ ತಿರಸ್ಕಾರದಿಂದ ಮೂಗು ಮುರಿಯುತ್ತಿದ್ದ ಈತ ಮುಂದೆ ದೇಶದ ಅರ್ಥಮಂತ್ರಿಯಾಗಬೇಕಾಯಿತು.

೩. ಈತ ಒಂದು ಹೆಗ್ಗಣ ಮತ್ತು ಮೂರು ಹಂದಿಗಳ ಬಲದಿಂದ ಜಗತ್ತಿನಲ್ಲಿ ಅತಿ ವಿಖ್ಯಾತ ವ್ಯಕ್ತಿಯಾದ.

೪. ಶುದ್ಧವಾಗಿ ಇಂಗ್ಲೀಷನ್ನು ಕೂಡ ಆಡಲು ಬಾರದ ಈತನ ಒಂದು ಸೇಕಂದಿನ ಮಾತಿಗೆ ಒಂದು ಪೌಂಡು ಬೆಲೆಯಿತ್ತು.

೫. ಈತ ಬೂಟುಗಳ ದಾರವನ್ನು ಬಹುಪ್ರೀತಿಯಿಂದ ತಿಂದ.

೬. ಈತ ಕೈಉಗುರುಗಳನ್ನು ಹಲ್ಲಿನಿಂದ ಕಡಿಯುತ್ತಿದ್ದ; ತಂಬಾಕು ತಿನ್ನುತ್ತಿದ್ದ; ಮದ್ಯಪಾನ ಮಾಡುತ್ತ ಕವಿತೆಗಳನ್ನು ಬರೆಯುತ್ತಿದ್ದ.

ಉತ್ತರ

(೧) ಮಾರ್ಕ ಟ್ವೇನ (೨) ಚರ್ಚಿಲ (೩) ವಾಲ್ಟ ಡಿಸ್ನೆ (೪) ಚಾರ್ಲಿ ಚಾಪ್ಲಿನ್ (೫) ಸ್ಟೀವನಸನ್ (೬) ಲಾರ್ಡ ಬಾಯರನ್.

ಸಾರಸ ಪಕ್ಷಿ

ಕೊಕ್ಕರೆ ಜಾತಿಗೆ ಸೇರಿದ ಭಾರತದ ಸಾರಸ ಪಕ್ಷಿ ಈ ದೇಶದ ಹಕ್ಕಿಗಳಲ್ಲಿಯೇ ದೊಡ್ಡದಾದುದು. ಜಗತ್ತಿನ ಅತಿ ಹೆಚ್ಚು ದೊಡ್ಡದಾದ ಹಕ್ಕಿಗಳಲ್ಲಿ ಸಾರಸ ಒಂದು. ಸುಮಾರು ಐದಡಿ ಎತ್ತರ ನಿಲುವಿನ ಸಾರಸಪಕ್ಷಿ ಚಿತ್ರಕಾರ ವಿಧಿಯ ಬಣ್ಣಗಾರಿಕೆಗೊಂದು ಉದಾಹರಣೆ. ತಲೆ ಕೆಂಪಗೆ, ಕೊಕ್ಕು ಹಸಿರು, ಕತ್ತಿನ ಕೆಲ ಭಾಗ ಕೆಂಪು, ಬೂದು ಬಣ್ಣದ ಮೈ, ಸ್ವಲ್ಪ ಬಿಳಿದಾದ ಬಾಲ, ಕೆಂಪು ಕಾಲು ಹೀಗೆ ಅದರ ದೇಹ ವರ್ಣ ರಂಜಿತವಾಗಿದೆ. ಉದ್ದ ಕಾಲು, ಉದ್ದ ಕೊಕ್ಕು, ಉದ್ದ ಕತ್ತು, ನಡುವೆ ಬಾಳೆ ಮೂತಿಯಾಕಾರದ ರೆಕ್ಕೆ ಮುಚ್ಚಿದ ಮೈ ಇವುಗಳಿಂದ ಸಾರಸ ಚೆಲುವೆನಿಸಿದೆ.

ಹೆಣ್ಣು ಸಾರಸ—ಸಾರಸೀ—ಕೂಡ ಚೆಲುವೆಯೇ. ಆದರೆ ಗಂಡಿಗಿಂತ ಅವಳ ಎತ್ತರ ಸ್ವಲ್ಪ ಕಡಮೆ. ಸಾರಸವೆಂದೊಡನೆಯೇ ಶಿವಪಾರ್ವತಿಯರ ನೆನಪಾಗಬೇಕು. ಆ ದೇವತೆಗಳಂತೆಯೇ ಇವೂ ಗಂಡು ಹೆಣ್ಣು ಒಂದನ್ನು ಬಿಟ್ಟು ಒಂದು ಅಗಲಿರುವಂತಿಲ್ಲ. ಈ ಎಣೆವಕ್ಕಿಗಳು ಎಲ್ಲೇ ಇರಲಿ, ಅವು ಆ ಸ್ಥಳಕ್ಕೆ ಶೋಭೆಯನ್ನು ತರುತ್ತವೆ. ಬೆಟ್ಟದ ತಪ್ಪಲುಗಳಲ್ಲಿ ಕುಣಿವ ನವಿಲುಗಳಿಗಿಂತ ಸಾರಸಗಳ ಆಕರ್ಷಣೆ ಕಡಮೆಯೇನೂ ಅಲ್ಲ.

ಮೆಲ್ಲಗೆ ರೆಕ್ಕೆ ಬಡಿಯುತ್ತ ಕಾಲು ಚಾಚಿ ಸಾರಸ ನೇರವಾಗಿ ಹಾರಬಲ್ಲದು. ಅದು ನೆಲದಿಂದ ಬಾನಿಗೆ ತೂರಿಕೊಳ್ಳುವುದು ಮಾತ್ರ ಅಷ್ಟು ಸೊಗಸಾಗಿ ತೋರದು. ಆದರೆ ಒಮ್ಮೆ ಬಾನಿಗೆ ನೆಗೆಯಿತೆಂದರೆ ಅದು ಸುಮಾರು ನೆಲದಿಂದ ೬೦-೭೦ ಅಡಿ ಎತ್ತರದ ವರೆಗೆ ಸರಾಗವಾಗಿ ಹಾರಾಡುವುದು. ಸಾಮಾನ್ಯವಾಗಿ ತನ್ನ ಶತ್ರುಗಳಿಂದ ತಪ್ಪಿಸಿಕೊಳ್ಳಲು ಸಾರಸ ಹಾರಾಡುವುದಿಲ್ಲ. ನೆಲದಲ್ಲಿಯೇ ವೇಗವಾಗಿ ಓಡಿ ಅದು ಆತ್ಮರಕ್ಷಣೆ ಮಾಡಿಕೊಳ್ಳುವುದು.

ಉತ್ತರ ಮತ್ತು ಮಧ್ಯಭಾರತದ ಸಾಮಾನ್ಯ



ವಿವಿಧ ಮೂಲಗಳಿಂದ

ಎಲ್ಲ ಕಡೆಗಳಲ್ಲೂ ಸಾರಸವನ್ನು ಕಾಣಬಹುದು. ಸಾಕಷ್ಟು ನೀರಿರುವ ಹಸುರು ಬಯಲು ಪ್ರದೇಶ ಅದಕ್ಕೆ ಹಿತಕರವಾದುದು. ಉತ್ತರ ಪ್ರದೇಶ ದಲ್ಲಿ ಅದರ ಸಂಖ್ಯೆ ಹೆಚ್ಚು.

ಭಾರತದ ಪುರಾತನ ಸಾಹಿತ್ಯದಲ್ಲಿ ಸಾರಸ ಕವಿಸಮಯದೊಂದಿಗೆ ಲೀನವಾಗಿಬಿಟ್ಟಿದೆ. ಕೊಕ್ಕರೆ (ಬಕ) ಯಿಂದ ಹಂಸದ ತನಕ ಹಲವು ವಿಧದ ಹಕ್ಕಿಗಳು ಅದರ ಜಾತಿಯವೇ. ಪಾತಿ ವ್ರತ್ಯಕ್ಕೆ ಇವು ಹೆಸರಾದವು. ಚಕ್ರವಾಕ ದಂಪತಿ ಗಳು ಹಗಲೆಲ್ಲ ಜೊತೆಗಿದ್ದು ರಾತ್ರಿಯಾದಾಗ ಅಗಲಿ ವಿರಹ ತಾಳಲಾರದೆ ಚೀರಿಡುತ್ತ ಹೊರ ಳಾಡುವುವಂತೆ. ವಸಂತ ಕಾಲದ ದಟ್ಟವಾದ ಒಂದು ಉದ್ಯಾನ. ಹಗಲೂ ಸೂರ್ಯನ ಬೆಳಕು ಅಲ್ಲಿ ತೂರಿ ಬರಲಾರದ್ದರಿಂದ ಕತ್ತಲಾಗಿತ್ತು. ಸುರಹೊನ್ನೆಯ ಹಳೆಯ ಹೂವುಗಳುದುರಿ ಕಾಡು ನೆಲ ಧೂಳಿಧೂಸರಿತವಾಗಿತ್ತು. ಅಲ್ಲಿ ವಾಸಿಸುವ ಚಕ್ರವಾಕಗಳದು ಮಾತ್ರ ಕರುಣೆಯ ಕಾವ್ಯ. ಕತ್ತಲಾದ್ದರಿಂದ ಒಂದಡಿ ಆಚೆಯೇ ತನ್ನ ಪ್ರಿಯ ಕರನಿದ್ದರೂ ತಿಳಿಯಲಾರದು ಆ ಹೆಣ್ಣು. ಅದರ ವಿರಹಾಕುಲ ಚೀತ್ಕಾರ ವಿರಹಿ ಪುಂಡ ರೀಕನನ್ನು ಮತ್ತಷ್ಟು ಗಾಸಿಗೊಳಿಸಿತೆಂದು ಬಾಣ ಭಟ್ಟ ತನ್ನ ಕಾದಂಬರಿಯಲ್ಲಿ ವರ್ಣಿಸಿದ್ದಾನೆ. ಉಳಿದ ಕವಿಸಮಯದ ಕಥೆಗಳೇನೇ ಇರಲಿ, ಪ್ರಣಯದ ವಿಷಯದಲ್ಲಿ ಮಾತ್ರ ಇಂದಿನ ಸಾರಸ ಕವಿಜಗತ್ತಿನ ಚಕ್ರವಾಕವೇ ಎನ್ನುವುದ ರಲ್ಲಿ ಸಂಶಯವಿಲ್ಲ.

ಸಾರಸದ ಬೆದೆಯ ಸಮಯವನ್ನು ಅದರ ದೇಹ ವೇ ಸೂಚಿಸುವುದು. ಕೊರಳ ಕೆಳಗಿನ ಭಾಗವು ಕೆಂಪಾಗಿ ಬಿಡುವುದು. ರೆಕ್ಕೆಯ ಮೇಲಿನ ಗರಿ ಗಳು ಬಳಿಚಿಕೊಳ್ಳುವುವು. ಈ ಸ್ವರೂಪವಿಕಾರ ಗಳಲ್ಲದೆ ಅವು ಈ ಸಮಯದಲ್ಲಿ ನೃತ್ಯದಲ್ಲಿ ಆಸಕ್ತಿ ವಹಿಸುವವು. ಸಾರಸದ ಪ್ರಣಯ ನೃತ್ಯ ಒಂದು ಲೋಕೋತ್ತರ ದೃಶ್ಯ. ಆಗ ಅವು ಕೊಂಬು ಕಹಳೆಯ ಸದ್ದಿನಂತೆ ಕೂಗುವುವು. ಈ ಕೂಗು ಒಂದು ಮೈಲು ದೂರಕ್ಕೂ ಸ್ಪಷ್ಟವಾಗಿ ಮೊಳಗುತ್ತದೆ. ಗಂಡು ಒಂದು ಪ್ರಣಯದರ್ಶನ ಪ್ರಿಯಾರಾಧನೆಗಳಲ್ಲಿ ನಿರತವಾಗುತ್ತದೆ. ಆಗ ಅದು ತನ್ನ ತಲೆ ನೆಲಕ್ಕೆ ತಾಗುವಂತೆ ಬಾಗಿಸಿ ರೆಕ್ಕೆಗಳನ್ನು ಮಡಿಸಿ ಬಿಡಿಸಿ ಪ್ರಿಯೆಯನ್ನು ಕರೆ ಯುತ್ತ ಓಡುತ್ತದೆ. ಪ್ರಣಯಿನಿ ಸಾರಸಿ ಇದೇ ಭಾಷೆಯಲ್ಲಿ ಪತಿಗೆ ಉತ್ತರವೀಯುವಳು. ಅನಂ ತರ ಎರಡೂ ಒಂದಕ್ಕೊಂದು ಪ್ರದಕ್ಷಿಣೆ ಹಾಕಿ ಆನಂದಾನುರಾಗಗಳನ್ನು ತೋರಿಸುತ್ತವೆ.

ಸಾರಸಗಳ ಕೌಟುಂಬಿಕ ಜೀವನವೂ ಗಂಡು ಹೆಣ್ಣುಗಳ ಪರಸ್ಪರ ಸಹಕಾರದಿಂದಲೇ ನಡೆಯುತ್ತದೆ. ಸುತ್ತಲೂ ನೀರು ಇರುವ ಸ್ಥಳ ದಲ್ಲಿ ಕಡ್ಡಿ ಹುಲ್ಲುಗಳ ನಡುವೆಯಾಗಲಿ ಒಣ ಪೊದರುಗಳ ನಡುವೆಯಾಗಲಿ ಅವು ತಮ್ಮ ಗೂಡು ಕಟ್ಟುವವು. ತನ್ನ ದೊಡ್ಡ ಮನೆಗೆ ಬೇಕಾಗುವ ಎಲ್ಲ ಸಾಮಾನುಗಳನ್ನು ಸಂಗ್ರಹಿ ಸುವ ಕೆಲಸ ಗಂಡಿನದು. ಅದು ಅಕ್ಕಪಕ್ಕದ ಲ್ಲಿದ್ದ ಕಡ್ಡಿ ಕೋಲುಗಳನ್ನು ತಂದು ಕೊಡು ತ್ತದೆ. ಹೆಣ್ಣು ಮುರಿದ ಹುಲ್ಲು-ಕಡ್ಡಿಗಳನ್ನು ಒಟ್ಟುಗೂಡಿಸಿ ಸರಿಮಾಡಿ ಗೂಡಿಗೆ ನೆಲಗಟ್ಟು ಹಾಕಬೇಕು. ಸಾರಸಗಳು ಮನೆಗೆ ನೆಲಗಟ್ಟು ಕಟ್ಟುವ ಮುಹೂರ್ತವಿರುವುದು ಹೆಚ್ಚಾಗಿ ಮಳೆ ಗಾಲದಲ್ಲಿಯೆ! ಸಾಮಾನ್ಯವಾಗಿ ಅನಂತರ ಹೆಣ್ಣು ಒಮ್ಮೆಗೆ ಎರಡು ಮೂರು ಕಂದು-ಬಿಳಿ ತತ್ತಿಗಳನ್ನು ಇಡುವುದು. ಮೂರು ದಿನದ ಸಾರಸದ ಮರಿ ಸುಮಾರು ಕೋಳಿಯ ಷ್ಟಿರುತ್ತದೆ. ಮೃದುವಾಗಿರುವ ಅದರ ಮೇಲು ಮೈ ಸ್ವಲ್ಪ ಕೆಂಪಾಗಿದ್ದು ಕೆಳಮೈ ಬೆಣ್ಣೆಯಂತೆ ತೋರಿದರೆ ಕಣ್ಣುಗಳು ಕಪ್ಪಾಗಿ ಹೊಳೆಯು ತ್ತವೆ. ನಸುವೆ ಕೆಂಪಾದ ಗುಲಾಬಿಯಂಥ ಕೊಕ್ಕು.

ಸಾರಸ ಮನುಷ್ಯರಂತೆ ಮಾಂಸ, ಸಸ್ಯ ಎರಡೂ ತರದ ಆಹಾರಗಳನ್ನು ಸೇವಿಸುತ್ತದೆ. ಕಪ್ಪೆ, ಇರುವೆ, ಧಾನ್ಯ, ಎಳೆಚಿಗುರುಗಳು ಮತ್ತಿ

ತರ ತರಕಾರಿಗಳು ಅದಕ್ಕೆ ಪ್ರಿಯವಾದ ಆಹಾರ.

ಸಾರಸ ಪಕ್ಷಿಯು ದಾಂಪತ್ಯಜೀವನದಲ್ಲಿ ಪ್ರೇಮಕ್ಕೇ ಅದ್ವಿತೀಯ ಸ್ಥಾನ. ಪತಿ ಪತ್ನಿಯರಲ್ಲಿ ಅಷ್ಟು ಅನ್ಯೋನ್ಯ, ಅಷ್ಟು ಅನುರಾಗ ಅವುಗಳಲ್ಲಿ. ಪಕ್ಷಿರಾಜ್ಯದ ಲೈಲಾ ಮಜನು ಎಂದು ಸಾರಸವನ್ನು ಕರೆಯುವಷ್ಟು ಅವುಗಳ ಪ್ರಣಯ ಜೀವನ ಪವಿತ್ರವೆನ್ನಬೇಕು. ಆಹಾರ ಸೇವಿಸುತ್ತಿರಲಿ, ಹಾರುತ್ತಿರಲಿ ಏನೇ ಮಾಡುತ್ತಿರಲಿ, ಮರಿಗಳೊಡನೆಯೇ ಇರಲಿ ಗಂಡು ಹೆಣ್ಣನ್ನು ಬಿಟ್ಟು ಹೆಣ್ಣು ಗಂಡನ್ನು ಬಿಟ್ಟು ಅವು ಅಗಲಲಾರವು. ತತ್ತಿಗೆ ಕಾವು ಕೊಡುವಲ್ಲಿ ಹೆಣ್ಣಿನಂತೆ ಗಂಡು ಕೂಡ ಭಾಗವಹಿಸುತ್ತದೆ.

ಸಾರಸದ್ದು ಏಕಪತ್ನೀವ್ರತ. ಒಮ್ಮೆ ಜೊತೆಯಾದ ಹಕ್ಕಿಗಳು ಮತ್ತೆ ಅಗಲುವುದಿಲ್ಲ ಈ ದಂಪತಿಗಳಲ್ಲಿ ಒಂದು ಸತ್ತರಾಯಿತು, ಇನ್ನೊಂದು ವಿರಹ ತಾಪದಿಂದ ಕಮರಿ ಹೋಗುತ್ತದೆ. ಸಾರಸ ದಂಪತಿಯಲ್ಲಿ ಒಂದನ್ನು ಬೇಟೆಯಾಡಿದರೆ ಇನ್ನೊಂದು ಓಡುವುದಿಲ್ಲ. ಬದಲಾಗಿ ಹೆದರದೆ ಏನೇ ಬರಲಿ ಎಂದು ಬೇಟೆಗಾರನನ್ನು ಎದುರಿಸ ಬರುತ್ತದೆ. ಅಥವಾ ತನ್ನ ಸಂಗಾತಿ ಬಿದ್ದ ಸ್ಥಳವನ್ನು ನೆನೆದು ಮತ್ತೆ ಮತ್ತೆ ಅಲ್ಲಿ ಬಂದು ಕಾಮ ದಹನವಾದ ಮೇಲೆ ರತಿ ಶೋಕಿಸಿದಂತೆ ಕ್ರಂದನ ಮಾಡುತ್ತದೆ. ದೇಹವೆರಡು ಜೀವ ಒಂದು ಎಂಬಂತೆ ಅವುಗಳಲ್ಲಿ ಪ್ರೇಮ ಬೆಳೆದಿರುತ್ತದೆ. ಇವುಗಳ ಪವಿತ್ರ ಪ್ರೇಮವನ್ನು ತಿಳಿದ ಹಳ್ಳಿಯ ಜನರು ಕೂಡ ಅವನ್ನು ಪೀಡಿಸಿ ಕಾಡಿಸಿ ಕೊಂದು ಪರಸ್ಪರ ಅಗಲಿಸಹೋಗುವುದಿಲ್ಲ.

ಸಾವಿರದಲ್ಲೊಂದು

ಮದ್ಯಪಾನ ಪ್ರತಿಬಂಧ ಪ್ರಚಾರಕರು ಆವೇಶಯುಕ್ತವಾಗಿ ಭಾಷಣ ಮಾಡುತ್ತ "ಜಗತ್ತಿನಲ್ಲಿರುವ ಸೆರೆ, ಸಿಂದಿ ಎಲ್ಲವೂ ಸಮುದ್ರದ ಬುಡದಲ್ಲಿದ್ದರೆ ಚೆನ್ನಾಗಿತ್ತು" ಎಂದರು.

"ಭೇಷ್ ! ಸಾವಿರದಲ್ಲೊಂದು ಮಾತು ಹೇಳಿದಿರಿ" ಎಂದು ಸಭಿಕರಲ್ಲೊಬ್ಬ ಕೂಗಿದ.

"ಹಾ ! ಈ ಸಭಿಕರಲ್ಲಿ ಮದ್ಯಪಾನ ಎಂದರೆ ತಿರಸ್ಕರಿಸುವ ಗೃಹಸ್ಥರೊಬ್ಬರಿರುವದನ್ನು ಕಂಡು ನನಗೆ ಅತ್ಯಾನಂದವಾಗುತ್ತದೆ" ಎಂದು ಭಾಷಣಕಾರರು ಹೇಳಿದರು.

"ಹಾಗಲ್ಲ ಸ್ವಾಮಿ. ನಾನು ಸಮುದ್ರದಲ್ಲಿ ಮುಳುಗಿ ಮುತ್ತನ್ನಾರಿಸಿ ತರುವ ಉದ್ಯೋಗದಲ್ಲಿದ್ದೇನೆ" ಎಂದ ಆ ಗೃಹಸ್ಥ.

ಸೀರೆ ಮತ್ತು ಪಿಶಾಚಿ

"ಏನಿದರ ಅರ್ಥ ? ಈ ತಿಂಗಳು ಹೊಸ ಸೀರೆಕೊಳ್ಳುವದಿಲ್ಲೆಂದು ನೀನು ವಚನವಿತ್ತಿರಲಿಲ್ಲವೇ ?" ಗಂಡ ಸಿಟ್ಟಿನಿಂದ ಕೇಳಿದ.

"ವಚನವಿತ್ತಿದ್ದೆ. ಆದರೆ ಮೋಹಪಿಶಾಚಿ ನನ್ನನ್ನು ಸೋಲಿಸಿತು" ಎಂದಳು ಹೆಂಡತಿ.

"ಓಹೋ ! ಆ ಪಿಶಾಚಿ ಬಂದಾಗ ನೀನು ಬೆನ್ನು ತಿರುವಬೇಕಿತ್ತು."

"ತಿರುವಿದೆ. ನೋಡಿದಿಯಾ, ಸೀರೆಯ ಸೆರಗು ಎಷ್ಟು ಚೆನ್ನಾಗಿದೆ ಎಂದು ಅದು ಹೇಳಿತು. ನಾನೇನು ಮಾಡಲಿ ?"

ಮಕ್ಕಳ ಶರೀರರಚನೆ ಅವರ ಮನೋವೃತ್ತಿಪರೀಕ್ಷೆಗೆ ದಾರಿಗಂಬವಾಗಬಲ್ಲದು

ಮಕ್ಕಳ ನಡೆನುಡಿಗಳು ವಯಸ್ಸಿಗನುಗುಣವಾಗಿ ಬದಲಾಗುತ್ತವೆ, ಇಷ್ಟೆ ಅಲ್ಲ, ಒಂದೊಂದು ಮಗುವಿನ ಸ್ವಭಾವ, ನಡೆನುಡಿಗಳೂ ಅದರದೇ ವೈಶಿಷ್ಟ್ಯಗಳಿಂದ ಕೂಡಿವೆ ಎಂಬುದೂ ಹೊಸ ಮಾತಲ್ಲ. ಆದರೆ ಮಕ್ಕಳ ಶಾರೀರಿಕ ರಚನೆಗೂ ಅವುಗಳ ಸ್ವಭಾವಕ್ಕೂ ಬಹಳ ಮಟ್ಟಿಗೆ ಸಂಬಂಧವಿದೆಯೆಂಬುದು ಮಾತ್ರ ಅನೇಕ ತಂದೆ-ತಾಯಿಗಳಿಗೆ ಗೊತ್ತಿಲ್ಲ.

"ಈ ಹುಡುಗ ಯಾಕೋ ಎಲ್ಲ ಹುಡುಗರಿಂದ ದೂರ ದೂರ ಇರುತ್ತಾನೆ. ಒಂಟಿಯಾಗಿ ಆಡುವುದರಲ್ಲೇ ಅವನಿಗೆ ಸಂತೋಷ."

"ಈತ ಕೂಸಾಗಿದ್ದಾಗಿನಿಂದಲೂ ಬಹಳ ಚಪಲ, ವಾಚಾಳಿ."

—ಇಂಥ ಮಾತುಗಳನ್ನು ನಾವು ತಂದೆ-ತಾಯಿಗಳ ಬಾಯಿಂದ ಕೇಳುತ್ತೇವೆ. ಆದರೆ ಮಕ್ಕಳ ಈ ಏಕಾಂತ ಅಥವಾ ಸಖ್ಯಪ್ರಿಯ ಪ್ರವೃತ್ತಿ ಅವರ ದೇಹಾಕೃತಿಯನ್ನು ಅವಲಂಬಿಸುತ್ತದೆಂದು ವಿಜ್ಞಾನಿಗಳು ಮನಗಂಡಿದ್ದಾರೆ. ಮೈಕಟ್ಟಿನ ದೃಷ್ಟಿಯಿಂದ ಅವರು ಮಕ್ಕಳನ್ನು ಮೂರು ವರ್ಗಗಳಾಗಿ ವಿಂಗಡಿಸಿದ್ದಾರೆ.



ಸ್ಥೂಲ ಪ್ರಕೃತಿಯ ಮಕ್ಕಳು ಮೊದಲನೆಯ ವರ್ಗದವರು. ದೊಡ್ಡ ಹೊಟ್ಟೆ, ಪ್ರಬಲ ಜೀರ್ಣಶಕ್ತಿಯುಳ್ಳ ಕೋಮಲ ಪ್ರಕೃತಿಯವರಿವರು. ಇವರಿಗೆ ಆರಾಮ ಬೇಕು. ತಿನ್ನುಣ್ಣುವದರಲ್ಲಿ, ಮಲಗುವದರಲ್ಲಿ ಬಲು ಪ್ರೀತಿ. ಇವರು ಸಮಾಜದಲ್ಲಿ ಹೊಂದಿಕೊಂಡು ಹೋಗುವವರು, ಜನರನ್ನು ಪ್ರೀತಿಸುವವರು. ಜನರು ತಮ್ಮನ್ನು ಮುದ್ದು ಮಾಡಬೇಕೆಂದೂ ಇಂಥ ಮಕ್ಕಳು ಬಯಸುವರು.

ಎರಡನೆಯ ವರ್ಗದ (ಇವರನ್ನು ಧೀರ ಹೃದಯದವರು ಎಂದು ಕರೆಯಬಹುದು) ಮಕ್ಕಳ ಹೃದಯ ವಿಕಸಿತವಾಗಿರುವದು. ಅವರ ದೇಹದ ರಕ್ತಸಂಚಾರ ಆರೋಗ್ಯ ಪೂರ್ಣವಾಗಿದ್ದು, ಅವರು ಸಶಕ್ತ ಮೈಕಟ್ಟಿನವರಾಗಿರುವರು. ದೇಹದ ಚರ್ಮ ತುಸು ಬಿರುಸು. ಇವರು ಶಾರೀರಿಕ ಶ್ರಮವನ್ನು ಮಾಡಬಲ್ಲರು. ಓಡುವದು, ಕುಣಿಯುವದು, ಕಸರತ್ತು ಮಾಡುವದು, ಸುತ್ತಲಿನವರ ಮೇಲೆ ತಮ್ಮ ಪ್ರಭಾವ ಬೀರುವದೇ ಮುಂತಾದ ಪ್ರವೃತ್ತಿಗಳು ಇವರಲ್ಲಿ ವಿಶೇಷವಾಗಿರುತ್ತವೆ.

ಕ್ಷೀಣಕಾಯ ಮಕ್ಕಳು ಮೂರನೆಯ ವರ್ಗ

ಡಾ. ಅರ್ನಾಲ್ಡ ಗೆಸೆಲ್ಲರ ಒಂದು ಲೇಖದಿಂದ

ದವರು. ಕಡ್ಡಿಯಂಥ ಕೈ ಕಾಲುಗಳು, ಮತ್ತು ಅಶಕ್ತ ದೇಹವುಳ್ಳ ಇವರು ಬಹು ಬೇಗ ಸಿಟ್ಟಿಗೇಳುತ್ತಾರೆ; ಬಹು ಸೂಕ್ಷ್ಮಪ್ರಕೃತಿಯುವರಾಗಿರುತ್ತಾರೆ; ಚಿಕ್ಕಪುಟ್ಟ ಸಮಾರಂಭಗಳಲ್ಲಿ ಕೂಡ ಬೆರೆಯಲು ಇವರು ಹಿಂದೆಗೆಯುತ್ತಾರೆ.

ಜೀವನದ ವಿವಿಧ ಪರಿಸ್ಥಿತಿಗಳಲ್ಲಿ ಈ ಮೂರು ಬಗೆಯ ಮಕ್ಕಳ ವ್ಯವಹಾರ ಹೇಗಿರುತ್ತದೆ ಎಂದು ನೋಡುವದು ಕುತೂಹಲಕಾರಿಯಾಗಿದೆ.

ಪ್ರತಿಯೊಂದು ಮಗುವಿನ ನಿದ್ದೆಯ ಸಮಯ, ಮಲಗುವ ರೀತಿ ಭಿನ್ನವಾಗಿರುತ್ತದೆ. ಸ್ಥೂಲ ಮಗು ನಿದ್ರೆಯನ್ನು ಪ್ರೀತಿಸುತ್ತದೆ, ಧೀರ ಹೃದಯದ ಮಕ್ಕಳು ಬಹು ಬೇಗ ಎದ್ದು ಏನಾದರೂ ಚಟುವಟಿಕೆಗಳಲ್ಲಿ ತೊಡಗಬಯಸುತ್ತವೆ. ಕ್ಷೀಣ ಕಾಯದ ಮಕ್ಕಳಿಗೆ ಮಲಗುವದರಲ್ಲಿ ಎಳ್ಳಷ್ಟೂ ಅಭಿರುಚಿಯಿರುವದಿಲ್ಲ. ಆದರೆ ಒಮ್ಮೆ ಮಲಗಿದರೆ ಏಳುವಾಗಲೂ ಅಷ್ಟೇ ಬೇಸರದಿಂದ ಏಳುತ್ತವೆ.

ಸ್ಥೂಲಕಾಯದ ಮಗುವಿನ ನಿದ್ದೆ ಸ್ವಾಭಾವಿಕವೂ ಶಾಂತವೂ ಆಗಿರುತ್ತದೆ. ನಿದ್ದೆ ಮಾಡಿದಾಗ ಅದು ಪೂರ್ಣ ವಿಶ್ರಾಂತಿ ಪಡೆಯುತ್ತದೆ. ಧೀರ ಹೃದಯದ ಮಗು ಇಚ್ಛಾಶಕ್ತಿಯಿಂದ ತಟಕ್ಕನೆ ಎದ್ದು ಬಿಡುತ್ತದೆ; ಬೇಗನೆ ಮಲಗುತ್ತದೆ. ಮಲಗಿದೊಡನೆ ಅದಕ್ಕೆ ನಿದ್ದೆಯೂ ಬಂದುಬಿಡುತ್ತದೆ. ದಿನದಲ್ಲಿ ಆರು ತಾಸುಗಳಿಗಿಂತ ಕಡಿಮೆ ಸಮಯ ನಿದ್ದೆ ಮಾಡಿದರೂ ಅದರ ಉತ್ಸಾಹ ಕುಂದುವದಿಲ್ಲ. ನಿದ್ದೆಯಲ್ಲಿ ಬಡಬಡಿಸುತ್ತದೆ ಮತ್ತು ಹಾಸಿಗೆಯ ಅರಿವೆಗಳೊಡನೆ ಕುಸ್ತಿ ಹಿಡಿಯುತ್ತಿರುವಂತೆ ಹೊರಳಾಡುತ್ತದೆ

ಕ್ಷೀಣಕಾಯ ಮಗುವಿಗೆ ನಿದ್ದೆಯೇ ಬರುವದಿಲ್ಲವೆನ್ನುವಂತಿರುತ್ತದೆ. ಬಹಳಷ್ಟು ದಣಿವಾದ ನಂತರವೇ ಅದು ಮಲಗುತ್ತದೆ. ಬೇಗನೆ ಎಚ್ಚರಗೊಂಡರೂ ಹಾಸಿಗೆಯಿಂದೇಳಲು ಬಡಪೆಟ್ಟಿಗೆ ಒಪ್ಪುವದಿಲ್ಲ.

ಕ್ಷೀಣಕಾಯ ಮಗುವಿಗೆ ತಿನ್ನುವದರಲ್ಲಿ ಕೂಡ ಆಸಕ್ತಿ ಕಡಿಮೆ. ಮಗು ಮೈ ತುಂಬಿಕೊಳ್ಳಲಿ ಎಂದು ತಾಯಿ ಒಳ್ಳೆಯ ಪದಾರ್ಥಗಳನ್ನು ತಿನ್ನಿಸಲು ಮಾಡುವ ಯತ್ನಗಳು ಫಲಿಸದೆ ಮಗು ಕ್ಷೀಣವಾಗಿಯೇ ಉಳಿಯುತ್ತದೆ. ಆದರೆ ಒಂದು ಮಾತು ಮಾತ್ರ ನಿಜ, ಉಳಿದೆರಡು ಬಗೆಯ ಮಕ್ಕಳೊಂದಿಗೆ ಹೋಲಿಸಿದಾಗ ಅಶಕ್ತವೆಂದು ಕಂಡರೂ ಈ ಮಗು ಬಹಳ ಮಟ್ಟಿಗೆ ಆರೋಗ್ಯಶಾಲಿಯಾಗಿರುತ್ತದೆ.

ಕ್ಷೀಣಕಾಯ ಮಗುವಿನ ತಾಯಿ ಒಂದು ಮಾತನ್ನು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಕ್ಷೀಣಕಾಯ ಮಗುವಿಗೆ ಒಮ್ಮೆಲೆ ಹೊಟ್ಟೆತುಂಬ ತಿನ್ನಿಸುವ ಬದಲು ಮೂರುನಾಲ್ಕು ಸಾರೆ ಅಷ್ಟಷ್ಟಾಗಿ ತಿನಿಸುವದರಿಂದ ಅದು ಹೆಚ್ಚು ಉತ್ತಮ ಪ್ರಕೃತಿಯನ್ನು ಪಡೆಯುವದು. ಇಂಥ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಕೊಡಬೇಕು.

ಸ್ಥೂಲ ಕಾಯದ ಮಕ್ಕಳ ಊಟ–ನಿದ್ದೆಗಳ ಬಗ್ಗೆ ಚಿಂತಿಸಬೇಕಾಗುವದಿಲ್ಲ. ತಿನ್ನುವದು ಪ್ರಿಯವಾಗಿರುವಂತೆ ತಿಂಡಿ–ತಿನಿಸುಗಳ ವಿಚಾರ ಮಾತಾಡುವದೂ ಈ ಮಕ್ಕಳಿಗೆ ಪ್ರಿಯವಾಗಿರುತ್ತದೆ ತಿಂದದ್ದನ್ನೆಲ್ಲ ಜೀರ್ಣ ಮಾಡಿಕೊಳ್ಳುವ ಶಕ್ತಿ ಇವುಗಳಿಗಿರುತ್ತವೆ. ಸ್ಥೂಲ ವ್ಯಕ್ತಿಗಳೆಂದೂ ಅನ್ನಸತ್ಯಾಗ್ರಹ ಮಾಡಲಾರರು ಎಂದು ಶೆಲ್ಡನ್ ಹೇಳಿದ್ದಾನೆ. ಗಾಂಧೀಜಿ ಕ್ಷೀಣಕಾಯರಾಗಿದ್ದುದರಿಂದಲೇ ಉಪವಾಸಗಳನ್ನು ಯಶಸ್ವಿಯಾಗಿ ಮಾಡುತ್ತಿದ್ದರು ಎಂದು ಆತ ಅಭಿಪ್ರಾಯಪಟ್ಟಿದ್ದಾನೆ.

ಕೆಲವು ಮಕ್ಕಳು ಅತ್ಯಂತ ಬಡಕಲಾಗಿ ಮತ್ತು ಯಾವ ಬಗೆಯ ಮೋಹವೂ ಇಲ್ಲದವರಾಗಿ ಕಾಣಿಸುತ್ತಾರೆ. ಮನೆಯವರೆಲ್ಲ ಒಮ್ಮೆಲೆ ಸತ್ತರೂ ಇಂಥ ಮಕ್ಕಳು ಕಣ್ಣೀರು ಸುರಿಸಲಾರರು ಎಂದು ಕೂಡ ಇಂಥವರ ಬಗ್ಗೆ ಹೇಳಲಾಗುತ್ತದೆ. ಇಂಥ ಮಕ್ಕಳು ಕೃತಜ್ಞತೆಯಂಥ ಭಾವನೆಗಳನ್ನು ಕೂಡ ಪ್ರಕಟಿಸಲಾರರು. ನಿಜವಾಗಿಯೆಂದರೆ ಇವರು ಅಂತರ್ಮುಖಿಯಾಗಿರುತ್ತಾರೆ. ಇವರ ಪ್ರೀತಿ, ಜಿಜ್ಞಾಸೆ, ಸಂವೇದನೆ ಎಲ್ಲವೂ ಆಂತರಿಕವಾಗಿರುತ್ತವೆ.

ಆದರೆ ಇದಕ್ಕೆ ವಿರುದ್ಧವಾಗಿ ಸ್ಥೂಲ ಮಕ್ಕಳು

ಜನರೊಂದಿಗೆ ಬೆರೆಯುವವರೂ ಬಲು ವ್ಯಾಮೋಹಿಗಳೂ ಆಗಿರುತ್ತಾರೆ.

ಸಿಡುಕಿನ ಸ್ವಭಾವದವರಾಗಿರುವ ಕ್ಷೀಣಕಾಯದ ಮಕ್ಕಳು ತಂದೆ-ತಾಯಿಗಳಿಗೆ ತಲೆನೋವಾಗಬಲ್ಲರು. ಆದರೆ ಇಂಥ ಮಕ್ಕಳಿಗೆ ಸಹಾನುಭೂತಿಯ ಅಗತ್ಯವಿರುವದೇ ವಿನಾ ಉಪೇಕ್ಷೆಯಲ್ಲ.

ಧೀರ ಹೃದಯದ ಮಕ್ಕಳು ಸಾಮಾನ್ಯವಾಗಿ ಈರ್ಷೆಯ ಪ್ರಕೃತಿಯವರು. ಏನಾದರೊಂದು ಕೆಲಸದಲ್ಲಿ ತೊಡಗಿರಲು ಬಯಸುತ್ತಾರೆ. ಮಾತಾಡುವಾಗ ಕೂಡ ಗಟ್ಟಿಯಾಗಿ, ಆವೇಶದಿಂದ ಮಾತಾಡುವರು ಒಂದು ಕುರ್ಚಿಯನ್ನು ತೆಗೆದುಕೊಂಡು ಬಾ ಎಂದರೆ ಎತ್ತಿ ತರುವದು ಸಾಧ್ಯವಾದರೂ ಅದನ್ನು ಎಳೆಯುತ್ತಲೇ ತಂದಾರು. ಇಂಥವರೊಡನೆ ಸಾವಧಾನದಿಂದ ವರ್ತಿಸುವದು ಹಿತಕರ.

ಬುದ್ಧಿವಂತಿಕೆಯ ಆಟ

ಹುಬ್ಬಳ್ಳಿಯಿಂದ ಧಾರವಾಡಕ್ಕೆ ಗಾಡಿ ನಡೆದಿತ್ತು. ದ್ವಿತೀಯ ವರ್ಗದ ಡಬ್ಬಿಯಲ್ಲಿ ಪ್ರೊಫೆಸರರೊಬ್ಬರೂ ಧನಿಕ ಗುಜರಾಥಿ ವ್ಯಾಪಾರಿಯೊಬ್ಬರೂ ಕುಳಿತಿದ್ದರು. ಹಾಗೇ ಕುಳಿತಿರಲು ಬೇಸತ್ತು ಗುಜರಾಥಿ ಹೇಳಿದ: "ಪ್ರೊಫೆಸರ ಸಾಬ, ವೇಳೆ ಕಳೆಯುವುದು ಕಠಿನವಾಗಿದೆ. ಏನಾದರೂ ಆಟವಾಡುವಾ."

"ನನಗೆ ಯಾವ ಆಟವೂ ಬಾರದು" ಎಂದರು ಪ್ರೊಫೆಸರರು.

"ಬುದ್ಧಿವಂತಿಕೆಯ ಆಟವಾಡುವಾ. ನಾನೊಂದು ಪ್ರಶ್ನೆ ಕೇಳುತ್ತೇನೆ. ನೀವು ಉತ್ತರ ಕೊಡಿರಿ. ನೀವು ಕೇಳಿದ್ದಕ್ಕೆ ನಾನು ಉತ್ತರ ಕೊಡುವೆ. ಉತ್ತರ ಕೊಡಲಾಗದಿದ್ದರೆ ಪ್ರತಿಯಾಗಿ ಐದು ರೂಪಾಯಿ ಕೊಡಬೇಕು" ಎಂದ ಗುಜರಾಥಿ. "ಐದು ರೂಪಾಯಿ?" ಎಂದರು ಪ್ರೊಫೆಸರರು.

"ನೀವು ಪ್ರೊಫೆಸರರು, ತುಂಬಾ ಬುದ್ಧಿವಂತರು; ನಾನು ಸೋಲುವುದು ಖಂಡಿತ. ಅದ್ದರಿಂದ ನಾನು ಸೋತರೆ ಎರಡು ರೂಪಾಯಿ ಕೊಡುವೆ. ನೀವು ಸೋತರೆ ಐದು ರೂಪಾಯಿ ಕೊಡಬೇಕು" ಎಂದ.

ಪ್ರೊಫೆಸರರು ಹೊಗಳಿಕೆಯಿಂದ ಹಿಗ್ಗಿ ಒಪ್ಪಿಕೊಂಡರು.

ಗುಜರಾಥಿ ಆರಂಭಿಸಿದ: "ಒಂದು ಕಾಲಿನ ಮೇಲೆ ಮಲಗುತ್ತದೆ, ಎರಡು ಕಾಲಿನಿಂದ ಹಾರುತ್ತದೆ, ಮೂರು ಕಾಲಿನಿಂದ ನಡೆಯುತ್ತದೆ. ಇಂಥ ಪ್ರಾಣಿಯ ಹೆಸರೇನು?"

ಪ್ರೊಫೆಸರರು ತಬ್ಬಿಬ್ಬಾದರು. ತಮ್ಮ ವಿದ್ಯೆಯನ್ನೆಲ್ಲ ತಿರುವಿ ಹಾಕಿದರೂ ಅವರಿಗೆ ಗೊತ್ತಾಗಲಿಲ್ಲ. ಸೋತೆನೆಂದೊಪ್ಪಿಕೊಂಡು ಐದು ರೂಪಾಯಿ ಕೊಟ್ಟು ಗುಜರಾಥಿಯಿಂದಲೇ ಉತ್ತರ ಅಪೇಕ್ಷಿಸಿದರು.

ಗುಜರಾಥಿ ಎರಡು ರೂಪಾಯಿ ಅವರ ಕೈಯಲ್ಲಿಡುತ್ತ, "ನನಗೂ ಗೊತ್ತಿಲ್ಲ" ಎಂದ.

— ಸಾಧನಾ

ಉಷೆಯ ಆಶೆ

ವಿ. ಕೆ. ದೇಶಪಾಂಡೆ

ಸುಮಾರು ಒಂದು ತಿಂಗಳಿಂದ ಖಾಲಿಯಾಗಿದ್ದ ಆ ಮನೆಯಲ್ಲಿ ಯಾರೋ ಇರಲು ಬಂದುದನ್ನು ನೋಡಿ ನನಗೆ ಕುತೂಹಲ ಉದ್ಭವಿಸಿತು. ಅವರು ಗಂಡಹೆಂಡತಿಯರಂತೆ, ಆಫೀಸಿಗೆ ಹೋಗುವಾಗ ಟಾಟಾ ಮಾಡುವದು, ಮಧ್ಯಾಹ್ನದಲ್ಲಿ ಮನೆಗೆ ಬರುವದು, ಗಂಡ ಬರುವವೇಳೆಗೆ ಹೆಂಡತಿ ಸಿಂಗರಿಸಿಕೊಂಡು ಬಂದು ನಿಲ್ಲುವದನ್ನು ನೋಡಿ ನನಗೆ ಅವರು ನವವಿವಾಹಿತರೆಂದು ತಿಳಿಯಲು ಕಠಿಣವಾಗಲಿಲ್ಲ. ಅವರ ಮನೆಯಲ್ಲಿನ ಫರ್ನಿಚರಗಳು, ರೇಡಿಯೋ ನೋಡಿ ಅವರ ಆರ್ಥಿಕ ಸ್ಥಿತಿಯು ಚೆನ್ನಾಗಿಯೇ ಇತ್ತೆಂದು ತಿಳಿಯಿತು. ಅವನ ಹೆಂಡತಿಯು ರೂಪರಾಣಿಯಲ್ಲದಿದ್ದರೂ ಚೆನ್ನಾಗಿಯೇ ಇದ್ದಳು. ಅವರ ಮನೆಯಲ್ಲಿನ ಬೆಳ್ಳಿಯ ಪದಕಗಳನ್ನೂ ಶೀಲ್ಡುಗಳನ್ನೂ ನೋಡಿ ಆಕೆಯ ಪತಿಯು ಕಾಲೇಜಿನಲ್ಲಿದ್ದಾಗ ಒಳ್ಳೆಯ ಆಟಗಾರನಾಗಿದ್ದನೆಂದು ಗೊತ್ತಾಯಿತು.

ಕಳೆದ ಕೆಲವು ದಿನಗಳಿಂದ ಅವಳಿಗೆ ಹೇಗೆ ಹೇಗೆಯೋ ಅನಿಸತೊಡಗಿದ್ದಿತಂತೆ ಅನ್ನದ ಮೇಲಿನ ಆಶೆಯೇ ನಾಶವಾಗಿದ್ದಿತು. ಏನನ್ನಾದರೂ ತಿನ್ನಬೇಕೆಂದು ಅವಳಿಗೆ ಆಶೆಯಾಗುತ್ತಿತ್ತು. ಹೆಂಡತಿಯ ಆಶೆ ಪೂರೈಸಲು ಗಂಡನು ಕೈಕಟ್ಟಿಕೊಂಡೇ ನಿಂತಿರುತ್ತಿದ್ದನು.

ಆ ದಿನ ರಾತ್ರಿ ಒಂಬತ್ತುವರೆ ಗಂಟೆಯ ಸಮಯ, ಅವರಿಬ್ಬರೂ ಅದೇ ಸಿನೇಮಾದಿಂದ ಮರಳಿ ಬಂದಿದ್ದರು ಆ ದಿನ ಶನಿವಾರವಾದುದರಿಂದ ಅವಳಿಗೆ ಉಪವಾಸವಿದ್ದಿತು. “ನನಗೆ ಏಕೋ ಸೇಬು ಹಣ್ಣು ತಿನ್ನಬೇಕೆಂದೆನಿಸುತ್ತದೆ” ಎಂದು ಆಕೆ ಅವನಿಗೆಂದಳು. ಅವಳು ಹಾಗೆ ಅನ್ನುವದೇ ತಡ, “ಅದಕ್ಕೇನು ಈಗ ತರುತ್ತೇನೆ” ಎಂದು ಹೇಳಿ ಅವನು ರ್‍ಯಾಲಿ ಸೈಕಲ್ ಹೊರಗೆ ತೆಗೆದ.

“ಬೇಗ ಬನ್ನೀಂದ್ರೆ. ನನಗೊಬ್ಬಳಿಗೇ ಹೆದರಿಕೆ.”

ಅವಳೆಡೆಗೆ ನೋಡಿ ನಗುತ್ತಾ ರಘು ಸೈಕಲ್ಲೇರಿದ

ಫೆರಿ ಮಾರ್ಕೆಟ್ಟಿನಲ್ಲಿ ಸೇಬು ಸಿಕ್ಕುತ್ತದೆಂದು ರಘುಗೆ ಗೊತ್ತಿದ್ದಿತು. ಅವನು ಅಂಗಡಿಯ ಬಳಿ ಬಂದಾಗ ಅಂಗಡಿ ಮುಚ್ಚುವದರಲ್ಲಿದ್ದ ಅಂಗಡಿಕಾರ. “ಸೇಬು ಸಿಕ್ಕುತ್ತದೆಯೆ ?” ಎಂದು ಕೇಳಿದ ರಘು.

“ಸ್ವಾಮಿ. ನನ್ನಲ್ಲಿ ಮೋಸುಂಬೆ ಉಂಟು, ದ್ರಾಕ್ಷೆ ಉಂಟು, ಸೇಬು ಬರಲು ಇನ್ನೂ ಒಂದೂವರೆ ತಿಂಗಳು ಬೇಕು.”

ಅಂಗಡಿಕಾರನ ಮಾತು ಕೇಳದೆ ಸೈಕಲ್ಲು ಹತ್ತಿದ ರಘು. ಮುಂದಿನ ಬೀದಿಯಲ್ಲೊಂದು ಅಂಗಡಿ ತೆರೆದೇ ಇದ್ದಿತು. ಅಲ್ಲಿಯಾದರೂ ಸಿಕ್ಕಬಹುದೆಂದು ಅವನಿಗೆನಿಸಿತು.

“ಸೇಬು ಉಂಟೇನಯ್ಯಾ?” ಎಂದು ಕೇಳಿದ.

“ಇನ್ನೊಂದೆರಡು ತಿಂಗಳು ತಡೀರಿ ಸ್ವಾಮಿ, ನಂತರ ಕಾಶ್ಮೀರ, ಕುಲು, ಕ್ಯಾಲಿಫೋರ್ನಿಯಾ, ಜಪಾನ, ಆಸ್ಟ್ರೇಲಿಯಾಗಳ ಹಣ್ಣು ತಿನ್ನಿ. ಈಗೇನು ಮೊಸಂಬಿ, ದ್ರಾಕ್ಷೆ ಕೊಡಲೇ ?”

ಅವನ ಮಾತು ಕೇಳಲು ರಘು ಅಲ್ಲಿರಲೇ

ಓ. ಹೆನ್ರಿಯ ಒಂದು ಕಥೆಯ ರೂಪಾಂತರ

ಇಲ್ಲ. ಅವನ ಸೈಕಲ್ ವಾಯುವೇಗದಿಂದ ಹೊರಟಿತು. ಮದೀನಾ ಶಾಪ್ ತೆರೆದಿತ್ತು. ಹಿಂದೆಯೊಂದು ಸಲ ತಾನು ಅಲ್ಲಿ ಸೇಬು ಖರೀದಿ ಮಾಡಿದ್ದ ಸಂಗತಿ ಅವನಿಗೆ ನೆನಪಾಯಿತು. ಅಂಗಡಿಯ ಮಾಲಕ ಮನೆಗೆ ಹೊರಡುವ ತಯಾರಿಯಲ್ಲಿದ್ದ.

"ಖಾನಸಾಹೇಬ, ಸಫರಚಂದ ಮಿಲೇಂಗೆ ಕ್ಯಾ?" ಎಂದು ತನ್ನ ಹರಕುಮುರುಕ ಹಿಂದುಸ್ತಾನಿಯಲ್ಲಿ ಕೇಳಿದ.

"ಬಾಬೂಸಾಹೇಬ! ಸಫರಚಂದ ತೋ ಅಬ್ಭೀ ನಹಿ. ಲೇಕಿನ ಮೋಸಂಬಿ ಔರ ಅಂಗೂರ ಚಾಹಿಯೇ?"

ಆದರೆ ರಘು ಅಲ್ಲಿ ನಿಲ್ಲದೇ ಸೈಕಲ್ ಏರಿದ. ಹಿಂದಿನಿಂದ ಬರುವ ಮೋಟಾರಿನ ದೀಪಗಳ ಬೆಳಕಿನಲ್ಲಿ ಎದುರಿನಲ್ಲಿ ಅಂಗಡಿಯೊಂದು ಕಂಡಿತು. "ಸೆಂಟ್ರಲ್ ಹಿಂದುಸ್ತಾನ ಆರೇಂಜ್ ಆ್ಯಂಡ ಕೋಲ್ಡ ಸ್ಟೋಅರೇಜ" ಎಂಬ ಬೋರ್ಡು ನೋಡಿ ರಘುವಿಗೆ ಅಲ್ಲಿ ಸಫರಚಂದ ಸಿಕ್ಕಬಹುದೆನಿಸಿತು. ಇದು ತನಗೆ ಮೊದಲೇ ಯಾಕೆ ಹೊಳೆಯಲಿಲ್ಲವೆಂದು ಅವನಿಗೆ ಕೆಡಕೆನಿಸಿತು. ಅಲ್ಲಿ ವಿಚಾರಿಸಿದಾಗ ದೀಪಕ ರೆಸ್ಟಾರೆಂಟಿನಲ್ಲಿ ಸಿಕ್ಕಬಹುದೆಂದು ಹೇಳಿದರು.

ರಘುವಿಗೆ ಆನಂದ ಹಿಡಿಸದಾಯಿತು. ದೀಪಕ ರೆಸ್ಟಾರೆಂಟಿನ ಕಡೆಗೆ ಅವನ ಬೈಸಿಕಲ್ಲು ಓಡತೊಡಗಿತು. ಹೋಟೆಲಿನ ಸೈಕಲ್ ಸ್ಟ್ಯಾಂಡಿನಲ್ಲಿ ಸೈಕಲ್ಲು ನಿಲ್ಲಿಸಿ ಒಳಹೊಕ್ಕ ರಘು. ರಘುವಿನ ಅದೃಷ್ಟ ಚೆನ್ನಾಗಿದ್ದಿತು. ಅವನು ಕೇಳಿದೊಡನೆಯೇ ಹಣ್ಣುಗಳು ಸಿಕ್ಕವು. ಮೂರು ಹಣ್ಣುಗಳಿಗೆ ಎರಡು ರೂಪಾಯಿ. ರಘು ಹಣ ಕೊಟ್ಟು ಹಣ್ಣು ತೆಗೆದುಕೊಂಡು ಓಡತೊಡಗಿದ. ಸೈಕಲ್ಲು ಅಲ್ಲಿಯೇ ಉಳಿದದ್ದು ಅವನ ಲಕ್ಷ್ಯಕ್ಕೇ ಬರಲಿಲ್ಲ. ಎಷ್ಟೋ ಪ್ರಯತ್ನ ಮಾಡಿದ ಮೇಲೆ ಹಣ್ಣು ಸಿಕ್ಕವೆಂಬ ಮಾತು ಕಡಿಮೆಯದೇ?

ಓಡುತ್ತ ಓಡುತ್ತ ಮನೆಗೆ ಬಂದು ಬಾಗಿಲು ತಟ್ಟಿದ. ಬಾಗಿಲು ಮುಂದೆ ಮಾಡಿತ್ತು. ದೀಪವು ಉರಿಯುತ್ತಿತ್ತು. ಅವನ ಪ್ರಿಯೆ ಕುಳಿತಲ್ಲಿಯೇ ನಿದ್ರೆ ಹೋಗಿದ್ದಳು.

"ಉಷಾ!" ಎಂದು ರಘು ಸಾವಕಾಶವಾಗಿ ಕೂಗಿ ಅವಳನ್ನು ಎಬ್ಬಿಸಿದ ಅಶೋಕವನದಲ್ಲಿದ್ದ ಸೀತೆಯ ಮುಂದೆ ನಿಂತ ಹನುಮಂತನಂತೆ ಎದೆ ಉಬ್ಬಿಸಿ ಹಣ್ಣು ಮುಂದೆ ಮಾಡಿದ ರಘು. ಬೆವರು ಧಾರಾಕಾರವಾಗಿ ಸುರಿಯುತ್ತಿತ್ತು.

"ಇಶ್! ಸೇಬು ತಿನ್ನುತ್ತಾರೇನು? ನನಗೆ ಮೋಸಂಬಿ, ದ್ರಾಕ್ಷೆ ತಿನ್ನಬೇಕೆನಿಸಿದೆ."

ಉಷಾ ನೋಡುತ್ತಿದ್ದಂತೆಯೇ ರಘು ನೆಲಕ್ಕೆ ಕುಸಿದ.

ಧರ್ಮಸೂತ್ರ

ಧರ್ಮರಾಜ ಮತ್ತು ಭೀಮ ಚರ್ಚೆಯಲ್ಲಿ ಮಗ್ನರಾಗಿದ್ದರು. ಅಷ್ಟರಲ್ಲಿ ಒಬ್ಬಾತ ಅವರಲ್ಲಿಗೆ ನ್ಯಾಯ ತೀರ್ಮಾನಕ್ಕಾಗಿ ಬಂದ. ಅವನನ್ನು ಕುರಿತು ಭೀಮ "ತುಸು ತಡೆ. ನಾವೀಗ ಚರ್ಚೆ ಮಾಡುತ್ತಿದ್ದೇವೆ'' ಎಂದ.

ಧರ್ಮರಾಜ ಭೀಮನ ಕೈಹಿಡಿದು ಹೇಳಿದ: "ಭೀಮ, ಇದೇನನ್ನು ಹೇಳುತ್ತಿರುವೆ? ನ್ಯಾಯದಾನದ ಕಾರ್ಯವನ್ನು ತಡೆಹಿಡಿಯುವದೇ? ಅದನ್ನು ಕೂಡಲೆ ಕೊಡಬೇಕಾಗುವದು. ಚರ್ಚೆಯನ್ನು ಬೇಕಾದರೆ ಹಿಂದಿನಿಂದ ಮಾಡಬಹುದು.''

"ಧರ್ಮಸ್ಯ ತ್ವರಿತಾ ಗತಿಃ''— ಶೀಘ್ರವಾಗಿ ಆಗುವದೇ ಧರ್ಮ. ಇಂದಿನ ಧರ್ಮ ಇಂದೇ ಆಗಬೇಕು. ನಾಳೆಯಾಗುವದು ಇಂದಿನ ಧರ್ಮವಾಗಲಾರದು. ಇಂದಿನ ಶ್ವಾಸವನ್ನು ನಾಳೆ ತೆಗೆದುಕೊಳ್ಳುವೆವೇ? ಶ್ವಾಸೋಚ್ಛ್ವಾಸದಲ್ಲಿ ಉದ್ಧರಿಯ ಮಾತೆಲ್ಲಿ ಬಂತು?

— ವಿನೋಬಾ

ಅಪರಾಧವಿಜ್ಞಾನಕ್ಕೆ ದೇವರಿತ್ತ ಕಾಣಿಕೆ !

ಈ ಎಡಗೈ ಹೆಬ್ಬೆಟ್ಟಿನ ಗುರುತು!

ಶ್ರೀನಿವಾಸ ಹಾವನೂರ

ದಯವಿಟ್ಟು ನಿಮ್ಮ ಅಂಗೈಯನ್ನು ತೆರೆದು ಸ್ವಲ್ಪ ನೋಡಿಕೊಳ್ಳುವಿರಾ? ಅದೆಷ್ಟೊಂದು ರೇಖೆಗಳು, ಗೀರುಗಳಿಂದ ತುಂಬಿಹೋಗಿದೆಯಲ್ಲವೆ? ಅಂಗೈಯಲ್ಲಿಯ ರೇಖೆಗಳಿಂದ ನಮ್ಮ ಭವಿಷ್ಯವನ್ನು, ಹಸ್ತಸಾಮುದ್ರಿಕ ಬಲ್ಲವರು ಬಹು ಚೆನ್ನಾಗಿ ಹೇಳಬಲ್ಲರು. ನಮ್ಮ ಪೂರ್ವಜರು ಆ ರೀತಿಯಾಗಿ ಅಂಗೈಯ ಗೆರೆಗಳ ಉಪಯೋಗವನ್ನು ಮಾಡಿಕೊಂಡಿದ್ದಾರೆ.

ಹಾಗೆಯೆ ಬೆರಳಿನ ತುದಿಗಳನ್ನೂ ತುಸು ನೋಡಿಕೊಳ್ಳಿರಿ. ಅಲ್ಲಿಯೂ ಸಣ್ಣ ಗೆರೆಗಳಿವೆ. ಆದರೆ ಚೆನ್ನಾಗಿ ಎದ್ದು ಕಾಣಲಿಕ್ಕಿಲ್ಲ. ಚಿಂತೆಯಿಲ್ಲ ಸ್ವಲ್ಪ ಸುಣ್ಣದ ಗೋಡೆಗೆ ಬೆರಳಿನ ತುದಿಗಳನ್ನು ಸ್ವಲ್ಪ ತಿಕ್ಕಿ ನೋಡಿರಿ ಈಗ ಚೆನ್ನಾಗಿ ಎದ್ದು ಕಾಣಬಲ್ಲವು. ಈ ವಿಶಿಷ್ಟ ಗೆರೆಗಳನ್ನು ದೇವರು ಅವೇಕೆ ಕೊಟ್ಟಿರಬಹುದು? ಮನುಷ್ಯನ ದೇಹದ ಪ್ರತಿಯೊಂದು ಅಂಗಾಂಗದ ಪ್ರಯೋಜನವನ್ನು ಹೇಳಬಹುದು. ಆದರೆ ಸೃಷ್ಟಿನಿಯಾಮಕನು ಈ ಅಸಂಖ್ಯ ಜಿಸುಗು ಗೆರೆಗಳನ್ನು ಕೈಬೆರಳಿನ ತುದಿಗಳಲ್ಲಿ ಅದೇಕೆ ಕೊಟ್ಟಿದ್ದಾನೆ ಎಂಬುದು ಮಾತ್ರ ತಿಳಿದಿಲ್ಲ. ನಮ್ಮ ಪೂರ್ವಜರು ಹಸ್ತಸಾಮುದ್ರಿಕ ಶಾಸ್ತ್ರದಲ್ಲಿ ಇವುಗಳನ್ನು ತಿಳಿಯುವ ಪ್ರಯತ್ನ ಮಾಡಿದರು. ಈ ಗೆರೆಗಳ ಲಕ್ಷಣಗಳ ಮೇಲಿಂದ, ಶಂಖ, ಚಕ್ರ ಎಂಬೆರಡು ಬಗೆಯಾಗಿರುತ್ತವೆಂದು ಹೇಳಿದರು. ಮತ್ತು ಯಾವ ಅಂತಃಪ್ರೇರಣೆಯಿಂದಲೋ,

" ಏಕ ಚಕ್ರೀ ಮಹಾಯೋಗಿ . . . . .
ಚತುಶ್ಚಕ್ರೀ ದರಿದ್ರಃ !! "

— ಇತ್ಯಾದಿ ನಿಶ್ಚಿತಾರ್ಥವನ್ನು ಹೇಳಿದರು. ಇದರ ಮುಂದೆ ಅವರ ದಾರ್ಶನಿಕ ಬುದ್ಧಿ ಓಡಲಿಲ್ಲ.

ವ್ಯಾವಹಾರಿಕ ಜಗತ್ತಿನಲ್ಲಿ ಮಾತ್ರ ಈ ಕೈಬೆರಳಿನ ಗೆರೆಗಳ ಉಪಯೋಗವನ್ನು ಅತ್ಯದ್ಭುತ ರೀತಿಯಲ್ಲಿ ಮಾಡಿಕೊಂಡದ್ದಾಗಿದೆ. ಸಹಿ ಮಾಡಲಿಕ್ಕೆ ಬಾರದವರಿಂದ ಪುರಾವೆಯೆಂಬುದಾಗಿ ನಾವು ಎಡಗೈ ಹೆಬ್ಬೆರಳಿನ ಗುರುತನ್ನು ಕಾಗ-ಡದ ಮೇಲೆ ಪಡೆಯುತ್ತೇವೆ. ಆದರೆ ಸಹಿಗಿಂತಲೂ ಹೆಚ್ಚು ವಿಶ್ವಾಸಾರ್ಹವಾದದ್ದೆಂದರೆ ಈ ಬೆರಳ ಗೆರೆಗಳ ಗುರುತು ಎಂಬುದು ನಮ್ಮ ಗಮನಕ್ಕೆ ಬಂದಿಲ್ಲ. ಒಬ್ಬರು ಸಹಿ ಮಾಡಿದ ಹಾಗೆ ಇನ್ನೊಬ್ಬರು ಅನುಕರಿಸುವ ಚತುರರು ಅಸಂಖ್ಯರಿದ್ದಾರೆ. ಆದರೆ ಒಬ್ಬರ ಕೈಬೆರಳಿನ ಗುರುತುಗಳಂತೆಯೆ ಇನ್ನೊಬ್ಬರದು ಇರುವದಿಲ್ಲ: ಇಡೀ ಜಗತ್ತಿನಲ್ಲಿ ಇದುವರೆಗೆ ತೆಗೆದುಕೊಂಡ ಇಂಥ ಮುದ್ರೆಗಳನ್ನು ಹೋಲಿಸಿ ನೋಡಿದರೂ ಕಂಡುಬಂದಿಲ್ಲ! ಕೋಟ್ಯನುಕೋಟಿ ಜನಸಮುದಾಯದಲ್ಲಿ ಒಬ್ಬ ವ್ಯಕ್ತಿಯನ್ನು ಇನ್ನೊಬ್ಬರಿಂದ ಬೇರ್ಪಡಿಸುವ ಹಾಗೂ ಗುರುತಿಸುವ ಏಕಮೇವ ನಿಶ್ಚಿತ ಸಾಧನವೆಂದರೆ ಇದೇ ಆಗಿದೆ.

ಇಂದಿನ ನಾಗರಿಕ ಯುಗದಲ್ಲಿ ಒಬ್ಬ ವ್ಯಕ್ತಿ

ಇವನೇ ಎಂದು ಖಚಿತವಾಗಿ ಹೇಳಿ ಗುರುತಿಸಬೇಕಾದ ಪ್ರಸಂಗಗಳು ಅನೇಕವಾಗಿರುತ್ತವೆ. ಹಿಂದೆಯೂ ಅಂಥ ಪ್ರಸಂಗ ಬರುತ್ತಿತ್ತು.

ಉದಾಹರಣೆಗಳನ್ನು ತೆಗೆದುಕೊಳ್ಳೋಣ. ೧೦೦ ವರ್ಷಗಳ ಹಿಂದಿನ ಮಾತು. ಒಬ್ಬ ಮನುಷ್ಯನಿಗೆ ೫೫ ವರ್ಷ ನೌಕರಿ ಮಾಡಿದ ಮೇಲೆ ಪೆನ್ಶನ್ ಆಯಿತು. ಆತ ೫೬ನೆಯ ವರ್ಷಕ್ಕೆಯೇ ತೀರಿಕೊಂಡನು. ಅವನ ಸಂಬಂಧಿಕರಿಗೆ ಅನಿಸಿತು–ವ್ಯರ್ಥವಾಗಿ ತಿಂಗಳೂ ಬರುತ್ತಿದ್ದ ಹಣ ಕೈಬಿಟ್ಟಿತಲ್ಲಾ ಎಂದು! ಪರಕೀಯ (?) ಸರಕಾರಕ್ಕೇಕೆ ಹಣವನ್ನು ಬಿಟ್ಟುಕೊಡಬೇಕು ಎಂಬುದಾಗಿ ಯೋಚಿಸಿ ಮತ್ತೊಬ್ಬ ಮುದುಕನನ್ನು ಟ್ರೆಜರಿಗೆ ಕಳಿಸತೊಡಗಿದರು. ಈ ಮುದುಕ ಪಿಂಚಣಿದಾರ ಮುದುಕನಲ್ಲ ಎಂದು ಹೇಳುವುದು ಹೇಗೆ?

ನೂರು ವರ್ಷ ಬೇಡ. ಮೂವತ್ತು ವರ್ಷದ ಹಿಂದಿನಷ್ಟು ದಿನಗಳಿಗೆ ಬರೋಣ. ಸ್ಥಳ: ಅಮೇರಿಕೆಯಲ್ಲಿಯ ಒಂದು ದೊಡ್ಡ ಹೆರಿಗೆಯ ಆಸ್ಪತ್ರೆ. ದಿನಕ್ಕೆ ಏನಿಲ್ಲೆಂದರೂ ನೂರುನೂರಿಪ್ಪತ್ತು ಜನನಗಳಾಗುತ್ತಿದ್ದುವು. ಅದನ್ನು ನೋಡಿಕೊಳ್ಳುವ ದಾದಿಯರಿಗೆ ಸಾಮೂಹಿಕವಾಗಿ ಅವುಗಳ ಉಪಚಾರ ಮಾಡುವಾಗ, ಈ ಒಂದು ಮಗು ಇಂಥ ಹೆಣ್ಣುಮಗಳದೇ ಎಂದು ಖಚಿತವಾಗಿ ಹೇಳುವ ಬಗೆ ಹೇಗೆ? ಯಾರದೊ ಮಗುವನ್ನು ಯಾರಿಗೋ ಬಿಟ್ಟುಕೊಟ್ಟರೆ ಗತಿಯೇನು? ತಾಯಂದಿರೇ ತಕರಾರು ಮಾಡುತ್ತಲೂ, ಈ ಅದಲು ಬದಲನ್ನು ತಪ್ಪಿಸುವುದಕ್ಕಾಗಿ, ಹುಟ್ಟಿದ ಕೂಡಲೇ ಎಲ್ಲ ಶಿಶುಗಳ ಕೈಬೆರಳಿನ ಗುರುತುಗಳನ್ನು ತೆಗೆದಿಟ್ಟುಕೊಳ್ಳುವುದು ಅಗತ್ಯವಾಗಿ ಕಂಡಿತು.

ಇನ್ನು ಪೋಲೀಸು ಖಾತೆಯವರು ಕೈಬೆರಳಿನ ಗುರುತಿನ ಸಹಾಯದಿಂದ, ಕಳ್ಳತನ, ಖೂನಿ ಕೇಸುಗಳ ಪತ್ತೆ ಹಚ್ಚುವರೆಂಬುದು ಎಲ್ಲರಿಗೂ ತಿಳಿದ ಮಾತಾಗಿದೆ. ನಮ್ಮಲ್ಲಿ ಇದು ಅಷ್ಟಾಗಿ ಬೆಳೆದು ಬಂದಿರದಿದ್ದರೂ, ಇತರ ಮುಂದುವರಿದ ದೇಶಗಳಲ್ಲಿ ಇದೇ ಪ್ರಮುಖ ಸಾಧನವಾಗಿದೆ. ಇಷ್ಟೇ, ಪೋಲೀಸಿನವರಿಗಷ್ಟೇ ಅಲ್ಲ, ಇತರ ವ್ಯವಹಾರಗಳಿಗೂ ಕೈಬೆರಳಿನ ಮುದ್ರೆಯು ಅಗತ್ಯವಿದೆಯೆಂಬುದನ್ನು ನಾವು ಗಮನಕ್ಕೆ ತಂದುಕೊಳ್ಳಬೇಕಾಗಿದೆ.

ಔದ್ಯೋಗಿಕ ಕ್ರಾಂತಿಯಾಗಿ, ನಮ್ಮ ನಾಗರಿಕತೆಯು ಮುಂದುವರಿದಂತೆ, ವ್ಯಕ್ತಿ ವ್ಯಕ್ತಿಗಳಲ್ಲಿ ಪ್ರತ್ಯೇಕತೆಯನ್ನು ಸಾಧಿಸುವುದಕ್ಕೂ ಮೋಸಗಾರಿಕೆಯನ್ನು ತಪ್ಪಿಸುವುದಕ್ಕೂ ಏನಾದರೊಂದು ಸಾಧನವನ್ನು ಕಂಡು ಹಿಡಿಯುವದು ಅಗತ್ಯವೆನಿಸತೊಡಗಿತು. ಫ್ರಾನ್ಸಿನ ಬರ್ಟಿಲೋನ್ ಎಂಬ ಶರೀರಶಾಸ್ತ್ರಜ್ಞನು ಮನುಷ್ಯನ ದೇಹದ ಕೆಲವು ಎಲುಬಿನ ಭಾಗಗಳು ಮೊದಲಿನಿಂದ ಕೊನೆವರೆಗೆ ಬದಲಾಗದೇ ಉಳಿಯುತ್ತವೆಂಬುದನ್ನು ಕಂಡುಕೊಂಡವನಾಗಿ, ಅವುಗಳ ಅಳತೆಗಳನ್ನು ತೆಗೆದುಕೊಂಡು, ಈ ಮನುಷ್ಯ ಇಂಥವನೇ, ಬೇರೊಬ್ಬನಲ್ಲ ಎಂದು ಸಿದ್ಧಪಡಿಸುವುದರ ಸಾಧ್ಯತೆಯನ್ನು ತೋರಿಸಿಕೊಟ್ಟನು. ಅವನ ಸಂಶೋಧನೆಯ ಸಾಹಸವನ್ನು ಯಾರೂ ಮೆಚ್ಚಬೇಕು. ಆದರೆ ಅದರ ಕಾರ್ಯಾಚರಣೆಯಲ್ಲಿ ಮಾತ್ರ ನಿಶ್ಚಿತತೆಯ ಗ್ಯಾರಂಟಿ ಇರಲಿಲ್ಲ. ಅಳತೆ ತೆಗೆದುಕೊಳ್ಳುವುದರಲ್ಲಿಯೇ ಹೆಚ್ಚು ಕಡಿಮೆಯಾಗಿ ಬಿಟ್ಟರೆ, ಈ ವಿಧಾನವು ಅಯಶಸ್ವಿಯಾಗುತ್ತಿತ್ತು.

ಪರ್ಕಿಂಜೆ ಎಂಬವನಿಗೆ ಮಾತ್ರ, ಕೈಬೆರಳಿನ ಗೆರೆಗಳು ಈ ಕಾರ್ಯವನ್ನು ಸಾಧಿಸಬಲ್ಲವು ಎಂಬುದರ ಮನವರಿಕೆಯಾಯಿತು. ಅಸಂಖ್ಯ ಜನರ ಕೈಬೆರಳುಗಳ ಗುರುತನ್ನು ತೆಗೆದುಕೊಂಡು, ಅವುಗಳ ಅಭ್ಯಾಸವನ್ನು ಮಾಡಿ, ೧೮೨೩ರಲ್ಲಿ ಅವುಗಳಲ್ಲಿ ಒಂಬತ್ತು ಸಾಮಾನ್ಯ ವರ್ಗಗಳನ್ನು ಕಲ್ಪಿಸಿದನು. ಆಗ ಯಾರೂ ಇದಕ್ಕೆ ಯಾವುದೇ ರೀತಿಯ ಪುರಸ್ಕಾರವನ್ನು ಕೊಡಲಿಲ್ಲ.

ಮುಂದೆ, ಕೈಬೆರಳಿನ ಗುರುತುಗಳ ವ್ಯಾವಹಾರಿಕ ಉಪಯೋಗದ ಕಲ್ಪನೆಯು, ನಮ್ಮ ಭಾರತದಲ್ಲಿಯೇ ಉಗಮವಾಯಿತೆಂಬುದು ಒಂದು ಮಹತ್ವದ ಸಂಗತಿಯಾಗಿದೆ. ಹಾಗೆಂದು ವಿಶೇಷ

ಅಭಿಮಾನಪಟ್ಟುಕೊಳ್ಳಬೇಕಾಗಿಲ್ಲ. ಏಕೆಂದರೆ, ಆಗಿನ ಕಾಲದಲ್ಲಿ ಅಂದರೆ ೭೦-೮೦ ವರ್ಷಗಳ ಹಿಂದಿನ ಕಾಲದ ನಮ್ಮ ಕೋರ್ಟು ಕಚೇರಿಗಳಲ್ಲಿ ನಮ್ಮ ಜನರ ಮೋಸಗಳನ್ನು ತಪ್ಪಿಸಲು ಏನು ಮಾಡಬೇಕೆಂಬುದು ಸಮಸ್ಯೆಯಾಯಿತು. ತಾವು ಬಿಳಿಯರಾಗಿದ್ದು ಜನತೆಯಿಂದ ದೂರ ನಿಂತುಕೊಂಡು ರಾಜ್ಯಭಾರ ನಡೆಸುತ್ತಿರುವಾಗ, ಅವರಿಗೆ ದೇಶೀಯರ ಕುಲಗೋತ್ರ ಪರಿಚಯವಿರುವುದು ಅಶಕ್ಯ ಕೋಟಿಯ ಮಾತಾಗಿದ್ದಿತು. ಯಾರಿಗೆ ಯಾರೋ ಬಂದು ನೊಂದಣಿಯ ಕಚೇರಿಯ ಕಾಗದಪತ್ರಗಳ ಮೇಲೆ ಸಹಿಮಾಡುತ್ತಿದ್ದರು. ಬೇರೊಬ್ಬರು ಆಸ್ತಿಯಲ್ಲಿ ಹಕ್ಕನ್ನು ಕೇಳುತ್ತಿದ್ದರು. ಸಾಲತೆಗೆದುಕೊಂಡವನು ತನ್ನ ಸಹಿಯನ್ನಿತ್ತಿದ್ದರೂ ಈ ಸಹಿ ನನ್ನದಲ್ಲ ಎಂದರೆ ಸಿದ್ಧಮಾಡುವುದು ಕೋರ್ಟುಗಳಿಗೆ ಕಠಿಣ ಹೋಗತೊಡಗಿತು. ಪರೀಕ್ಷೆಗೆ ಕೂಡ್ರುವಾಗ ಒಬ್ಬರ ಹೆಸರಿನಲ್ಲಿ ಇನ್ನೊಬ್ಬರು ಹಾಜರಾಗುವುದು, ಆಗಿನ ಕಾಲದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದ್ದಿತಂತೆ.

ಹಾಗಾಗಿ ವಿಲಿಯಮ್ ಹರ್ಶಲ್ ಎಂಬ ಮ್ಯಾಜಿಸ್ಟ್ರೇಟನು ತನ್ನ ಅಧಿಕಾರದಲ್ಲಿರುವ ಎಲ್ಲ ಕೋರ್ಟು ಕಚೇರಿಗಳ ವ್ಯವಹಾರದಲ್ಲಿ, ಕೈ ಬೆರಳಿನ ಮುದ್ರೆಗಳನ್ನು ತೆಗೆದುಕೊಳ್ಳುವ ಪರಿಪಾಠವನ್ನಿಟ್ಟನು. ಮತ್ತು, ಅಂಥ ಮೋಸಗಳನ್ನು ತಡೆಯುವುದಕ್ಕೆ ಈ ಮಾರ್ಗವನ್ನು ಸಾರ್ವತ್ರಿಕವಾಗಿ ಬಳಸಬೇಕು ಎಂಬುದಾಗಿ ೧೮೫೮ ರಲ್ಲಿ ಪ್ರಾನ್ಯ ಗವರ್ನರ ಜನರಲ್ಲನಿಗೆ ಮನವಿಯನ್ನು ಸಲ್ಲಿಸಿದನು. ಆಗಿನ ಭಾರತ ಸರಕಾರವು ತತ್ಕಾಲಕ್ಕೆ ಸುಮ್ಮನಿದ್ದಿತು. ಗಾಲ್ಟನ್ ಎಂಬಾತನು ಹರ್ಶಲ್ಲನ ಸೂಚನೆಯನ್ನು ಶಾಸ್ತ್ರೀಯ ದೃಷ್ಟಿಯಿಂದ ವಿವೇಚಿಸಿ, ಕೆಲವು ಸಿದ್ಧಾಂತಗಳಿಗೆ ಬಂದು ಮುಟ್ಟಿದನು. ಅವಾವುವೆಂದರೆ—

೧. ಕೈಬೆರಳಿನ ಗೆರೆಗಳು ಜನನಕಾಲದಿಂದ ಜೀವವಿರುವವರೆಗೆ ಎಷ್ಟು ಮಾತ್ರಕ್ಕೂ ಬದಲಾಗದೇ ಹಾಗೆಯೇ ಉಳಿಯುವವು. ಜೀವವು ಹೋದ ಮೇಲೆ, ದೇಹವು ವಿದೀರ್ಣವಾಗಿ ವಿಕಾರಹೊಂದುವವರೆಗೂ ಸಹಿತ ಹಾಗೆಯೇ ಉಳಿಯುವವು.

೨. ಒಬ್ಬರ ಕೈಬೆರಳಿನ ಗೆರೆಗಳ ರಚನೆ—ವಿನ್ಯಾಸಗಳಿರುವಂತೆ ಇನ್ನೊಬ್ಬರದು ಇರುವುದಿಲ್ಲ. ಅಷ್ಟೇ ಏಕೆ, ಒಬ್ಬನೇ ವ್ಯಕ್ತಿಯಲ್ಲಿ ಒಂದು ಬೆರಳಿನ ಗೆರೆಗಳು ಇನ್ನೊಂದು ಬೆರಳಿನವುಗಳನ್ನು ಹೋಲುವದಿಲ್ಲ. ಅವಳಿಮಕ್ಕಳ ಬೆರಳ ಗೆರೆಗಳನ್ನು ಸಹಿತ ಪರಿಶೀಲಿಸಿ ನೋಡಿದಾಗಲೂ ಸಾಮ್ಯದ ಲವಲೇಶವೂ ಕಂಡುಬರಲಿಲ್ಲ.

೩. ಈ ಬೆರಳಿನ ಗೆರೆಗಳಲ್ಲಿ ಸಾಮಾನ್ಯವಾಗಿ ಮೂರು ಪ್ರಕಾರಗಳನ್ನು ಮಾಡಬಹುದು. ಅವುಗಳಲ್ಲಿ ಮತ್ತೆ ಉಪಪ್ರಕಾರಗಳನ್ನು ಮಾಡಿ, ಸಾವಿರಾರು ಬೆರಳುಗಳ ಮುದ್ರೆಗಳಿರುವಲ್ಲಿ ಅವನ್ನು ವರ್ಗೀಕರಿಸಿ, ಪ್ರತ್ಯೇಕಿಸಬಹುದು.

ಹೀಗೆ ಗಾಲ್ಟನ್ನನೇ ಇಂದು ಬಳಕೆಯಲ್ಲಿರುವ ಬೆರಳ ಗುರುತಿನ ಶಾಸ್ತ್ರದ ಜನಕನೆನ್ನಬಹುದ ೧೮೯೭ ರಲ್ಲಿ ಭಾರತ ಸರಕಾರವು ಈ ವಿಧಾನಕ್ಕೆ ತನ್ನ ಮನ್ನಣೆಯನ್ನು ಕೊಟ್ಟಿತು. ಈ ಶಾಸ್ತ್ರವು ನಮ್ಮ ದೇಶದಲ್ಲಿ ಉಗಮಹೊಂದಿದ್ದಂತೆ ಇದಕ್ಕೆ ಮನ್ನಣೆ ಕೊಟ್ಟುದರಲ್ಲಿಯೂ ಭಾರತ ಸರಕಾರವೇ ಮೊದಲಿನದಾಗಿದೆ.

ಗಾಲ್ಟನ್ನನ ಕೆಲಸವನ್ನು ಬಂಗಾಲದ ಪೋಲೀಸ ಅಧಿಕಾರಿಯಾಗಿದ್ದ ಇ. ಆರ್. ಹೆನ್ರಿ ಎಂಬವನು ಮುಂದುವರಿಸಿದನು. ಮತ್ತು ಭಾರತದಿಂದ ಇಂಗ್ಲಂಡಿಗೆ ಮರಳಿ ಹೋದ ಮೇಲೆ, ಅಲ್ಲಿಯೂ ಬಳಕೆಗೆ ತಂದನು. ೧೯೦೧ ರಲ್ಲಿ ಇಂಗ್ಲಂಡಿನ ಸುಪ್ರಸಿದ್ಧ ಪೋಲೀಸು ಪಡೆಯಾದ ಸ್ಕಾಟಲಂಡ್ ಯಾರ್ಡಿನಲ್ಲಿ ಇದು ಆಚರಣೆಗೆ ಬಂದಿತು. ಗಾಲ್ಟನ್ನನು ಭಾರತದಲ್ಲಿ (ಬಂಗಾಲದಲ್ಲಿ) ಕೈಬೆರಳಿನ ಮುದ್ರೆಗಳ ಸಂಗ್ರಹದ ಬ್ಯೂರೋವನ್ನು ತೆರೆಯುವುದರಲ್ಲಿ ಮೊಟ್ಟಮೊದಲಿಗನಾಗಿದ್ದರೆ, ಹೆನ್ರಿಯು ಆ ಕೆಲಸವನ್ನು ಇಂಗ್ಲಂ

ಡಿನಲ್ಲಿ ಮಾಡಿದನು. ಅವನಿಂದಲೇ ಇದು ದೇಶವಿದೇಶಗಳಲ್ಲಿ ಹಬ್ಬಿ ಪ್ರಚಾರದಲ್ಲಿ ಬಂದಿತು. ಮತ್ತು ಸದ್ಯದ ಪ್ರಚಲಿತವಿರುವ ಶಾಸ್ತ್ರಕ್ಕೆ ಹೆನ್ರಿಯ ಪದ್ಧತಿಯೆಂದೇ ಹೆಸರು ಬಿದ್ದಿದೆ.

ಮನುಷ್ಯನ ಬೆರಳಲ್ಲಿರುವ ಗೆರೆಗಳು, ಶಿಶುವು ಗರ್ಭದಲ್ಲಿರುವಾಗಲೇ ಸುಮಾರು ನಾಲ್ಕನೆಯ ತಿಂಗಳಲ್ಲಿ ಮೂಡುತ್ತವೆ. ಜನನವಾದ ಕೂಡಲೇ ನೋಡಿದಾಗಲೂ ಇವು ಸೂಕ್ಷ್ಮವಾಗಿ, ಆದರೆ ಸ್ಪಷ್ಟವಾಗಿ ಗೋಚರಿಸುತ್ತವೆ. ಶಿಶು ಪ್ರಾಯಕ್ಕೆ ಬಂದ ಮೇಲೆ, ಗೆರೆಗಳು ಸ್ಫುಟವಾಗುತ್ತವೆ. ಮುಪ್ಪಿನ ಕಾಲದಲ್ಲಿ ಚರ್ಮವು ಸುಕ್ಕಾದಾಗ, ಗೆರೆಗಳು ಮಸಕಾಗಬಹುದು. ಆದರೆ ಅವುಗಳ ರಚನೆಯು ಮಾತ್ರ ಬದಲಾಗುವುದಿಲ್ಲ ಇನ್ನೇನು, ಒರಟು ರೀತಿಯಲ್ಲಿ ಕೈ ಬೆರಳುಗಳಿಂದ ಕೆಲಸ ಮಾಡುವವರ ಬೆರಳ ಗೆರೆಗಳು ಸವೆದಿರುತ್ತವೆ. ಬೆರಳುಗಳಿಗೆ ಏನಾದರೂ ಗಾಯವಾಗಿದ್ದರೆ, ಆ ರೀತಿಯ ಅಡ್ಡ ಕೊರಕಲು ಈ ಗೆರೆಗಳ ಮೇಲೆ ಬಿದ್ದು ಆ ಮಟ್ಟಿಗೆ ಗೆರೆಗಳು ಕಣ್ಮರೆಯಾಗಬಹುದು. ಆದರೆ ಗಾಯ ಮಾದ ಹಾಗೆ, ಅಥವಾ ಒರಟು ರೀತಿಯ ಕೈಕಸುಬನ್ನು ಬಿಟ್ಟ ಮೇಲೆ ಗೆರೆಗಳು ಮತ್ತೆ ಚಿಗುರಿಕೊಳ್ಳುತ್ತವೆ—ಮೊದಲಿನ ರೀತಿಯಲ್ಲಿಯೇ! ಮನುಷ್ಯನ ಬಣ್ಣವು ಬದಲಾಗಬಹುದು, ಕೂದಲುಗಳು ಉದುರಬಹುದು, ಅವಯವಗಳು ಹಿಗ್ಗಿ ಕುಗ್ಗಬಹುದು, ಬೆರಳಿನ ಗೆರೆಗಳು ಮಾತ್ರ ಸ್ಥಿರವಾಗಿ ಉಳಿಯುವುದರಿಂದಲೇ ಅವುಗಳಿಗೆ ಈ ಪರಿಯ ಮಹತ್ವವು ಬಂದಿದೆ.


ಕೈಬೆರಳಿನಲ್ಲಿಯ ಗೆರೆಗಳನ್ನು ನಾಲ್ಕು ಪ್ರಕಾರವಾಗಿ ವಿಂಗಡಿಸುತ್ತಾರೆ. ಅವುಗಳಿಗೆ ಕಮಾನು (Arch), ಶಂಖ (Loop), ಚಕ್ರ (Whorl) ಮತ್ತು ಮಿಶ್ರ (Composite) ಎಂದು ಹೆಸರಿಸಿದ್ದಾರೆ. ಇವುಗಳ ಲಕ್ಷಣಗಳನ್ನು ತಿಳಿಯುವುದಕ್ಕೆ ಮುಂಚೆ, ಬೆರಳ ಗೆರೆಗಳಲ್ಲಿ, ಸಾಮಾನ್ಯವಾಗಿ ಎರಡು ನಿರ್ದಿಷ್ಟ ಬಿಂದುಗಳಿರುತ್ತವೆ, ಎಂಬುದನ್ನು ನೆನೆಯಬೇಕು. ಒಂದಕ್ಕೆ ಹೃದಯವೆಂದೂ (Core), ಇನ್ನೊಂದಕೆ ಮುಮ್ಮೂಲೆಯೆಂದೂ (Delta) ಹೆಸರು. ಇವುಗಳ ಸುತ್ತಮುತ್ತಲೂ ಗೆರೆಗಳು ಹರಿದಾಡುತ್ತವೆ. ಮತ್ತು ಗೆರೆಗಳ ಮುದ್ರೆಯನ್ನು ವಿಶ್ಲೇಷಿಸಿ ಲಕ್ಷಣ ಹೇಳುವಾಗ ಇವುಗಳ ಸಹಾಯವನ್ನೇ ಹೆಚ್ಚಾಗಿ ಅವಲಂಬಿಸಲಾಗುತ್ತದೆ. (ಚಿತ್ರ ೧).



೧

ಮೇಲೆ ಹೇಳಿದ ನಾಲ್ಕೂ ಪ್ರಕಾರಗಳ ಲಕ್ಷಣಗಳನ್ನೂ ಚಿತ್ರಗಳನ್ನೂ ಈ ಕೆಳಗೆ ಕೊಟ್ಟಿದೆ.


೧. **ಕಮಾನು :** ಕಮಾನಿನಲ್ಲಿ ಗೆರೆಗಳು ಒಂದು ಕೊನೆಯಿಂದ ಹೊರಟು, ನೇರವಾಗಿ ಇನ್ನೊಂದು ಕೊನೆಯನ್ನು ಸೇರುವವು. ಇವುಗಳಿಗೆ ಸಾಮಾನ್ಯವಾಗಿ ಮುಮ್ಮೂಲೆ ಇರುವುದಿಲ್ಲ. ಇದ್ದಂತೆ ಕಂಡುಬಂದರೂ ಹೃದಯಬಿಂದು ಹಾಗೂ ಮುಮ್ಮೂಲೆಯ ಬಿಂದು ಇವುಗಳಿಗೆ ಯಾವ ಗೆರೆಯೂ ಅಡ್ಡ ಹಾಯುವುದಿಲ್ಲ. ಕಮಾನುಗಳಲ್ಲಿ ಎರಡು ಪ್ರಕಾರಗಳಿವೆ. ಒಂದು ಕೋಲು ಕಮಾನು ಇನ್ನೊಂದು ಸಾದಾ ಕಮಾನು. (ಚಿತ್ರ ೨).



೨


೨. **ಶಂಖ :** ಶಂಖ ಪ್ರಕಾರದಲ್ಲಿ ಹಲವು ಗೆರೆಗಳು ಒಂದು ಕಡೆಯಿಂದ ಹೊರಟು ಮೇಲಕ್ಕೆ

ಹರಿದು, ಹೃದಯ ಹಾಗೂ ಮುಮ್ಮೂಲೆಯ ಬಿಂದುಗಳ ನಡುವೆ ಕೆಳಗಿಳಿಯುವವು. ಬೆರಳುಗಳಲ್ಲಿ ೧೦೦ ಕ್ಕೆ ೬೦ರಷ್ಟು ಶಂಖಗಳೇ ಇವೆ. (ಇದು ಬೇರೊಂದು ರೀತಿಯಲ್ಲಿಯೂ ಅನ್ವರ್ಥಕವಾಗಿದೆಯಲ್ಲವೆ!) ಮುಮ್ಮೂಲೆಯು ಹೃದಯದಿಂದ ಬಲಕ್ಕಿರುವುದೋ, ಎಡಕ್ಕಿರುವುದೋ ಎಂಬುದರ ಮೇಲಿಂದ, ಶಂಖಗಳಲ್ಲಿ, ಎಡಮುರಿ, ಬಲಮುರಿ ಎಂಬುದಾಗಿ ಎರಡು ಬಗೆಗಳಿವೆ. (ಚಿತ್ರ ೩).



3

೩. ಚಕ್ರ: ಇದರಲ್ಲಿ ಕೆಲವು ಗೆರೆಗಳು ಹೃದಯ ಬಿಂದುವನ್ನು ಬಳಸಿಕೊಂಡು ಒಂದು ಸುತ್ತು ಹಾಕುತ್ತವೆ. ಈ ರೀತಿ ಗೆರೆಗಳಿರುವ ಬೆರಳುಗಳಲ್ಲಿ ಯಾವಾಗಲೂ ಎರಡು ಮುಮ್ಮೂಲೆಗಳಿರುತ್ತವೆ. ಚಕ್ರಗಳು ಹೆಚ್ಚಾಗಿ ಅಂಡಾಕಾರದವಾಗಿರುತ್ತವೆ. (ಚಿ. ೪).



೪

೪. ಮಿಶ್ರ: ಮೇಲಿನ ಮೂರೂ ಪ್ರಕಾರದ ಆಕೃತಿಗಳು ಇದರಲ್ಲಿ ಸೇರಿದ್ದು ನಿರ್ದಿಷ್ಟವಾಗಿ ಲಕ್ಷಣಗಳನ್ನು ಹೇಳಲಿಕ್ಕೆ ಆಗುವುದಿಲ್ಲವಾದ್ದರಿಂದ ಇವಕ್ಕೆ ಮಿಶ್ರವೆಂದು ಹೆಸರು. ಮಿಶ್ರಾಕೃತಿಗಳಲ್ಲಿ ಕನಿಷ್ಠ ಎರಡು ಮುಮ್ಮೂಲೆಗಳು ಇದ್ದೇ ಇರುತ್ತವೆ. ಮಿಶ್ರಗಳನ್ನು ಶಂಖಾವೃತ ಚಕ್ರ




೫

(Central Pocket), ಅವಳಿಜವಳಿ ಶಂಖ (Twinned Loop), ಪಾರ್ಶ್ವಶಂಖ (Lateral Pocket) ಮತ್ತು ಆಕಸ್ಮಿಕ (Accidental) ಎಂಬುದಾಗಿ ಪುನಃ ವಿಂಗಡಿಸಿದ್ದಾಗಿದೆ. (ಚಿತ್ರ ೫).

ಈ ಆಕೃತಿಗಳನ್ನು ತಿಳಿದ ಮಾತ್ರಕ್ಕೆ, ಒಂದು ಮುದ್ರೆಯು ಇಂಥ ಒಂದು ಬೆರಳಿನದೇ ಎಂದು ಖಚಿತವಾಗಿ ಹೇಳಲಿಕ್ಕೆ ಬರುವುದಿಲ್ಲ. ಈ ಮೊದಲು ತಿಳಿಯಪಡಿಸಿದಂತೆ, ಒಂದು ಬೆರಳಿನಲ್ಲಿರುವ ಗೆರೆಗಳ ವಿನ್ಯಾಸವು ಇನ್ನೊಂದು ಬೆರಳಿಗೆ ಇರುವುದಿಲ್ಲವಷ್ಟೆ. ಗೆರೆಗಳ ಈ ವಿನ್ಯಾಸದ ಲಕ್ಷಣಗಳನ್ನು ಗುರುತಿಸಲಿಕ್ಕೆ ಅರಿತರೆಯೆ, ಬೆರಳ ಮುದ್ರೆಯ ಶೋಧನೆಯು ಬಲ್ಲಿದನೆನಿಸಿಕೊಂಡಂತಾಗುವುದು.

ಈ ದೃಷ್ಟಿಯಿಂದ ೬ನೆಯ ಚಿತ್ರವನ್ನು ತುಸು ಪರಿಶೀಲಿಸೋಣ. ಇದೊಂದು ಶಂಖಾಕೃತಿಯು. ಹೃದಯ ಹಾಗೂ ಮುಮ್ಮೂಲೆಗಳ ನಡುವೆ



೬

ಕೆಲವು ಗೆರೆಗಳು ಇಳಿದಿವೆ. ಹೀಗೆ ಇಳಿದ ಗೆರೆಗಳ ಸಂಖ್ಯೆ ಎಂಟು. ಆದುದರಿಂದ ಇದಕ್ಕೆ ಎಂಟು ಗೆರೆಯ ಶಂಖವೆಂದು ಹೆಸರು. ಈ ಎಂಟು ಗೆರೆಗಳಲ್ಲಿ ಮೊದಲಿನದು ಚಿಕ್ಕದಾಗಿದ್ದು ಕಂಸಿನಾಕಾರದಲ್ಲಿದೆ. ಮೂರನೆಯ ಆರನೆಯ ಗೆರೆಗಳಲ್ಲಿ ನಡುವೆ ಸಣ್ಣ ನಡುಗಡ್ಡೆಗಳಾಗಿವೆ. ೬ ಮತ್ತು ೭ ಗೆರೆಗಳ ನಡುವೆ ಎರಡು ಚಿಕ್ಕೆಗಳಿವೆ. ಹೃದಯ ಬಿಂದುವಿನಿಂದ ಗೆರೆಯು ನೇರವಾದದ್ದಿದೆ ಇತ್ಯಾದಿ. ಈ ರೀತಿಯಾಗಿ ಪ್ರತಿಯೊಂದು ಬೆರಳಿನ ಲಕ್ಷಣಗಳನ್ನು ವಿವರವಾಗಿ ಪರಿಶೀಲಿಸುತ್ತ ಹೋದಂತೆ, ಅದು ಇತರ ಬೆರಳಿನ ಮುದ್ರೆಯ ಲಕ್ಷಣಗಳಿಂದ ಹಲವಾರು ರೀತಿಯಲ್ಲಿ ಭಿನ್ನವಾದುದೆಂದು ಕಂಡುಬರುತ್ತದೆ.

ಕೈ ಬೆರಳಿನ ಮುದ್ರೆಗಳನ್ನು ತೆಗೆದುಕೊಳ್ಳುವುದು ಅತ್ಯಂತ ಸುಲಭವಾಗಿದೆ. ಅದಕ್ಕೆ ಒಂದು ಗಾಜಿನ ಚೂರು, ಮುದ್ರಕರ ಮಶಿ, ಮತ್ತು ಒಂದು ರೋಲರ್ ಇಷ್ಟಿದ್ದರೆ ಸಾಕು. ಆದರೆ ಅಪರಾಧ ಅಥವಾ ಗುನ್ಹೆಯು ಜರುಗಿದ ಸ್ಥಳದಲ್ಲಿಯ ಮುದ್ರೆಗಳನ್ನು ತೆಗೆದುಕೊಳ್ಳುವುದು ಕಷ್ಟದ ಗೆಲಸ. ಆ ಗುರುತುಗಳು ಸ್ಪಷ್ಟವಾಗಿ ಕಂಡುಬರುವುದಿಲ್ಲ. ಅದಕ್ಕಾಗಿ ವಿವಿಧ ಬಗೆಯ ಪೌಡರುಗಳನ್ನು ಉದುರಿಸಿ, ಅದರ ಪ್ರತಿ-ಕೃತಿಯನ್ನು ತೆಗೆಯುತ್ತಾರೆ. ಈ ಜಟಿಲ ತಾಂತ್ರಿಕ ವಿಧಾನದಲ್ಲಿ ಬಹಳ ಪ್ರಗತಿಯಾಗಿದೆ.

ಕೈಬೆರಳಿನ ಮುದ್ರೆಗಳ ಸಹಾಯದಿಂದ ಅಪರಾಧಗಳನ್ನು ಪತ್ತೆ ಹಚ್ಚಬೇಕಾದರೆ ಮೊದಲು ಸಂಶಯಾಸ್ಪದ ವ್ಯಕ್ತಿಗಳ ಕೈಬೆರಳ ಮುದ್ರೆಗಳ ಬ್ಯೂರೊ ಇರಬೇಕಾಗುತ್ತದೆ. ಪ್ರತಿಯೊಂದು ದೇಶದಲ್ಲಿ, ಮತ್ತು ಭಾರತದ ಪ್ರತಿಯೊಂದು ರಾಜ್ಯದಲ್ಲಿ ಇಂಥ ಬ್ಯೂರೋಗಳಿವೆ ಅಲ್ಲಿ, ಈ ಹಿಂದೆ ಶಿಕ್ಷೆಗೆ ಒಳಗಾದವರ, ಸಂದೇಹಾಸ್ಪದ ವ್ಯಕ್ತಿಗಳೆಲ್ಲರ ಕೈಬೆರಳ ಗುರುತುಗಳನ್ನು ಇಟ್ಟಿರುತ್ತಾರೆ. ಲಕ್ಷಗಟ್ಟಲೆ ಇರುವ ಇವುಗಳ ವರ್ಗೀಕರಣವೂ ಒಂದು ಮಹಾ ಶಾಸ್ತ್ರವಾಗಿ ಪರಿಣಮಿಸಿದೆ. ಪ್ರತಿಯೊಂದು ಕೈಬೆರಳಿನ ಗುರುತಿರುವ ಕಾಗದದ ಹಿಂದೆ, ಆ ವ್ಯಕ್ತಿಯ ಹೆಸರು ದೆಸೆ, ಪೂರ್ವಕಥೆ ಇವನ್ನೆಲ್ಲ ಸ್ವಲ್ಪದರಲ್ಲಿ ಬರೆದಿಡುತ್ತಾರೆ.

ಈ ಗುರುತಿಗೆ ಒಂದು ಬೆರಳಿನ ಮುದ್ರೆಯು ಸಾಕಾಗುವದಾದರೂ ಈಚೆಗೆ ಹತ್ತೂ ಬೆರಳಿನ ಮುದ್ರೆಗಳನ್ನು ತೆಗೆದುಕೊಳ್ಳುತ್ತಾರೆ.

ಈ ಶಾಸ್ತ್ರದ ಆದ್ಯಪ್ರವರ್ತಕನಾದ ಇ. ಆರ್. ಹೆನ್ರಿಯೇ ಬಹಳ ವರ್ಷಗಳ ಹಿಂದೆ ಪತ್ತೆ ಹಚ್ಚಿದ ಒಂದು ಖೂನಿಯ ಕೇಸಿನ ವಿವರಗಳನ್ನು ಇಲ್ಲಿ ಕೊಡಬಹುದು. ಭೂತಾನ ಗಡಿಯ ಹತ್ತಿರದ ಒಂದು ಚಹಾ ತೋಟದಲ್ಲಿ ವ್ಯಾನೇಜರನ ಕೊಲೆಯಾಯಿತು. ಕತ್ತಿಗೆಯಲ್ಲಿ ಗಾಯ ಮಾಡಿದ್ದರಿಂದ, ಅವನು ಮರಣ ಹೊಂದಿದ್ದನು. ಅವನ ತೀಜೋರಿ ಹಾಗೂ ಕೈಪೆಟ್ಟಿಗೆಗಳನ್ನು ಮುರಿದು ಆ ಕಳ್ಳನು ಹಣವನ್ನು ದೋಚಿಕೊಂಡು ಹೋಗಿದ್ದನು. ಕೊಂದವರಾರೆನ್ನುವುದರ ಬಗ್ಗೆ ನಾಲ್ವರ ಮೇಲೆ ಸಂದೇಹ ಹುಟ್ಟಿತು. ಓರ್ವ ಕೂಲಿಯವ, ಮನೆಯಲ್ಲಿಯ ಅಡಿಗೆಯವ, ವ್ಯಾನೇಜರನು ಇಟ್ಟುಕೊಂಡಿದ್ದ ಓರ್ವ ಹೆಂಗಸಿನ ಗಂಡ, ಮತ್ತು ಈ ಹಿಂದೆ ಕೆಲಸಕ್ಕಿದ್ದ ಒಬ್ಬ ಸೇವಕ. ಈ ಸೇವಕನು ಒಮ್ಮೆ ಕಳವು ಮಾಡಿದ್ದಕ್ಕಾಗಿ ಅವನಿಗೆ ಜೇಲಿನ ಶಿಕ್ಷೆಯಾಗಿತ್ತು. ಶಿಕ್ಷೆಯಾಗುವದಕ್ಕೆ ವ್ಯಾನೇಜರನೇ ಕಾರಣನಾಗಿದ್ದನು. ಖೂನಿಯ ಸ್ಥಳದ ತನಿಖೆ ಮಾಡುವಾಗ ಒಂದು ಡೆಸ್ಕ್ ಕ್ಯಾಲೆಂಡರಿನ ಮೇಲೆ ಬೆರಳಿನ ಗುರುತುಗಳಿದ್ದಂತೆ ಕಂಡಿತು. ಅದರ ಮುದ್ರಣವನ್ನು ತೆಗೆದುಕೊಂಡು ಬಂಗಾಲದ ಫಿಂಗರ್ ಪ್ರಿಂಟ್ಸ್ ಬ್ಯೂರೊವಿಗೆ ಕಳಿಸಿಕೊಡಲಾಯಿತು. ಅಲ್ಲಿ ಈ ಬೆರಳಿನ ಗುರುತುಗಳಿರುವಂತೆಯೇ ಇದ್ದ ಇನ್ನೊಂದು ಕೈ ಬೆರಳ ಮುದ್ರೆಯು ಹೊರಟಿತು. ಅದು ವ್ಯಾನೇಜರನ ಸೇವಕನಾಗಿದ್ದ ಮತ್ತು ಈ ಹಿಂದೆ ಶಿಕ್ಷೆ ಅನುಭವಿಸಿದ್ದ ಕಾಳಿಂಗ ಚರಣನದೇ ಆಗಿದ್ದಿತು. ಮುಂದಿನ ತನಿಖೆಯಲ್ಲಿ


ಅವನೇ ಕೊಲೆಮಾಡಿದನೆಂದು ಸಿದ್ಧವಾಗಿ ಅವನಿಗೆ ಮರಣ ದಂಡನೆಯನ್ನು ವಿಧಿಸಲಾಯಿತು.

ಇಂಥಿಗೂ ಪುಣೆ, ಮುಂಬಯಿಗಳಂತಹ ದೊಡ್ಡ ಊರುಗಳಲ್ಲಿ ಕಳವು, ಖೂನಿಗಳನ್ನು ಕಂಡುಹಿಡಿಯುವಲ್ಲಿ ಕೈಬೆರಳಿನ ಗುರುತುಗಳ ಸಹಾಯವನ್ನೇ ಹೆಚ್ಚಾಗಿ ತೆಗೆದುಕೊಳ್ಳಲಾಗುತ್ತಿದೆ. ಲಾಯಿಡ್ಸ್ ಬ್ಯಾಂಕಿನ ದರೋಡೆಯನ್ನು ಪತ್ತೆ ಹಚ್ಚುವಲ್ಲಿಯೂ ಇದರ ನೆರವು ಇದ್ದುದು ಅಷ್ಟಿಷ್ಟಲ್ಲ. ಕರ್ನಾಟಕದಲ್ಲಿ ಮಾತ್ರ ಈ ರೀತಿಯಾಗಿ ಕೇಸುಗಳನ್ನು ಪತ್ತೆ ಹಚ್ಚಿದ್ದುದು ಕಡಿಮೆ. ಕೋರ್ಟಿನಲ್ಲಿ ಸಹಿತ ಸುಪ್ರಸಿದ್ಧ ಪುರಾವೆ ನೀತಿಯ ಕಾನೂನಿನಲ್ಲಿ (ಎವ್ಹಿಡೆನ್ಸ-ಆ್ಯಕ್ಟ), ಫಿಂಗರ್ ಪ್ರಿಂಟ್ಸ ವಾಚನ ಪ್ರವೀಣರ ಅಭಿಪ್ರಾಯವನ್ನು ಗ್ರಾಹ್ಯ ಮಾಡಬೇಕೆಂದು ಸ್ಪಷ್ಟವಾಗಿ ಹೇಳಿದೆ.

ಆದರೆ ಅಪರಾಧೀ ಜಗತ್ತನ್ನುಳಿದು ಇತರ ದೃಷ್ಟಿಯಿಂದಲೂ ಕೈಬೆರಳಿನ ಮುದ್ರೆಗಳ ಉಪಯೋಗವನ್ನು ಮಾಡಿಕೊಳ್ಳುವುದು ಸಾಧ್ಯವಿದೆಯೆಂದು ತೋರಿಸಿಕೊಟ್ಟವರು ಅಮೇರಿಕನ್ನರು. ಮೊದಲನೆಯ ಮಹಾಯುದ್ಧದಿಂದ ಈ ಕ್ರಮವು ಆರಂಭವಾಯಿತು. ಅಲ್ಲಿ ಸುಪ್ರಸಿದ್ಧ ವ್ಯಕ್ತಿಗಳು, ಇತರ ಅಧಿಕಾರಿಗಳು ವ್ಯಕ್ತಿಗತ ರಕ್ಷಣೆಯ ದೃಷ್ಟಿಯಿಂದ ತಾವಾಗಿ ತಮ್ಮ ಕೈಬೆರಳಿನ ಮುದ್ರೆಗಳನ್ನು ಕೊಡುತ್ತಾರೆ. ಅಪಘಾತ, ಮತ್ತಿತರ ದುರ್ಘಟನೆಗಳಲ್ಲಿ ಅವರನ್ನು ಗುರುತಿಸುವುದಕ್ಕೆ ಇದು ಅಗತ್ಯವೆಂದು ಕಂಡುಬಂದಿದೆ. ಅಮೇರಿಕೆಯಲ್ಲಿ ಪ್ರತಿ ವರ್ಷ ೨೦ ಲಕ್ಷ ಜನರು ಕಣ್ಮರೆಯಾಗುತ್ತಾರಂತೆ! ಅವರಲ್ಲಿ ಅನೇಕ, ವಿಶೇಷತಃ ಪ್ರಸಿದ್ಧ ವ್ಯಕ್ತಿಗಳನ್ನು ಹುಡುಕಿಸುವಲ್ಲಿ ಕೈಬೆರಳಿನ ಮುದ್ರೆಯು ಒಂದು ಮಹತ್ವದ ಸಾಧನವಾಗಿ ಪರಿಣಮಿಸಿದೆ. ಹೀಗಾಗಿ ಅಮೇರಿಕೆಯ ಎಫ್. ಬಿ. ಆಯ್. ಕಚೇರಿಯಲ್ಲಿರುವ ಸುಮಾರು ೬ ಕೋಟಿ ಕೈಬೆರಳಿನ ಗುರುತುಗಳಲ್ಲಿ ೨ ಕೋಟಿ ಖಾಸಗೀ ವ್ಯಕ್ತಿಗಳ ಮುದ್ರೆಗಳಾಗಿವೆ. ಇಷ್ಟೇ ಅಲ್ಲ, ಕೈ ಬೆರಳಿನ ಮುದ್ರೆಗಳ ಜಾಗತಿಕ ವಿನಿಮಯವೂ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಲಿದೆ. ತನ್ನ ಕುಪ್ರಸಿದ್ಧ ನಡತೆಗಾಗಿ ಎರಡು ಬಾರಿ ಜರ್ಮನಿಯಲ್ಲಿ ಶಿಕ್ಷೆ ಹೊಂದಿದ ಓರ್ವನನ್ನು ಅಮೇರಿಕೆಯಲ್ಲಿ ಮಗುವೊಂದನ್ನು ಅಪಹರಿಸಿದುದಕ್ಕಾಗಿ ಹೆಚ್ಚಿನ ಶಿಕ್ಷೆಗೆ ಗುರಿಪಡಿಸುವುದು ಇದರಿಂದ ಸಾಧ್ಯವಾಯಿತು.

[ಈ ಲೇಖನವನ್ನು ಬರೆಯುವಲ್ಲಿ ಮೂಲತಃ ಇ. ಆರ್. ಹೆನ್ರಿಯವರ ಪುಸ್ತಕವನ್ನೂ ಪೋಲೀಸು ಖಾತೆಯಲ್ಲಿರುವ ಶ್ರೀ ಜಿ. ಎಸ್. ಪಾಟೀಲರ ಸಹಾಯವನ್ನೂ ಪಡೆಯಲಾಗಿದೆ. ಆದರೆ, ಈ ಶಾಸ್ತ್ರದ ಬಗ್ಗೆ ೧೯೩೦ರಷ್ಟು ಹಿಂದೆಯೇ ಬೆಂಗಳೂರಿನ ಶ್ರೀ ಎಂ. ಎಸ್. ರಾಮಣ್ಣ ಎಂಬವರು ಕನ್ನಡದಲ್ಲಿ ಒಂದು ಗ್ರಂಥವನ್ನು ಬರೆದಿದ್ದಾರೆ.]

ಗುಬ್ಬಿಗಳ ಸಂಸಾರ



ನನ್ನಾಕೆ ಶಾಂತಾಗೆ ಆನಂದ ಶಾರದೆಯರ ಸಂಸಾರ 'ಗುಬ್ಬಿಗಳ ಸಂಸಾರ' ವಾಗಿತ್ತು. "ಹೇಗೆ ಹೊಂದಿಕೊಂಡಿದಾರೆ ನೋಡಿ" ಎನ್ನುವುದು ಅವಳ ನಿತ್ಯ ಪಲ್ಲವಿ. "ಅಚ್ಚುಕಟ್ಟುತನ ನೋಡಬೇಕಾದರೆ ಶಾರದಾ ಬಾಯಿಯ ಮನೆಗೆ ಹೋಗಬೇಕು . . . ಆನಂದರಾಯರಿಗೆ ಬರುವ ಕಾರಕೂನಿಕೆಯ ಸಂಬಳದಲ್ಲಿ ಅವಳು ಎಷ್ಟು ಚೆನ್ನಾಗಿ ಮನೆ ನಡಿಸುತ್ತಿದ್ದಾಳೆ...?" ಪದ್ಮಾ (ಪಮ್ಮಿ) ಹುಟ್ಟಿದಾಗ ಶಾಂತಾ ಶಾರದೆಯೊಡನೆ "ಗುಬ್ಬಿಗಳ ಸಂಸಾರಕ್ಕೊಂದು ಮರಿ ಗುಬ್ಬಚ್ಚಿ ಬಂತೇನೆ!" ಎಂದಿದ್ದಳು.

ಆದರೆ ನಾಲ್ಕೇ ವರ್ಷ. ಪಮ್ಮಿಗೆ ನಾಲ್ಕು ವರ್ಷ ಕಳೆಯುವುದರೊಳಗೆ ಎರಡನೆಯ ಹೆರಿಗೆಯಲ್ಲಿ ಶಾರದೆ ತೀರಿಕೊಂಡಾಗ ಗುಬ್ಬಿಗಳ ಸಂಸಾರ ಒಡೆದಿತ್ತು. ಮರಿ ಗುಬ್ಬಚ್ಚಿ ಪಮ್ಮಿ ತಬ್ಬಲಿಯಾಗಿತ್ತು.

ಇನ್ನೂ ಚಿಕ್ಕ ವಯಸ್ಸು...ತಕ್ಕ ಮಟ್ಟಿಗೆ ಒಳ್ಳೆಯ ಉದ್ಯೋಗ. ಶಾರದೆ ಸತ್ತು ಎರಡು ತಿಂಗಳೊಳಗೇ ಎರಡನೆಯ ಸಂಬಂಧದ ಮಾತುಗಳು ಹೊರಟವು. ಆದರೆ ಆನಂದ ಮಾತ್ರ 'ಒಲ್ಲೆ' ಎಂದು ಬಿಟ್ಟ.

ಶಾರದೆ ಹೋದಮೇಲೆ ಮನೆ ನೋಡಿಕೊಳ್ಳಲು ಆನಂದನ ಅತ್ತೆ ನಾಗತ್ತೆ ಗಂಟುಮೂಟೆ ಕಟ್ಟಿಕೊಂಡು ತಮ್ಮನ ಮಗನ ಮನೆಗೆ ಬಂದರು...ಪಮ್ಮೀನ್ನ ಸಾಕಲು ತೊಡಗಿದರು ... ಆನಂದನಿಗೆ ಬುದ್ಧಿ ಹೇಳಿದರು:

"ಚಿನ್ನದಂಥ ಹುಡುಗಿ ನಮ್ಮ ಶಾರದಾ...ಪುಣ್ಯಾತ್ಮಗಿತ್ತಿ...ಮುತ್ತೈದೆ ಹೋಗಿಬಿಟ್ಟಳು—ಮಕ್ಕಳನ್ನು ದೊಡ್ಡದು ಮಾಡೋದು ಈ ವಯಸ್ಸಿನಲ್ಲಿ ನನಗೆ ಸಾಧ್ಯವೇ?...ಇನ್ನೊಂದು ಮದುವೆ ಮಾಡ್ಕೋ ಆನಂದಾ..."

ಆದರೂ ಆನಂದ 'ಒಲ್ಲೆ' ಎನ್ನೋದನ್ನ ಬಿಡಲೇ ಇಲ್ಲ.

"ಅಯ್ಯೋ, ಹುಚ್ಚೆ! ಹಾಗೇನೋ ನಿನ್ನ ವಯಸ್ಸು? ಎಪ್ಪತ್ತರಲ್ಲಿ ಮದುವೆಯಾದವರಿಲ್ವೇನೋ...ನೀನಿನ್ನೂ ಮಗು" ಎಂದರು ನಾಗತ್ತೆ.

ಈಗಲೂ ಆನಂದ ತನ್ನ ಹಠ ಬಿಡಲೇ ಇಲ್ಲ. ಆದರೆ ನಾಗತ್ತೆಯೂ ತನ್ನ ಪ್ರಯತ್ನ ನಿಲ್ಲಿಸಲಿಲ್ಲ.

ನಾಗತ್ತೆ ನಮ್ಮ ರಿಟಾಯರ್ಡ್ ಹೆಡ್ಮಾಸ್ಟರ್ ಶಂಕರರಾಯರ ಮಗಳು ಲತಾನ್ನ ನೋಡಿದ್ದು ಅವರ ಮಗ ವೆಂಕಟೇಶನ ಹುಟ್ಟಿದ ಹಬ್ಬದಲ್ಲೇ... ಶಂಕರರಾಯರು ಲತಾಗೆ ಗಂಡು ಹುಡುಕುತ್ತಾ ಇದ್ದರು...ಅವರ ಹೆಂಡತಿ ತೀರಿಕೊಂಡಿದ್ದ ಕಾರಣ ಲತಾ ಮನೆ ನೋಡಿಕೊಂಡಿದ್ದಳು. ಶಾಂತಾಳ ಮೂಲಕ ಆಮಂತ್ರಣ

ಕಳಿಸಿದ ಲತಾಳ ಬಲವಂತಕ್ಕೆ ನಾಗತ್ತೆ ಊಟಕ್ಕೆ ಹೊರಟರು. ಪಮ್ಮಿಯ ಆಗ್ರಹ ಜೋರಾಗಿ ಆನಂದನೂ ಹೊರಟ. ಮಧ್ಯಾಹ್ನ ಭರ್ಜರಿಊಟ...ಸಂಜೆಗೆ ಆರತಿ...ಊಟಕ್ಕೆ ಚಿರೋಟಿ, ಮೈಸೂರುಪಾಕ್, ವಾಂಗೀ ಭಾತ್, ಬಟಾಟೆ ಬೋಂಡಾ, ಖೀರು ಪಾಯಸ ಮಾಡಿದ್ದರು...ನಾಗತ್ತೆ ಹಬ್ಬದೂಟ ಮಾಡುತ್ತಾ ಕೇಳಿ ಬಡಿಸಿಕೊಂಡು ಬೋಂಡಾ ತಿಂದು "ಒಳ್ಳೇ ಅಡಿಗೆಯವರೂ ಇದಾರೆ ಈ ಊರಲ್ಲಿ. ಯಾರ್ರೀ ಶಂಕರರಾಯರೆ?" ಎಂದು ಕೇಳಿದರು.

"ಅಡಿಗೆಯವರೆ ? ನಮ್ಮ ಲತಾನೇ. ಅವಳು ಮನೇಲಿರೋತನಕ ಅಡಿಗೆಯವರನ್ನು ಹುಡುಕ ಬೇಕಾದ್ದೇ ಇಲ್ಲ." ಎಂದರು ಶಂಕರರಾಯರು. "ಇಷ್ಟು ರುಚಿ ಅಡಿಗೆ ಲತಾ ಮಾಡಿದ್ದೇ...ಜಾಣೆ ನಮ್ಮಮ್ಮ...ನಮ್ಮ ಆನಂದ ಶಾರದೆ ಹೋದ ಮೇಲೆ ನನ್ನಿದಿರಿಗೆ ಚೆನ್ನಾಗಿ ಊಟ ಮಾಡೋದನ್ನ ನೋಡಿದ್ದು ಇದೇ ಮೊದಲು...ಅಡಿಗೇಗೆಲ್ಲ ಒಳ್ಳೇ ತುಪ್ಪ ಬಳಸಿಕೊಂಡ ಹಾಗೆ ಕಾಣುತ್ತೆ... ಒಳ್ಳೇ ತುಪ್ಪ ಎಲ್ಲಿಂದ ತರಿಸ್ತೀರಿ ಶಂಕರರಾಯರೆ?" ಎಂದು ನಾಗತ್ತೆ ಕೇಳಿದರು.

ಶಂಕರರಾಯರು ಗಹಗಹಿಸಿ ನಕ್ಕರು..."ತುಪ್ಪ ಎಲ್ಲಿಂದ ನಾಗತ್ತೆ. ಇದೆಲ್ಲ 'ಡಾಲ್ಡಾ'ದ್ದು...'ಡಾಲ್ಡಾ'...'ಡಾಲ್ಡಾ' ಎಲ್ಲ ಅಡಿಗೆಗೂ ಒಳ್ಳೆಯದು. 'ಡಾಲ್ಡಾ'ದಲ್ಲಿ ಜೀವವರ್ಧಕ ವಿಟಮಿನ್ 'ಎ' ಹಾಗೂ ವಿಟಮಿನ್ 'ಡಿ' ಸೇರಿಸಿದೆ ಅಂತಾಳೆ. 'ಖರ್ಜೂರ ಮರದ ಗುರುತಿನ ಸೀಲ್ ಮಾಡಿದ ಡಬ್ಬಾ ನೋಡಿ ತೆಗೊಂಡು ಬಾರಣ್ಣ' ಅಂತಾಳೆ ಲತಾ. ಅವಳು ಹೇಳಿದ ಹಾಗೆ ಕೇಳಿದರೆ ಊಟ ಚೆನ್ನಾಗಿರತ್ತೆ...ಆರೋಗ್ಯಾನೂ ಚೆನ್ನಾಗಿರುತ್ತೆ..."ಎಂದು ಹೇಳಿದರು.

"'ಡಾಲ್ಡಾ'ನೇ! 'ಡಾಲ್ಡಾ'...ಖರ್ಜೂರ ಮರದ ಗುರುತಿಂದೇ...? ಈಗ ನೆನಪಾಯಿತು ನೋಡಿ ... ಶಾರದಾ ಅದನ್ನೇ ಉಪಯೋಗಿಸುತ್ತಿದ್ದಲ್ವೇನೋ ಆನಂದೂ...ನಾನು ಮೊದಲನೇ ಸಲ ಪಮ್ಮೀನ್ನ ನೋಡೋಕೆ ಬಂದಿದ್ದಾಗ ಶಾರದಾ 'ಡಾಲ್ಡಾ' ತಂದು ಖೀರಿಗೆ ಸೇವಿಗೆ ಕರೀತಿದ್ದಾಗ ನಾನು ಹೊಡಿಯೋದಕ್ಕೆ ಹೋಗಿದ್ದೆ, ಕಾಶೀಯಾತ್ರೆಗೆ ಹೋಗೋ ಮುದಿಗೂಬೆಗೆ ಈ ಅವಲಕ್ಷಣ ತಿನ್ನಿಸ್ತೀಯೇನೇ ಎಂತ. ಶಾರದೆ ನಕ್ಕು "ಪಾಯಸ ತಿಂದುನೋಡಿ ಆಮೇಲೆ ಬೇಕಾದರೆ ಹೊಡೀರಿ, ಅತ್ತೆ" ಎಂದಿದ್ಲು. "'ಡಾಲ್ಡಾ'ದ ವಿಚಾರ ನೀವು ತಿಳಿದುಕೊಂಡಿರೋದೆಲ್ಲ ತಪ್ಪು" ಅಂದಿದ್ಲು. ಖರ್ಜೂರದ ಮರದ ನೆನಪು ಹೇಳಿದ್ಲು, ಚಿನ್ನದಂಥ ಹುಡುಗಿ ... ಅವಳು ಹೇಳಿದ್ದು ಎಲ್ಲಿ ನೆನಪಿದೆ ಈಗ, ಈ ಕಾಶೀಯಾತ್ರೆಗೆ ಹೋಗೋ ಮುದಿಗೂಬೆಗೆ...ಖರ್ಜೂರ ಅನ್ನೋದೇ ತಡ...ನೆನಪಿಗೆ ಬಂತು...ಚೆನ್ನಾಗಿದೆ ಲತಾ...ಅಡಿಗೆ ಚೆನ್ನಾಗಿದೆ..." ಎಂದು ನಾಗತ್ತೆ ಹೇಳಿದರು.

ಆನಂದ ನಗುತ್ತಿದ್ದ...ನಾಗತ್ತೆ ಶಾರದ ತೀರಿಕೊಂಡ ಸಂದರ್ಭದ ನೆನಪು ತಂದರೂ ಆತನ ಮುಖ ಬಾಡಲಿಲ್ಲ. ನಾಗತ್ತೆ ಅದೇ ಸಂದರ್ಭದಲ್ಲಿ "ನಿಮ್ಮ ಲತಾನ್ನ ನಮ್ಮ ಆನಂದೂಗೆ ನೋಡ್ಬಹುದೇನೋ ಶಂಕರರಾಯರೆ..ಇನ್ನೂ ಚಿಕ್ಕ ವಯಸ್ಸು...ಶಾರದೆ ಹೋದ ಕೊರಗು ಹಚ್ಚಿಕೊಂಡು ಊಟ ಆಟಬಿಟ್ಟಿದ್ದಾನೆ" ಎಂದರು.

"ನಾನೂ ಅದೇ ಅನ್ನ ಬೇಕೂಂತಿದ್ದೆ. ಆನಂದರಾಯರು ದೊಡ್ಡ ಮನಸ್ಸು ಮಾಡಬೇಕು"...ಎಂದರು ಶಂಕರರಾಯರು ತುಂಬ ಆಸೆಯಿಂದ...ಆನಂದ ಮಾತನಾಡಲಿಲ್ಲ. ಲತಾಳ ಮುಖ ಲಜ್ಜೆಯಿಂದ ಕೆಂಪಾಗಿತ್ತು.

ಮತ್ತೆ ಮಂಗಳ ವಾದ್ಯಗಳು ಮೊಳಗಿದವು. ಲತಾ ಆನಂದನ ಮನೆ ತುಂಬಿದಳು ...ಪಮ್ಮಿ, ಲತೆಯ ಆರೈಕೆಯಿಂದ ಪುನಃ ಮೈತುಂಬಿ ಕೊಂಡು ಮೊದಲಿನ ಪಮ್ಮಿಯಾದಳು...ಗುಬ್ಬಿಗಳ ಸಂಸಾರ ಮತ್ತೆ ಬೆಳಗಿತ್ತು.

ಕಥೆ



ಬಂಡಪ್ಪ ಪುಸ್ತಕ ಓದಿ ಮರುಳಾದ

ಗಂಗಾಧರ ಗಾಡಗೀಳ

ಆರಾಮಖುರ್ಚಿಯಲ್ಲಿ ಬಿದ್ದುಕೊಂಡು ಬಂಡು, ಆಡು ಗಿಡದ ತೊಪ್ಪಲನ್ನು ಹರಿದು ತಿನ್ನುವಂತೆ "ಜ್ಞಾನಾಮೃತ" ಎಂಬ ಜನಪ್ರಿಯ ಡಾಯಜೆಸ್ಟಿನಲ್ಲಿ ಬಂದಿದ್ದ "ನಿಮಗೆ ತಿಳಿದಿರಬೇಕಾದ ವಿಷಯ"ಗಳನ್ನು ತಲೆಯಲ್ಲಿ ತುಂಬಿಕೊಳ್ಳುತ್ತಿದ್ದ. ಝುರಿಗೆ ನೂರಾಹತ್ತು ಕಾಲುಗಳಿರುತ್ತವೆ ಎಂಬ ಮಾಹಿತಿಯನ್ನು ಓದಿ ಆತ ಆಶ್ಚರ್ಯದಿಂದ ದಿಙ್ಮೂಢನಾಗಿದ್ದ. ಬಂಡೂಗೆ ಹಣಿಗೆಯೊಳಗಿನ ಬಾಳೆಹಣ್ಣುಗಳನ್ನು ಎಣಿಸುವಾಗ ಅವು ಒಮ್ಮೆ ಹದಿಮೂರಾದರೆ ಮತ್ತೊಮ್ಮೆ ಹದಿನೇಳಾಗುತ್ತಿದ್ದವು. ಬಾಳೆಹಣ್ಣಿನ ವ್ಯಾಪಾರಿ ಹದಿನೆಂಟಿವೆ ಎಂದು ಖಡಾಖಂಡಿತವಾಗಿ ಹೇಳಿದಾಗ ಅದನ್ನು ಅಲ್ಲವೆನ್ನುವ ಧೈರ್ಯ ಅವನಿಗಾಗುತ್ತಿರಲಿಲ್ಲ. ಅಂದ ಮೇಲೆ ಸರಸರ ಹೋಗುವ ಝುರಿಯ ಕಾಲುಗಳನ್ನು ಸರಿಯಾಗಿ ಎಣಿಸಿದ ಶಾಸ್ತ್ರಜ್ಞನ ಬಗ್ಗೆ ಆತನಿಗೆ ಅಪಾರ ಕೌತುಕವೆನಿಸಿದ್ದೇನೂ ಆಶ್ಚರ್ಯವಲ್ಲ.

ಅನಂತರ ಬಂಡೂ ಎಷ್ಟೋ ಹೊತ್ತಿನ ವರೆಗೆ ಓದುತ್ತಲಿದ್ದ ಮತ್ತು ಆಶ್ಚರ್ಯಪಡುತ್ತಲಿದ್ದ. ಕೊನೆಗೆ ಅವನು ಓದುವದನ್ನು ನಿಲ್ಲಿಸಿ ಬರೇ ಆಶ್ಚರ್ಯಪಟ್ಟುಕೊಳ್ಳುತ್ತ ಕುಳಿತ. ಏಕೆಂದರೆ ಅಷ್ಟರೊಳಗಾಗಿ ಆತ ಅಜೀರ್ಣವಾಗುವ ಮಟ್ಟಿಗೆ ಜ್ಞಾನಾಮೃತ ಪಾನ ಮಾಡಿಬಿಟ್ಟಿದ್ದ. ನಿಯಮಿತವಾದ ದೀರ್ಘ ಶ್ವಾಸೋಚ್ಛ್ವಾಸ ಮಾಡುವದ

"ಕಿರ್ಲೋಸ್ಕರ" ದಿಂದ

ರಿಂದ ಇಪ್ಪತ್ತೊಂದು ಲಾಭಗಳಾಗುವವೆಂದು ಅವನಿಗೆ ಗೊತ್ತಿದ್ದರೂ ಅವುಗಳಲ್ಲಿ ಇಡೀ ಮೂರು ಮತ್ತು ನಾಲ್ಕನೆಯದರ ಪ್ರಾರಂಭದ ಅಂಶ ಇಷ್ಟೇ ಅವನ ನೆನಪಿಗೆ ಬರುತ್ತಿತ್ತು. ಖುರ್ಚಿಯ ಮೇಲೆ ಕುಳಿತಲ್ಲಿಯೇ ಹತ್ತು ಮಿನಿಟು ವ್ಯಾಯಾಮ ಮಾಡುವದರಿಂದ ೬೦ ನೆಯ ವರ್ಷದಲ್ಲಿಯೂ ಚರ್ಮ ಸುಕ್ಕುಗಟ್ಟುವುದಿಲ್ಲ, ಕಣ್ಣು ಹೊಳೆಯುತ್ತಿರುತ್ತದೆ ಎಂದು ಅವನಿಗೆ ತಿಳಿದುಬಂದಿತ್ತು. ಕೇವಲ, ಸದಾ ನಗುತ್ತ ಇರುವದರಿಂದ ಒಬ್ಬಳು ಎಪ್ಪತ್ತೈದು ದುಃಖಿಜನರನ್ನು ಸುಖಿಗಳನ್ನಾಗಿ ಹೇಗೆ ಮಾಡಿದಳು ಮತ್ತು ಕ್ಯಾನ್ಸರ ರೋಗವಾದ ಅವಳ ಗಂಡ ಹಾಡುಹಾಡುತ್ತಲೇ ಹೇಗೆ ಸತ್ತ ಎನ್ನುವದರ ರೋಮಾಂಚಕಾರಕ ವರ್ಣನೆ ಅವನಿಗಿನ್ನೂ ಸ್ಫೂರ್ತಿ ಕೊಡುತ್ತಲಿತ್ತು. ಯುದ್ಧ ನಡೆದಿದ್ದಾಗ ಕೂಡ ದಿನಾಲು ಹತ್ತು ಮೈಲು ನಡೆಯುವ ತನ್ನ ನಿರ್ಧಾರವನ್ನು ಮುರಿಯದ ಬ್ರಾಝಿಲದ ಜನರಲ್ ರಾಮಿರೂ ಸೆರೆಮನೆಯಲ್ಲಿ ಕೂಡ ೧೧೦ ವರ್ಷಗಳ ವರೆಗೆ ಬದುಕಿದ ರಹಸ್ಯ ಅವನಿಗೆ ಸ್ಫುಟವಾಗಿ ಹೋಗಿತ್ತು. ಹೆಂಡತಿ ಸಿಟ್ಟಿಗೆದ್ದಾಗ ವಿನೋದಪೂರ್ಣ ಕಥೆಯನ್ನು ಹೇಳಿ ವಾತಾವರಣವನ್ನೆ ಬದಲಾಯಿಸುವ ಜಿಮ್ ಜೆರಿಕೊ ತನ್ನ ಮೊದಲನೆಯ (ಅವಳು ಖೋ ಖೋ ಎಂದು ನಕ್ಕೇ ಸತ್ತಳು), ಎರಡನೆಯ (ಮರ್ದ್ಯವದಿಂದ ಇವಳಿಗೆ ಹುಚ್ಚು ಹಿಡಿಯಿತು) ಮತ್ತು ಮೂರನೆಯ (ಇವಳು ಕಿವುಡಿಯಾಗಿದ್ದಳು) ಹೆಂಡತಿಯೊಡನೆ ಹೇಗೆ ಸುಖಸಂಸಾರ ನಡೆಸಿದ ಎಂಬೀ ಕಥೆ ಈಗ ಬಂಡೂನ ನಾಲಿಗೆಯ ಮೇಲೆ ಕುಣಿದಾಡುತ್ತಿತ್ತು. ವ್ಹೇಲ ಮೀನದ ಹೊಟ್ಟೆಯಲ್ಲಿ ಎಷ್ಟು ಜನರು ಮಲಗಿಕೊಳ್ಳಬಹುದು ಮುಂತಾದ ಹಲವಾರು ಮನೋರಂಜಕ ಮಾಹಿತಿಗಳು ಬಂಡೂಗೆ ದೊರೆತಿದ್ದವು.

ಈ ಜ್ಞಾನವನ್ನು ಮೆಲುಕಾಡಿಸುತ್ತಿದ್ದಂತೆ ಬಂಡೂಗೆ ಸಾಕ್ಷಾತ್ಕಾರವಾಯಿತು. ಜನರಲ್ ರಾಮಿರೊ, ಜಿಮ್ ಜೆರಿಕೊ, ಸದಾ ನಗುತ್ತಿದ್ದ ಆ ಹೆಂಗಸು, ನಿಯಮಿತ ದೀರ್ಘ ಶ್ವಾಸೋಚ್ಛ್ವಾಸ ಮಾಡುವ ಆ ಮನುಷ್ಯ ಇವರೆಲ್ಲರಿಗೆ ಸಾಧ್ಯವಾದದ್ದು ತನಗೂ ಏಕೆ ಸಾಧ್ಯವಾಗಬಾರದು? ತಾನು ೧೧೦ ವರ್ಷಗಳ ವರೆಗೆ ಸೆರೆಮನೆಯಲ್ಲೇಕೆ ಇರಬಾರದು? ತಾನು ಮೂವರು ಹೆಂಡರೊಡನೆ ಸಂಸಾರ ಮಾಡಲು ಆತಂಕವೇನು? ತಾನು ಸದಾ ನಗುತ್ತಲಿದ್ದು ಸ್ನೇಹಲತೆಗೆ ಕ್ಯಾನ್ಸರ್ ಆಗಿ ಹಾಡುಹಾಡುತ್ತಲೇ ಸಾಯುವ ಸಂಧಿಯನ್ನೇಕೆ ಒದಗಿಸಿ ಕೊಡಬಾರದು? ನಿಯಮಿತ ದೀರ್ಘ ಶ್ವಾಸೋಚ್ಛ್ವಾಸ ಮಾಡಿ ಇಪ್ಪತ್ತೊಂದಲ್ಲದಿದ್ದರೆ ನೆನಪಿಗೆ ಬರುವಷ್ಟು ಲಾಭವನ್ನಾದರೂ ಯಾಕೆ ಪಡೆಯಬಾರದು? ವ್ಹೇಲ್ ಮೀನದ ಹೊಟ್ಟೆಯೊಳಗೆ ಮಲಗುವ "ಚಾನ್ಸ್"ನ್ನು ತಾನೇಕೆ ಪಡೆಯಬಾರದು?

ವಿಚಾರ ಮಾಡುತ್ತ ಹೋದಂತೆಲ್ಲ ಅವನಿಗೆ ತನ್ನ ಇದುವರೆಗಿನ ಜೀವನವನ್ನು ವ್ಯರ್ಥ ಹಾಳು ಮಾಡಿಕೊಂಡೆ ಎಂದೆನಿಸಿತು. ಇನ್ನಾದರೂ ಹಾಗಾಗಬಾರದು. ಬಂದ ಸುವರ್ಣಸಂಧಿಯನ್ನು ಕಳೆದುಕೊಳ್ಳಬಾರದು.

ನೋಡನೋಡುತ್ತ ಅವನ ಮುಖದ ಮೇಲೆ ದೃಢ ನಿಶ್ಚಯದ ತೇಜಸ್ಸು ಚಮಕಿಸಿತು. ಆತ ದೃಢ ನಿಶ್ಚಯದಿಂದೆದ್ದು ಒಳಗೆ ಹೋಗಿ ಒಂದು ತಂಬಿಗೆ ತುಂಬ ನೀರು ಕುಡಿದು ಬಂದ ಬಳಿಕಂತೂ ಆ ತೇಜಸ್ಸು ಇನ್ನಿಷ್ಟು ಝಗಝಗಿಸಿತು. ದೃಢ ನಿಶ್ಚಯದಿಂದ ಬಂಡೂ ನಾಲ್ಕೆಂಟು ಸಾರಿ ಶತಪಥ ಹಾಕಿದ ಬಳಿಕಂತೂ ಆ ತೇಜಸ್ಸಿನ ಪ್ರಖರತೆ ತೀಕ್ಷ್ಣತೆಗಳನ್ನು ಸಹಿಸಿಕೊಳ್ಳಲಾರದೆ ಅವನು ಕಣ್ಮುಚ್ಚಿಕೊಂಡ, ನಿದ್ದೆ ಹೋದ. ಆದರೆ ನಿದ್ದೆಯಲ್ಲಿ ಕೂಡ ಅವನ ಮುಖದ ಮೇಲಿನ ದೃಢ ನಿಶ್ಚಯದ ಭಾವ ಅಳಿಯಲಿಲ್ಲ.

ಮರುದಿನ ಮುಂಜಾನೆ ಬಂತು. ನಿತ್ಯದಂತೆ ಬೇಸತ್ತುಕೊಂಡೇ ಎದ್ದ. ಪ್ರತಿ ನಿತ್ಯವೂ ಬೆಳಗಾಗುವದಲ್ಲ ಎಂಬ ಮಾತು ಅವನನ್ನು ಸಿಟ್ಟಿಗೆಬ್ಬಿಸಿತು. ಮುಖ ಗಂಟಿಕ್ಕಿಕೊಂಡೇ ಅವನು ಚಹದ ಕಪ್ಪನ್ನು ಬಾಯಿಗಿಟ್ಟ. ಬಿಸಿ ಬಿಸಿ ಚಹದ ಎರಡು ಗುಟುಕು ಹೊಟ್ಟೆಯಲ್ಲಿಳಿದೊಡನೆ ಎಂದಿನಂತೆ ಅವನಲ್ಲಿ ಆಶ್ಚರ್ಯಕಾರಕ ಬದಲಾವಣೆಯಾಯಿತು. ಅವನಲ್ಲಿ ಉತ್ಸಾಹ ತುಂಬಿತು.

ಮತ್ತೆ ಅದರೊಡನೆ ಹಿಂದಿನ ರಾತ್ರಿ ತಾನು ಮಾಡಿದ ದೃಢ ನಿಶ್ಚಯ ನೆನಪಾಯಿತು.

ಕೂಡಲೇ ಬಂಡೂ ನಿಯಮಿತ ಮತ್ತು ದೀರ್ಘ ಶ್ವಾಸೋಚ್ಛ್ವಾಸ ಕಾರ್ಯಕ್ರಮವನ್ನು ಆರಂಭಿಸಿದ. ಆತ ಹೆಗಲನ್ನು ಹಿಂದಕ್ಕೆ ಮಾಡಿ ಬೆನ್ನನ್ನು ನೆಟ್ಟಗೆ ಮಾಡಿ ಮೂಗಿನ ಸೊರಳೆಗಳನ್ನು ಉಬ್ಬಿಸಿ ಗಟ್ಟಿಯಾಗಿ ಶ್ವಾಸವನ್ನೆಳೆದುಕೊಳ್ಳಲು ಶುರು ಮಾಡಿದ.

ಅಷ್ಟರಲ್ಲಿ "ಇನ್ನಿಷ್ಟು ಚಹ ಬೇಕೇನು ?" ಎಂದು ಸ್ನೇಹಲತೆ ಕೇಳಿದಳು

ಉಬ್ಬಿದ ಮೂಗಿನಿಂದಲೇ ಬಂಡೂ "ಹೂಂ" ಎಂದ. ದೀರ್ಘ ಮತ್ತು ನಿಯಮಿತ ಶ್ವಾಸೋಚ್ಛ್ವಾಸ ನಡೆಸುವ ಕಾಲಕ್ಕೆ ಮಾತಾಡುವದು ಅಶಕ್ಯ ಎಂದು ಅವನಿಗೆ ತಿಳಿದುಬಂದಿತು.

ತಲೆಯೆತ್ತಿ ಅವನನ್ನು ನೋಡಿದ ಸ್ನೇಹಲತೆ ಕಿಸಕ್ಕನೆ ನಕ್ಕು "ಶ್ಶಿ! ಇದೇನು ಮಳ್ಳರ ಹಾಗೆ ನಡೆಸಿದ್ದೀರಿ ?" ಎಂದಳು.

ಕಣ್ಣಗಲಿಸಿ ಮುಖ ಬಿಗಿ ಹಿಡಿದು ಬಂಡೂ "ಹೂಂ. . .ಹೂಂ" ಎಂದ. ಮತ್ತೆ ಜೋರಾಗಿ ಶ್ವಾಸೋಚ್ಛ್ವಾಸ ಮಾಡತೊಡಗಿದ.

ಸ್ನೇಹಲತೆಯ ನಗು ಜೋರಾಗಿ ಅವಳ ಬಾಯಿಂದ ರೇಲ್ವೆಗಾಡಿಯ ಸಿಳ್ಳಿನಂಥ ಧ್ವನಿ ಹೊಗಡತೊಡಗಿತು. ನಾಲ್ಕು ದಿನಗಳ ಮಟ್ಟಿಗೆ ಬಂದಿದ್ದ ತನ್ನ ತಂಗಿಯನ್ನು ಕೂಗಿ ಅವಳು "ಏ, ಕಮಲೂ ಬಾ ಇಲ್ಲಿ. ಮಜಾ ನೋಡು" ಎಂದಳು.

ಟಾಯರ ಒಡೆದಾಗ ಬರುವಂತೆ ಬಂಡೂ ಮೂಗಿನಿಂದ ಹವೆಯನ್ನು ಹೊರಗೆ ಬಿಟ್ಟ. ದೀರ್ಘ ಮತ್ತು ನಿಯಮಿತ ಶ್ವಾಸೋಚ್ಛ್ವಾಸವನ್ನು ಮಾಡುವ ತನ್ನ ಯೋಜನೆಯನ್ನು ತಾತ್ಪೂರ್ತಿಕವಾಗಿ ನಿಲ್ಲಿಸಲು ಆತ ನಿಶ್ಚಯಿಸಿದ. ಬೆನ್ನು ನೋಯತೊಡಗಿದ್ದರಿಂದ ಮತ್ತೆ ಎಂದಿನಂತೆ ಬೆನ್ನು ಡೂಗುಮಾಡಿಕೊಂಡು ಕುಳಿತು ಗರ್ಜಿಸಿದ. "ನೋಡಿಲ್ಲಿ. ನೀನೆಷ್ಟು ಚೇಷ್ಟೆ ಮಾಡಿದರೂ ನಾನೇನೂ ನನ್ನ ನಿರ್ಧಾರವನ್ನು ಮುರಿಯುವದಿಲ್ಲ."

"ಅಬ್ಬಯ್ಯ! ಅದೆಂಥ ನಿರ್ಧಾರ ಮಾಡಿದ್ದೀರಿ ನೀವು ?" ಸ್ನೇಹಲತೆ ಕೇಳಿದಳು.

"ಒಂದಲ್ಲ, ಹಲವಾರು ನಿರ್ಧಾರಗಳನ್ನು ಮಾಡಿದ್ದೇನೆ." ಒಂದೊಂದೇ ಬೆರಳನ್ನು ಮಡಿಚುತ್ತ ಬಂಡೂ ತನ್ನ ನಿರ್ಧಾರಗಳನ್ನು ಹೇಳತೊಡಗಿದ ಒಮ್ಮಿಂದೊಮ್ಮೆ ಅವನಿಗೆ ಸದಾ ಹಸನ್ಮುಖಿಯಾಗಿರಬೇಕೆಂಬ ತನ್ನ ನಿರ್ಧಾರ ನೆನಪಿಗೆ ಬಂದು ಆತ ತನ್ನ ಮುಖದ ಮೇಲೆ ನಗುವನ್ನು ತಂದುಕೊಂಡ.

"ಸುಡಗಾಡು ನಿರ್ಧಾರ! ಪ್ರತಿನಿತ್ಯ ಆಮ್ಲೇಟ ತಿನ್ನುವ ನಿಶ್ಚಯ ಮಾಡಿರಬೇಕು ಮತ್ತೇನು ?"

ಬಂಡೂಗೆ ಈ ಮಾತು ಸೇರಲಿಲ್ಲ ಎಂಬುದು ಸತ್ಯ. ಈ ಮಾತನ್ನು ಕೇಳಿ ಕಮಲೆ ತನ್ನ ಸೆರಗನ್ನು ಮುಖಕ್ಕೆ ಅಡ್ಡ ಮಾಡಿಕೊಂಡ ರೀತಿಯೂ ಅವನಿಗೆ ಸೇರಲಿಲ್ಲ. ಆದರೂ ಆತ ದೃಢ ನಿಶ್ಚಯದಿಂದ ನಗುತ್ತಲೇ ಉಳಿದ.

ಸ್ನೇಹಲತೆ ಸಿಟ್ಟಿನಿಂದ, "ಹೀಗೆ ಮಂಕರ ಹಾಗೆ ನಗಬೇಡಿ, ನನಗದು ಸೇರುವದಿಲ್ಲ" ಎಂದಳು.

"ನನ್ನನ್ನು ಮಂಕ ಎನ್ನು, ಬೇಕಾದರೆ ಮೂರ್ಖ ಎನ್ನು. ಆದರೆ ಮುಂದೆ ನಿನಗೆ ಕ್ಯಾನ್ಸರ ಆದಾಗ ನನ್ನ ನಗುವಿನ ಬೆಲೆ ನಿನಗೆ ತಿಳಿದೀತು," ಅತ್ಯಂತ ಸಹನಶೀಲತೆಯನ್ನು ಪ್ರದರ್ಶಿಸುತ್ತ ಬಂಡೂ ಹೇಳಿದ.

"ಆಂ ! ಕ್ಯಾನ್ಸರ ಆಗಿ ನಾನು ಸಾಯಬೇಕೆಂದು ನಿಮ್ಮ ಬಯಕೆಯೇನು ?" ಸ್ನೇಹಲತೆ ಆಶ್ಚರ್ಯದಿಂದಲೂ ಸಾತ್ವಿಕ ಸಂತಾಪದಿಂದಲೂ ಕೂಗಿದಳು.

"ಈಗಲ್ಲವೇ! ಇನ್ನೂ ಕೆಲ ದಿನಗಳ ನಂತರ!" ತಿಳಿಹೇಳುವ ಸ್ವರದಲ್ಲಿ ಬಂಡೂ ಹೇಳಿದ.

"ಕೇಳಿದಿಯಾ ಕಮಲಾ ? ಅದಕ್ಕೇ ಎಂದೂ ಲಗ್ನವಾಗಬೇಡ ಎಂದು ನಿನಗೆ ಹೇಳುತ್ತೇನೆ." ಸ್ನೇಹಲತೆಯ ಮೂಗು ಈಗ ಉಬ್ಬತೊಡಗಿತ್ತು. ಕಣ್ಣಲ್ಲಿ ನೀರು ಕೂಡ ಬರತೊಡಗಿತ್ತು.

ಆದರೆ ಬಂಡೂ ತನ್ನ ನಿಶ್ಚಯವನ್ನು ಮುರಿಯಲಿಲ್ಲ. ಹಸನ್ಮುಖಿಯಾಗಿರುವದರಿಂದ ಎಷ್ಟೊಂದು ಲಾಭಗಳಾಗುವವೆಂದು ಆತನಿಗೆ ಗೊತ್ತಿದ್ದುದರಿಂದ ಆತ ಹೆದರಲಿಲ್ಲ. ಹೆಂಡತಿ ಸಿಟ್ಟಿಗೆದ್ದಾಗ

ವಿನೋದ ಮಾಡಿ ಎಲ್ಲರೂ ನಗುವಂತೆ ಮಾಡುವ ಅವನ ನಿರ್ಧಾರದ ನೆನಪಾಗಿ ಆತ, "ಅಲ್ಲೇ, ಮುಂದಿನ ಮಾತಿನ ಬಗ್ಗೆ ಈಗೇಕೆ ಕಾಳಜಿ ಮಾಡಬೇಕು? ಕ್ಯಾನ್ಸರ ಆಗುವದಿದ್ದರೆ ಆಗುವದು. ಆದರೆ ನಾನು ಮಾತ್ರ ಈಗ ಒಂದು ಕಿತ್ತಳೆ ಹಣ್ಣನ್ನು ತಿನ್ನತಕ್ಕವ. ತಾ ನಾಲ್ಕಾಣೆ" ಎಂದ.

"ಅವ್ವ! ಇನ್ನು ನನ್ನ ಗತಿ ಏನು?" ಎಂದು ಸ್ನೇಹಲತೆ ಅಳುದನಿಯಲ್ಲಿ ಉದ್ಗಾರ ಹೊರಡಿಸಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಕಮಲೆ ಕೂಡ ಹುಬ್ಬು ಗಂಟಿಕ್ಕಿಕೊಂಡು ಬಂಡೂನನ್ನು ನೋಡತೊಡಗಿದಳು. ಸತತ ಹಸನ್ಮುಖಿಯಾಗಿರುವ ತನ್ನ ನಿಶ್ಚಯವನ್ನು ಸಾಧಿಸುವದು ತುಸು ಕಠಿಣವೆಂದೆನಿಸಿ ಬಂಡೂ ಅವಸರದಿಂದ ಅಲ್ಲಿಂದೆದ್ದು ಹೋದ.

ಬಳಿಕ ಬಂಡೂಗೆ ಸ್ನಾನಕ್ಕೆ ಬಿಸಿನೀರು ಸಿಗಲಿಲ್ಲ. ಶರ್ಟಿನ ಗುಂಡಿಗಳನ್ನು ಯಾರೂ ಹುಡುಕಿಕೊಡದ್ದರಿಂದ ಅವು ಸಿಗಲಿಲ್ಲ. ಅನ್ನವನ್ನು ಬಡಿಸಿದ ರೀತಿ ವಿಲಕ್ಷಣವಾಗಿತ್ತೆನ್ನುವದು ಅಂದು ಸಂಜೆ ಅವನಿಗೆ ತನ್ನ ಕಿಸೆಯಲ್ಲಿ ಅನ್ನದ ಚಿಕ್ಕ ಮುದ್ದೆ ಕೈಗೆ ಸಿಕ್ಕಾಗಲೇ ತಿಳಿಯಿತು. ಸಾರಿಗೆ ಉಪ್ಪು ಸಾಲದು ಎಂದಾಗ ಸಾರಿನ ಪಾತ್ರೆ ಮತ್ತು ಉಪ್ಪಿನ ತಟ್ಟೆ ಎರಡನ್ನೂ ಅವನ ಮುಂದೆ ಅಪ್ಪಳಿಸಿ ಇಟ್ಟಿದ್ದರಿಂದ ಸಾರೆಲ್ಲ ಶರ್ಟಿನ ಮೇಲೆ ಸಿಡಿದು ಕಸೂತಿ ಬಿಡಿಸಿದಂತಾಯಿತು. ಆಫೀಸಿಗೆಂದು ಹೊರಟು ನಿಂತು ಆತ ಎರಡು ಮೂರು ಸಲ ಕಿಸೆಯಲ್ಲಿ ರೊಕ್ಕವಿಲ್ಲ ಎಂದಾಗ ಸ್ನೇಹಲತೆ ಕಿಡಕಿಯ ಬಳಿಗೆ ಹೋಗಿ "ಶ್ಶ್. ಏನು ತ್ರಾಸಪ್ಪಾ ಈ ಕಾಗೆಯದು" ಎಂದಳು.

ಬಂಡೂ ಮನೆಯಿಂದ ಹೊರಗೆ ಬಿದ್ದಾಗ ಕಿಸೆಯಲ್ಲಿ ಅನ್ನದ ಅಗುಳಿದ್ದರೂ ರೊಕ್ಕವಿರಲಿಲ್ಲ. ಆದರೆ ಬಂಡೂ ಹೆದರಲಿಲ್ಲ. ಅವನ ದೃಢನಿಶ್ಚಯ ಸಡಿಲಾಗಲಿಲ್ಲ. ಬ್ರಾಝಿಲದ ಜನರಲ್ ರಾಮಿರೋನಂತೆ ದಿನಾಲು ಹತ್ತು ಮೈಲು ನಡೆಯುವ ತನ್ನ ನಿರ್ಧಾರವನ್ನು ನೆನಪು ಮಾಡಿಕೊಂಡು ಆತ ತನ್ನ ಮುಖವನ್ನು ಹಾಸ್ಯದಿಂದ ಪ್ರಫುಲ್ಲಿತಗೊಳಿಸಿಕೊಂಡು ಆಫೀಸಿಗೆ ನಡೆದುಕೊಂಡೇ ಹೊರಟ.

ಆಫೀಸಿನ ಬಳಿಗೆ ಬರುವಷ್ಟರಲ್ಲಿ ಅವನ ಮುಖದ ಮೇಲಿನ ಹಾಸ್ಯ ಅಳಿಸಿ ಹೋಗಿತ್ತು. ಎಂದಿನಂತೆ ಆಫೀಸಿನ "ಲಿಫ್ಟ" ಇಂದೂ ಕೆಟ್ಟಿರಬೇಕೆಂದು ಯೋಚಿಸಿ ಆತ ನಾಲ್ಕನೆಯ ಮಾಳಿಗೆಯ ಮೇಲಿನ ತನ್ನ ಆಫೀಸಿಗೆ ಮೆಟ್ಟಲುಗಳನ್ನು ಹತ್ತಿಕೊಂಡೇ ಬಂದಾಗ ಅವನ ದೃಢ ನಿಶ್ಚಯ ಸಡಿಲಾಗಿರದಿದ್ದರೂ ಅವನ ಮೈ ಎಲುವುಗಳೆಲ್ಲ ಸಡಿಲಾಗಿ ಹೋಗಿದ್ದವು.

ತನ್ನ ಖುರ್ಚಿಯ ಬಳಿಗೆ ಹೋದಾಗ ತಾನು ಅರ್ಧ ತಾಸು ತಡವಾಗಿ ಬಂದದ್ದು ಅವನ ಗಮನಕ್ಕೆ ಬಂತು. ಸಾಹೇಬರು 'ಗರಂ' ಆಗಿದ್ದಾರೆ ಎಂಬ ಸುದ್ದಿಯನ್ನು ಅವನ ಹಿತಚಿಂತಕರು ಅವನಿಗೆ ತಿಳಿಸಿದರು. ಆದರೆ ಇವುಗಳ ಪರಿಣಾಮವಾಗುವಂಥ ಮನಃಸ್ಥಿತಿಯಲ್ಲಿ ಬಂಡೂ ಇರಲಿಲ್ಲ. ಬೆವರಿನಿಂದ ಮೈಗಂಟಿಕೊಂಡ ಕೋಟನ್ನು ತೆಗೆದು ಆತ ಖುರ್ಚಿಯ ಬೆನ್ನಿಗೆ ಹಾಕಿದ. ವಿದ್ಯುತ್ ಬೀಸಣಿಕೆಯ ಸ್ವಿಚ್ಚನ್ನೊತ್ತಿ ದೊಪ್ಪೆಂದು ಖುರ್ಚಿಯಲ್ಲಿ ಕುಸಿದ.

ಹದಿನೈದು ನಿಮಿಷಗಳ ನಂತರ ಬಂಡೂ ಮತ್ತೆ ಮನುಷ್ಯನಾದ. ಆಫೀಸ್ ಕ್ಯಾಂಟೀನಿನಿಂದ ಒಂದು ಕಪ್ ಗರಂ ಚಹ ತರಿಸಿ ಕುಡಿದ ಬಳಿಕ ಆತ ಮತ್ತೆ ಧೃಢನಿಶ್ಚಯದ ಮನುಷ್ಯರ ಪಂಕ್ತಿಗೆ ಬಂದ. ತುಸು ಹೊತ್ತು ಆತ ನಿಯಮಿತ ದೀರ್ಘ ಶ್ವಾಸೋಚ್ಛ್ವಾಸವನ್ನು ಮಾಡಿದ. ನಂತರ ಮುಖದ ಮೇಲೆ ಹಾಸ್ಯ ತಂದುಕೊಂಡು ಕೆಲಸಕ್ಕೆ ಕೈ ಹಚ್ಚಿ ತನ್ನ ಮೇಜಿನ ಮೇಲಿದ್ದ ಫೈಲುಗಳ ಮೇಲೆ ಶರಾ ಬರೆದು ಉಳಿದವರ ಟೇಬಲ್ಲಿಗೆ ಕಳಿಸತೊಡಗಿದ. ಅವರು ಕೂಡ ಅಷ್ಟೇ ವೇಗದಿಂದ ತಮ್ಮ ಶರಾ ಬರೆದು ಇವನ ಮೇಜಿಗೇ ಮತ್ತೆ ಅವನ್ನು ಕಳಿಸತೊಡಗಿದರು.

ಒಂದು ತಾಸು ಈ ರೀತಿ ದುಡಿದ ಬಳಿಕ ತಾನು ಬಹಳ ದುಡಿದೆ ಎಂದೆನಿಸಿ ಬಂಡೂ ಕೈಕಾಲು ಸಡಿಲು ಬಿಟ್ಟು ಆಕಳಿಸಿದ. ಎದ್ದು ಕ್ಯಾಂಟೀನಿಗೆ ಹೋಗಿ ಎರಡು ಬಟಾಟೆ ವಡೆ ತಿಂದು ಖಾತೆಗೆ ಹಚ್ಚು ಎಂದು ಆಜ್ಞಾಪಿಸಿ

ಮಸಾಲೆ ಅಡಿಕೆಯ ಪುಡಿಯನ್ನು ಜಗಿಯುತ್ತ ಬಂದು ಖುರ್ಚಿಯ ಮೇಲೆ ಕುಳಿತ.

ಕೂಡುತ್ತಿದ್ದಂತೆ ಸತತ ಹಸನ್ಮುಖಿಯಾಗಿರುವ ತನ್ನ ನಿರ್ಧಾರ ನೆನಪಾಗಿ ಆತ ಎದುರುಗಡೆ ನೋಡುತ್ತ ಹಲ್ಲು ಕಿರಿದ. ಅದನ್ನು ಕಂಡು ಅವನೆದುರುಗಡೆ ಕೂಡ್ರುತ್ತಿದ್ದ ಇಪ್ಪತ್ತು ವರ್ಷದ ತರುಣಿ ಕುಮಾರಿ ಜೋಶಿ ಅವನನ್ನು ಸಂಶಯದೃಷ್ಟಿಯಿಂದ ನೋಡಿ ಎದೆಯ ಮೇಲೆ ಸೆರಗೆಳೆದುಕೊಂಡು ಇನ್ನಿಷ್ಟು ಮುಖ ತಗ್ಗಿಸಿ ಕೆಲಸ ಮಾಡತೊಡಗಿದಳು. ಇದರಿಂದ ಬಂಡೂ ತುಸು ಕುಗ್ಗಿದರೂ ಧೈರ್ಯಗೆಡದೆ ಕುತ್ತಿಗೆ ತಿರುಗಿಸುತ್ತ ತನ್ನ ಹಾಸ್ಯವನ್ನು ಇನ್ನಿಷ್ಟು ಪ್ರಫುಲ್ಲಿತಗೊಳಿಸಿದ. ಕುತ್ತಿಗೆ ತಿರುಗಿಸಿದ್ದರಿಂದ ಅವನ ದೃಷ್ಟಿ ಮೂವತ್ತೂರು ವರ್ಷ ಪ್ರಾಯದ ಕುಮಾರಿ ಕೋಲತೆಯ ಮೇಲೆ ಬಿತ್ತು. ಕುಮಾರಿ ಕೋಲತೇ ಒಮ್ಮೆ ಬಂಡೂನನ್ನು ನೋಡಿ, ಹುಬ್ಬು ಕುಣಿಸಿ ಮೂಗು ಮುರಿದಳು. ಬಂಡೂಗೆ ಅಲ್ಲಿಂದೆದ್ದು ಓಡಿಹೋಗಬೇಕೆಂದನಿಸಿ ಆತ ಸರ್ರನೆ ತನ್ನ ಕುತ್ತಿಗೆಯನ್ನು ತಿರುಗಿಸಿದ.

ಈಗ ಅವನ ದೃಷ್ಟಿಪಥದಲ್ಲಿ ಆಫೀಸ್ ಸುಪರಿಂಟೆಂಡೆಂಟ ಶ್ರೀ ಡಾಫರೆ ಬಂದರು. ಬಂಡೂನ ಮುಖದ ಹಾಸ್ಯವನ್ನು ಕಂಡು ಶ್ರಿ ಡಾಫರೆಯವರಿಗೆ ಈ ಮನುಷ್ಯ ತನ್ನ ಮೂಗಿನ ಮೇಲಿನ ನರವಲಿಯನ್ನು ಕಂಡು ನಗುತ್ತಿದ್ದಾನೆಂದೆನಿಸಿ ಅವರು ಸಿಟ್ಟಾದರು. ಅದೇ ಕ್ಷಣದಲ್ಲಿ ಯಾರ ತಲೆಯ ಮೇಲೆ ಒಂದು ಹೊಸ ಕೆಲಸ ಹೊರಿಸಲಿ ಎಂದು ಅವರಿಗುಂಟಾಗಿದ್ದ ಪ್ರಶ್ನೆ ಬಗೆಹರಿಯಿತು.

ಕೆಲ ಹೊತ್ತು ಬಂಡೂ ಅವರನ್ನು ಹಾಗೆಯೇ ಸುಮ್ಮನೆ ನೋಡುತ್ತ ಕುಳಿತ. ಬಳಿಕ ಅವನಿಗೆ ತಾನು ಸಂಪಾದಿಸಿದ ಜ್ಞಾನದ ಲಾಭವನ್ನು ಶ್ರೀ ಡಾಫರೆಯವರಿಗೆ ಮಾಡಿಕೊಡಬೇಕೆಂಬ ಸ್ಫೂರ್ತಿ ಬಂತು. ಆತ ಇನ್ನಿಷ್ಟು ನಗುತ್ತ ಹೇಳಿದ. "ಇಲ್ಲಿ ನೋಡಿ ಡಾಫರೆ ಸಾಹೇಬ...."

"ಕೆಲಸ ಮಾಡಿರಿ. ನನಗೀಗ ಮಾತನಾಡಲು ಸಮಯವಿಲ್ಲ.''

"ಹ್ಹ-ಹ್ಹ-ಹ್ಹ. ನೀವೇತಕ್ಕೆ ಸಿಟ್ಟಿಗೆದ್ದಿದ್ದೀರಿ ಎಂದು ನಾನು ಬಲ್ಲೆ. ನಿಮ್ಮ ಮೂಗಿನ ಮೇಲಿರುವ ಆ ಕಡಲೆಕಾಯಿ ಗಾತ್ರದ ನರವಲಿಯಿಂದಲೆ ನಿಮ್ಮ ಸ್ವಭಾವ ಶೀಘ್ರಕೋಪಿಯಾಗಿದೆ."

ಆಫೀಸಿನಲ್ಲಿಯ ಎಲ್ಲರಿಗೆ ನಗು ಬಂತು. ಅವರೆಲ್ಲ ಕುತೂಹಲದಿಂದ ಡಾಫರೇ ಸಾಹೇಬರ ಮೂಗನ್ನು ನೋಡತೊಡಗಿದರು. ತನ್ನ ಮೂಗನ್ನು ತೆಗೆದು ಫೈಲುಗಳ ಕೆಳಗೆ ಅಡಗಿಸಿಡಬೇಕೆಂದು ಡಾಫರೇ ಸಾಹೇಬರಿಗೆ ಅನಿಸಿ ಬಂಡೂನ ಬಡ್ತಿಗೆ ತಡೆಹಾಕಲು ಏನು ಮಾಡಬೇಕೆಂದು ಅವರು ಯೋಚಿಸತೊಡಗಿದರು.

ಬಂಡೂ ಮತ್ತೂ ಹೇಳಿದ: "ಈ ನರವಲಿ ತೀರ ಚಮತ್ಕಾರಿಕವಾಗಿ ಕಾಣುತ್ತದೆ ಎಂದು ಒಪ್ಪುತ್ತೇನೆ. ಆದರೆ ಅದಕ್ಕಾಗಿ ನೀವು ಸಿಟ್ಟಿಗೇಳುವದರಿಂದ ಪ್ರಯೋಜನವೇನೂ ಇಲ್ಲ. ಅದರ ಬದಲು ನೀವದನ್ನು ಪೂರ್ತಿಯಾಗಿ ದುರ್ಲಕ್ಷಿಸಬೇಕು. ನಮ್ಮೆದುರಿನಲ್ಲಿ ನಿಮ್ಮ ಮೇಲೆ ಸಾಹೇಬರು ಸಿಟ್ಟಿಗೆದ್ದಾಗ ಏನೂ ಆಗಿಲ್ಲವೆಂದು ನೀವು ನಟಿಸುತ್ತೀರಲ್ಲ, ಅದು ರ್‍ಯಾಟ್ ಆಟಿಟ್ಯೂಡ್ (ಸರಿಯಾದ ನಿಲುವು) ಹಾಗೆಯೇ ಮೂಗಿನ ಮೇಲೆ ನರವಲಿಯೇ ಇಲ್ಲೆಂದು ತಿಳಿದುಕೊಳ್ಳಿರಿ."

"ಶಟ ಅಪ್ ಭಾತಖಾಂಡೆ. ಸುಮ್ಮನೆ ಕೆಲಸ ಮಾಡಿರಿ ಇಲ್ಲವಾದರೆ ಸಾಹೇಬರಿಗೆ ರಿಪೋರ್ಟ ಮಾಡಿಯೇನು!" ಡಾಫರೇ ಸಾಹೇಬರು ಸಿಟ್ಟಿನಿಂದ ಕೆಂಪಾಗಿದ್ದರು. ಎಲ್ಲರ ನೋಟವನ್ನು ತಪ್ಪಿಸಿಕೊಳ್ಳಲು ಅವರು ಮೂಗಿನ ಎದುರು ಫೈಲನ್ನು ಹಿಡಿದುಕೊಂಡಿದ್ದರು.

ಬಂಡೂನ ಹಿತಚಿಂತಕರು ಅವನನ್ನು ನಿಯಂತ್ರಿಸುವ ಯತ್ನ ಮಾಡಿದರು. ಆದರೆ ಅವನಿಗೆ ಆವೇಶ ಏರಿತ್ತು. ಅವನು ಉತ್ಸಾಹದಿಂದ ಎದ್ದು ನಿಂತು ಇನ್ನಿಷ್ಟು ಹಾಸ್ಯದ ಕಳೆಯನ್ನು ಮುಖದ ಮೇಲೆ ತಂದುಕೊಂಡು "ರಿಲಾಕ್ಸ ಮಿಸ್ಟರ ಡಾಫರೇ, ರಿಲಾಕ್ಸ. ಇಲ್ಲಿ ನೋಡಿ. ನಾನೀಗ ಒಂದು ವಿಚಿತ್ರ ಕೆಲಸವನ್ನು ಮಾಡುತ್ತೇನೆ ಈ ಖುರ್ಚಿಯ ಆಧಾರದಿಂದ ಹತ್ತು ಮಿನಿಟು ವ್ಯಾಯಾಮ ಮಾಡುತ್ತೇನೆ. ಎಲ್ಲರಿಗೂ ಅದನ್ನ ಕಂಡು ವಿಚಿತ್ರವೆನಿಸೀತು. ನನ್ನನ್ನು ನೋಡಿ ಅವರು ನಕ್ಕಾರು. ಆದರೆ ನಾನು ಅದನ್ನು

ಲಕ್ಷ್ಯಕ್ಕೆ ತಂದುಕೊಳ್ಳುವದೇ ಇಲ್ಲ. ಕೆಲ ದಿನಗಳಲ್ಲಿ ಇಡೀ ಆಫೀಸೇ ನನ್ನೊಡನೆ ವ್ಯಾಯಾಮ ಮಾಡುವದೆಂದು ನನಗೆ ವಿಶ್ವಾಸವಿದೆ" ಎಂದ.

ಒಮ್ಮೊಂದೊಮ್ಮೆ ಬಂಡೂ ಉಗ್ರಮುಖಧಾರಣೆ ಮಾಡಿ ಕುತ್ತಿಗೆಯನ್ನು ಹಿಂದಕ್ಕೆ ಮುಂದಕ್ಕೆ ಸರಿಸತೊಡಗಿದ. ಆಫೀಸಿನವರೆಲ್ಲ ಕ್ಷಣಕಾಲ ಸ್ತಂಭಿತರಾಗಿ ಬಳಿಕ ಖೋ ಖೋ ಎಂದು ನಗತೊಡಗಿದರು. ಈ ವ್ಯಾಯಾಮ ಮುಗಿದ ಬಳಿಕ ಪ್ರಫುಲ್ಲವದನದಿಂದ ಬಂಡೂ ಎಲ್ಲರ ಕಡೆ ನೋಡಿ, "ಬನ್ನಿ ಮಿತ್ರರೇ, ನಾವೆಲ್ಲರೂ ಕೂಡಿ ವ್ಯಾಯಾಮ ಮಾಡೋಣ," ಎಂದ.

ಬಂಡೂ ಖುರ್ಚಿಯ ಕಡೆಗೆ ಬೆನ್ನು ಮಾಡಿ ನಿಂತು ಬೆನ್ನನ್ನು ಬಗ್ಗಿಸಿ ಖುರ್ಚಿಯನ್ನು ಹಿಡಿಯುವ ಯತ್ನ ಮಾಡಿದ. ತನ್ನ ಪ್ರಯತ್ನ ಯಶಸ್ವಿಯಾಗುತ್ತಿದೆ ಎಂದೆನಿಸಿದಾಗ ಆತ ಬೆನ್ನನ್ನು ಇನ್ನಿಷ್ಟು ಬಗ್ಗಿಸಿದ. ಏನಾಗುತ್ತದೆ ಎಂಬ ಅರಿವು ಅವನಿಗೆ ಆಗುವದರೊಳಗಾಗಿ ಆತ ಜೋಲಿ ಹೋಗಿ ಬಿದ್ದ. ಸುತ್ತಲಿದ್ದವರ ನಗು ಅಟ್ಟಹಾಸವಾಯಿತು.

ಅಷ್ಟರಲ್ಲಿ ಯಾವದೋ ಕೆಲಸದ ನಿಮಿತ್ತ ಹೊರಗೆ ಹೋಗಿದ್ದ ಮ್ಯಾನೇಜರ ಸಾಹೇಬರು ತಿರುಗಿ ಬಂದರು. ಆಫೀಸಿನಲ್ಲಿಯ ದೃಶ್ಯವನ್ನು ಕಂಡು ಅವರು ಮೂಢರಂತಾದರು. ಅವರನ್ನು ಕಂಡು ಎಲ್ಲರೂ ತಂತಮ್ಮ ಕೆಲಸಗಳಿಗೆ ತೊಡಗಿದರು. ಗಂಭೀರ ಶಾಂತತೆ ಪಸರಿಸಿತು. ಬಂಡೂ ಮಾತ್ರ ಇನ್ನೂ ನೆಲದ ಮೇಲೆಯೆ ಬಿದ್ದುಕೊಂಡಿದ್ದ.

ಮ್ಯಾನೇಜರರು ಮುಂದೆ ಬಂದು, "ಏನು ಭಾತಖಾಂಡೆ, ನೆಲದ ಮೇಲೇಕೆ ಮಲಗಿದ್ದೀರಿ?" ಎಂದು ಕೇಳಿದರು.

"ಭಾತಖಾಂಡೆ, ನನ್ನ ಕೋಣೆಗೆ ಬಂದು ಇದೆಲ್ಲದರ ವಿವರಣೆ ಕೊಡಿರಿ" ಎಂದು ಕಠೋರವಾಗಿ ಆಜ್ಞಾಪಿಸಿ ಮ್ಯಾನೇಜರರು ನಡೆದರು.

ಬೆರಳಿಗೆ ಸಿಕ್ಕಿಕೊಂಡಿದ್ದ ದೌತಿಯನ್ನು ತೆಗೆದು ಕಿಸೆಯಲ್ಲಿಟ್ಟುಕೊಂಡು ಅಂಜುತ್ತಂಜುತ್ತಲೇ ಬಂಡೂ ಸಾಹೇಬರ ಕೋಣೆಯಲ್ಲಿ ಹಾಜರಾದ.

ಸಾಹೇಬರು ಧ್ವನಿ ಎತ್ತರಿಸಿ ಗರ್ಜಿಸಿದರು "ಬಹಳ ಬೇಜವಾಬ್ದಾರಿಯಿಂದ, ಗೈರುಶಿಸ್ತಿನಿಂದ ನೀವು ವರ್ತಿಸಿದ್ದೀರಿ."

ಉತ್ತರ ಕೊಡುವ ಮನಃಸ್ಥಿತಿಯಲ್ಲಿಲ್ಲವಾದರೂ ಬಂಡೂಗೆ "ಜ್ಞಾನಾಮೃತ"ದಲ್ಲಿಯ ಆ ಜ್ಞಾನದಾನದ ಲೇಖ ಸ್ಪಷ್ಟವಾಗಿ ನೆನಪಿತ್ತು. ಸತತ ಹಸನ್ಮುಖಿಯಾಗಿರುವದರಿಂದ ಏನೇನು ಚಮತ್ಕಾರಗಳಾಗುವವು ಎಂದು ಆತನಿಗೆ ಗೊತ್ತಿತ್ತು. ಆತ ಕಿಸೆಯಿಂದ ಮಸಿ ದೌತಿಯನ್ನು ತೆಗೆದು ಅದನ್ನು ಚಂಡಿನಂತೆ ಹಾರಿಸಿ ಹಿಡಿದು ನಗುತ್ತ ನಿಂತುಕೊಂಡ.

"ಮೂರ್ಖನಂತೆ ನಗಬೇಡಿರಿ" ಸಾಹೇಬರು ಕೂಗಿದರು.

"ಯಸ್ ಸರ್!" ಬಂಡೂ ತನ್ನ ಹಾಸ್ಯದಲ್ಲಿ ಗೌರವವನ್ನು ಬೆರಸುತ್ತ ಹೇಳಿದ.

"ಆ ದೌತಿಯನ್ನು ಮೊದಲು ಕೆಳಗಿಡಿರಿ" ಸಾಹೇಬರ ಧ್ವನಿ ಒಡೆಯಿತು.

"ಯಸ್ ಸರ್!" ಎಂದು ಬಂಡೂ ದೌತಿಯನ್ನು ಸಾಹೇಬರ ಎದುರಿಗಿಟ್ಟ.

"ನನ್ನೆದುರು ಬೇಡ. ತೆಗೆಯಿರಿ ಅದನ್ನು."

"ಯಸ್ ಸರ್!" ಬಂಡೂ ದೌತಿಯನ್ನು ಚೊಣ್ಣದ ಕಿಸೆಗೆ ಸೇರಿಸಿದ.

"ನಾನ್ಸೆನ್ಸ್! ದೌತಿಯನ್ನು ಯಾರಾದರೂ ಚೊಣ್ಣದ ಕಿಸೆಯಲ್ಲಿಡುತ್ತಾರೆಯೆ?" ಸಿಟ್ಟಿನಿಂದ ಸಂತಪ್ತರಾದ ಸಾಹೇಬರು ತಮ್ಮ ನೆಕ್‌ಟ್ಯಾ ಜಗ್ಗತೊಡಗಿ ಕಲ್ಪನೆಯಿಲ್ಲದೆ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಬಂದಿದ್ದರು.

"ಸರಿ. ಹಾಗಾದರೆ ಶರ್ಟಿನ ಕಿಸೆಯಲ್ಲಿಡುತ್ತೇನೆ."

"ಗೆಟ್ ಔಟ್! ಗೆಟ್ ಔಟ್!" ಸಾಹೇಬರು ಪೇಪರವೇಟಿನಿಂದ ತಲೆ ಕುಟ್ಟಿಕೊಂಡರು.

ನಡುಗುವ ಕಾಲುಗಳಿಂದಲೇ ಬಂಡೂ ಸಾಹೇಬರ ಕೋಣೆಯಿಂದ ಹೊರಬಂದರೂ ಅವನ ಮುಖದ ಮೇಲಿನ ಹಾಸ್ಯ ಹಾಗೆಯೇ ಇತ್ತು.

ಆಫೀಸು ಮುಗಿಯುವ ವರೆಗಿನ ವೇಳೆ ಹೇಗೆ ಕಳೆಯಿತು ಎಂದು ಬಂಡೂಗೆ ಗೊತ್ತಾಗಲಿಲ್ಲ. ಅವನಿಗೆ ಎಚ್ಚರ ಬಂದಾಗ ತಾನು ರಸ್ತೆಯಲ್ಲಿ ನಡೆಯುತ್ತಿದ್ದೇನೆ ಮತ್ತು ಕುಮಾರಿ ಕೋಲತೇ

ಒಯ್ಯಾರದಿಂದ ಏನನ್ನೋ ಹೇಳುತ್ತಿದ್ದಾಳೆಂದೂ ತಾನು ನಿರ್ಜೀವ ನಗುನಗುತ್ತ ಅವಳೆಂದದ್ದಕ್ಕೆ 'ಹೂಂ' ಎನ್ನುತ್ತಿದ್ದೇನೆಂದೂ ಅವನಿಗೆ ಗೊತ್ತಾಯಿತು. ಮತ್ತೆ ಹಠಾತ್ತಾಗಿ ಅವನಿಗೆ ತಾನು ಅವಳೊಂದಿಗೆ ಸಿನೇಮಾ ನೋಡಲು ಒಪ್ಪಿದ್ದೇನೆಂದು ಅರಿವಾಯಿತು.

ಈ ಅರಿವು ಬಂದೊಡನೆ ಕಾಲಿಗೆ ಮೊಳೆ ಹೊಡೆದವರಂತೆ ಬಂಡೂ ನಿಂತುಬಿಟ್ಟ. "ಜ್ಞಾನಾಮೃತ"ದ ಲೇಖವನ್ನು ಮರೆತು ಆತ ಆತ್ಮ ಸಂರಕ್ಷಣೆಗೆ ತಯಾರಾದ. ರಸ್ತೆಯ ಆ ಕಡೆಯ ಫೂಟಪಾತಿನತ್ತ ನೋಡಿ "ಏನಂದಿರಿ! ಬಂದೆ. ಬಂದೆ" ಎಂದ. "ಏನಿದು?" ಎಂದು ಬಾಯಿ ತೆರೆದ ಕುಮಾರಿ ಕೋಲತೆಗೆ "ಒಂದು ಮಿನೀಟ" ಎಂದು ಬಂಡೂ ಆ ಕಡೆಯ ಫೂಟಪಾತಿಗೆ ಓಡಿ ಎದುರು ಕಡೆಯಿಂದ ಬರುತ್ತಿದ್ದ ಸಿಟಿ ಬಸ್ಸಿನಲ್ಲಿ ಜಿಗಿದ. ಕಂಡಕ್ಟರನ ಕಣ್ಣು ತಪ್ಪಿಸಿ ಮೇಲಿನ ಮಾಳಿಗೆ ಏರಿ ಒಂದು ಸೀಟಿನಲ್ಲಿ ಕುಸಿದ. ಅವನ ಮುಖದಲ್ಲಿ ಮತ್ತೆ ಹಾಸ್ಯ ಅವನಿಗರಿವಿಲ್ಲದಂತೆಯೆ ಮಿನುಗಿತು. ಸಡಿಲಾಗತೊಡಗಿದ್ದ ದೃಢನಿಶ್ಚಯ ನೈಸರ್ಗಿಕ ಪ್ರೇರಣೆಯ ಆಧಾರದಿಂದ ಮತ್ತೆ ಬಿಗಿಯಾಯಿತು.

ಕಂಡಕ್ಟರ ತನ್ನ ಸಮೀಪಕ್ಕೆ ಬಂದಾಗ "ಗಿರಗಾಂವ" ಎಂದು ಬಂಡೂ ಕೋಟಿನ ಕಿಸೆಗೆ ಕೈ ಹಾಕಿದ. ಅಲ್ಲೇನೂ ಕೈಗೆ ಹತ್ತದಿರಲು ಶರ್ಟಿನ ಕಿಸೆಗೆ ಕೈಹಾಕಿ ಕೈಗೆ ಸಿಕ್ಕಿದ್ದನ್ನು ಕಂಡಕ್ಟರನ ಕೈಗಿತ್ತ.

ಕಂಡಕ್ಟರ ಸಿಟ್ಟಿನಿಂದ "ಏನಿದು? ಮಜಾಕ್ ಕರತೇ ಹೈ ಕ್ಯಾ ?" ಎಂದ.

ಬಂಡೂ ಸಿಟ್ಟಿನಿಂದ ಕಂಡಕ್ಟರ ಮುಂದೆ ಮಾಡಿದ ಕೈ ನೋಡಿದ. ಕಂಡಕ್ಟರನ ಕೈಯಲ್ಲಿ ಸಣ್ಣ ತುತ್ತಿನಷ್ಟು ದೊಡ್ಡದಾದ ಅನ್ನದ ಮುದ್ದೆಯಿತ್ತು. ಆಶ್ಚರ್ಯಾತಿರೇಕದಿಂದ ಬಂಡೂ ನಗುತ್ತ ಹೇಳಿದ: "ಓ! ಇದು ಅನ್ನದ - - -"

ಕಂಡಕ್ಟರ ಬಾಯಿಗೆ ಬಂದಹಾಗೆ ಒದರಾಡತೊಡಗಿದ, ಬಂಡೂ ನಗುತ್ತಲೇ ಇದ್ದ. ಒಂದೆರಡು ನಿಮಿಷದ ನಂತರ ಅನ್ನದ ತುತ್ತನ್ನು ತಾನೇ ಕೊಟ್ಟೆ ಎಂದು ಕಂಡಕ್ಟರ ತನ್ನನ್ನು ಬಯ್ಯುತ್ತಿದ್ದಾನೆ ಎಂದು ಗಮನಕ್ಕೆ ಬಂದು "ಅರೇ, ಏನನ್ನುತ್ತಿ ? ನಾನು ನಿನಗೆ ರೊಕ್ಕ ಕೊಡಲಿಲ್ಲವೇ ?" ಎಂದು ಕೇಳಿದ.

ಬಂಡೂ ತನ್ನ ಮಾತನ್ನು ಸಿದ್ಧಪಡಿಸಲು ಮತ್ತೆ ಕಿಸೆಗೆ ಕೈ ಹಾಕಿದ. ಅಲ್ಲಿ ಪಾಕೀಟಿರಲಿಲ್ಲ. ಆಗ ತಾನು ರೊಕ್ಕವಿಲ್ಲದೆ ಮನೆಯಿಂದ ಹೊರಟಿದ್ದು ಅವನ ನೆನಪಿಗೆ ಬಂತು.

ಕಂಡಕ್ಟರ ತನ್ನ ಕೈಯಲಿದ್ದ ಅನ್ನದ ಮುದ್ದೆಯನ್ನು ಬಂಡೂನ ಕಿಸೆಗೆ ತುರುಕಿ "ತೆಗೆಯಿರಿ ರೊಕ್ಕಾ," ಎಂದ.

"ರೊಕ್ಕ! ಅರೇ ಭಾಯಿ, ಪಾಕೀಟು ಮರೆತು ಬಂದಿದ್ದೇನೆ" ಎಂದು ಬಂಡೂ ಕಂಡಕ್ಟರನ ಬೆನ್ನು ಚಪ್ಪರಿಸಿ ಗಟ್ಟಿಯಾಗಿ ನಕ್ಕ. ಆದರೆ ತನ್ನ ವರ್ತನೆ ಕಂಡಕ್ಟರನಿಗೂ ಬಸ್ಸಿನಲ್ಲಿರುವವರಿಗೂ ಸೇರಿಬರುತ್ತಿಲ್ಲವೆಂದು ಬಂಡೂಗೆ ಅರಿವಾಗಿ ಆತ ಮತ್ತೊಮ್ಮೆ ಕಂಡಕ್ಟರನ ಬೆನ್ನು ಚಪ್ಪರಿಸಿ ತನ್ನ ವರ್ತನೆಯ ಸ್ಪಷ್ಟೀಕರಣ ಮಾಡತೊಡಗಿದ.

ಆದರೆ ವಾತಾವರಣ ಬಿಸಿಯಾಗಿತ್ತು. ಅದರ ಝಳ ತಗಲಿದೊಡನೆ ಬಂಡೂನ ಆತ್ಮಸಂರಕ್ಷಣೆಯ ಪ್ರೇರಣೆ ಜಾಗೃತವಾಯಿತು. ಉಳಿದವರ ಕಲ್ಪನೆಗೆ ಬರುವ ಮೊದಲೆ ಆತ ಓಡುತ್ತಿದ್ದ ಬಸ್ಸಿನಿಂದ ಕೆಳಗೆ ಹಾರಿ ನೆಲಕ್ಕೆ ಬಿದ್ದ. ಬಿದ್ದವನೇ ಜಿಗಿದು ಚಂಡಿನಂತೆ ಅತಿ ತ್ವರಿತ ಗತಿಯಿಂದ ಓಡತೊಡಗಿದ.

ಬಂಡೂ ಮನೆ ಮುಟ್ಟಿದಾಗ ಜನರಲ್ ರಾಮಿರೊನಂತೆ ಹತ್ತು ಮೈಲು ನಡೆಯುವ ಅವನ ನಿರ್ಧಾರ ತಾನಾಗಿಯೇ ಪೂರ್ತಿಯಾಗಿ ಇನ್ನೊಂದು ಹೆಜ್ಜೆ ಕೂಡ ಎತ್ತಿಡುವಷ್ಟು ಸಾಮರ್ಥ್ಯ ಅವನಲ್ಲಿ ಉಳಿದಿರಲಿಲ್ಲ.

ಕೋಟನ್ನು ಹೇಗೋ ಕಳಚಿ ಆತ ಆರಾಮು ಖುರ್ಚಿಯಲ್ಲಿ ಬಿದ್ದುಕೊಂಡ. ಸ್ನೇಹಲತೆಯ ಸ್ವಾಗತ ಭಾಷಣ ಸುರುವಾಗುವ ಮೊದಲೆ ಅವನಿಗೆ ನಿದ್ದೆ ಹತ್ತಿತು.

ಆದರೂ ಆ ದೃಢ ನಿಶ್ಚಯಿ ಮನುಷ್ಯನ ಮುಖದ ಮೇಲೆ ಹಾಸ್ಯ ಮಿನುಗುತ್ತಲೇ ಇತ್ತು.

★

ಇವರಿಗೆ ಭಾರತವೇ ಸ್ಫೂರ್ತಿಯಿತ್ತಿತು.

ಇಂಡೊನೇಶಿಯದ ಭಾಗ್ಯಶಿಲ್ಪಿ ಸುಕರ್ಣ

ಕುಲಮರ್ವ ಬಾಲಕೃಷ್ಣ

" ಎಲ್ಲಿ ಮನ ಭಯವರಿಯದೋ
ನಿಲಬಹುದೊ ತಲೆಯೆತ್ತಿ

ಅಲ್ಲಿ, ಓ ಪಿತ, ಬಂಧವಿರಹಿತ
ಸುಖದ ಸ್ವರ್ಗದಲಿ
ನಮ್ಮ ನಾಡೆಚ್ಚತ್ತು ನಿಲುವಂ-
ತೆಸಗು ಕರುಣದಲಿ "

ರವೀಂದ್ರ, ರವೀಂದ್ರರು ಹೀಗೆಂದು ತಮ್ಮ ಪ್ರಸಿದ್ಧ ಅಭಯುದ ಗೀತವನ್ನು ಮಧುರ ಗಂಭೀರ ಕಂಠದಿಂದ ಹಾಡುತ್ತ ಭಾವನಾಲೋಕವನ್ನೇರಿದರು. ವಿಶ್ವಕವಿಯ ಪ್ರತ್ಯಕ್ಷ ಕಂಠವನ್ನು ಪ್ರತ್ಯಕ್ಷ ಸನ್ನಿಧಾನದಲ್ಲಿ ನಿಂತು ಆಲಿಸುತ್ತಿದ್ದ ಜಾವಾದ್ವೀಪವಾಸಿಗಳು ಅದರಲ್ಲಿ ತನ್ಮಯರಾಗಿ ಹೋದರು. ಇದು ನಡೆದುದು ೧೯೨೦ ರ ಸುಮಾರಿಗೆ. ರವೀಂದ್ರರ ಸುತ್ತ ನೆರೆದಿದ್ದ ಜನ ಸಮೂಹದಲ್ಲಿ ಒಬ್ಬ ತರುಣ ಈ " ಭಯವರಿಯದ ಬಂಧ ವಿರಹಿತ ಸ್ವರ್ಗ ಸುಖ "ದ ಸಂದೇಶವನ್ನು ಕೇಳಿ ಪುಲಕಿತನಾದ. ಅವನ ಮನಸ್ಸು ಆಗಿನಿಂದಲೇ ಆ ಸ್ವಾತಂತ್ರ್ಯ ಸುಖದ ಕನಸುಗಳನ್ನು ಹೆಣೆಯ ತೊಡಗಿತು.

ಆತನ ಹೆಸರು ಅಹಮದ ಸುಕರ್ಣ. ೩೦ ವರ್ಷಗಳ ನಂತರ ಸ್ವತಂತ್ರ ಇಂಡೋನೇಶಿಯದ ಪ್ರಥಮ ಅಧ್ಯಕ್ಷನಾಗುವ ಭಾಗ್ಯ ಆತನ ಹಣೆಯಲ್ಲಿ ಬರೆದಿತ್ತು.

ಇಂಡೊನೇಶಿಯ ಇಂದು ಇಸ್ಲಾಮಿ ರಾಷ್ಟ್ರವಾಗಿದ್ದರೂ ಭಾರತದ ಆತ್ಮ ಇಂದಿಗೂ ಅಲ್ಲಿ ಸ್ಪಂದಿಸುತ್ತಿದೆ. ಡಾ. ಸುಕರ್ಣರು ಇಂಡೊನೇಶಿಯದಲ್ಲಿ ಪ್ರಚಲಿತವಾಗಿರುವ ಛಾಯಾ ನಾಟಕಗಳನ್ನು ಚಿಕ್ಕಂದಿನಿಂದಲೂ ಮೆಚ್ಚುತ್ತಿದ್ದರು. ಈ ಛಾಯಾ ನಾಟಕಗಳಿಗೆ ಭಾರತದ ರಾಮಾಯಣ ಮಹಾಭಾರತಗಳ ಇಂಡೊನೇಶಿಯನ್ ಅವತಾರಗಳೇ ವಸ್ತುಭಾಂಡಾರ. ಅವುಗಳಲ್ಲಿ ಬರುವ ಭೀಮ, ಘಟೋತ್ಕಚರ ಪಾತ್ರಗಳು ನ್ಯಾಯ, ಉತ್ಸಾಹ ಮತ್ತು ಮನೋಬಲಗಳ ಸಂಕೇತವಾಗಿ ಅವರಿಗೆ ಅತಿ ಪ್ರಿಯವೆನಿಸಿದ್ದುವು. ತಮ್ಮ ಎಳವೆಯಲ್ಲಿ ಕುಮಾರವ್ಯಾಸನ ಭೀಮನಂತೆ ಮರ ಹತ್ತುವುದರಲ್ಲಿ, ಕಷ್ಟದಲ್ಲಿ ಸಿಕ್ಕಿಬಿದ್ದ ಒಡನಾಡಿಗಳಿಗೆ ಧೈರ್ಯದಿಂದ ನೆರವಾಗುವುದರಲ್ಲಿ ಅವರು ಮುಂದಾಗುತ್ತಿದ್ದರು.

ಈ ಹಿನ್ನೆಲೆಯಲ್ಲಿ ಗಾಂಧೀಜಿಯ ಸ್ವಾತಂತ್ರ್ಯ ಕಹಳೆ ಅವರನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಭಾರತವು ಗಾಂಧೀ ನೇತೃತ್ವದಲ್ಲಿ ಅಸಹಕಾರ ಚಳವಳಿಯನ್ನು ಹೂಡಿದಾಗ ಅಹಮದ ಸುಕರ್ಣ ಇಂಡೋನೇಶಿಯದ ಪ್ರಥಮ ಗಾಂಧೀ ಅನುಯಾಯಿಗಳಾದರು. ಈಗ ಅವರು ಜವಾಹರಲಾಲರ ತಟಸ್ಥವಾದದ ಅನುಯಾಯಿಗಳಾಗಿದ್ದಾರೆ.

ಇಂಡೊನೇಶಿಯದ ನೆಹರೂ ಎನಿಸಿದ ಸುಕರ್ಣರು ಸೌರಬಾಯದಲ್ಲಿ ೧೯೦೧ ಜೂನ್ ೬ ರಂದು ಹುಟ್ಟಿದರು. ಅವರ ತಂದೆ ಜಾವಾದವರು, ತಾಯಿ ಬಲಿ ದ್ವೀಪದವರು. ಹೀಗೆ ಅವರು ಇಂಡೊನೇಶಿಯದ ದ್ವೀಪಗಳ ಐಕ್ಯದ ಸಂಕೇತವಾಗಿದ್ದಾರೆ. ಅವರ ತಂದೆ ಬಡ ಶಾಲಾ ಮಾಸ್ತರರಾಗಿದ್ದರು. ಡಚ್ ಸಾಮ್ರಾಜ್ಯದಲ್ಲಿ ಇಂಡೊನೇಶಿಯನ್ನರಿಗೆ ಅಪರೂಪವಾಗಿ ಸಿಗುತ್ತಿದ್ದ ಬಾಂ



ಡುಂಗ್ ತಾಂತ್ರಿಕ ಸಂಸ್ಥೆಯ ಎಂಜನೀಯರಿಂಗ್ ಪದವಿಗಾಗಿ ಮಗನಿಗೆ ಬಹು ಕಷ್ಟದಿಂದಾದರೂ ಶಿಕ್ಷಣ ಕೊಡಿಸುವುದಕ್ಕೆ ಅವರ ಬಡತನ ಅಡ್ಡಿ ಬರಲಿಲ್ಲ. "ಎಂಜನಿಯರ್ ಸುಕರ್ಣರು ಕಟ್ಟಿದ್ದು ಅಷ್ಟರಲ್ಲೇ ಉಂಟು, ಆದರೆ ಡಚ್ ದೊರೆತನವನ್ನು ಮಾತ್ರ ಕೆಡವಿದರು" ಎಂದು ಟೈಮ್ ಪತ್ರಿಕೆ ಹಳಹಳಿಸುತ್ತದೆ. ಆದರೆ ಎಂಟು ಕೋಟಿ ಇಂಡೊನೇಶಿಯನ್ನರಿಗೆ ಮಾತ್ರ ಸುಕರ್ಣ "ಅಣ್ಣ" ನಾಗಿದ್ದು [ಬಂಗ್ ಸುಕರ್ಣ] ಸ್ವತಂತ್ರ ಇಂಡೊನೇಶಿಯದ ಶಿಲ್ಪಿಯಂತೆ ಅವರು ಕಾಣಿಸಿಕೊಳ್ಳುತ್ತಾರೆ. ಡಚ್ ಸಾಮ್ರಾಜ್ಯವನ್ನು ಕೆಡವಿ ಆ ದ್ವೀಪಸ್ತೋಮದಲ್ಲಿ ಸ್ವತಂತ್ರ ಇಂಡೊನೇಶಿಯವನ್ನು ಕಟ್ಟಿದವರು ಸುಕರ್ಣ.

ಸುಕರ್ಣರು ತಮ್ಮ ಹದಿನಾಲ್ಕನೆಯ ವಯಸ್ಸಿಗೆ ರಾಜಕೀಯದಲ್ಲಿ ಪ್ರವೇಶಿಸಿದರು. ಇಂಡೊನೇಶಿಯದ ಅತ್ಯಂತ ಹಳೆಯ ರಾಜಕೀಯ ಪಕ್ಷವಾದ "ಸರೇಕತ್ ಇಸ್ಲಾಂ" ದ ಜನಕರಾದ ಚುಕ್ರಾಮಿನತೊ ಎಂಬುವರ ಮನೆಯಲ್ಲಿದ್ದುಕೊಂಡು ಸುಕರ್ಣರು ತಮ್ಮ ಮಾಧ್ಯಮಿಕ ಶಿಕ್ಷಣ ಪಡೆಯುವಂತಾದುದು ಇದಕ್ಕೆ ಕಾರಣ. ಚುಕ್ರಾಮಿನತೊ ಮನೆಗೆ ಬರುವ ಹೋಗುವ ರಾಜಕಾರಣಿಗಳೆಲ್ಲರ ಪರಿಚಯದೊಡನೆ ರಾಜಕಾರಣದ ಮೂಲ ಸೂತ್ರಗಳನ್ನು ಡಾ. ಸುಕರ್ಣರು ಅಲ್ಲಿದ್ದ ಐದು ವರ್ಷಗಳಲ್ಲಿ ಕಲಿತುಕೊಂಡರು. ದೇಶಭಕ್ತಿಯಿಂದ ತುಂಬಿದ ಯುವಕ ಸುಕರ್ಣರು ಆಗ "ಯುವಕ ಜಾವಾ" ಚಳವಳಿಯನ್ನು ಸಂಘಟಿಸಿದರು.

ಭಾಷಣ, ಲೇಖನ, ನಾಯಕತ್ವ ಮತ್ತು ಮುತ್ಸದ್ದಿತನಗಳ ಸಹಜ ಪ್ರತಿಭೆಯಿದ್ದ ಸುಕರ್ಣರ ಚಳವಳಿ ಬೆಳೆಯಿತು. ಪತ್ರಿಕೆಗಳಿಗೆ "ಭೀಮ" ಎಂಬ ಹೆಸರಿನಿಂದ ಅವರು ಬರೆಯುತ್ತಲಿದ್ದ ಲೇಖನಗಳು ದೇಶದುದ್ದಕ್ಕೂ ಜನರನ್ನು ಉದ್ಬೋಧಿಸಿದವು.

ಇಪ್ಪತ್ತನೆಯ ವಯಸ್ಸಿಗೆ ಸುಕರ್ಣರು ಎಂಜಿನಿಯರಿಂಗ್ ಕಲಿಯಲು ಬಾಂಡುಂಗಿಗೆ ಬಂದರು. ಆದರೂ ಅವರಾಗ ಓದುತ್ತಿದ್ದುದು ದೇಶ-ವಿದೇಶಗಳ ಮಹಾನಾಯಕರ-ಪ್ರವಾದಿಗಳ ಆತ್ಮಚರಿತ್ರೆ, ಜೀವನ ಚರಿತ್ರೆಗಳನ್ನು. ಈ ಹೊತ್ತಿಗೇ ರವೀಂದ್ರರ ಭಾವಸ್ವರಾಜ್ಯ ಅವರಿಗೆ ಸ್ಫೂರ್ತಿಯಿತ್ತಿತು. ಗಾಂಧೀಜಿಯವರ ಅಸಹಕಾರ ಅಸ್ತ್ರವೇ ಅದಕ್ಕೆ ತಕ್ಕ ಸಾಧನವೆಂದು ತೋರಿತು. ಆಗ ಸುಕರ್ಣರು ತಾವು ಬರೆದ ಒಂದು ವ್ಯಂಗ್ಯ ಚಿತ್ರದ ಕೆಳಗೆ ಗಾಂಧೀಜಿಯ ಮಾತುಗಳನ್ನೇ ಉದಾಹರಿಸಿದ್ದರು.

ಇಂದಿನ ಏಶಿಯದ ಶ್ರೇಷ್ಠ ವಾಗ್ಮಿಗಳಲ್ಲಿ ಒಬ್ಬರಾದ ಸುಕರ್ಣರು ತಮ್ಮ ವಾಗ್ವೈಖರಿಯನ್ನು ರಾಷ್ಟ್ರೀಯ ಜಾಗೃತಿಗಾಗಿ ಬಳಸಿದಾಗ ಡಚ್ಚರು ಈ ತರುಣನನ್ನು ಕಣ್ಣು ತೆರೆದು ನೋಡುವಂತಾಯಿತು. ಬಾಂಡುಂಗ್ ರಾಜಕೀಯ ಸಂಘದಲ್ಲಿ ಅವರು ಮಾಡಿದ ಒಂದು ಭಾಷಣ ಡಚ್ ಅಧಿಕಾರಿಗಳ ಕಣ್ಣಿನಿಂದ ಕಿಡಿಗಳನ್ನುಗುಳಿಸಿದರೆ ಇಂಡೊನೇಶಿಯದ ಜನತೆಯಿಂದ ಅವರಿಗೆ "ವೇದಿಕೆಯ ಮೇಲಿನ ಸಿಂಹ" ಎಂಬ ಬಿರುದನ್ನು ತಂದಿತು.

೧೯೨೫ ರಲ್ಲಿ ಎಂಜನಿಯರಿಂಗ್ ಪದವೀಧರರಾಗಿ ಹೊರಬಿದ್ದವರೇ ಸುಕರ್ಣರು ನೆಹರೂರವರಂತೆ ರಾಜಕೀಯದಲ್ಲಿ ಧುಮುಕಿದರು. ಸೆರೆಮನೆ, ದೇಶಾಂತರವಾಸಗಳ ಶಿಕ್ಷೆಗಳನ್ನು ಅನುಭವಿಸಲು

ಆಣಿಯಾದರು. ೧೯೨೭ರಲ್ಲಿ ಇಂಡೋನೇಶಿಯನ್ ರಾಷ್ಟ್ರೀಯ ಪಕ್ಷವನ್ನು ಅವರು ಕಟ್ಟಿದರು. ಡಚ್ ಗವರ್ನರ್ ಜನರಲ್ಲರು ಆಗ ಸುಕರ್ಣರ ಈ ಅಸಹಕಾರ ಚಳುವಳಿಯ ವಿರುದ್ಧ ಎಚ್ಚರಿಕೆ ಯಿತ್ತರು. ಆದರೆ ದೇಶದ ಎಲ್ಲೆಡೆಗಳಲ್ಲಿ ಸುತ್ತಿ ರಾಷ್ಟ್ರೀಯತೆ ಅಸಹಕಾರಗಳನ್ನು ಬೋಧಿಸುವು ದನ್ನು ಸುಕರ್ಣರು ಬಿಡಲಿಲ್ಲ. ಇಂಡೋನೇಶಿ ಯದ ಸಣ್ಣ ಹಳ್ಳಿಗಳನ್ನು ಕೂಡ ಬಿಡದೆ ಪ್ರವಾಸ ಮಾಡಿ ಜನರನ್ನು ಸಂಘಟಿಸಿ ಆಂದೋಲನ ಹೂಡಿದ ಸುಕರ್ಣರಿಗೆ ದೇಶದ ಪ್ರತಿಯೊಬ್ಬನ ನಾಡಿಯ ಮಿಡಿತ ತಿಳಿದುಹೋಯಿತು.

ಆದರೆ ಈ ಅಪಾಯಕಾರಿ ತರುಣನನ್ನು ಡಚ್ ಸಾಮ್ರಾಜ್ಯವೆಷ್ಟುದಿನ ಸಹಿಸೀತು? ೧೯೨೯ ಡಿಸೆಂಬರದಲ್ಲಿ ಅವರನ್ನು ಬಂಧಿಸಿ ಎಂಟುತಿಂಗಳ ಕಾಲ ವಿಚಾರಣೆಯಿಲ್ಲದೆ ಸೆರೆಮನೆಯಲ್ಲಿಟ್ಟು ಆನಂತರ ಶಾಂತಿಭಂಗದ ಆಪಾದನೆಯ ಮೇಲೆ ಅವರಿಗೆ ನಾಲ್ಕು ವರ್ಷದ ಕಠಿಣ ಸಜೆಯನ್ನು ವಿಧಿಸಿತು. "ಇಂಡೊನೇಶಿಯಾ ಆಪಾದಿಸು ತ್ತದೆ'' ಎಂಬ ತಮ್ಮ ಮಹೋನ್ನತ ಕೃತಿಯನ್ನು ಆಗ ಸುಕರ್ಣರು ಬರೆದರು. ಅದು ಮುಂದೆ ಇಂಡೋನೇಶಿಯನ್ ರಾಷ್ಟ್ರೀಯವಾದಿಗಳ ವೇದ ವೆನಿಸಿತು. ೧೯೩೧ ರಲ್ಲಿ ಅವರನ್ನು ಬಿಡುಗಡೆ ಮಾಡಿದರೂ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಈ ಸಿಂಹದ ಮರಿಯನ್ನು ೧೯೩೩ ರಲ್ಲಿ ಮತ್ತೆ ಕತ್ತಲುಮನೆಗೆ ಡಚ್ಚರು ಸೇರಿಸಿದರು. ಈ ಸಲ ದ್ವೀಪಾಂತರ ವಾಸದ ಶಿಕ್ಷೆಗೆ ಸುಕರ್ಣ ಗುರಿ ಯಾಗಬೇಕಾಯಿತು.

ಎರಡನೆಯ ಮಹಾಯುದ್ಧದಲ್ಲಿ ಸೇರಿ ಜಪಾನು ಒಳ್ಳೆಯದು ಮಾಡಲಿಲ್ಲ ಎನ್ನುವವರಿ ದ್ದಾರು. ಜಪಾನಿನ ಯುದ್ಧದಾಹ ಅದಕ್ಕೇ ಮೂಲವಾದದ್ದು ನಿಜವಾದರೂ ಇಂಡೋ ನೇಶಿಯದ ಬಿಡುಗಡೆಯಲ್ಲಿ ಜಪಾನೀ ಸೇನೆ ಮಾಡಿದ ಕೆಲಸವನ್ನು ಸ್ವಾತಂತ್ರ್ಯಪ್ರಿಯ ಏಶಿ ಯದ ರಾಷ್ಟ್ರಗಳು ಎಂದೂ ಕಡೆಗಣಿಸಲಾರವು: ೧೯೪೨ ರಲ್ಲಿ ಜಪಾನದ ಸೇನೆ ಡಚ್ ಸೇನೆಯನ್ನು ಶರಣಾಗೊಳಿಸದಿರುತ್ತಿದ್ದರೆ ಇಂಡೋನೇಶಿಯದ ಸುಕರ್ಣ, ಹಟ್ಟಾ ಮುಂತಾದ ನ್ಯಾಯಕರ್ತ್ರು ಎಷ್ಟು ಕಾಲ ಸೆರೆಮನೆಯಲ್ಲಿ ಕೊಳೆಯಬೇಕಾ- ಗುತ್ತಿತ್ತೋ.

ತಮ್ಮ ಬಿಡುಗಡೆ ಹೀಗೆ ಆದೊಡನೆ ಡಾ. ಸುಕರ್ಣರು ತಮ್ಮ ಒಡನಾಡಿಗಳೊಡನೆ ಸೇರಿ ಚತುರ ಮುತ್ಸದ್ದಿತನದಿಂದ ಇಂಡೊನೇಶಿಯದ ಸ್ವಾತಂತ್ರ್ಯಕ್ಕೆ ತಳಹದಿಯಿಟ್ಟರು. ಯುದ್ಧದಲ್ಲಿ ಜಪಾನಿನ ಕೈ ಕುಸಿಯುತ್ತಿರುವುದು ಕಂಡಾಗ ಸುಕರ್ಣರು ಇಂಡೊನೇಶಿಯವನ್ನು ಸ್ವತಂತ್ರ ರಾಷ್ಟ್ರವಾಗಿ ಮಾಡಿ ಅದಕ್ಕೆ ಭದ್ರ ಸರಕಾರ ವೊಂದನ್ನು ಕೊಡುವುದಕ್ಕಾಗಿ ಒಂದು ಸಮಿತಿ ಯನ್ನು ರಚಿಸಿದರು. ಈ ಸಮಿತಿಯು ದೇಶದ ಸಂವಿಧಾನವನ್ನು ರಚಿಸಿತು. ಅಲ್ಲದೆ ಒಂದು "ಪಂಚಶೀಲ" ತತ್ವವನ್ನು ಅಂಗೀಕರಿಸಿತು. (ಅದು ಈಗ ಪ್ರಸಿದ್ಧವಾಗಿರುವ ತಾಟಸ್ಥ್ಯವಾದ ಪಂಚಶೀಲವಲ್ಲ) ದೇವರಲ್ಲಿ ವಿಶ್ವಾಸ, ಮಾನವೀ ಯತೆ, ರಾಷ್ಟ್ರೀಯತೆ, ಪ್ರಜಾಸತ್ತೆ, ಸಾಮಾಜಿಕ ನ್ಯಾಯ–ಈ ಪಂಚಶೀಲಗಳನ್ನು ಇಂಡೋನೇ ಶಿಯದ ತಾತ್ವಿಕ ಅಸ್ತಿಭಾರವಾಗಿ ಅಂಗೀಕರಿಸ ಲಾಯಿತು.

೧೯೪೫ ಅಗಸ್ಟ ೧೭ ರಂದು ಸುಕರ್ಣರು ಇಂಡೋನೇಶಿಯವನ್ನು ಸ್ವತಂತ್ರರಾಷ್ಟ್ರವೆಂದು ಸಾರಿದರು. ಆದರೆ ನಾಲ್ಕು ವರ್ಷಗಳ ಕಾಲ ಡಚ್ಚರ ಕಿರುಕಳ ಇಂಡೋನೇಶಿಯದ ಜನತೆಗೆ ತಪ್ಪಲಿಲ್ಲ. ಇಂಡೋನೇಶಿಯವನ್ನು ಜಪಾನದಿಂದ ರಕ್ಷಿಸಲು ತಪ್ಪಿದರೂ ಜಪಾನ ಸೋತೊಡನೆ ಮತ್ತೆ ಇಂಡೋನೇಶಿಯದ ಮೇಲೆ ತಮ್ಮಪ್ರಭುತ್ವ ಸ್ಥಾಪಿಸಲು ಡಚ್ಚರು ಸಶಸ್ತ್ರ ದಾಳಿ ನಡೆಸಿದರು. ಆದರೆ ಅವರ ಯತ್ನ ಫಲಿಸಲಿಲ್ಲ. ಜನ ಎಚ್ಚತ್ತಿ ದ್ದರು. ಡಚ್ಚರ ಟ್ಯಾಂಕುಗಳನ್ನು ವಿದ್ಯಾರ್ಥಿಗಳು, ಅಧ್ಯಾಪಕರು, ಕಾರಕೂನರೇ ಮೊದಲಾದವರಿಂದ ಕೂಡಿ ಅವಸರದಿಂದ ಕಟ್ಟಿದ ಇಂಡೋನೇಶಿ ಯದ ಸೈನ್ಯವು ಕತ್ತಿ, ಚೂರಿ, ಬಿದಿರುಗಳಗಳಿಂ- ದಲೇ ಎದುರಿಸಿತು. ಏಶಿಯದ ಜನತೆ ಹೊಸದಿಲ್ಲಿ ಯಲ್ಲಿ ಸೆರೆದ ಏಶಿಯ ಪರಿಷತ್ತಿನಲ್ಲಿ ತನ್ನ ಪ್ರತಿ ಭಟನೆಯನ್ನು ವ್ಯಕ್ತಪಡಿಸಿ ಜಾಗತಿಕ ಅಭಿಪ್ರಾ- ಯವನ್ನು ರೂಪಿಸಿತು. ಡಚ್ಚರ ಮಿತ್ರರು ಹಿಂಜರಿ ದರು. ಫಲವಾಗಿ ೧೯೪೯ ರ ಡಿಸೆಂಬರದಲ್ಲಿ

ಇಂಡೋನೇಶಿಯ ಸಂಪೂರ್ಣ ಸ್ವತಂತ್ರವಾಯಿತು. ೧೯೫೦ ರಲ್ಲಿ ಅದು ಸಂಯುಕ್ತ ರಾಷ್ಟ್ರ ಸಂಸ್ಥೆಯ ಸದಸ್ಯತ್ವವನ್ನೂ ಗಳಿಸಿತು.

ಹೊಸತಾಗಿ ಸ್ವಾತಂತ್ರ್ಯಗಳಿಸಿದ ಇಂಡೋನೇಶಿಯದ ಅಧ್ಯಕ್ಷರಾಗಿ ಡಾ. ಸುಕರ್ಣರು ಎದುರಿಸಬೇಕಾದ ಸಮಸ್ಯೆಗಳು ಹಲವಿದ್ದವು. ಆರ್ಥಿಕ ಸಮಸ್ಯೆ ಅದರಲ್ಲಿ ಅತ್ಯಂತ ಮುಖ್ಯವಾದುದು. ಸುಕರ್ಣರ ಮಹಾವ್ಯಕ್ತಿತ್ವದ ಪ್ರಭಾವವಿಲ್ಲದಿರುತ್ತಿದ್ದರೆ ದೇಶಕ್ಕೆ ಒದಗಿದ ಅಂಥ ಆರ್ಥಿಕ ಬಿಕ್ಕಟ್ಟಿನಲ್ಲಿ ಇಂಡೋನೇಶಿಯದ ಸರಕಾರ ಉರುಳುತ್ತಿತ್ತು. ಆದರೆ ಈ ಬಿಕ್ಕಟ್ಟಿನಲ್ಲಿ ಸುಕರ್ಣರು ದೇಶಕ್ಕಾಗಿ ಜನತೆಯಿಂದ ಸಾಲ ಪಡೆದೂ ವಿಶ್ವಾಸವನ್ನು ಉಳಿಸಿಕೊಂಡರು. ಅಷ್ಟೇ ಅಲ್ಲ, ಏಶಿಯದ ರಾಷ್ಟ್ರಗಳಿಗೆ ಸಹಕಾರಹಸ್ತವನ್ನು ಚಾಚಿ ಏಶಿಯಾಫ್ರಿಕಾ ಸಮ್ಮೇಲನವನ್ನು ಸಂಘಟಿಸಿದರು. ನೆಹರೂ ತಟಸ್ಥ ಧೋರಣೆಯ ಅನುಯಾಯಿಗಳಾದ ಅವರು ಏಶಿಯದ ಹಾಗೂ ಅನಭಿವೃದ್ಧರಾಷ್ಟ್ರಗಳ ಪರವಾಗಿ ವಾದಿಸುವುದರಲ್ಲಿ ನೆಹರೂರ ಬಲಗೈಯಂತೆ ಹೋರಾಡುತ್ತಿದ್ದಾರೆ.

"ರಾಷ್ಟ್ರೀಯತೆ, ಮಾರ್ಕ್ಸ್‌ವಾದ ಮತ್ತು ಇಸ್ಲಾಂಗಳ ಸಮನ್ವಯ ಸಾಧ್ಯವಿದೆ" ಎಂದು ಹೇಳುವ ಸುಕರ್ಣರು ತಮ್ಮ ನಂಬಿಕೆಯನ್ನೀಗ ಕಾರ್ಯರಂಗಕ್ಕಿಳಿಸುತ್ತಿದ್ದಾರೆ.

ಡಾ. ಸುಕರ್ಣರಿಗೀಗ ಮೂವರು ಹುಡುಗಿಯರೂ ಇಬ್ಬರು ಗಂಡು ಮಕ್ಕಳೂ ಇದ್ದಾರೆ– ಎರಡನೆಯ ಹೆಂಡತಿಯಲ್ಲಿ. ಮೊದಲನೆಯ ಹೆಂಡತಿಯಲ್ಲಿ ಮಕ್ಕಳಾಗಲಿಲ್ಲವೆಂದು ಅವರು ವಿವಾಹವಿಚ್ಛೇದ ಮಾಡಿಕೊಳ್ಳಬೇಕಾಯಿತು.

೧೯೫೬ ಮೇ ತಿಂಗಳಲ್ಲಿ ಅಮೇರಿಕೆಗೆ ಪ್ರವಾಸ ಹೊರಟಾಗ ಸುಕರ್ಣರ ಜೊತೆಗೆ ಅವರ ಹಿರಿಯ ಮಗ ಗಂಥರ್ ಕೂಡ ಇದ್ದ. ಅನೇಕ ಆಂತರಿಕ ಸಮಸ್ಯೆಗಳಿಂದ ಗಾಸಿಯಾದ ಸುಕರ್ಣರನ್ನು ಅಮೇರಿಕದ ರಾಜಕಾರಣಿಗಳು ತಮ್ಮ ಬುಟ್ಟಿಯಲ್ಲಿ ಸೇರಿಸಿಕೊಳ್ಳಬಲ್ಲೆವೆಂದು ಭ್ರಮಿಸಿದ್ದರು. ಆದರೆ ಸುಕರ್ಣರು ಮಾತ್ರ ಅಮೇರಿಕದ ಬಲೆಗೆ ಬೀಳಲಿಲ್ಲ.

ಸುಕರ್ಣರ ವ್ಯಕ್ತಿತ್ವ ಮೋಹಕವಾದದ್ದು. ವಾಶಿಂಗ್ಟನ್ ದಾರಿಯಲ್ಲಿ ಅವರ ವಾಹನ ಓಡುತ್ತಿದ್ದಾಗ ಸುಕರ್ಣರು ಒಮ್ಮೆಲೇ ಅದನ್ನು ನಿಲ್ಲಿಸಿ ಜನರ ಕೈಕುಲುಕಲಾರಂಭಿಸಿದರು. ಗುಪ್ತದಳದವರು ಬಿಗಡಾಯಿಸಿಕೊಂಡರು. ಸುಕರ್ಣರು ಪಕ್ಕದ ಐದು ವರ್ಷದ ಮಗುವೊಂದರ ತಲೆಯನ್ನು ತಮ್ಮೆಡೆಗೆ ಎಳೆದುಕೊಂಡು ಮರುಕ್ಷಣ ನಾಲ್ಕಡಿ ಮುಂದೆ ಸಾಗಿ ಒಬ್ಬ ಗೃಹಿಣಿಯನ್ನು ಪ್ರಶ್ನಿಸಿದರು: "ತಾಯಿ, ನಿನಗೆ ಮುತ್ತು ಕೊಡಲೆ?"

ಆಕೆ ಸಮ್ಮತಿಸಿದಳು. ಅವಳ ಮೃದುವಾದ ಕೆನ್ನೆಯಿಂದ ತಮ್ಮ ತುಟಿಯನ್ನು ತೆಗೆಯುತ್ತ ಸುಕರ್ಣ, "ಇದು ಇಂಡೋನೇಶಿಯದ ಮುತ್ತು!" ಎಂದರು. ಗೃಹಿಣಿ, "ನಿಜಕ್ಕೂ ವಾಷಿಂಗ್ಟನ್ ಚುಂಬನವಲ್ಲ ಇದು!" ಎಂದುಕೊಂಡಳು. ಸುಕರ್ಣರ ಅಮೇರಿಕ ಸಂದರ್ಶನ ಹಾಗೆ ಮುಗಿಯಿತು.

ಸುಕರ್ಣರು ಸಮಾಜವಾದದಲ್ಲಿ ಶ್ರದ್ಧೆಯುಳ್ಳವರು. ಆದರೆ ೧೯೪೮ ರಲ್ಲಿ ಕಮ್ಯುನಿಸ್ಟರು ದೇಶದಲ್ಲಿ ಬಂಡೆದ್ದಾಗ ಅವರು ಅದನ್ನು ಬಲವಾಗಿ ಹತ್ತಿಕ್ಕಿದರು. ಬಾಂಡುಂಗಿನಲ್ಲಿ ಏಶಿಯಾಫ್ರಿಕಾ ಸಮ್ಮೇಲನವನ್ನು ಕರೆದಾಗ ಚೀನೀ ಪ್ರಧಾನಿ ಚೌ ಎನ್ ಲಾಯರಿಗೆ ಹಸ್ತಲಾಘವವಿತ್ತ ಅವರು ತಮ್ಮ ದೇಶದ ಕಮ್ಯುನಿಸ್ಟರನ್ನು ನಿಭಾಯಿಸಿಕೊಳ್ಳಬಲ್ಲೆನೆಂಬ ವಿಶ್ವಾಸ ತಳೆದವರು. ಮೊನ್ನೆ ಮೊನ್ನೆ ಅವರು ಭಾರತ ಸಂಚಾರಕ್ಕೆ ಬಂದವರು ಪ್ರಧಾನ ಮಂತ್ರಿ ನೆಹರೂರೊಡನೆ ಏಶಿಯಾಫ್ರಿಕಗಳ, ಜಗತ್ತಿನ ಮತ್ತು ಇತರ ಸಮಸ್ಯೆಗಳ ಬಗೆಗೆ ಮುಕ್ತವಾಗಿ ಸಂಭಾಷಣೆ ನಡೆಸಿದರು. ಭಾರತದಲ್ಲಿ ನೆಹರೂ ಜನಪ್ರಿಯರಾಗಿರುವಂತೆ ಇಂಡೋನೇಶಿಯದಲ್ಲಿ ಸುಕರ್ಣರು ಜನಪ್ರಿಯರಾಗಿದ್ದು ಈ ಇಬ್ಬರು ಅದ್ವಿತೀಯ ದೇಶ ಪ್ರೇಮಿಗಳು ಹಾಗೂ ಮಾನವವಾದಿಗಳು ಒಂದೆಡೆ ಸೇರಿದುದರಿಂದ ಭಾರತದ ಶಾಂತಿ ಸಹನೆಗಳ ಪಂಚಶೀಲ ಧೋರಣೆಗೆ ಹೆಚ್ಚಿನ ಬಲವುಂಟಾಗಿದೆಯೆಂದು ಹೇಳಬೇಕು.

ನಮ್ಮ ರಾಷ್ಟ್ರೀಯ ರೋಗದ ಒಂದು
ನಿರ್ದಾಕ್ಷಿಣ್ಯ ವಿಮರ್ಶೆ—

ನಾವೇಕೆ ಬಡವರು ?

ಟಿ. ಎ. ಪೈ

ನಾವೇಕೆ ಬಡವರು ?

ಇದು ಭಾರತೀಯರನ್ನು ಪದೇ ಪದೇ ಬಾಧಿಸುತ್ತಿರುವ ಪ್ರಶ್ನೆ. ಸ್ವಾತಂತ್ರ್ಯ ಪೂರ್ವದಲ್ಲಾದರೂ ನಮ್ಮ ಬಡತನಕ್ಕೆ ಬ್ರಿಟಿಷರು ಕಾರಣರೆಂಬ ನೆಪವನ್ನು ಹೇಳಬಹುದು. ಸ್ವಾತಂತ್ರ್ಯ ದೊರೆತು ಹತ್ತು ವರ್ಷಗಳಾದರೂ ನಾವಿನ್ನೂ ಬಡವರಾಗಿಯೆ ಉಳಿದಿದ್ದೇವೆ, ಕಾರಣವೇನು ?

ಇದೇ ಹತ್ತು ವರುಷಗಳಲ್ಲಿ ಮುಕ್ಕಾಲು ಮೂರುವೀಸ ನಿರ್ನಾಮವಾಗಿದ್ದ ಜರ್ಮನಿ ಪುನರುಜ್ಜೀವನಗೊಂಡು ಇಂದು ಸಂಪತ್ತು, ಸಮೃದ್ಧಿಯಿಂದ ಕೂಡಿದೆ. ಜರ್ಮನಿಯ ಸಾಮಗ್ರಿಗಳು ಜಗತ್ತಿನ ಮಾರುಕಟ್ಟೆಯಲ್ಲಿ ತೀವ್ರ ಸ್ಪರ್ಧೆಯನ್ನು ಕೊಡುತ್ತಿವೆ. ಇದು ಹೇಗೆ ಸಾಧ್ಯವಾಯಿತು ? ವಿದೇಶೀಯರ ಸಹಾಯದಿಂದಲೇ ? ಅಥವಾ ಸ್ವಂತ ಪ್ರಯತ್ನದಿಂದಲೆ ?

ಜರ್ಮನರು ದುಡಿಯುತ್ತಾರೆ. ಈ ದುಡಿತವು ಯುರೋಪಿಯನ್ ರಾಷ್ಟ್ರಗಳ ಮನೆಮಾತಾಗಿರುವುದು. ದಿನಾ ಎಂಟುಗಂಟೆಗಳ ಕಾಲ ಶಕ್ತಿಮೀರಿ, ಚ್ಯುತಿ ಇಲ್ಲದೆ ಇವರು ದುಡಿಯುತ್ತಾರೆ. ಸಂಬಳ ಹೆಚ್ಚಾಗಬೇಕೆಂಬ ತತ್ವವನ್ನು ಇಲ್ಲಿಯ ಕೆಲಸಗಾರರು ಒಪ್ಪುತ್ತಾರೆ. ಆದರೆ ದುಡಿಯುವ ಕಾಲ ಕಡಿಮೆಯಾಗಬೇಕೆಂಬ ಮಾತು ಅವರಿಗೆ ಆಶ್ಚರ್ಯವನ್ನುಂಟುಮಾಡುತ್ತದೆ. ದುಡಿಯುವುದು ಕಡಿಮೆಯಾದರೆ ಸಂಪತ್ತು ಹೆಚ್ಚುವುದಾದರೂ ಹೇಗೆಂದು ಅವರು ಪ್ರಶ್ನಿಸುತ್ತಾರೆ. ಇದೇ ನಮಗೂ ಜರ್ಮನರಿಗೂ ಇರುವ ವ್ಯತ್ಯಾಸ.

ಜರ್ಮನರ ದುಡಿತಕ್ಕೆ ಇನ್ನೊಂದು ಕಾರಣವೂ ಇದೆ. ದುಡಿಯದ ಮೈಗಳ್ಳನು ಅಲ್ಲಿ ಬದುಕುವುದಿಲ್ಲ. ಕೆಲಸಮಾಡದ ಸೋಮಾರಿಗಳು ತಾವು ಬಡವರೆಂದು ಅತ್ತರೆ ಜರ್ಮನರು ದಾನ ಕೊಡುವುದಿಲ್ಲ. “ಎಲ್ಲರೂ ದುಡಿದೇ ತಮ್ಮ ಬಡತನವನ್ನು ನೀಗಿಕೊಳ್ಳಬೇಕು. ನನ್ನ ಕಷ್ಟಾರ್ಜಿತ ಹಣವನ್ನು ನಿನಗೇಕೆ ಕೊಡಬೇಕೆಂ”ದು ಅವರು ಕೇಳಿಬಿಡುತ್ತಾರೆ. ಆದರೆ ಯಾವುದೇ ದುರ್ಘಟನೆಯಿಂದ ಸಂತ್ರಸ್ತರಾದ ಜನರಿಗೆ ಉದಾರ ಧನಸಹಾಯ ಮಾಡಲು ಅವರು ಹಿಂಜರಿಯುವುದಿಲ್ಲ.

ಇಷ್ಟನ್ನು ತಿಳಿದರೆ ಭಾರತದ ಬಡತನದ ಕಾರಣವನ್ನು ಹುಡುಕಲು ದೂರಹೋಗಬೇಕಾಗಿಲ್ಲ. ಇಲ್ಲಿ ಒಂದೆಡೆ ಕೆಲಸ ಕಡಿಮೆಯಾಗಬೇಕು, ಸಂಬಳ ಹೆಚ್ಚಬೇಕೆಂಬ ಬೊಬ್ಬೆ ಕಂಡರೆ, ಇನ್ನೊಂದೆಡೆ ತಮ್ಮ ಪೋಷಣೆಯನ್ನು ಮಾಡತಕ್ಕದ್ದು ಇನ್ನೊಬ್ಬನ ಧರ್ಮ, ಕರ್ತವ್ಯವೆಂದೇ ತಿಳಿದು, ಕೂತುಣ್ಣುವುದೇ ತಮ್ಮ ಜನ್ಮಸಿದ್ಧವಾದ

ಉಡುಪಿಯ “ ಪ್ರಕಾಶ ” ಪರ್ಯಾಯ ಸಂಚಿಕೆಯಿಂದ

ಹಕ್ಕೆಂದು ಭಾವಿಸಿರುವ ಇನ್ನೊಂದು ವರ್ಗವನ್ನು ಜನತೆಯಲ್ಲಿ ಕಾಣಬಹುದು. ಒಂದು ವರ್ಗ ಸಮಾಜದ ಮೇಲೆ, ಸಮಾಜ ರಾಜ್ಯಸರಕಾರದ ಮೇಲೆ, ರಾಜ್ಯಸರಕಾರ ಕೇಂದ್ರ ಸರಕಾರದ ಮೇಲೆ, ಕೇಂದ್ರ ಸರಕಾರ ವಿದೇಶೀ ಸರಕಾರಗಳ ಮೇಲೆ ಸಹಾಯ ಸವಲತ್ತಿಗಾಗಿ ಅವಲಂಬಿಸಿರುವುದನ್ನು ಸ್ಮರಿಸಿಕೊಂಡರೆ ನಮ್ಮಲ್ಲಿ ಭಿಕ್ಷುಕರೇ ಹೆಚ್ಚೆಂದು ತೋರುವುದು. ನಿರೀಕ್ಷೆಯ ಸಹಾಯವಾದರೂ ತಲಪುವಾಗ, ಒಬ್ಬರನ್ನು ಇನ್ನೊಬ್ಬರು ನಂಬದ ದೊಡ್ಡ ಮೇಲ್ವಿಚಾರಣಾ ಶಿಬಂದಿ, ಬಿಕ್ಕಟ್ಟಿನ ಪದ್ಧತಿ, ಕೇಂದ್ರೀಕೃತ ಅಧಿಕಾರ ಇವುಗಳಿಂದ ಅದು ಒಂದೇ ಕ್ಷೀಣವಾಗಿ ಅದೃಶ್ಯವಾಗುತ್ತದೆ; ಇಲ್ಲವೆ ಹೆಚ್ಚು ವಿಳಂಬವಾಗಿ ಅಪ್ರಯೋಜಕವಾಗುತ್ತದೆ. ದ್ವಿತೀಯ ಯೋಜನೆಗೆ ೬೦೦೦ ಕೋಟಿ ರೂಪಾಯಿಯನ್ನು ಸರಕಾರ ಸಂಗ್ರಹಿಸಿಟ್ಟು ಅದನ್ನು ಖರ್ಚು ಮಾಡಲು ಬಹಳ ಆತುರದಲ್ಲಿ ಇದೆಯೆಂಬ ಭಾವನೆ ನಮ್ಮಲ್ಲಿ ಅನೇಕರು ಕಟ್ಟಿಕೊಂಡು ಎಲ್ಲರೂ ಇದರಲ್ಲಿ ತಮ್ಮ ಪಾಲನ್ನು ಕೊಡಿರೆಂದು ಕೇಳುವುದರಲ್ಲೇ ಮಗ್ನರಾಗಿರುವಂತಿದೆ. ಇಷ್ಟೊಂದು ಹಣವೆಂದರೆ ನಮ್ಮ ಉಳಿತಾಯ, ನಾವು ಕೊಡಲು ಸಾಧ್ಯವಿರುವ ಸಾಲ, ನಮ್ಮ ಎರಡೂ ಕೈಗಳ ದುಡಿತದ ಮೊತ್ತವೆಂದು ಜನರಿಗಿನ್ನೂ ಮುಂದಟ್ಟಾಗಲಿಲ್ಲ. ಅದೇ ನಮ್ಮ ದೊಡ್ಡ ಕೊರತೆ.

ಅಂತೆಯೇ ರಷ್ಯಾ, ಅಮೇರಿಕ ಮೊದಲಾದ ದೇಶಗಳು ಉನ್ನತಮಟ್ಟದಲ್ಲಿವೆ, ನಮ್ಮ ದೇಶವೂ ಅದೇ ರೀತಿಯಲ್ಲಿ ಮುಂದೆ ಬರಬೇಕೆಂಬ ದೊಡ್ಡ ಕಲ್ಪನೆಯಿಂದ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೂಡಿಸಬೇಕೆಂಬ ಕನಸಿನಲ್ಲಿ ನಾವಿರುವೆವು. ಪರಿಣಾಮವಾಗಿ ಚಿಕ್ಕಪುಟ್ಟ ವಿಷಯಗಳು ನಮ್ಮ ಕಣ್ಣಿಗೆ ಬೀಳುವುದಿಲ್ಲ. ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರ ಎಲ್ಲಾಗಬೇಕೆಂಬುದಕ್ಕೆ ಎಷ್ಟು ಸಮಿತಿಗಳಾದವು, ಎಂಥಾ ವಿಚಾರಣೆ ನಡೆಯುತ್ತಿದೆ; ದ್ವಿತೀಯ ನೌಕಾಂಗಣದ ಬಗ್ಗೆ ಏನೇನು ತಜ್ಞರು ಸುತ್ತುತ್ತಿದ್ದಾರೆ, ವರದಿ ಒಪ್ಪಿಸುತ್ತಿದ್ದಾರೆ; ದಕ್ಷಿಣಾಪಥದ ರೈಲ್ವೆ ಜೋಡಣೆಗೆ ಎಷ್ಟು ಬಗೆಯಲ್ಲಿ ಪರಿಶೀಲನೆ ಆಯಿತು—ಇದನ್ನೆಲ್ಲ ನೋಡಿದರೆ ಪರಿಶೀಲನೆ, ತಜ್ಞರ ವರದಿಯಲ್ಲೆ ಕಾಲಹರಣ ಮಾಡುತ್ತಿದ್ದೇವೆ, ಖರ್ಚು ಮಾಡುತ್ತಿದ್ದೇವೆ. ಕೆಲಸ ಆರಂಭಮಾಡಲು ಹಣವಿಲ್ಲವೆಂದು ತೆಪ್ಪಗೆ ಕುಳಿತುಕೊಳ್ಳುತ್ತಿದ್ದೇವೆ. ಪ್ರಬುದ್ಧ ಬಂದರ, ನೌಕಾಂಗಣ, ರೇಲ್ವೆ ಜೋಡಣೆ ಇವೆಲ್ಲ ಆಗಬೇಕಾದ ವಿಷಯಗಳೇನೋ ಸರಿ. ಆದರೆ ಆ ದಿನವನ್ನು ಕಾಯುವುದಕ್ಕಿಂತ, ಧಕ್ಕೆ ಇಲ್ಲದ ಬಂದರಗಳಿಗೆ ಧಕ್ಕೆ, ಸಂಪರ್ಕಕ್ಕೆ ಬೇಕಾದ ಅನುಕೂಲ, ರಸ್ತೆಗಳಿಲ್ಲದ ಕಡೆಗಳಲ್ಲಿ ರಸ್ತೆ ಹಾಗೂ ಇತರ ಚಿಕ್ಕಪುಟ್ಟ ಅನುಕೂಲತೆಗಳನ್ನು ಕೂಡಲೇ ರಚಿಸಬಾರದೇಕೆ? ನೌಕಾಂಗಣದ ಬದಲಿಗೆ ಇಷ್ಟರ ತನಕ ಕರಾವಳಿಯ ಸಾರಿಗೆಗೆ ಉತ್ತಮ ಸಾಧನವಾಗಿರುವ 'ಮಚ್ವೆ'ಗಳನ್ನು ರಚಿಸಲು ಉತ್ತೇಜನ, ತರಬೇತಿ ಕೊಡಬಾರದೇಕೆ?

ಜರ್ಮನಿಯ ನಾಲ್ಕೂವರೆ ಕೋಟಿ ಜನಸಂಖ್ಯೆಗೆ ಚಿಕ್ಕ ದೊಡ್ಡ ೩೬ ನೌಕಾಂಗಣಗಳಿವೆ. ಹೊಸತಾಗಿ ರಚಿಸಲ್ಪಡುತ್ತಿದ್ದ ಒಂದು ನೌಕಾಂಗಣಕ್ಕೆ ನಾನು ಹೋಗಿದ್ದೆ. ನಮ್ಮ ದೇಶದಲ್ಲಿ ಕಾಣುವಂಥಾ ದೊಡ್ಡ ಗಲಾಟೆ ಏನೂ ಇಲ್ಲದೆ 'ಎಸ್ ಬೆಸ್ಟೊ' ಹಲಗೆಗಳಿಂದ ರಚಿಸಲ್ಪಟ್ಟ ಕೆಲವು ಹಂಗಾಮಿ ಶೆಡ್ಡುಗಳನ್ನು ಹಾಕಿದ್ದು, ಜನರು ಕೆಲಸ ಮಾಡುತ್ತಿದ್ದಾರೆ. ಚಿಕ್ಕ ಮಟ್ಟದಲ್ಲಿ ಹೀಗೆಯೇ ಆರಂಭಿಸಿ ದೊಡ್ಡ ನೌಕಾಂಗಣವನ್ನು ಅವರು ರಚಿಸುತ್ತಾರೆ. ನಾವು ತಜ್ಞರ ಪರಿಶೀಲನೆ, ವರದಿಗಳಲ್ಲೆ ನಿರತರಾಗಿರುವಾಗ ಅವರು ಸಮಯಕ್ಕೆ ಬೆಲೆ ಕೊಟ್ಟು, ದುಡ್ಡಿನ ಮೌಲ್ಯವನ್ನು ತಿಳಿದವರಾಗಿದ್ದು ಕೆಲಸ ಸಾಧಿಸುತ್ತಿದ್ದಾರೆ.

ದೊಡ್ಡ ದೊಡ್ಡ ನೀರಾವರಿ ಯೋಜನೆಗಳ ಭರದಲ್ಲಿ ಚಿಕ್ಕ ಪುಟ್ಟ ಹಳ್ಳಿಯ ಕೆರೆತೋಡುಗಳು ನಮ್ಮ ದೃಷ್ಟಿಗೆ ಬೀಳುವುದಿಲ್ಲ. ಲಕ್ಷಾಂತರ ಎಕರೆ ಭೂಮಿಯು ಕೃಷಿಗೆ ಯೋಗ್ಯವಾಗಬೇಕೆಂಬ ಹಂಬಲದಲ್ಲಿ ಬಡರೈತ ನಾಲ್ಕು ಮಾರು ಹೆಚ್ಚಿನ ಜಾಗದಲ್ಲಿ ಬೆಳೆ ಬೆಳೆಸಿದರೆ ಗಣನೆಗೆ

ಬರುವುದಿಲ್ಲ. 'ಹೆಚ್ಚಿಗೆ ಆಹಾರ ಬೆಳೆಸಿರಿ'
ಎಂಬ ಪ್ರಚಾರವನ್ನು ಮಾಡುತ್ತಿದ್ದರೂ ಪ್ರಚಾರ
ವಿಲ್ಲದೇನೇ ತನ್ನಷ್ಟಕ್ಕೆ ದುಡಿದು ಹೆಚ್ಚು ಬೆಳೆಸು
ವವನನ್ನು ನಾವು ಗೌರವಿಸುವುದೂ ಇಲ್ಲ;
ಕಡಿಮೆ ಬೆಳೆಸುತ್ತಿರುವವನನ್ನು ನಾವು 'ಇದೇಕೆ
ಹೀಗೆಂ'ದು ಪ್ರಶ್ನಿಸುವುದೂ ಇಲ್ಲ.

ನಮ್ಮ ಜನರು ಸರಳಜೀವಿಗಳು, ಲೌಕಿಕ
ಕ್ಕಿಂತ ಪಾರಮಾರ್ಥಿಕರೆಂಬ ಭಾವನೆ ನಮ್ಮ-
ಲ್ಲಿದೆ. ಇಲ್ಲಿಯ ಹವಾಮಾನ, ಸ್ಥಿತಿಗತಿಯಲ್ಲಿ
ಬಟ್ಟೆ ಇಲ್ಲದೆಯೂ ಮನುಷ್ಯ ಬದುಕಿಯಾನು.
ಐರೋಪ್ಯ ರಾಷ್ಟ್ರಗಳಲ್ಲಿ ಬಟ್ಟೆ ಇಲ್ಲದವ ಛಳಿ
ಯಲ್ಲಿ ಮರಗಟ್ಟಿ ಸತ್ತಾನು. ಈ ಪರಿಸ್ಥಿತಿಯೂ
ನಮ್ಮ ಸೋಮಾರಿತನಕ್ಕೆ ಕಾರಣವಿರಬಹುದು.
ಅವಶ್ಯಕತೆಗಳು ಕಡಿಮೆ ಆದಾಗ ದುಡಿತದ
ಅಗತ್ಯ ಕಾಣುವುದಿಲ್ಲ. ಆದರೆ ಲೌಕಿಕ ಲಂಪಟ
ರೆಂದು ನಾವು ಕರೆಯುತ್ತಿರುವ ಐರೋಪ್ಯರು ಹಲ
ವಾರು ವಿಚಾರಗಳಲ್ಲಿ ನಮಗಿಂತ ಸರಳರು.
ನಮ್ಮ ದೇಶದಲ್ಲಿ ಈಗೀಗ ಕಟ್ಟಡಗಳಿಗೆ
ಕಾಂಕ್ರೀಟ್ ಇಲ್ಲದೆ ನಿರ್ವಾಹವಿಲ್ಲವೆಂದಾಗಿದೆ.
ಐರೋಪ್ಯ ರಾಷ್ಟ್ರಗಳಲ್ಲಿ ಹೆಚ್ಚಿನ ಕಟ್ಟಡಗಳು
ಹಂಚಿನ ಛಾವಣಿಯವುಗಳಾಗಿವೆ. ಹುಲ್ಲಿನ
ಮಾಡಿನ ಮನೆಗಳೂ ಇವೆ. ಆದರೆ ಈ ಹುಲ್ಲಿನ
ಮಾಡಿನ ಮನೆಗಳನ್ನು ಅವರು ಬಡವರ ಗುಡಿಸ
ಲೆಂದು ಕರೆಯದೆ, ಅವುಗಳನ್ನು ತೋರಿಸಲು
ನಾಚದೆ, "ಮನೆಯ ಮಾಡನ್ನು ರಚಿಸುವ
ಇನ್ನೊಂದು ವಿಧಾನ ಇದು" ಎಂದು ಅಭಿಮಾನ
ಪೂರ್ವಕವಾಗಿ ಹೇಳುತ್ತಾರೆ. ಕಟ್ಟಡಗಳ
ಬಾಹ್ಯ ಆಡಂಬರಗಳಿಗೆ ಹೆಚ್ಚಿನ ಬೆಲೆಕೊಡದೆ,
ಸುಖವಾಗಿ ಉಳಕೊಳ್ಳಲು ಬೇಕಾದ ಎಲ್ಲಾ
ಸೌಕರ್ಯ ಸಾಮಗ್ರಿಗಳಿಗೆ ವಿಶೇಷ ಗಮನ
ಕೊಡುತ್ತಾರೆ. ಒಂದು ಕಪ್ ಕಾಫಿಗೆ ರೂ.
೧-೫-೦ ಅಲ್ಲಿ ತೆರಬೇಕಾಗುವುದರಿಂದ ಇಲ್ಲಿಯ
ಹಾಗೆ ದಿನಾ ಎರಡೆರಡಾಣೆಯ ಹತ್ತೆಂಟು
ಸಿಂಗಲ್ ಚಾ-ಕಾಫಿ ಕುಡಿಯುವ ಅನುಕೂಲತೆ
ಅವರಿಗಿಲ್ಲ; ಭೂರಿಭೋಜನ, ದಾನ-ದಕ್ಷಿಣೆಯ
ರೂಪದಲ್ಲಿ ಅಪವ್ಯಯವಿಲ್ಲ. ಶಂಕುಸ್ಥಾಪನೆಯಿಂ-
ದಾರಂಭವಾಗಿ ಉದ್ಘಾಟನೆಯ ತನಕ ದಿನ ದಿನ
ಸಾವಿರಾರು ಸಮಾರಂಭಗಳು, ಉಪಹಾರ
ಸತ್ಕಾರ ಇವುಗಳಿಗೆಲ್ಲ ಅವರಿಗೆ ಸಮಯವೂ ಇಲ್ಲ,
ಹಾಳುಗೇಡಿ ಬುದ್ಧಿಯೂ ಇಲ್ಲ. ಯಾವುದು
ಅಗತ್ಯ, ಯಾವುದು ಅನಗತ್ಯವೆಂಬುದನ್ನು ವಿಮ
ರ್ಶಿಸಿ ಖರ್ಚು ಮಾಡುತ್ತಾರೆ. ನಮ್ಮಲ್ಲಿ ಒಂದೆಡೆ
ಆಡಂಬರಕ್ಕೆ ಬೆಲೆಯುಂಟಾದರೆ, ಇನ್ನೊಂದೆಡೆ
ಜೀವನಾವಶ್ಯಕ ಸಾಮಗ್ರಿಗಳೂ ಇಲ್ಲದ 'ದಿಗಂ-
ಬರ'ರಿದ್ದಾರೆ.

ಈ ಎಲ್ಲ ನಮ್ಮ ಕಷ್ಟ, ಸಂಕಷ್ಟಗಳಿಗೆ ನಮ್ಮ
ಹೆಚ್ಚುತ್ತಿರುವ ಜನಸಂಖ್ಯೆಯೇ ಕಾರಣವೆಂದು
ನಮ್ಮ ತಜ್ಞರು (!) ಕಂಡುಕೊಂಡಿದ್ದಾರೆ. ನನ್ನ
ಅಭಿಪ್ರಾಯವೂ ಹಾಗೆಯೇ ಇತ್ತು. ಆದರೆ ನಮ್ಮ
ಭೂನಕ್ಷೆಗಳನ್ನು ಹೋಲಿಸಿದರೆ ರಷ್ಯಾವನ್ನುಳಿದು
ಐರೋಪ್ಯ ರಾಷ್ಟ್ರಗಳ ವಿಸ್ತಾರ ನಮ್ಮ ಭಾರತ-
ದಷ್ಟೇ ಇದೆ. ಇಲ್ಲಿಯ ಜನಸಂಖ್ಯೆಯೂ ಅಲ್ಲಿಯ
ಜನಸಂಖ್ಯೆಯೂ ಸಾಮಾನ್ಯವಾಗಿ ಒಂದೇ
ಪರಿಮಾಣದಲ್ಲಿದೆ. ಜನಸಂಖ್ಯೆಯ ಹೆಚ್ಚಳವೂ
ಒಂದೇ ಪ್ರಮಾಣದಲ್ಲುಂಟಾಗುತ್ತಿದೆ. ಜನ
ಸಂಖ್ಯೆಯ ಹೆಚ್ಚಳ ನಮಗೆ ಬಡತನವನ್ನುಂ-
ಟುಮಾಡುತ್ತಿದೆಯಾದರೆ ಅಲ್ಲಿ ಸಂಪತ್ತನ್ನು
ಸಮೃದ್ಧಿಗೊಳಿಸುತ್ತಿದೆ. ಆದುದರಿಂದ ಜನಸಂ-
ಖ್ಯೆಯ ಹೆಚ್ಚಳ ನಮ್ಮ ಎಲ್ಲಾ ಆಪತ್ತಿಗೆ ಕಾರಣ
ವೆಂಬ ನೆಪ ನಾವಿನ್ನು ನಂಬಕೂಡದು. ಒಂದು
ದೇಶದ ಜನಸಂಖ್ಯೆ ಆಪತ್ತನ್ನೂ ತರಬಹುದು,
ಸಂಪತ್ತನ್ನೂ ಉಂಟುಮಾಡಬಹುದು. ದುಡಿ
ಯದ ಮೈಗಳ್ಳರೇ ನಮ್ಮ ಆಪತ್ತು. ದುಡಿಯುತ್ತಿ
ರುವ ಜನರೇ ಅವರ ಸಂಪತ್ತು, ಇದು ಮುಖ್ಯ.

ಇದರಲ್ಲೂ ಒಂದು ವಿಚಾರವನ್ನು ನಾವು
ಮರೆಯಬಾರದು. ಪ್ರಕೃತಿದೇವಿ ಭಾರತದ
ಮಟ್ಟಿಗೆ ಪಕ್ಷಪಾತಿಯಾಗಿದ್ದಾಳೆ. ನಮ್ಮಲ್ಲಿರು
ವಷ್ಟು ನೈಸರ್ಗಿಕ ಸಂಪತ್ತು ಐರೋಪ್ಯ ರಾಷ್ಟ್ರ
ಗಳಲ್ಲೆಲ್ಲೂ ಇಲ್ಲ. ಕಚ್ಚಾಮಾಲುಗಳಿಲ್ಲದೆ, ನೈಸ
ರ್ಗಿಕ ಆಸರೆಗಳಿಲ್ಲದೆ ಅಲ್ಲಿಯ ಜನರು ಕಷ್ಟ
ದಿಂದ ಬೆವರಿಳಿಸಿ ಬೇಕಾದ ಅನುಕೂಲತೆಗಳನ್ನು
ನಿರ್ಮಿಸಿಕೊಳ್ಳುತ್ತಿದ್ದಾರೆ. ನಮ್ಮಲ್ಲಿರುವ ನೈಸ-

ರ್ಗಿಕ ಅನುಕೂಲತೆಗಳನ್ನು ಕಡೆಗಣಿಸಿ ನಾವು ಬಡವರೆಂದು ಗೋಳಿಡುವುದರಲ್ಲೆ ತೃಪ್ತರಾಗಿರುವುವೆ. ಆದುದರಿಂದ ಸಂಪತ್ತಿನ ದೇಶದಲ್ಲಿರುವ ಬಡವರು ನಾವಾದರೆ, ಬಡದೇಶದಲ್ಲಿರುವ ಸಿರಿವಂತರು ಅವರು. ಅವರು ನಿಷ್ಠೆಯಿಂದ ಕೆಲಸ ಮಾಡುತ್ತಾರೆ ; ನಾವು ಇಷ್ಟಬಂದಂತೆ ವರ್ತಿಸುತ್ತಿದ್ದೇವೆ, ಅದೇ ವ್ಯತ್ಯಾಸ.

ಅಲ್ಲದೆ, ಆರ್ಥಿಕ ಸುಧಾರಣೆಗಳಿಗೆ ಕೊಡಬೇಕಾದಷ್ಟು ಗಮನವನ್ನು ನಾವು ಕೊಡುತ್ತಿಲ್ಲ. ನಮ್ಮ ಜನ ರಾಜಕೀಯಕ್ಕೇನೆ ಹೆಚ್ಚಿನ ಬೆಲೆ ಕೊಡುತ್ತಿದ್ದಾರೆ. ರಾತ್ರಿ ಹಗಲು ರಾಜಕೀಯವನ್ನೇ ತಮ್ಮ ಕಸುಬಾಗಿಟ್ಟುಕೊಂಡು ಇಲ್ಲದ ಸಲ್ಲದ ಸಮಸ್ಯೆಗಳನ್ನು ನಾವು ತಂದುಕೊಳ್ಳುತ್ತಿದ್ದೇವೆ. ರಾಜಕೀಯವು ಅಗತ್ಯವಿರುವ ವಿಷಯವೇ; ನಮಗದರ ಗೊಡವೆ ಬೇಡವೆಂದು ಎಲ್ಲ ಅಧಿಕಾರವನ್ನು ಹಿಟ್ಲರನಿಗೆ ಒಪ್ಪಿಸಿ ಕುರಿಜನರಂತೆ ವರ್ತಿಸಿ ಜರ್ಮನರು ಕಷ್ಟಪಟ್ಟಿದ್ದಾರೆ. ಆದರೆ ರಾಜಕೀಯವೇ ಸರ್ವಸ್ವವೆಂದು ಭಾವಿಸಿ ಅದರಲ್ಲೇ ನಿರತರಾಗುವ ಹವ್ಯಾಸವೂ ನಮ್ಮ ಅವಹೇಳನಕ್ಕೆ ಕಾರಣವಾಗುವುದು. ಜರ್ಮನಿಯಲ್ಲಿ ನಾನಿರುವಾಗಲೇ ಮಹಾಚುನಾವಣೆ ನಡೆಯಿತು. ಸೇಕಡಾ ೭೪ರಷ್ಟು ಜನರು ಮತದಾನ ಮಾಡಿದ್ದರು. ಆದರೆ ನಮ್ಮ ದೇಶದಲ್ಲಾಗುವಂತೆ ರಾತ್ರಿ ಹಗಲು ಮತದಾರರಿಗೆ ಓಟು ಕೊಡಿರೆಂಬ ಪ್ರಚಾರ, ಒತ್ತಾಯ, ಬಲಾತ್ಕಾರ, ಲಂಚ ಅಥವಾ ಮತಗಟ್ಟೆಯಲ್ಲಿ ಎರಡು ಸಾಲು ಕಟ್ಟಿ ಮತದಾರರನ್ನು ಅತ್ತಿಂದಿತ್ತ, ಇತ್ತಿಂದತ್ತ ಎಳೆಯುವುದು, ಗುಲ್ಲೆಬ್ಬಿಸುವುದು ಈ ದೃಶ್ಯವೇ ನನಗೆ ಕಾಣಸಿಗಲಿಲ್ಲ. ಆ ರೀತಿ ವರ್ತಿಸುವವರಿಗೆ ನಾವು ವೋಟೇ ಕೊಡುವುದಿಲ್ಲವೆನ್ನುತ್ತಾರೆ ಅವರು.

ಈ ಎಲ್ಲ ವಿಷಯುಗಳನ್ನು ನಾವು ತುಲನೆ ಮಾಡಿ ನೋಡಿದರೆ ನಮ್ಮ ಬಡತನಕ್ಕೆ ನಮ್ಮ ದೃಷ್ಟಿ, ನಮ್ಮ ಧೋರಣೆ, ನಮ್ಮ ನಡತೆಯೇ ಕಾರಣವೆಂದು ತಿಳಿಯಬಹುದು. ದೇಶದಲ್ಲಿ ನಿಜವಾದ ಸುಧಾರಣೆಯಾಗಬೇಕಾದರೆ ತುಂಗಭದ್ರಾ ಯೋಜನೆಗಿಂತಲೂ ನಮ್ಮ ವ್ಯಕ್ತಿ ವ್ಯಕ್ತಿಗಳನ್ನು ಯೋಗ್ಯ ನಾಗರಿಕರನ್ನಾಗಿ ನಿರ್ಮಿಸುವ ಯೋಜನೆಯೇ ಮುಖ್ಯವಾದುದು. ಇದನ್ನೇ ನಮ್ಮ ಪ್ರಧಾನಿಗಳು ಒತ್ತಿ ಹೇಳುತ್ತಿದ್ದಾರೆ.

ನಡತೆಯನ್ನು ತಿದ್ದಿದ, ದುಡಿಯುವ ಹುಮ್ಮಸ್ಸು ಇರುವ ಜನರಿಂದ ದೇಶದ ಸಮಸ್ಯೆಗಳು ಬಗೆಹರಿಯಬೇಕಾಗಿದೆ. ಇದಕ್ಕೆ ಸರಕಾರದ ಕೈ ಕಾಯಬೇಕಾಗಿಲ್ಲ. ಸರಕಾರವೂ ದೊಡ್ಡ ದೊಡ್ಡ ಯೋಜನೆಗಳ ಹಂಬಲದಲ್ಲಿರಬೇಕಿಲ್ಲ. ಕೆಲವೊಂದು ಕ್ರಮ, ನಿಬಂಧನೆಗಳನ್ನು ಸಡಲಿಸಿ, ವಿಕೇಂದ್ರೀಕೃತ ತಳಹದಿಯಲ್ಲಿ ಕೆಲಸ ಆಗಬೇಕಾಗಿದೆ. ಪ್ರತಿಯೊಬ್ಬನೂ ತನ್ನ ತನ್ನ ಕ್ಷೇತ್ರದಲ್ಲಿ ಹೆಚ್ಚಿನ ದುಡಿತ, ಉತ್ಪತ್ತಿ ಹೆಚ್ಚಳ, ಬಡತನ ನಿವಾರಣೆಗಾಗಿ ಶ್ರಮಿಸುವಂತಿರಬೇಕು.

ನಾವು ನಿರರ್ಥಕವೆಂದು ಒಗೆಯುವ ಈ ಪದಾರ್ಥದಿಂದ
ಎಂಥೆಂಥ ಉದ್ದಿಮೆಗಳು ಹುಟ್ಟವೆ!

ಕಬ್ಬಿನ ಸಿಪ್ಪೆಯಿಂದ ಮನೆಗಳು!

ಬಿ. ಎಸ್. ನರಹರಿ ರಾವ್

ಮೈಸೂರಿನಿಂದ ಬೆಂಗಳೂರಿಗೆ ಹಿಂದಿರುಗುತ್ತಿದ್ದಾಗ ರೇಲ್ವೆ ಬಂಡಿಯಲ್ಲಿ ಅಕಸ್ಮಾತ್ತಾಗಿ ವಿದೇಶಿ ಸ್ನೇಹಿತನೊಬ್ಬನ ಸ್ನೇಹದ ಲಾಭ ಪಡೆಯುವ ಸುಯೋಗ ಕೆಲವು ವರ್ಷಗಳ ಹಿಂದೆ ನನಗೆ ಲಭಿಸಿತು. ಆಕರ್ಷಣೀಯ ಹಾಗೂ ಮನಮೋಹಕವಾದ ಆಟದ ಸಾಮಾನುಗಳನ್ನು ಮಾರಾಟ ಮಾಡುತ್ತಿದ್ದ ಚೀನಾದೇಶದ ಮಿತ್ರನೇ ಆತ. ಮಂಡ್ಯ-ದ ಬಳಿ ಬರುವ ವೇಳೆಗೆ ಆ ಗಾಡಿಯಲ್ಲಿದ್ದ ಹಲವಾರು ಜನರು ಕಬ್ಬಿನ ಮಾಧುರ್ಯ ಸೇವಿಸಲು ಪ್ರಾರಂಭಿಸಿದರು. ಮುಂದೆರಡು ನಿಲ್ದಾಣ ಸಾಗುವವರೆಗೆ ಆತನೂ ಕಬ್ಬು ಜಗಿಯುತ್ತಿದ್ದ. ಗಾಡಿಯಲ್ಲಿ ಕೊಳಕು ಹೆಚ್ಚಿದಾಗ ಸಿಪ್ಪೆಯನ್ನು ಹೊರಗೆ ಬೀಸಾಡಲು ಪ್ರವಾಸಿಕರು ಅನುವಾದರು. ಆದರೆ ಆ ಚೀನೀಯ ಅವರನ್ನು ತಡೆಯುವಂತೆ ನನ್ನನ್ನು ಪ್ರಾರ್ಥಿಸಿದ. ಈ ವಿಚಿತ್ರ ಪ್ರಾರ್ಥನೆ ಕೇಳಿ ನನಗೆ ದಿಗ್ಭ್ರಮೆಯಾಯಿತು. ಕುತೂಹಲಭರಿತನಾಗಿ ಆ ಸಿಪ್ಪೆಯನ್ನೆಲ್ಲಾ ಸಂಗ್ರಹಿಸಿ ಆತನಿಗೆ ನಾನು ಕೊಟ್ಟೆ. ಈ ಪ್ರಸಂಗವನ್ನು ನಾನು ಆಗಲೇ ಮರೆತುಬಿಟ್ಟಿದ್ದೆ. ಬೆಂಗಳೂರು ಸಮೀಪಿಸುವ ವೇಳೆ ಹತ್ತಿರ ಬಂದಿತು. ಇದುವರೆಗೂ ಕಾರ್ಯೋನ್ಮುಖನಾಗಿದ್ದ ನನ್ನ ಚೀನೀ ಗೆಳೆಯ ನನಗೆ ಅಪೂರ್ವ ಹಾಗೂ ಆಕರ್ಷಕ ಬೀಸಣಿಕೆಯೊಂದನ್ನು ತೋರಿಸಿದನು. ಬಹುಜನಗಳಿಂದ ಅಪ್ರಯೋಜಕ ವಸ್ತುವೆಂದು ಪರಿಗಣಿಸಲ್ಪಟ್ಟಿರುವ ಕಬ್ಬಿನ ಸಿಪ್ಪೆಯಿಂದ ಅದು ತಯಾರಾಗಿತ್ತೆಂದು ಕೇಳಿದಾಗ ನನಗೆ ಆಶ್ಚರ್ಯವಾಯಿತು. ಹಲವಾರು ವರ್ಷಗಳ ನಂತರ ಈ ಸನ್ನಿವೇಶ ನನ್ನ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ.



ಸಕ್ಕರೆಯ ಸವಿ ಅರಿಯದವರಿಲ್ಲ. ಕಬ್ಬನ್ನು ಕಾಣದ ಜನ ಪ್ರಾಯಃಶಃ ಜಗತ್ತಿನಲ್ಲಿ ಇಲ್ಲ. ರಸ ಹೀರಿ ಕಸ ಒಗೆಯುವುದು ಜೀವಜಂತುಗಳ ಹುಟ್ಟು ಗುಣ. ಕಬ್ಬು ಬೆಳೆಯುವ ಹಾಗೂ ಬೆಲ್ಲ ತಯಾರಿಸುವ ಕೇಂದ್ರಗಳಲ್ಲಿ ಕಬ್ಬಿನ ಸಿಪ್ಪೆಯನ್ನು ಸೌದೆಯ ರೂಪದಲ್ಲಿ ಬಳಸುವುದು ಬಹುಜನಗಳಿಗೆ ತಿಳಿದಿದೆ.

ಒಣಗಿಸಿದ ಕಬ್ಬಿನ ಸಿಪ್ಪೆಯಲ್ಲಿರುವ ಒಳಗಿನ ಬೆಂಡಿನಂತಹ ಭಾಗವನ್ನು ಬೇರ್ಪಡಿಸಬೇಕು. ಇಂತಹ ಬೆಂಡಿಲ್ಲದ ನಾರಿನ ವಸ್ತುವಿನಿಂದ

ವಿದ್ಯುತ್ ಉದ್ಯಮದಲ್ಲಿ ಅವಶ್ಯವಾದ ಇನ್ಸುಲೇಟಿಂಗ್ ಮತ್ತು ಕಾರುಗೇಟಿಂಗ್ ಬೋರ್ಡುಗಳ ತಯಾರಿಕೆ ನಡೆಯುತ್ತಿದೆ. ಉತ್ತಮ ದರ್ಜೆಯ ಕಾಗದದ ತಯಾರಿಕೆಗೆ ಪೂರ್ಣವಾಗಿ ಬೆಂಡಿಲ್ಲದ ನಾರು ಬೇಕಾಗುವುದು. ರಟ್ಟುಗಳ ಹಾಗೂ ಕಾಗದದ ಚೀಲಗಳು ಮತ್ತು ಸಾಮಾನುಗಳನ್ನು ಪ್ಯಾಕ್‌ಮಾಡುವ ಸಲುವಾಗಿ ಉಪಯೋಗಿಸುವ ಕಾಗದವನ್ನು ಇದರಿಂದ ತಯಾರಿಸಬಹುದು. ರಟ್ಟಿನ ಪೆಟ್ಟಿಗೆಗಳ, ಅದರಲ್ಲೂ ಹಡಗುಗಳಲ್ಲಿ ವಸ್ತುಗಳನ್ನು ಸಾಗಿಸಲು ಉಪಯೋಗಿಸುವ ರಟ್ಟಿನ ಪೆಟ್ಟಿಗೆಗಳ ತಯಾರಿಕೆಯಲ್ಲಿ ಇದಕ್ಕೆ ಹಿರಿಯ ಸ್ಥಾನವಿದೆ.

ನೀವು ಓದುವ ವರ್ತಮಾನ ಪತ್ರಿಕೆಗಳ ಕಾಗದ ಕಬ್ಬಿನ ಸಿಪ್ಪೆಯಿಂದ ತಯಾರಾಗುವುದೆಂದು ಕೇಳಿದರೆ ನಿಮಗೆ ಆಶ್ಚರ್ಯವಾಗಬಹುದು. ಫಾರ್ಮೊಸಾದಲ್ಲಿ ಇದರ ಪ್ರಧಾನ ಕಾರ್ಯಕ್ಷೇತ್ರವಿದೆ. ಬಿದಿರಿನ ತಿರುಳಿನೊಡನೆ ಕಬ್ಬಿನ ಸಿಪ್ಪೆ ಬೆರಸಿ ಈ ರೀತಿಯ ಕಾರ್ಯಕ್ಕೆ ಅಳವಡಿಸಿಕೊಳ್ಳಲಾಗುತ್ತಿದೆ. ಭಾರತದಲ್ಲಿ ಈ ರೀತಿಯ ಪ್ರಯೋಗ ಹಿರಿಯ ಪ್ರಮಾಣದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಾರಂಭವಾಗಿರುವುದು ಸ್ತುತ್ಯರ್ಹವಾದ ವಿಷಯವಾಗಿದೆ.

ಜಾವಾದಲ್ಲಿ ಸಕ್ಕರೆ ಭಾರಿ ಪ್ರಮಾಣದಲ್ಲಿ ತಯಾರಾಗುತ್ತದೆ. ಕಬ್ಬಿನ ಸಿಪ್ಪೆ ಹೇರಳವಾಗಿ ಇಲ್ಲಿ ದೊರೆಯುವುದರಿಂದ ಮಾನವನು ತನ್ನ ಬುದ್ಧಿ ಶಕ್ತಿಯಿಂದ ಇದರ ಸದುಪಯೋಗ ಪಡೆಯಲು ಹೆಚ್ಚಿನ ಅವಕಾಶವಿದೆ. ಸೌದೆಯಿಂದ ಇದ್ದಿಲು ಪಡೆಯುವ ವಿಧಾನವನ್ನನುಸರಿಸಿ ಕಬ್ಬಿನ ಸಿಪ್ಪೆಯಿಂದ ಅಲ್ಲಿನ ಜನ ಇದ್ದಿಲು ಪಡೆಯುತ್ತಾರೆ. ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಫೋರ್ಡ್ ಕಂಪನಿಯ ಕಾರ್ಖಾನೆಯೊಂದು ಇದಕ್ಕೆ ಮೀಸಲಾಗಿದೆ. ದಿನಂಪ್ರತಿ ೪೮ ಟನ್ ಇದ್ದಿಲು ಇಲ್ಲಿ ತಯಾರಾಗುತ್ತಿದೆ.

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿನ ಲೂಸಿಯಾನದಲ್ಲಿ ಭಾರಿ ಪ್ರಮಾಣದಲ್ಲಿ ಪೂರ್ವನಿರ್ಮಿತ ಮನೆ (ಪ್ರಿಫ್ಯಾಬ್ರಿಕೇಟೆಡ್) ಕಟ್ಟಲು ಬೇಕಾದ ವಿಶೇಷ ರೀತಿಯ ಇನ್ಸುಲೇಟೆಡ್ ಹಾರ್ಡ್‌ಬೋರ್ಡುಗಳನ್ನು ಕಬ್ಬಿನ ಸಿಪ್ಪೆಯಿಂದ ಪಡೆಯಲಾಗುತ್ತಿದೆ. ಹವಾಯಿ ದ್ವೀಪಗಳಲ್ಲಿ ಹಾಗೂ ಆಸ್ಟ್ರೇಲಿಯ ದೇಶದಲ್ಲಿ 'ಸೆಲೋಟ್ಯಾಕ್ಸ್' ಎಂಬ ಈ ರೀತಿಯ ಬೋರ್ಡು ತಯಾರಿಸುವ ಕಾರ್ಖಾನೆಗಳಿವೆ. ನೀರನ್ನು ಸಂಗ್ರಹಿಸುವ (ವಾಟರ್ ಪ್ರೂಫ್) ಚಾವಣಿ, ಗೋಡೆ ಮತ್ತು ನೆಲದ ರಚನೆಯಲ್ಲಿ ಕಬ್ಬಿನ ಸಿಪ್ಪೆಯಿಂದ ವಿಶೇಷ ರೀತಿಯಲ್ಲಿ ತಯಾರಿಸಿದ ಸಾಧನಗಳ ಅವಶ್ಯಕತೆಯಿದೆ. ಗೃಹನಿರ್ಮಾಣಕ್ಕೆ ಬೇಕಾದ ಕಾಗದ, ಹಂಚು ಮತ್ತು ಪೂರ್ಣಗೊಳಿಸಿದ ತಗಡುಗಳು ಅಥವಾ ಹಲಗೆಗಳ ನಿರ್ಮಾಣದಲ್ಲಿಯೂ ಗೋಡೆಗಳನ್ನು ಅಗ್ನಿಸ್ತಂಭಕವಾಗಿಡುವ ಸಲುವಾಗಿಯೂ ಇವು ಸಹಾಯ ಮಾಡುತ್ತವೆ.

ಬಾರ್ಬಡಾಸ್ ದ್ವೀಪದಲ್ಲಿ "ಮೆಗ್ ಕ್ರೀಟ್" ಎಂಬ ನವೀನ ರೀತಿಯ ಗೃಹನಿರ್ಮಾಣ ವಸ್ತು ತಯಾರಾಗುತ್ತಿದೆ. ಸುಣ್ಣವನ್ನು ಕಬ್ಬಿನ ಸಿಪ್ಪೆಯೊಡನೆ ಬೆರಸಿ ಕಬ್ಬಿಣ ಅಥವಾ ಮರದ ಅಚ್ಚುಗಳಿಂದ ತಕ್ಕ ರೂಪುಕೊಟ್ಟು ಹಲಗೆಗಳ ಆಕಾರಕ್ಕೆ ಮಾರ್ಪಡಿಸಿ, ಒಣಗಿಸಿ ಎರಡು ಅಥವಾ ಮೂರು ಕೊಠಡಿಗಳಿರುವ ಸಣ್ಣ ಮನೆಗಳನ್ನು ಕಟ್ಟಲು ಇದು ಅವಕಾಶ ಮಾಡಿಕೊಡುತ್ತದೆ.

ವ್ಯವಸಾಯ ಕ್ಷೇತ್ರದಿಂದ ದೊರಕುವ ಎಲ್ಲ ರೀತಿಯ ನಾರು ವಸ್ತುಗಳಿಗಿಂತ ಕಬ್ಬಿನ ಸಿಪ್ಪೆ ಪ್ಲಾಸ್ಟಿಕ್ ತಯಾರಿಕೆಗೆ ಹೆಚ್ಚು ಅನುಕೂಲವಾಗಿದೆ ೧೯೩೪ ನೇ ಇಸವಿಯಲ್ಲಿ ಈ ರೀತಿಯ ಪ್ರಥಮ ಪ್ರಯತ್ನ ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ ವಿಜಯ ಗಳಿಸಿತು. 'ವಾಲೈಟ್' ಎಂಬ ಹೆಸರಿನಿಂದ ಇದು ಪ್ರಸಿದ್ಧವಾಯಿತು. ಹೀಗೆ ಕಬ್ಬಿನ ಸಿಪ್ಪೆಯು ವಿವಿಧ ರೀತಿಯ ಪ್ಲಾಸ್ಟಿಕ್ ವಸ್ತುಗಳ ರೂಪದಲ್ಲಿ ಎಂದರೆ ಪದರಗಳಾಗಿ, ಗಾಜಿನ ಹಾಗೂ ಕಾಗದದ ಬದಲು ಉಪಯೋಗಿಸುವ ವಸ್ತುಗಳಾಗಿ ಮತ್ತು ಚೀಲಗಳಾಗಿ ಮಾರಾಟವಾಗಲು ಪ್ರಾರಂಭವಾಯಿತು. ಇಂದು ಅದು ಭಾರಿ ಪ್ರಮಾಣದಲ್ಲಿ ಈ ಕಾರ್ಯಕ್ಕೆ ಉಪಯೋಗಿಸಲ್ಪಡುತ್ತದೆ.

ಕಬ್ಬಿನ ಸಿಪ್ಪೆಯಿಂದ ಉತ್ಪಾದನೆ ಹೊಂದಿದ 'ಫರ್‌ಫ್ಯುರಾಲ್' ಎಂಬ ವಿವಿಧೋಪಯೋಗಿ ರಸಾಯನ ವಸ್ತುವು ಮೂರು ಸಾವಿರಕ್ಕೂ ಹೆಚ್ಚು ರೀತಿಗಳಲ್ಲಿ ವೈದ್ಯಕೀಯ ಹಾಗೂ ಕೈಗಾರಿಕೆಯ ಜಗತ್ತಿನಲ್ಲಿ ಉಪಯೋಗಿಸಲ್ಪಡುತ್ತಿದೆಯೆಂದು ಅಮೇರಿಕದ ಸಂಯುಕ್ತಸಂಸ್ಥಾನಗಳ ಪೇಟೆಂಟ ದಾಖಲೆಗಳಿಂದ ತಿಳಿದುಬರುತ್ತದೆ. ಇವುಗಳಲ್ಲಿ ನೂರು ಬಹು ಉಪಯುಕ್ತ ಬಳಕೆಗಳು ಈಗಾಗಲೇ ಆ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಆಚರಣೆಯಲ್ಲಿವೆ.

ಆಧುನಿಕ ಯುರೋಪಿನ ಹಾಗೂ ಅಮೇರಿಕದ ಮಹಿಳೆಯರು "ನೈಲಾನ್" ಉಡುಪು ಧರಿಸುವ ಅಭ್ಯಾಸ ಮಾಡುತ್ತಿರುವುದರಿಂದ ನಾಗರಿಕತೆಯು ಬಟ್ಟೆಯ ಬದಲು ಪ್ಲಾಸ್ಟಿಕ್ ವಸ್ತು ಉಪಯೋಗಿಸಲು ದಾರಿಮಾಡಿಕೊಟ್ಟಿದೆ. ಕೃತಕ ರಬ್ಬರ ಹಾಗೂ ಈ "ನೈಲಾನ್" ತಯಾರಿಕೆಗೆ ಆಧಾರ ವಸ್ತು ಫರ್‌ಫ್ಯುರಾಲ್.

ಫರ್‌ಫ್ಯುರಾಲದ ಇತರ ಉಪಯೋಗಗಳು ಹೀಗಿವೆ: ಕೀಟನಾಶಕ, ಕ್ರಿಮಿನಾಶಕ ಮತ್ತು ಕೂಡಿಟ್ಟಾಗ ಧಾನ್ಯಾದಿ ವಸ್ತುಗಳು ಕೆಡದಂತೆ ಕಾಪಾಡುವ ರಸಾಯನಿಕ ವಸ್ತುಗಳು (ಉದಾ: ಗೋದಿಗೆ ತಗಲುವ ಬೂಷ್ಟನ್ನು ಹತೋಟಿಯಲ್ಲಿಡುವುದು), ಮನುಷ್ಯರ ಮತ್ತು ಪ್ರಾಣಿಗಳ ಮರಣಾನಂತರ ಕಳೇವರವನ್ನು ಕೆಡದಂತೆ ಇಡುವ ಸಲುವಾಗಿ ಉಪಯೋಗಿಸುವ ಲೇಪನಗಳು.

ಟರ್ಪೆಂಟೈನ್, ಅಸಿಟಿಕ್ ಆಮ್ಲ (ವಿನಿಗರ್) ಮತ್ತು ಸಸ್ಯಮೂಲ ಹಾಗೂ ಪ್ರಾಣಿಮೂಲ ಎಣ್ಣೆಗಳನ್ನು ಶುದ್ಧಿಗೊಳಿಸಲು, ಬಣ್ಣಗಳನ್ನೂ ವಾರ್ನಿಷ್‌ಗಳನ್ನೂ ಅಳಿಸಲು ಮತ್ತು ಬಣ್ಣಗಳನ್ನು ಕರಗಿಸಲು ಉಪಯೋಗಿಸುವ ದ್ರವ್ಯಗಳು ಇವೆಲ್ಲವುಗಳಲ್ಲೂ ಅದು ಉಪಯೋಗವಾಗುತ್ತದೆ. ಆಮ್ಲಗಳಿಂದ ಹಾನಿತಟ್ಟದ ಹಾಗೂ ರಾಸಾಯನಿಕ ವಸ್ತುಗಳಿಂದ ಕೆಡದಂಥ ರೀತಿ ಗೋಡೆಗಳನ್ನೂ ಇಟ್ಟಿಗೆಗಳನ್ನೂ ಸಿಮೆಂಟನ್ನೂ ತಯಾರಿಸುವುದಕ್ಕೆ ಇದರ ಅವಶ್ಯಕತೆಯಿದೆ. ವಿಮಾನ ಉದ್ಯಮದಲ್ಲಿ ಸಹ ಇದರಿಂದ ತಯಾರಿಸಿದ ಅಂಟು ವಸ್ತು ಉಪಯೋಗವಾಗುತ್ತಿದೆ.

ಔಷಧಿ ಹಾಗೂ ದೇಹ ಪೋಷಣೆಗೆ ಅತ್ಯಾವಶ್ಯಕವಾದ ಹಲವಾರು ಉಪಯುಕ್ತ ವಸ್ತುಗಳನ್ನು ಇದರಿಂದ ತಯಾರಿಸಬಹುದು. ಈ ಪೈಕಿ "ಬ" ಜೀವಸತ್ವ (Vitamin *B*) ಮಲೇರಿಯ ನಿರೋಧಕ ಔಷಧಿಗಳು, ಸೂಕ್ಷ್ಮಕ್ರಿಮಿನಾಶಕವಸ್ತು ಫ್ಯೂರಾಸಿನ್ ಮತ್ತು ದೇಹದ ಬೆಳವಣಿಗೆಗೆ ಮತ್ತು ಪೋಷಣೆಗೆ ಬೇಕಾದ ಅಮೈನೋ-ಆಮ್ಲಗಳಲ್ಲೊಂದಾದ "ಲೈಸೀನ್" ಬಹು ಮುಖ್ಯವಾಗಿವೆ.

ಇದುವರೆಗೂ ಸಾಮಾನ್ಯವಾಗಿ ಕಸವೆಂದು ಪರಿಗಣಿಸಿರುವ ಕಬ್ಬಿನ ಸಿಪ್ಪೆಯ ಸಮಗ್ರ ಇತಿಹಾಸವನ್ನು ಅವಲೋಕಿಸಿದರೆ ಸಕ್ಕರೆಗಿಂತ ಇದರ ಕಾರ್ಯಕ್ಷೇತ್ರ ವಿಸ್ತಾರವಾಗುತ್ತಿದೆಯೆಂದು ಗೊತ್ತಾಗುತ್ತದೆ. ಕೊನೆಗೊಮ್ಮೆ ಸಕ್ಕರೆಯೇ ಈ ಕೈಗಾರಿಕೆಯ ಉಪ-ಉತ್ಪನ್ನವಾಗಬಹುದೆಂಬ ಶಂಕೆಯೂ ನಮ್ಮಲ್ಲಿ ಮೂಡುತ್ತದೆ.

ವಾಕ್—ವೈಖರಿ

ಜೀವಮಾನವೆಲ್ಲ ಸುಖಿಯಾಗಿದ್ದರೆ ಯಾವ ಜೀವಂತ ಮನುಷ್ಯನೂ ಅದನ್ನು ಸೈರಿಸಿಕೊಳ್ಳಲಾರ. ಅದು ಭೂತಲ ನರಕ.

—ಶಾ

ಜೀವನವು ಎರಡನೇ ಸಲ ಕೇಳಿದ ಕಥೆಯಂತೆ ನೀರಸವಾಗಿದೆ.

—ಶೇಕ್ಸ್ಪಿಯರ್



ನ್ಯಾಯಾಧೀಶನ ಅನುಭವಗಳು

ಇಪ್ಪತ್ತು ವರ್ಷಗಳ ವರೆಗೆ ನ್ಯಾಯಾಧೀಶರಾಗಿ ದುಡಿದ ಜಿಲ್ಲಾ ಜಜ್ಜರೊಬ್ಬರ ಅನುಭವಗಳು

ರಾ. ಕೆ. ರಾನಡೆ

ಮಾನಸಶಾಸ್ತ್ರದಲ್ಲಿ ಒಂದು ಕುತೂಹಲ ಪೂರ್ಣ ಕಥೆಯಿದೆ. ತನ್ನ ಮಗನ ಸ್ವಾಭಾವಿಕ ಒಲವು ಯಾವುದರಲ್ಲಿದೆ ಎಂದು ಅರಿಯಲು ಅಮೇರಿಕನ್ನನೊಬ್ಬ ಅವನನ್ನು ಒಂದು ಕೋಣೆಯಲ್ಲಿ ಕೂಡ್ರಿಸಿ ಅವನ ಬಳಿಯಲ್ಲಿ ಒಂದು ಡಾಲರು, ಒಂದು ಹಣ್ಣು ಮತ್ತು ಒಂದು ಬಾಯಬಲ್ ಇಟ್ಟನು. ಮಗ ಡಾಲರಿನೊಂದಿಗೆ ಆಡಿದರೆ ಅವನನ್ನು ವ್ಯಾಪಾರಿಯನ್ನಾಗಿ ಮಾಡಬೇಕು, ಬಾಯ್‌ಬಲ್ ಪುಸ್ತಕದೊಂದಿಗೆ ಆಡಿದರೆ ಅವನನ್ನು ಧರ್ಮೋಪದೇಶಕನನ್ನಾಗಿ ಮಾಡಬೇಕು ಮತ್ತು ಹಣ್ಣಿನೊಂದಿಗೆ ಆಡಿದರೆ ಅವನನ್ನು ರೈತನನ್ನಾಗಿ ಮಾಡಬೇಕು ಎಂದು ತಂದೆ ಯೋಚಿಸಿದ್ದ. ಕೆಲಹೊತ್ತಿನ ನಂತರ ತಂದೆ ಕೋಣೆಯ ಬಾಗಿಲು ತೆರೆದು ನೋಡಿದಾಗ ಅವನಿಗೆ ಮಗ ಬಾಯಬಲ್ಲಿನ ಮೇಲೆ ಕುಳಿತು ಒಂದು ಕೈಯಲ್ಲಿ ಡಾಲರ ಹಿಡಿದುಕೊಂಡು ಇನ್ನೊಂದು ಕೈಯಿಂದ ಹಣ್ಣು ತಿನ್ನುತ್ತಿರುವದು ಕಾಣಿಸಿತು ಅದನ್ನು ಕಂಡು ತಂದೆ ತನ್ನ ಮಗನನ್ನು ವಕೀಲನನ್ನಾಗಿ ಮಾಡಿದ.

ತಾತ್ಯಾ— ನನ್ನ ತಂದೆ-–ನನ್ನ ಬಾಲ್ಯದಲ್ಲಿ ಇಂಥದೇ ಪ್ರಯೋಗವೊಂದನ್ನು ಮಾಡಿದ್ದರು. ಅವರು ವಕೀಲರಾಗಿದ್ದರು. ಆದರೆ ತನ್ನ ಮಗ ವಕೀಲನಾಗದೆ ಪ್ರೊಫೆಸರನೋ ಡಾಕ್ಟರನೋ ಆಗಬೇಕು ಎಂದವರು ಇಚ್ಛಿಸುತ್ತಿದ್ದರು. ನಾನು ಮರಾಠಿ ಶಾಲೆಯಲ್ಲಿದ್ದಾಗ ಒಂದು ಪ್ರಶ್ನೆಯ ಉತ್ತರವನ್ನು ಕಾಗದದ ಮೇಲೆ ಬರೆಯಲ್ಲ

ಮರಾಠಿ “ ಅಮೃತ ” ದಿಂದ

ಅವರು ನನಗೆ ಹೇಳಿದರು. ತಂದೆಯ ಆಫೀಸಿನಲ್ಲಿ ಕಾಗದಗಳ ಮೇಲೆ ಎಡಗೈ ಹೆಬ್ಬೊಟ್ಟಿನ ಗುರುತುಗಳನ್ನು ತೆಗೆದುಕೊಳ್ಳುತ್ತಿದ್ದುದನ್ನು ಕಂಡಿದ್ದ ನಾನು ಪ್ರಶ್ನೆಗೆ ಉತ್ತರವನ್ನು ಬರೆದು ಅದರ ಕೆಳಗೆ ನನ್ನ ಹೆಬ್ಬೊಟ್ಟನ್ನೊತ್ತಿ "ಈ ಹೆಬ್ಬಟ್ಟಿನ ಗುರುತು ರಾ. ಕೆ. ರಾನಡೆ ಈತನದು ಅದೆ" ಎಂದು ಬರೆದೆ.

ಬರೆಯಲು ಬರುವವನು ಹೆಬ್ಬೊಟ್ಟಿನ ಗುರುತು ಮಾಡುವದಿಲ್ಲ ಎಂದು ನನಗೆ ಗೊತ್ತಿರಲಿಲ್ಲ. ನನ್ನ ಉತ್ತರ ಮತ್ತು ಹೆಬ್ಬೊಟ್ಟಿನ ಗುರುತನ್ನು ನೋಡಿ ತಂದೆ, "ಈತ ಪ್ರೊಫೆಸರ, ವಕೀಲ ಮತ್ತು ಡಾಕ್ಟರ ಈ ಮೂರು ವೃತ್ತಿಗಳ ಮಿಶ್ರಣವಾಗುವಂಥ ಉದ್ಯೋಗವನ್ನು ಮಾಡುತ್ತಾನೆ" ಎಂದರು

ಮಾನಸ ಶಾಸ್ತ್ರದ ಈ ಬಗೆಯ ಪ್ರಯೋಗಗಳು ಅನೇಕ ಸಲ ಮೋಸ ಮಾಡುತ್ತವೆ. ನಾನು ನ್ಯಾಯಾಧೀಶನಾಗಿ ಸುಮಾರು ಇಪ್ಪತ್ತು ವರ್ಷಗಳಾದವು. ಇಂಥ ಪರಿಸ್ಥಿತಿಯಲ್ಲಿ ನಾನು ನ್ಯಾಯಾಧೀಶನಾಗುವದು ನನ್ನ ಬಾಲ್ಯದಲ್ಲಿಯೇ ನಿರ್ಧರಿಸಲ್ಪಟ್ಟಿತ್ತು, ಇಲ್ಲವೇ ನನ್ನ ತಂದೆ ಆ ದೃಷ್ಟಿಯಿಂದಲೇ ಪ್ರಯತ್ನ ಮಾಡಿದ್ದರು ಎಂದರೆ ವಾಸ್ತವ್ಯಕ್ಕೆ ದೂರವಾದ ಮಾತಾದೀತು. ಕೋರ್ಟಿನಲ್ಲಿಯ ಪ್ರಮಾಣವಲ್ಲ–ನಿಜವಾದ ಪ್ರಮಾಣಪೂರ್ವಕವಾಗಿ ಹೇಳುವದೇ ಆದಲ್ಲಿ– ನಾನು ನ್ಯಾಯಾಧೀಶನಾದದ್ದು ಕೇವಲ ಯೋಗಾಯೋಗದಿಂದಲೇ.

ನಾನು ಮ್ಯಾಟ್ರಿಕ್ ಪಾಸಾದೊಡನೆ ನನ್ನ ಮಿತ್ರರು ನನ್ನ ತಂದೆಗೆ "ನಿಮ್ಮ ಮಗ ಇಡೀ ಮುಂಬಯಿ ಪ್ರಾಂತದಲ್ಲಿ ಮೂರನೆಯ ನಂಬರು ಬಂದಿದ್ದಾನೆ. ಸಂಸ್ಕೃತದಲ್ಲಿ ಮೊದಲನೆ ನಂಬರು ಬಂದು ಜಗನ್ನಾಥ ಶಂಕರ ಶೇಟ ಶಿಷ್ಯವೃತ್ತಿ ಸಂಪಾದಿಸಿದ್ದಾನೆ. ಬಿ. ಎ. ಆದ ಬಳಿಕ ನೀವು ಅವನನ್ನು ಆಯ್. ಸಿ. ಎಸ್. ಗೆ ಕಳಿಸಿರಿ" ಎಂದರು.

ಬಿ ಎ. ದಲ್ಲಿ ಗಣಿತ ವಿಷಯ ತೆಗೆದುಕೊಂಡು ನಾನು ಮೊದಲನೆಯ ವರ್ಗದಲ್ಲಿ ಪಾಸಾದಾಗ ಅದೇ ಮಿತ್ರರು ನನ್ನ ತಂದೆಗೆ ಹೇಳಿದರು: "ನಿಮ್ಮ ಮಗನನ್ನು ವಿಲಾಯತಿಗೆ ಕಳಿಸಲು ನಿಮ್ಮ ಹತ್ತರ ಹಣವಿಲ್ಲ. ಈಗ ಸಾಲ ಸಿಗುವದೂ ಕಠಿಣ. ಆದ್ದರಿಂದ ನೀವು ನಿಮ್ಮ ಮಗನನ್ನು ಒಳ್ಳೆಯ ಪ್ರೊಫೆಸರನನ್ನಾಗಿ ಮಾಡಿರಿ."

ಏನು ಮಾಡಬೇಕೆಂದು ನಾನು ವಿಚಾರ ಮಾಡುತ್ತಿದ್ದಾಗ ನನಗೆ ಸ್ವಪ್ನದಲ್ಲಿ, "ನೀನು ಎಲ್ಎಲ್. ಬಿ. ಅಭ್ಯಾಸ ಮಾಡು" ಎಂಬ ಆದೇಶ ಸಿಕ್ಕಿತು. ಸ್ವಪ್ನಗಳಲ್ಲಿ ಆದೇಶವು ಭಾವನಾವಾದಿ ಮನುಷ್ಯನಿಗೆ ಸಿಗುತ್ತದೋ ಅಥವಾ ಬುದ್ಧಿವಾದಿ ಮನುಷ್ಯನಿಗೆ ಸಿಗುತ್ತದೋ ಎಂಬ ಬಗ್ಗೆ ವಾದವಿದೆ. ಅನೇಕ ಸಲ ಸ್ವಪ್ನದ ಆದೇಶಗಳು ಮೋಸ ಮಾಡುತ್ತವೆ. ಇನ್ನು ಕೆಲ ಸಲ ಅವುಗಳನ್ನು ಮೀರಿ ನಡೆಯಲಾರದಷ್ಟು ಅವು ಬಲವತ್ತರವಾಗಿರುತ್ತವೆ ನನ್ನ ಸ್ವಪ್ನದ ಆದೇಶವೂ ಇದೇ ರೀತಿ ಬಲಿಷ್ಠವಾಗಿತ್ತು. ನಾನು ಎಲ್. ಎಲ್. ಬಿ. ಆದೆ. ಸುಮಾರು ಆರು ವರ್ಷ ವಕೀಲಿ ಕೆಲಸ ಮಾಡಿದ ಬಳಿಕ ಯೋಗಾಯೋಗದಿಂದ ನ್ಯಾಯಾಧೀಶನಾದೆ.

ವಕೀಲರಾಗಿರುವಾಗ ನಾವು ನಮ್ಮ ಪಕ್ಷದ ವಿಷಯವನ್ನಷ್ಟೇ ಹೆಚ್ಚಾಗಿ ಅಭ್ಯಾಸ ಮಾಡುತ್ತೇವೆ. ಆದರೆ ನ್ಯಾಯಾಧೀಶನಿಗೆ ಎರಡೂ ಪಕ್ಷಗಳ ಅಭ್ಯಾಸ ಮಾಡಬೇಕಾಗುತ್ತದೆ. ವಕೀಲಿ ಕೋಣೆಯಿಂದ ನ್ಯಾಯದೇವತೆಯ ಗರ್ಭಗುಡಿಯನ್ನು ಹೊಕ್ಕ ನ್ಯಾಯಾಧೀಶನಿಗೆ ಅಲ್ಲಿ ಬೇರೆ ಬಗೆಯ ವಾತಾವರಣದ ಅನುಭವ ಬರತೊಡಗುತ್ತದೆ. ವಕೀಲಿ ಕೋಣೆಯಲ್ಲಿ ಆತ ಅಸತ್ಯದ ಉಡುಪು ತೊಟ್ಟು ಸಹಜವಾಗಿ ಅಡ್ಡಾಡುತ್ತಾನೆ. ಆದರೆ ನ್ಯಾಯದೇವತೆಯ ಮಂದಿರದಲ್ಲಿ ಸತ್ಯದ ಮಡಿಯನ್ನುಟ್ಟು ಆತ ಕೂಡ್ರಬೇಕಾಗುತ್ತದೆ. ಕೋರ್ಟಿನಲ್ಲಿ ಒಬ್ಬ ವಕೀಲ ಪೂರ್ವಕ್ಕೂ ಇನ್ನೊಬ್ಬ ವಕೀಲ ಪಶ್ಚಿಮಕ್ಕೂ ನಿಂತು ನ್ಯಾಯದ ಹಗ್ಗ ತನ್ನೆಡೆಗೆ ಬರುವಂತೆ ಜಗ್ಗುತ್ತಿರುವಾಗ ಅವರ ಆಟವನ್ನು ಶಾಂತಚಿತ್ತದಿಂದ ನೋಡಿಕೊಂಡು ಸತ್ಯ ಮತ್ತು ನ್ಯಾಯ ಯಾವ ಪಕ್ಷದ್ದು ಎಂದು ನ್ಯಾಯಾಧೀಶ ನಿರ್ಣಯಿಸಬೇಕಾಗುತ್ತದೆ. ಕೋರ್ಟಿನಲ್ಲಿ ನಡೆಯುವ ನ್ಯಾಯ ನಿರ್ಣಯವು ಬಲು ತೊಡಕಿನದಾಗಿರುವದರಿಂದ ವಿಜಯ

ಹೊಂದಿದ ಪಕ್ಷದವರು ನ್ಯಾಯಾಧೀಶ ತುಂಬ ಬುದ್ಧಿವಂತ ಎಂದರೆ ವಿರುದ್ಧಪಕ್ಷದವರು ನ್ಯಾಯಾಧೀಶನಂಥ ಮೂಢ ಇನ್ನೊಬ್ಬನಿಲ್ಲ ಎನ್ನುತ್ತಾರೆ.

ಒಂದೇ ಕೃತಿಯ ಬಗ್ಗೆ ಒಬ್ಬನೇ ಮನುಷ್ಯನನ್ನು ಜನರು ಏಕಕಾಲದಲ್ಲಿ ಜಾಣ ಎಂದೂ ಮೂಢಶಿರೋಮಣಿ ಎಂದೂ ಕರೆಯಬಲ್ಲರು ಎಂದು ತಿಳಿಯಬೇಕಾದರೆ ನ್ಯಾಯಾಧೀಶನಾಗಬೇಕು.

ನ್ಯಾಯಾಧೀಶನ ಜೀವನ ವಂದನೀಯವೂ ಕಮನೀಯವೂ ಆಗಿರುತ್ತದೆ ಎಂದು ಸಾಮಾನ್ಯವಾಗಿ ಭಾವಿಸುತ್ತಾರೆ. ಆದರೆ ತುಸು ದಿನಗಳಲ್ಲೇ ಈ ಭ್ರಮೆಯ ಗುಳ್ಳೆ ಒಡೆದುಹೋಗುತ್ತದೆ. ತಾನು ಬಹು ಪರಿಶ್ರಮಪಟ್ಟು ನ್ಯಾಯನಿರ್ಣಯ ಮಾಡುತ್ತಿರುವಾಗ ಪ್ರತಿಯೊಂದು ಪ್ರಕರಣದಲ್ಲಿಯೂ ಒಂದು ಪಕ್ಷವು ತನ್ನನ್ನು ಮೂಢನೆಂದು ತಿಳಿಯುತ್ತದೆಂದು ಗೊತ್ತಾದಾಗ ಮನಸ್ಸು ಖಿನ್ನವಾಗುತ್ತದೆ. ಶಾಂತಿ ನಷ್ಟವಾಗಿ ಅಸಮಾಧಾನವುಂಟಾಗುತ್ತದೆ. ಹೀಗಿರುವಾಗ ನಮ್ಮನ್ನು ಮೂಢನೆಂದು ಕರೆಯುವ ಪಕ್ಷಕ್ಕೆ, ನ್ಯಾಯಾಧೀಶನು ತನ್ನಿಂದಾದಷ್ಟು ಪ್ರಯತ್ನ ಮಾಡಿ ಯೋಗ್ಯವೆನಿಸಿದ ನಿರ್ಣಯ ಮಾಡಿದ್ದಾನೆ ಎಂದು ಅನಿಸಿದರೆ ಸಾಕು, ಧನ್ಯನಾದೆನೆಂದು ನಮಗೆ ಅನಿಸುತ್ತದೆ. ಇಂಗ್ಲಂಡಿನ ಓರ್ವ ಪ್ರಮುಖ ನ್ಯಾಯಮೂರ್ತಿಗಳ ಕಥೆಯೊಂದು ನಾನಿಂಥ ಮನಃಸ್ಥಿತಿಯಲ್ಲಿರುವಾಗಲೇ ನನಗೆ ಓದಲು ಸಿಕ್ಕಿತು.

ಆ ನ್ಯಾಯಮೂರ್ತಿಗಳು ಒಮ್ಮೆ ಕೆಲಸಗಾರನೊಬ್ಬನ ಒಂದು ಖಟ್ಲೆಯಲ್ಲಿ ತೀರ್ಪನ್ನು ಇತ್ತಿದ್ದರು. ಮರುದಿನ ಅವರು ಅಡ್ಡಾಡಲು ಹೊರಟಿದ್ದಾಗ ಆ ಕೆಲಸಗಾರ ತನ್ನ ಮಿತ್ರನೊಂದಿಗೆ ಮಾತಾಡುತ್ತ, "ಆ ಮೂಢನಿಗೆ ನನ್ನ ಖಟ್ಲೆಯ ಅರ್ಥವಾಗಲಿಲ್ಲ. ಆದರೆ ಇದ್ದ ಪರಿಸ್ಥಿತಿಯಲ್ಲಿ ಆತ ಆದಷ್ಟು ಒಳ್ಳೆಯದನ್ನು ಮಾಡಿದ್ದಾನೆ" ಎಂದು ಹೇಳಿದ್ದು ಕೇಳಿಸಿತು.

ಅಂದು ಕೋರ್ಟಿನಲ್ಲಿ ನ್ಯಾಯಮೂರ್ತಿಗಳು ಆ ಕೆಲಸಗಾರ ಹೇಳಿದ್ದನ್ನು ಉಲ್ಲೇಖಿಸಿ, "ಒಬ್ಬ ಕೆಲಸಗಾರನಿಂದ ನನಗೆ ಇಂದು ಅತ್ಯುತ್ತಮ ಸರ್ಟಿಫಿಕೇಟ್ ಸಿಕ್ಕಿದ್ದಕ್ಕಾಗಿ ನನಗೆ ಬಹಳ ಸಮಾಧಾನವಾಗಿದೆ. ನಾನು ಮೂಢನಿರಬಹುದು. ಆದರೆ ಇದ್ದ ಪರಿಸ್ಥಿತಿಯಲ್ಲಿ ಆದಷ್ಟು ಒಳ್ಳೆಯದನ್ನು ಮಾಡಿದ್ದಾನೆ ಎಂಬುದು ನ್ಯಾಯಾಧೀಶನಿಗೆ ಸಿಗುವ ನಿಜವಾದ ಅತ್ಯುತ್ತಮ ಸರ್ಟಿಫಿಕೇಟ್ ಆಗಿದೆ" ಎಂದರು.

ಇದನ್ನೋದಿದನಂತರ ನನಗೆ ಶಾಂತಿ-ಸಮಾಧಾನಗಳು ಸಿಗತೊಡಗಿದವು.

ನಾಯಾಧೀಶ ಆದಷ್ಟು ಪರಿಶ್ರಮಪಟ್ಟು ನ್ಯಾಯ ಕೊಡುತ್ತಿದ್ದರೂ ಜನರು "ಕಾಯದೆಯೆಂಬುದೊಂದು ಕತ್ತೆ", "ನ್ಯಾಯಕ್ಕೆ ಕಣ್ಣೇ ಇಲ್ಲ" ಎಂದೆಲ್ಲ ಹೇಳುತ್ತಾರೆ. ಕಾಯದೆ ಯಾವಾಗಲೂ ಕತ್ತೆಯೇ ಆಗಿರುವದಿಲ್ಲ. ಆದರೆ ಒಮ್ಮೊಮ್ಮೆ ಈ ಮಾತು ಅನ್ವರ್ಥಕವೆನಿಸುತ್ತದೆ. ನಮ್ಮ ಸಂಸತ್ತು ಈಗ ದತ್ತಕ ಕಾಯದೆಯನ್ನು ತಿದ್ದಿದೆ. ಅದಕ್ಕೂ ಮೊದಲು ಮುಂಬಯಿ ಪ್ರಾಂತದಲ್ಲಿ ಇಪ್ಪತ್ತು ವರ್ಷದ ವಿಧವೆ ೬೦ ವರ್ಷದ ವೃದ್ಧನನ್ನು ದತ್ತಕ ತೆಗೆದುಕೊಂಡರೂ ಅದು ಕಾಯದೆಬದ್ಧವೆನಿಸುತ್ತಿತ್ತು.

ಒಂದು ಖಟ್ಲೆ ಹೀಗಿತ್ತು. ಓರ್ವ ತರುಣ ಸ್ತ್ರೀ ತನ್ನ ತರುಣ ಗಂಡನೊಂದಿಗೆ ವಿವಾಹ ವಿಚ್ಛೇದ ಮಾಡಿಕೊಂಡು ಒಬ್ಬ ಶ್ರೀಮಂತ ಮುದುಕನೊಡನೆ ಪುನರ್ವಿವಾಹ ಮಾಡಿಕೊಂಡಳು. ಮುಂದೆ ಆ ಮುದುಕ ಸಾಯಲು ಆ ಹೆಂಗಸು ತಾನು ಮೊದಲು ತ್ಯಜಿಸಿದ ಗಂಡನನ್ನೇ ದತ್ತಕ ತೆಗೆದುಕೊಂಡಳು. ಕಾಯದೆಯಂತೆ ಈ ದತ್ತಕ ಕ್ರಮಬದ್ಧವಿದೆಯೆಂದು ಅವಳ ವಕೀಲರು ವಾದಿಸತೊಡಗಿದರು. ಕಾಯದೆಯ ಈ ಬಗೆಯನ್ನು ಕಂಡು ಜನರು ಕಾಯದೆಯೆಂಬುದು ಕತ್ತೆ ಎನ್ನುವದು ಸಹಜವೂ ಸರಿಯೂ ಆಗಿದೆ. ಆದರೆ ಇಂಥ ಪ್ರಸಂಗಗಳು ಅಪವಾದಾತ್ಮಕವಾಗಿವೆ. ಸಾಮಾನ್ಯವಾಗಿ ದೇಶದ ಮತ್ತು ಸಮಾಜದ ಹಿತಕ್ಕಾಗಿ ಕಾಯದೆಗಳು ರಚಿಸಲ್ಪಟ್ಟಿರುತ್ತವೆ.

ಇನ್ನೊಂದು ಮಾತೆಂದರೆ, ಕಾಯದೆ ಹೇಗಿದ್ದರೂ ಅದನ್ನು ಬದಲಿಸುವ ಅಧಿಕಾರ ನ್ಯಾಯಾಧೀಶನಿಗಿರುವದಿಲ್ಲ. ಆದ್ದರಿಂದ ಕಾಯದೆಯೆಂಬುದು ಕತ್ತೆಯೆಂದರೆ ಅದಕ್ಕೂ ನ್ಯಾಯಾ

ಧೀಶನಿಗೂ ಸಂಬಂಧವೇನೂ ಇಲ್ಲ ಕಾಯದೆಯ ರಚನೆಯಲ್ಲಿ ನ್ಯಾಯಾಧೀಶನ ಅಂಗವಿರದಿದ್ದರೂ ನ್ಯಾಯದಾನದಲ್ಲಿ ಆತ ಹೊಣೆಗಾರನಿರುವದರಿಂದ ನ್ಯಾಯ ಕುರುಡು ಎಂದಾಗ ಅದು ಅವನ ನ್ಯಾಯದಾನಕ್ಕೆ ಅನ್ವಯಿಸುತ್ತದೆ.

ನ್ಯಾಯ ಕುರುಡು ಎಂಬುದು ಸತ್ಯವಲ್ಲ. ಆದರೆ ಆಗೊಮ್ಮೆ ಈಗೊಮ್ಮೆ ಸತ್ಯ ಒಂದು, ನ್ಯಾಯ ಇನ್ನೊಂದು ಆಗಿ ಜನ ಸ್ವಾಭಾವಿಕವಾಗಿ ನ್ಯಾಯಕ್ಕೆ ಕಣ್ಣಿಲ್ಲ ಎನ್ನುತ್ತದೆ. ನ್ಯಾಯವೇಕೆ ಕುರುಡಾಗುತ್ತದೆ? ಎಂದು ವಿಚಾರಿಸಿ ನೋಡಿದಾಗ ಕೌತುಕವೆನಿಸುವದು. ನ್ಯಾಯ ಕುರುಡಾಗಲು ಮುಖ್ಯ ಕಾರಣಗಳು ಹೀಗಿರುತ್ತವೆ:

೧) ಸತ್ಯವೇ ದೇವರು ಎಂದಿದ್ದ ಕಾಲವೊಂದಿತ್ತು. ಆದರೆ ಈಗ ದೇವರಾಣೆ ಮಾಡಿ ಖರೇ ಹೇಳುತ್ತೇನೆ ಎಂದು ಪ್ರತಿಜ್ಞೆ ಮಾಡುವವರು ಸಾಕ್ಷಿಪಂಜರದಲ್ಲಿ ನಿಂತು ಹಿಂದೆ ಮುಂದೆ ನೋಡದೆ ಸುಳ್ಳು ಹೇಳುತ್ತಾರೆ, ದೇವರಾಣೆ ಮಾಡುವದೆಂದರೆ ಸುಳ್ಳು ಹೇಳಲು ಅಪ್ಪಣೆ ಸಿಕ್ಕಂತೆಯೇ ಎಂದು ತಿಳಿದು. ಇದು ಗಂಭೀರವಾದ ವಿಷಯ. ಸಾಕ್ಷಿದಾರರ ಹೇಳಿಕೆಗಳ ಆಧಾರದಿಂದ ನ್ಯಾಯನಿರ್ಣಯ ಮಾಡಬೇಕಾಗುತ್ತದೆ.

೨) ಯಾವದೊಂದು ಜಗಳವು ಕೋರ್ಟಿನ ಹೊರಗೆ ಪಂಚಾಯತಿ ಮೂಲಕ ನಿರ್ಣಯಿಸಲ್ಪಡುವಾಗ ಪಕ್ಷಕಾರರು "ನಾವೀಗ ಕೋರ್ಟಿನಲ್ಲಿಲ್ಲವಾದ್ದರಿಂದ ಖರೇ ಸಂಗತಿ ಹೇಳೋಣ" ಎನ್ನುತ್ತಾರೆ; ಸುಳ್ಳು ಹೇಳುವ ಪವಿತ್ರಸ್ಥಾನ ಕೋರ್ಟು ಎಂಬಂತೆ ವರ್ತಿಸುತ್ತಾರೆ.

೩) ಗುಪ್ತ ಪೋಲೀಸರಂತೆ ಅಡ್ಡಾಡಿ ಸತ್ಯ ಶೋಧಿಸುವ ಅಧಿಕಾರ ನ್ಯಾಯಾಧೀಶನಿಗಿರುವದಿಲ್ಲ. ಕೋರ್ಟಿನ ಆವಾರದಲ್ಲಿ ನಾಲ್ಕು ಗೋಡೆಗಳ ಮಧ್ಯದಲ್ಲಿ ಎದುರಿಗೆ ಬರುವ ಪುರಾವೆಗಳ ಆಧಾರದಿಂದ ಮಾತ್ರ ಆತ ನಿರ್ಣಯ ಮಾಡಬೇಕಾಗುತ್ತದೆ. ಸತ್ಯ ಸಂಗತಿ ಕೋರ್ಟಿನೆದುರು ಬಾಗದಿದ್ದಲ್ಲಿ ನ್ಯಾಯ ಕುರುಡಾಗುವದು ಸಹಜವೇ ಆಗಿದೆ.

೪) ನನ್ನೆದುರು ಖೂನಿ ಪ್ರಕರಣವೊಂದಿತ್ತು. ಸಿಟ್ಟಿನ ಭರದಲ್ಲಿ ಕೊಡಲಿಯಿಂದ ಹೆಂಡತಿಯನ್ನು ಕೊಂದೆ ಎಂದು ಆರೋಪಿ ಕಬೂಲಿ ಕೊಟ್ಟಿದ್ದ ಆದರೆ ಮುಂದೆ ಆತ ತನ್ನ ಕಬೂಲಿ ಜವಾಬನ್ನು ಒಪ್ಪಲಿಲ್ಲ. ಆತನ ವಿರುದ್ಧ ಬೇರಾವ ಪುರಾವೆಯೂ ಬರಲಿಲ್ಲ. ಇಂಥ ಪ್ರಸಂಗದಲ್ಲಿ ಸಂಶಯದ ಲಾಭವಿತ್ತು, ಆರೋಪಿಯನ್ನು ಬಿಡಬೇಕು ಎಂದು ಕಾಯದೆಯಲ್ಲಿ ವಿಧಿಸಿರುವದರಿಂದ ನಾನಾತನನ್ನು ಬಿಡುಗಡೆ ಮಾಡಿದೆ. ಇದರಿಂದ ನ್ಯಾಯ ಕುರುಡು ಎಂದು ಜನರಿಗನಿಸಬಹುದು. ಆದರೆ ಈ ವಿಧಿಯಲ್ಲಿ ಒಂದು ಉಚ್ಚ ತತ್ವವಿದೆ ಹತ್ತು ಜನ ನಿಜವಾದ ಅಪರಾಧಿಗಳು ಬಿಡುಗಡೆಯಾದರೂ ಸರಿ, ಒಬ್ಬನೇ ಒಬ್ಬ ನಿರ್ದೋಷಿಗೂ ಶಿಕ್ಷೆಯಾಗಬಾರದು.

೫) ಲೇಖಿ ಪುರಾವೆ ಮತ್ತು ಬಾಯಿ ಪುರಾವೆಗಳಿಂದ ನ್ಯಾಯಾಧೀಶ ನಿರ್ಣಯ ಮಾಡಬೇಕಾಗುತ್ತದೆ. ಸತ್ಯಕ್ಕನುಸರಿಸಿ ಪುರಾವೆಗಳು ಕೊಡಲ್ಪಟ್ಟಿದ್ದಲ್ಲಿ ಸರಿ. ಆದರೆ ಎಷ್ಟೋ ಸಲ ಈ ಪುರಾವೆಗಳಲ್ಲಿ ಸತ್ಯದಂತೆ ಕಾಣುವ ನಾನಾ ವಿಧಾನ ಸೇರಿಕೊಂಡು ನ್ಯಾಯನಿರ್ಣಯದ ಕಾರ್ಯವು ತುಂಬ ಜಟಿಲವಾಗುತ್ತದೆ ಅಂಥ ಪ್ರಸಂಗದಲ್ಲಿ ನ್ಯಾಯ ಕುರುಡಾಗುವ ಸಂಭವವಿರುತ್ತದೆ.

ನ್ಯಾಯಾಧೀಶ ಅಯೋಗ್ಯನಾಗಿದ್ದರೆ, ಲಂಚಬಡಕನಾಗಿದ್ದರೆ, ಕಾಯದೆಯ ಜ್ಞಾನವಿರದವನಾಗಿದ್ದರೆ ನ್ಯಾಯ ಕುರುಡಾಗುವದಿಲ್ಲವೇ? ಎಂದು ನೀವು ಪ್ರಶ್ನೆ ಕೇಳಬಹುದು. ನಿಮ್ಮ ಮಾತು ನಿಜ. ಕಾಯದೆಯ ವಿಶೇಷ ಜ್ಞಾನವಿರದೆ, ವಶೀಲಿಯಿಂದ ನೇಮಕ ಹೊಂದಿದ್ದ ಒಬ್ಬ ಸಂಸ್ಥಾನೀ ನ್ಯಾಯಾಧೀಶರೆದುರು ಪರ ಊರಿನ ವಕೀಲರೊಬ್ಬರು ದೀರ್ಘವಾಗಿ ವಾದಿಸಿ ಪುನಃ ಪುನಃ "ರೇಸ್ ಜ್ಯುಡಿಕೇಟಾ" (Res judicata) ಎಂಬ ಶಬ್ದವನ್ನುಪಯೋಗಿಸಿದರು. ಆಗ ನ್ಯಾಯಾಧೀಶರು "ರೇಸ್ ನನಗೆ ಗೊತ್ತಿದೆ. ಆದರೆ ಜ್ಯುಡಿಕೇಟಾ ಎಂದರೇನು?" ಎಂದು ಕೇಳಿದರು.

ಇನ್ನೊಬ್ಬ ಸಂಸ್ಥಾನೀ ನ್ಯಾಯಾಧೀಶರೆದುರು ಪರಊರಿನ ವಕೀಲರೊಬ್ಬರು ಮೂರು ತಾಸುಗಳ ವರೆಗೆ ಇಂಗ್ಲೀಷಿನಲ್ಲಿ ವಾದಿಸಿದ ನಂತರ

ನ್ಯಾಯಾಧೀಶ ಮಹಾಶಯರು "ಕೋರ್ಟಿಗೆ ಇಂಗ್ಲೀಷು ತಿಳಿಯುವದಿಲ್ಲ. ಈಗ ಮೊದಲಿನಿಂದ ಮರಾಠಿಯಲ್ಲಿ ಹೇಳಿರಿ" ಎಂದರು.

ಆದರೆ ಈ ಬಗೆಯ ಪ್ರಸಂಗಗಳು ಅಪವಾದ ಗಳು.

ಒಮ್ಮೆ ನನ್ನೆದುರು ಕಾಂಗ್ರೆಸ್ಸಿನ ವಿರುದ್ಧ ಒಂದು ಖಟ್ಲೆ ಬಂದಿತು. ಅಲ್ಲಿ ಜನಾಭಿಪ್ರಾಯ ಕಾಂಗ್ರೆಸ್ಸಿಗೆ ವಿರುದ್ಧವಾಗಿತ್ತು. ಆದರೆ ಕಾಯದೆ ಮತ್ತು ಪುರಾವೆ ಕಾಂಗ್ರೆಸ್ಸಿಗೆ ಅನುಕೂಲವಾಗಿ ದ್ದುದರಿಂದ ನಾನು ಕಾಂಗ್ರೆಸ್ಸಿನ ಪರವಾಗಿ ತೀರ್ಪಿತ್ತೆ. ಜನರಲ್ಲಿ ನಾನು ಅಪ್ರಿಯನಾದೆ. "ಎಂಥವನು ನ್ಯಾಯಾಧೀಶನಾಗಿರಬಾರದು ಎಂಬ ಸಾಕಾರ ಮತ್ತು ಸಜೀವ ಮೂರ್ತಿಯನ್ನು ನೋಡಬೇಕಾದರೆ ಈ ನ್ಯಾಯಾಧೀಶರನ್ನು ನೋಡಿರಿ" ಎಂದು ಜನ ನನ್ನ ಬಗ್ಗೆ ಆಡಿಕೊಳ್ಳ ತೊಡಗಿದರು.

ಮುಂದೆ ಇನ್ನೊಂದು ಖಟ್ಲೆಯಲ್ಲಿ ಪುರಾವೆ ಕಾಂಗ್ರೆಸ್ಸಿನ ವಿರುದ್ಧವಾಗಿದ್ದರಿಂದ ನಾನು ಕಾಂಗ್ರೆಸ್ಸಿನ ವಿರುದ್ಧ ತೀರ್ಪಿತ್ತೆ. ಕೂಡಲೆ ನಾನು ಜನಪ್ರಿಯನಾಗಿಬಿಟ್ಟೆ. "ಆದರ್ಶ ನ್ಯಾಯ ದೇವತೆಯ ಸಾಕಾರ ಮತ್ತು ಸಜೀವ ಮೂರ್ತಿ ಯನ್ನು ನೋಡುವುದಾದರೆ ಈ ನ್ಯಾಯಾಧೀಶ ರನ್ನು ನೋಡಿರಿ" ಎಂದರು ಜನ.

ರಾತ್ರಿಯೆಲ್ಲ ನಿದ್ದೆ ಹತ್ತದಂಥ ದಿನಗಳೂ ನ್ಯಾಯಾಧೀಶನ ಜೀವನದಲ್ಲಿ ಬರುತ್ತವೆ. ಯಾರಿ ಗಾದರೂ ಫಾಶಿ ಶಿಕ್ಷೆ ವಿಧಿಸುವ ಮುಂಚಿನ ದಿನ ರಾತ್ರಿ ಮನಸ್ಸು ಅಸ್ವಸ್ಥವಾಗಿ ನಿದ್ದೆ ಹತ್ತುವ ದಿಲ್ಲ. ಮಹಾಭಾರತದಲ್ಲಿ ಶಾಂತಿಪರ್ವದ ೨೬೮ ನೆಯ ಅಧ್ಯಾಯದಲ್ಲಿ ರಾಜಾ ದ್ಯುಮತ್ಸೇನ ಮತ್ತು ರಾಜಕುಮಾರ ಸತ್ಯವಾನರ ಸಂವಾದ ವಿದೆ ಅದರಲ್ಲಿ ಫಾಶಿ ಶಿಕ್ಷೆಯನ್ನೇಕೆ ವಿಧಿಸಬಾರ ದೆಂಬುದಕ್ಕೆ ಉತ್ಕೃಷ್ಟ ಕಾರಣಪರಂಪರೆಗಳನ್ನು ಹೇಳಿದೆ. ಇದಕ್ಕನುಸರಿಸಿ ಸರಕಾರವು ಫಾಶಿ ಶಿಕ್ಷೆಗೇ ಫಾಶಿಯನ್ನು ಕೊಡಬೇಕು ಎಂದು ನನಗೆ ಎಷ್ಟೋ ಸಲ ಅನಿಸುತ್ತದೆ. ಹಾಗಾಗುವ ವರೆಗೆ ನನ್ನಂಥ ನ್ಯಾಯಾಧೀಶರು ಕರ್ತವ್ಯವೆಂದು ಫಾಶಿ ಶಿಕ್ಷೆಯನ್ನು ವಿಧಿಸಬೇಕಾಗುತ್ತದೆ.

ಆದರೆ ಎಂಥೆಂಥ ವಿಚಿತ್ರಗಳು ಇವೆಯನ್ನು ತ್ತೀರಿ! ಫಾಶಿ ಶಿಕ್ಷೆ ಕೊಡಬೇಕಲ್ಲ ಎಂದು ನಾವು ರಾತ್ರಿಯೆಲ್ಲ ನಿದ್ದೆಯಿಲ್ಲದೆ ಚಡಪಡಿಸುತ್ತೇವೆ. ಮರುದಿನ ಫಾಶಿ ಶಿಕ್ಷೆಯ ಆಜ್ಞೆಯನ್ನು ಕೇಳಿದ ಆರೋಪಿಗೆ ಏನೇನೂ ಅನಿಸದ್ದನ್ನು ಕಾಣು ತ್ತೇವೆ.

ಒಮ್ಮೆ ಒಬ್ಬ ಆರೋಪಿಗೆ ನಾನು ಫಾಶಿ ಶಿಕ್ಷೆ ವಿಧಿಸಿದೆ. ಆತ ಶಾಂತ ಚಿತ್ತದಿಂದ, "ಸಾಹೇಬರೆ, ನಾನು ಹೆಂಡತಿಯೊಡನೆ ಮಾತಾಡಬಯಸು ತ್ತೇನೆ" ಎಂದ. "ಸರಿ. ಮಾತಾಡು" ಎಂದೆ ನಾನು. ಅವನ ಹೆಂಡತಿ ಅಳುತ್ತಳುತ್ತ ಅವನ ಬಳಿಗೆ ಬಂದಳು. ಅವಳ ಟೊಂಕದ ಮೇಲೆ ಚಿಕ್ಕ ಮಗು ಕುಳಿತಿತ್ತು. ಮಗುವಿನ ಕೈಯಲ್ಲಿ ಗುಲಾಬಜಾ ಮೂನ ಇತ್ತು. ಆ ಆರೋಪಿ ಒಮ್ಮಿಂದೊಮ್ಮೆ ಮಗುವಿನ ಕೈಯಿಂದ ಗುಲಾಬಜಾಮೂನ ಕಿತ್ತು ಕೊಂಡು ತಿನ್ನತೊಡಗಿದ. ಅದನ್ನು ಕಂಡು ನನಗೆ "ಸಾಗರದ ಆಳವನ್ನು ಕಂಡುಹಿಡಿಯ ಬಹುದು. ಆದರೆ ಮನುಷ್ಯನ ಮನಸ್ಸಿನ ಆಳವು ಮಾತ್ರ ನಿಲುಕದು" ಎಂದು ಅನಿಸಿತು.

ಆದರ್ಶ ನ್ಯಾಯಾಧೀಶನಲ್ಲಿ ಯಾವ ಗುಣ ಗಳಿರಬೇಕು ಎಂದು ನಾನು ಒಮ್ಮೆ ಬಾಳ ಮಹಾ ರಾಜರನ್ನು ಕೇಳಿದಾಗ ಅವರು ೧) ನ್ಯಾಯಾಧೀ ಶನಿಗೆ ಕಾಯದೆಯ ಪೂರ್ಣ ಜ್ಞಾನವಿರಬೇಕು, ೨) ಆತ ಪ್ರಾಮಾಣಿಕನಿರಬೇಕು, ೩) ಕೆಲಸ ವೆಂದರೆ ಪೂಜೆಯೆಂಬ ಭಾವನೆಯಿಂದ ಆತ ಕೆಲಸ ಮಾಡಬೇಕು, ೪) ಅಂತಃಕರಣದ ದಿವ್ಯಶಕ್ತಿಯ ಸಾಕ್ಷಿಯಾಗಿ ಕಾಯದೆಯ ಎಲ್ಲೆಮೀರದೆ ಆತ ಕೆಲಸಮಾಡಬೇಕು ಮತ್ತು ೫) ಆತ ನಿರಹಂಕಾ ರಿಯಾಗಿರಬೇಕು ಎಂದು ನ್ಯಾಯಾಧೀಶನಲ್ಲಿರ ಬೇಕಾದ ಐದು ಗುಣಗಳನ್ನು ವಿವರಿಸಿದರು.

ಮೊದಲಿನ ನಾಲ್ಕು ಗುಣಗಳ ವಿಚಾರ ಎಲ್ಲ ರಿಗೂ ತಿಳಿಯುವಂತಿದೆ. ನ್ಯಾಯಾಧೀಶನಿಗೆ ಐದನೆಯ ಗುಣವೂ ಅವಶ್ಯಕವೆಂದು ನನಗೆ ನಂಬಿಗೆಯಾಗಿದೆ. ಈ ವಿಚಾರದಲ್ಲಿ ಒಂದು ಘಟನೆಯನ್ನು ನಾನು ಮನಸ್ಸಿನಲ್ಲಿ ಕಾಯ್ದಿಟ್ಟು ಕೊಂಡಿದ್ದೇನೆ: ಸಾತಾರೆಯಲ್ಲಿ ಅಹಂಕಾರಿ ಯಾದ ನ್ಯಾಯಾಧೀಶರೊಬ್ಬರಿದ್ದರು. ತಮ್ಮ

ದೊಡ್ಡಸ್ತಿಕೆಯನ್ನು ಮೆರೆಸಲೆಂದು ಅವರು ಯಾವಾಗಲೂ ವಕೀಲರು ಮತ್ತು ಪಕ್ಷಕಾರರನ್ನು ಟೀಕಿಸಿ ಮಾತಾಡುತ್ತಿದ್ದರು.

ಒಮ್ಮೆ ಅವರೆದುರು ಒಬ್ಬ ಹಳ್ಳಿಯ ಭೋಳೆ ಮುದುಕನ ಖಟ್ಲೆಯಿತ್ತು. ಕೋರ್ಟಿನಲ್ಲಿ ಜನ ತುಂಬಿದ್ದರು. ನ್ಯಾಯಾಧೀಶರು ಮುದುಕನನ್ನು ಬೆದರಿಸಿ ಕೇಳಿದರು: “ವಕೀಲರನ್ನು ತಂದಿದ್ದಿಯಾ?”

“ಸ್ವಾಮೀ, ನಾನು ಬಡವ. ನನ್ನ ಹತ್ತಿರ ಹತ್ತು-ಹನ್ನೆರಡಾಣೆಗಳು ಮಾತ್ರ ಇವೆ. ನಾನು ವಕೀಲರನ್ನು ಹೇಗೆ ಕೊಡಲಿ ?” ಎಂದು ಮುದುಕ ವಿನೀತನಾಗಿ ಹೇಳಿದ.

ಆಗ ಸಾಹೇಬರು ಗಟ್ಟಿಯಾಗಿ, “ವಕೀಲರ ಕೋಣೆಗೆ ಹೋಗು. ಅಲ್ಲಿ ಹತ್ತು-ಹನ್ನೆರಡಾಣೆಗಳಿಗೆ ವಕೀಲರು ಸಿಗುತ್ತಾರೆ” ಎಂದರು.

ಆ ಭೋಳೆ ಮುದುಕ ನಿಜವಾಗಿಯೂ ವಕೀಲರ ಕೋಣೆಗೆ ಹೋಗಿ, “ಇಲ್ಲಿ ಹತ್ತು ಹನ್ನೆರಡಾ ವಕೀಲರು ಇದ್ದಾರೇನ್ರಿ?” ಎಂದು ಕೇಳಿದ.

ಅಲ್ಲಿ ದಾದಾಸಾಹೇಬ ಕರಂದೀಕರರು ಕೂತಿದ್ದರು. ಅವರು ಮುದುಕನಿಂದ ಎಲ್ಲ ಸಂಗತಿ ವಿಚಾರಿಸಿಕೊಂಡು ಹೇಳಿದರು: ‘ಈ ವಕೀಲರ ಕೋಣೆಯಲ್ಲಿ ಮೊದಲು ಹತ್ತು ಹನ್ನೆರಡಾಣೆ ವಕೀಲರಿದ್ದರು. ಈಗ ಅವರು ನ್ಯಾಯಾಧೀಶರಾಗಿರುವದರಿಂದ ಯಾರೂ ಉಳಿದಿಲ್ಲ ಎಂದು ಸಾಹೇಬರಿಗೆ ಹೇಳು.”

ಮುದುಕ ಈ ಮಾತುಗಳನ್ನು ಕೋರ್ಟಿನಲ್ಲಿ ಇದ್ದಕ್ಕಿದ್ದಂತೆ ನ್ಯಾಯಾಧೀಶರೆದುರು ಹೇಳಿದ. ಕೋರ್ಟಿನಲ್ಲಿ ನಗೆಯ ಕೋಲಾಹಲ ಎದ್ದು ಹೋಯಿತು. ನ್ಯಾಯಾಧೀಶರಿಗೆ ಯಾರೋ ತಮ್ಮ ಕಪಾಳಕ್ಕೆ ಒಂದೇ ಸಮನೆ ಹೊಡೆಯುತ್ತಿರುವಂತನಿಸಿತು. ಅಂದಿನಿಂದ ಅವರ ಅಹಂಕಾರ ಅಳಿದು ಅವರು ಆದರ್ಶ ನ್ಯಾಯಾಧೀಶರಾದರು.

ನಾವಿಂದು ಸಮಾಜವಾದದ ಮಾತುಗಳನ್ನಾಡುತ್ತ ಕಾಯದೆಯು ಇಂಥಿಂಥ ಸುಧಾರಣೆಗಳನ್ನು ಮಾಡಬೇಕು ಎನ್ನುತ್ತೇವೆ. ನನ್ನಂಥ ನ್ಯಾಯಾಧೀಶನಿಗೆ ಪ್ರತಿಯೊಬ್ಬನಿಗೂ ಹೊಟ್ಟೆ ತುಂಬ ಅನ್ನ, ಮೈತುಂಬ ಬಟ್ಟೆ, ಇರಲು ಸಾಕಷ್ಟು ಸ್ಥಳ ಸಿಗಬೇಕು ಎಂದೆನಿಸುತ್ತದೆ. ಹಣವಿಲ್ಲದ್ದರಿಂದ ಕಲಿಯಲು ಆಗಲಿಲ್ಲ ಎಂದಾಗಬಾರದು. ಕಾಯದೆಯ ಹೆಸರಿನಲ್ಲಿ ಬೇಕಾದಂಥ ಸುಧಾರಣೆಗಳನ್ನು ನಾವು ಮಾಡಿದೆವಾದರೂ ಅತ್ಯಗತ್ಯದ ಅವಶ್ಯಕತೆಗಳು ಕೂಡ ಪೂರೈಸಲ್ಪಡದ ಸಮಾಜಕ್ಕೆ ಅವುಗಳಿಂದ ಪ್ರಯೋಜನವಾಗುವದಿಲ್ಲ. ಕಾಯದೆಯ ಹೆಸರಿನಲ್ಲಿ ಏನೇನು ಸುಧಾರಣೆ ಮಾಡುವ ಅಗತ್ಯವಿದೆಯೆಂದು ಅಲ್ಲಲ್ಲಿ ಚರ್ಚೆ ನಡೆದಿದೆ. ಅದನ್ನೆಲ್ಲ ಹೇಳಿದರೆ ಒಂದು ರಾಮಾಯಣವೇ ಆದೀತು. ಆದರೆ ಈ ರಾಮಾಯಣದಲ್ಲಿ ಜನತೆಯ ನಿತ್ಯಾವಶ್ಯಕತೆಗಳಿಗೆ ಸ್ಥಾನವಿರದಿದ್ದರೆ ಅದು ರಾಮನಿಲ್ಲದ ರಾಮಾಯಣವೇ ಆದೀತು.

ಸುಳ್ಳಿನ ಕಾಲು

ಒಮ್ಮೆ ಒಬ್ಬ ಮನುಷ್ಯ ಸುಳ್ಳನ್ನು ಕುರಿತು, “ನಿನಗೆ ಕಾಲುಗಳೇ ಇಲ್ಲ. ಅದ್ದರಿಂದ ನೀನು ಒಂದು ಹೆಜ್ಜೆ ಕೂಡ ನಡೆದುಹೋಗಲಾರೆ. ನಡೆಯಲೆತ್ನಿಸಿದರೆ ದೊಪ್ಪನೆ ಬಿದ್ದು ಹೋಗುವೆ” ಎಂದು ಚೇಷ್ಟೆ ಮಾಡಿದನು. ಸುಳ್ಳಿಗೆ ಇದರಿಂದ ತುಂಬ ಕೋಪ ಬಂದು ಅದು ಖಡ್ಗವನ್ನು ಹಿರಿದು ಸತ್ಯದ ಎರಡೂ ಕಾಲುಗಳನ್ನು ಕಡಿದು ಅವನ್ನು ತನ್ನ ಟೊಂಕಕ್ಕೆ ಅಂಟಸಿಕೊಂಡು ವೇಗದಿಂದ ಓಡತೊಡಗಿತು.

ಅಂದಿನಿಂದ ಸುಳ್ಳನ್ನು ಹಿಂದಕ್ಕೆ ಹಾಕುವದು ಸತ್ಯಕ್ಕೆ ಸಾಧ್ಯವಾಗಿಲ್ಲ.

— ಫಿಕ್ರ ತೌಂಸವಿ


ಕೂದಲು ನೆರೆದಿದೆಯೋ ?
ಲೋಮಾ ಉಪಯೋಗಿಸಿ ನಿಮ್ಮ ಸ್ವಾಭಾವಿಕ
ಸೌಂದರ್ಯವನ್ನು ಪುನಃ ಪಡೆಯಿರಿ.
ಕೂದಲನ್ನು ಕಪ್ಪುಗೊಳಿಸುವ ಜಗತ್ ವಿಖ್ಯಾತ-
ವಾದ ಸಾಧನ ಲೋಮಾ ಇದೀಗ ವಿಶಿಷ್ಟವಾಗಿ
ತಯಾರಿಸಿದ 'ಪಿಲ್ಪರ್ ಪ್ರೂಫ್' ಮುಚ್ಚಳದಿಂದ
ಕೂಡಿದ ಸೀಸೆಗಳಲ್ಲಿ ದೊರೆಯುತ್ತದೆ.
ಲೋಮಾ
ಸೋಲ್ ಏಜೆಂಟ್ಸ್ :
ಎನ್. ಎನ್. ಕಂಬಾಟ್‌ವಾಲಾ, ಅಹಮ್ಮದಾಬಾದ್-೧
ಏಜೆಂಟ್ಸ್ : ಸಿ. ನರೋತ್ತಮ ಅಂಡ್ ಕಂಪೆನಿ.
ಮಂಗಳದಾಸ್ ರೋಡ್, ಮುಂಬಯಿ ೨.
ಫೋನ್ . ೩೦೫೭೫

ಕೆಲ ರತ್ನಗಳ ಮೇಲೆ ಯಾವ ದೇವತೆಯ
ಶಾಪವಿರುವುದೋ ಯಾರು ಬಲ್ಲ ?

ಭಾರತೀಯ ವಜ್ರಗಳ ಕಥೆ—೧

ಇತ್ತೀಚೆಗೆ "ಜಹಾಂಗೀರ" ಎಂಬ ವಜ್ರವನ್ನು ಭಾರತೀಯರೊಬ್ಬರು ೧೪,೦೦೦ ಪೌಂಡುಗಳಿಗೆ ಕೊಂಡರು. ದೇಶಭ್ರಷ್ಟವಾಗಿದ್ದ ಈ ವಜ್ರ ಹೀಗೆ ಮತ್ತೆ ತನ್ನ ತಾಯ್ನಾಡನ್ನು ಕಂಡಿತು.

'ಜಹಾಂಗೀರ' ವಜ್ರದಂತೆ ಭಾರತದ ಎಷ್ಟೋ ವಜ್ರಗಳ ಕಥೆ ರೋಮಾಂಚಕಾರಿಯಾಗಿದೆ. ಇಡೀ ಜಗತ್ತಿನ ವಜ್ರಪೂರೈಕೆಯ ಕೇಂದ್ರ ಭಾರತವಾಗಿದ್ದ ಕಾಲ ಒಂದಿತ್ತು. ೧೭೨೫ ರಲ್ಲಿ ಬ್ರಾಝಿಲದಲ್ಲಿ ವಜ್ರದ ಗಣಿಗಳ ಶೋಧವಾಗುವವರೆಗೂ ವಜ್ರಗಳಿಗೆ ಭಾರತವೇ ತವರೂರಾಗಿದ್ದಿತು. ೧೮೭೦ ರಿಂದ ಮಾತ್ರ ಆಫ್ರಿಕೆಯು ವಜ್ರ ವ್ಯಾಪಾರದಲ್ಲಿ ಅಗ್ರೇಸರವಾಗಿದೆ. ಇಂದು ಕೂಡ ಜಗತ್ತಿನ ವಜ್ರಾದಿಗಳ ಬೇಡಿಕೆಯಲ್ಲಿ ನೂರಕ್ಕೆ ೯೦ ರಷ್ಟಕ್ಕಿಂತಲೂ ಹೆಚ್ಚಿನ ಭಾಗವನ್ನು ಆಫ್ರಿಕೆಯೇ ಪೂರೈಸುತ್ತದೆ.

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ವಜ್ರಗಳ ಉಲ್ಲೇಖ ದೊರೆಯುತ್ತದೆ. 'ರಾಮಾಯಣ', 'ಮಹಾಭಾರತ', ಕೌಟಿಲ್ಯನ 'ಅರ್ಥಶಾಸ್ತ್ರ' ವಾತ್ಸ್ಯಾಯನನ 'ಕಾಮಸೂತ್ರ', ವೈದ್ಯಕೀಯ ಗ್ರಂಥವಾದ 'ಅಷ್ಟಾಂಗ ಹೃದಯ' ಮೊದಲಾದ ಗ್ರಂಥಗಳಲ್ಲಿ ವಜ್ರಗಳ ಉಲ್ಲೇಖವಿದೆ.

೧೭ ನೆಯ ಶತಮಾನದಲ್ಲಿ ಭಾರತವನ್ನು ಸಂದರ್ಶಿಸಿದ ಫ್ರೆಂಚ ಪ್ರವಾಸಿ ಟಾವರ್ನಿಯರ (Tavernier) ನೆಂಬವನು ಗೋಲಕೊಂಡದ ಬಳಿಯ ವಜ್ರದ ಗಣಿಗಳಲ್ಲಿ ೬೦,೦೦೦ ಕೆಲಸಗಾರರು ದುಡಿಯುತ್ತಿದ್ದರು ಎಂದು ಬರೆದಿದ್ದಾನೆ. ಪ್ರಾಚೀನ ಭಾರತದ ಹಿಂದೂ ರಾಜರಂತೆ ಮಹಮ್ಮದೀಯ ಅರಸರೂ ನವಾಬರೂ ವಜ್ರಪ್ರಿಯರಾಗಿದ್ದು ಅವರಿಂದ ಈ ಉದ್ದಿಮೆಗೆ ಉತ್ತೇಜನ ದೊರೆಯುತ್ತಿತ್ತು.

ಭಾರತದ ವಜ್ರದ ಉದ್ದಿಮೆ ಇಂದು ಗತವೈಭವದ ಮಾತಾಗಿದ್ದರೂ ಭಾರತದ ವಜ್ರಗಳ ಕಥೆ ಹೇಳಿಕೇಳುವಂಥದು.

೧

ಕೊಹಿನೂರ್

ತನ್ನ ಕೈಲಿದ್ದ ರೇಶಿಮೆ ಚೀಲವನ್ನು ಮೀರ ಜುಮ್ಲಾ ಮೊಗಲ ಬಾದಶಾಹ ಶಾಹಜಹಾನನ ಎದುರು ಸುರುವಿದನು. ತನ್ನೆದುರು ಹರಡಿ ಬಿದ್ದಿದ್ದ ಲಕಲಕ ಹೊಳೆಯುತ್ತಿದ್ದ ಆ ವಜ್ರಗಳನ್ನು



"ಸಂಡೇ ಸ್ಟ್ಯಾಂಡರ್ಡ"ನಿಂದ

ಕಂಡು ಮೊಗಲ ಬಾದಶಾಹನ ಮುಖ ಅರಳಿತು. ಆ ವಜ್ರಗಳ ಚಿಕ್ಕ ರಾಶಿಯ ನಡುವೆ ಎಲ್ಲಕ್ಕೂ ಹೆಚ್ಚು ಪ್ರಕಾಶಮಾನವಾಗಿ ಮಿನುಗುತ್ತಿದ್ದ ಒಂದು ದೊಡ್ಡದಾದ ವಜ್ರದ ಮೇಲೆ ಬಾದ ಶಾಹನ ಕಣ್ಣು ಬಿದ್ದಿತು. ಅದನ್ನು ಸರಿಯಾಗಿ ನೋಡಲು ಆತ ತುಸು ಮುಂದೆ ಬಾಗಿದ.

ಮೀರ ಜುಮ್ಲಾ ಈ ಕ್ಷಣವನ್ನೇ ಎದುರು ನೋಡುತ್ತಿದ್ದ. ಆತ ನಾಲ್ಕು ಹೆಜ್ಜೆ ಮುಂದೆ ಬಂದು ಬಾದಶಾಹನ ಲಕ್ಷ್ಯವನ್ನು ವೇಧಿಸಿದ್ದ ಆ ವಜ್ರವನ್ನು ಎತ್ತಿ ಅತ್ಯಂತ ವಿನೀತ ಭಾವದಿಂದ ಬಾದಶಾಹನ ಕೈಗಿತ್ತ.

"ಅಹಾ! ಎಷ್ಟೊಂದು ದೊಡ್ಡ ಮತ್ತು ಪ್ರಕಾಶಮಾನವಾದ ಹರಳು!" ಎಂದ ಬಾದ ಶಾಹ ಶಾಹಜಹಾನ. ವಜ್ರದ ಪ್ರಕಾಶವು ಆತನ ಮುಖವನ್ನು ಬೆಳಗಿತ್ತು.

"ಶಾಹೇನಶಾಹ, ಈ ಗುಲಾಮ ಇದಕ್ಕಿಂ-ತಲೂ ಹೆಚ್ಚಿನದನ್ನು ಖಾವಂದರಿಗೆ ಅರ್ಪಿಸುವ ಭಾಗ್ಯವನ್ನು ಪಡೆದುಬಂದಿಲ್ಲ. ಗೋಲಕೊಂಡದ ಗಣಿಗಳಲ್ಲಿ ಸಿಗುವ ವಜ್ರಗಳಲ್ಲಿ ಇದೇ ಶ್ರೇಷ್ಠ-ವಾದದ್ದು ಎಂದೇನೂ ಜಂಭ ಕೊಚ್ಚಿಕೊಳ್ಳ ಲಾರೆ," ಮೀರ ಜುಮ್ಲಾ ಹೇಳಿದ.

"ಅಂ! ಇದಕ್ಕಿಂತಲೂ ಉತ್ತಮವಾದವುಗ ಳಿವೆಯೆ?" ಬಾದಶಾಹ ವಿಸ್ಮಿತನಾಗಿ ಕೇಳಿದ.

"ಹೌದು ಜಹಾಂಪನಾ. ಕಂದಹಾರದ ರುಕ್ಷ ಬಂಡೆಗಲ್ಲುಗಳಿಗಿಂತಲೂ ಗೋಲಕೊಂಡದ ಅಸಾಮಾನ್ಯ ವಜ್ರಗಳು ಖಂಡಿತವಾಗಿಯೂ ತಮ್ಮ ಗಮನಕ್ಕೆ ಬರಲು ಅರ್ಹವಾಗಿವೆ."

ಮೀರ ಜುಮ್ಲಾ ಗೋಲಕೊಂಡದ ನವಾಬನ ವಿಶ್ವಾಸಿಕ ನೌಕರನಾಗಿದ್ದ. ಮುಂದೆ ಆತ ತನ್ನ ಒಡೆಯನಿಗೆ ದ್ರೋಹ ಬಗೆದ. ಈತ ಅಪಾಯ ಕಾರಿ ಮನುಷ್ಯ ಎಂದು ಕಂಡುಕೊಂಡ ನವಾಬ ಅವನನ್ನು ದೂರವಿಡತೊಡಗಿದ.

ತನ್ನ ಗೌರವ-ಪ್ರತಿಷ್ಠೆಗಳಿಗೆ ಬಂದ ಕುಂದನ್ನು ಕಂಡು ನೊಂದುಕೊಂಡ, ತನ್ನ ಹಂಚಿಕೆ ಫಲಿಸ ದ್ದರಿಂದ ಖತಿಗೊಂಡ ಮೀರ ಜುಮ್ಲಾ ಶಾಹಜ ಹಾನನ ವಜ್ರಸಂಗ್ರಹ ಹುಚ್ಚನ್ನು ಕೆಣಕಿ ಗೋಲಕೊಂಡ ನವಾಬನ ಮೇಲಿನ ಸೇಡನ್ನು ತೀರಿಸಿಕೊಂಡ. ಮೊಗಲ ಬಾದಶಾಹ ಶಾಹಜ ಹಾನ ಸೌಂದರ್ಯ ಮತ್ತು ಕಲಾಪ್ರೇಮಿಯಾಗಿ ದ್ದನೆಂದು ಮೀರ ಜುಮ್ಲಾನಿಗೆ ಗೊತ್ತಿತ್ತು.

ಮೀರ ಜುಮ್ಲಾ ಕಪಟಿಯಾಗಿದ್ದ. ಆ ಕಾಲ ದಲ್ಲಿ ಭಾರತವನ್ನು ಸಂದರ್ಶಿಸಿದ ಪ್ರಸಿದ್ಧ ಪ್ರವಾಸಿ ಬರ್ನಿಯರನು, "ಮೀರ ಜುಮ್ಲಾ ನಾನಾ ವಿಧದಲ್ಲಿ ಧನಸಂಗ್ರಹ ಮಾಡಿದ್ದ. ಎಲ್ಲರ ಬಾಯಲ್ಲಿ ಅವನ ಐಶ್ವರ್ಯದ ಮಾತೇ ಮಾತು. ಆತನ ಬಳಿಯಿದ್ದ ವಜ್ರಗಳನ್ನು ಚೀಲಗಳ ಸಂಖ್ಯೆಯಿಂದಲೇ ಲೆಕ್ಕ ಮಾಡಬೇಕಾಗಿತ್ತು" ಎಂದು ಬರೆದಿದ್ದಾನೆ.

ಗೋಲಕೊಂಡದ ನವಾಬನು ತನ್ನಲ್ಲಿಟ್ಟಿದ್ದ ನಂಬಿಗೆಯ ಬಲದಿಂದ ಇಷ್ಟೊಂದು ಅಪಾರ ಸಂಪತ್ತನ್ನು ಗಳಿಸಿದ್ದರೂ ಮೀರ ಜುಮ್ಲಾ ಅವ-ನಿಗೆ ದ್ರೋಹ ಬಗೆದು ಶಾಹಜಾಹನನನ್ನು ಗೋಲಕೊಂಡದ ಮೇಲೆ ದಾಳಿಯಿಡಲು ಪ್ರೇರಿ-ಸಿದನು. ಮೊಗಲ ಸೈನ್ಯ ಗೋಲಕೊಂಡವನ್ನು ವಶಪಡಿಸಿಕೊಂಡು ಅದನ್ನು ಲೂಟಿಮಾಡಿತು.

ಮೀರ ಜುಮ್ಲಾನಿಂದ ಪಡೆದ ಅಮೂಲ್ಯ ವಜ್ರವನ್ನು ಏನು ಮಾಡದೇಕೆಂದು ಶಾಹಜಹಾ-ನನಿಗೆ ತಿಳಿಯಲಿಲ್ಲ ಆತ ತಜ್ಞರೊಡನೆ ವಿಚಾರ ಮಾಡಿದ. ಕೊನೆಗೆ ಅದನ್ನು ಆಗ ತಯಾರಾಗು-ತ್ತಿದ್ದ ಮಯೂರ ಸಿಂಹಾಸನದ ನವಿಲಿನ ಕಣ್ಣಿ ನಲ್ಲಿ ಇಡಬೇಕು ಎಂದು ನಿಶ್ಚಯಿಸಲ್ಪಟ್ಟಿತು.

ಮೊಗಲರಿಗೆ ಈ ವಜ್ರ ಒಂದು ಶತಮಾನ ಕಾಲವೂ ದಕ್ಕಲಿಲ್ಲ. ೧೭೩೯ ರಲ್ಲಿ ದಿಲ್ಲಿಯ ಮೇಲೆ ದಾಳಿಮಾಡಿದ ನಾದಿರಶಾಹನು ೫೮ ದಿನಗಳ ವರೆಗೆ ದಿಲ್ಲಿಯನ್ನು ಸುಲಿಗೆ ಮಾಡಿದ. ಆತ ಪರ್ಶಿಯಕ್ಕೆ ಸುಮಾರು ೧೩೫ ಕೋಟಿ ರೂ. ಗಳ ಸಂಪತ್ತನ್ನು ಒಯ್ದ. ಮಯೂರ ಸಿಂಹಾಸ ನವೂ ಅವನ ಪಾಲಾಯಿತು.

ಆ ಸಿಂಹಾಸನದಲ್ಲಿ ನವಿಲಿನ ಕಣ್ಣಾಗಿ ಹೊಳೆ ಯುತ್ತಿದ್ದ ಅಪ್ರತಿಮ ತೇಜಸ್ಸಿನ ವಜ್ರವನ್ನು ಕಂಡಾಗ ನಾದಿರಶಾಹ ಅದನ್ನು "ಕೋಹ್-ಇ-ನೂರ್-" ಎಂದು ಕರೆದ. "ಕೋಹಿನೂರ್"

ಅಂದರೆ " ಪ್ರಕಾಶದ ಪರ್ವತ. "

೧೭೪೭ ರಲ್ಲಿ ನಾದಿರಶಾಹನ ಕೊಲೆಯಾಗಿ "ಕೋಹಿನೂರ್" ಅವನ ಮೊಮ್ಮಗ ಶಾಹ ರುಖನ ವಶಕ್ಕೆ ಬಂತು. ಕೋಹಿನೂರನ್ನು ಸಂಪಾದಿಸಲು ಮೀರ ಅಲಂ ಖಾನನು ಶಾಹ ರುಖನನ್ನು ಸೆರೆಯಲ್ಲಿಟ್ಟು ಹಿಂಸಿಸಿದನು.

೧೭೫೧ ರಲ್ಲಿ ಶಾಹ ರುಖನು ಕಾಬೂಲಿನ ದುರಾನಿ ರಾಜವಂಶವನ್ನು ಸ್ಥಾಪಿಸಿದ ಅಹಮ್ಮದ ಶಾಹನಿಗೆ, ಅವನಿಂದ ದೊರೆತ ಸಹಾಯದ ಪ್ರತಿಫಲವೆಂದು ಕೋಹಿನೂರನ್ನು ಕೊಟ್ಟ.

ಈ ವಜ್ರಕ್ಕಾಗಿ ಅಫಗಾನಿಸ್ತಾನದಲ್ಲಿ ಅನೇಕ ಯುದ್ಧಗಳು ನಡೆದವು. ತಂದೆಯ ನಂತರ ಸಿಂಹಾಸನವನ್ನೇರಿದ ಅಹಮ್ಮದ ಶಾಹನ ಹಿರಿಯ ಮಗ ಶಹಝಮಾನನನ್ನು ಅವನ ತಮ್ಮ ಮಹಮ್ಮದನು ಸಿಂಹಾಸನದಿಂದ ಕೆಳಗೆಳೆದು ಕಣ್ಣು ಕೀಳಿಸಿದ. ಅಷ್ಟಾದರೂ ಶಾಹ ಝಮಾನ ಅದು ಹೇಗೊ ಕೋಹಿನೂರನ್ನು ತನ್ನ ವಶದಲ್ಲಿಯೇ ಇಟ್ಟುಕೊಂಡಿದ್ದ.

ಎರಡು ವರ್ಷಗಳ ನಂತರ ಈ ವಜ್ರ ಶಾಹ ಝಮಾನನ ಇನ್ನೊಬ್ಬ ತಮ್ಮ ಶಾಹ ಶೂಜಾನ ಕೈಗೆ ಬಂತು. ಈತ ಮಹಮ್ಮದನನ್ನು ಗಡೀಪಾರು ಮಾಡಿದ. ಆದರೆ ಮಹಮ್ಮದನು ಕೆಲವೇ ದಿನಗಳಲ್ಲಿ ತಿರುಗಿ ಬಂದು ಅವನನ್ನು ಸೋಲಿಸಿ ಸಿಂಹಾಸನವೇರಿದ. ಗಡೀಪಾರು ಮಾಡಲ್ಪಟ್ಟ ಶಾಹರುಖ ಮತ್ತು ಶಾಹಶೂಜಾ ಸಹಾಯದೊರಕಿಸುವ ಆಶೆಯಿಂದ ಭಾರತಕ್ಕೆ ಬಂದರು.

ಆಗ ರಣಜಿತಸಿಂಗನ ಏರಿಕೆಯ ಕಾಲವಾಗಿತ್ತು. ೧೮೧೨ ರಲ್ಲಿ ಅವನನ್ನು ಭೆಟ್ಟಿಯಾಗಿ ಶಾಹಶೂಜಾ ತಮ್ಮ ದುರಂತ ಕಥೆಯನ್ನು ಹೇಳಿದ. ಕಾಬೂಲದ ಸಿಂಹಾಸನವನ್ನು ಪಡೆಯಲು ಸಹಾಯ ಮಾಡುವದಾದರೆ " ಕೋಹಿನೂರ " ನ್ನು ಕೊಡುವದಾಗಿ ವಚನವಿತ್ತ.

ಸುಮಾರು ನೂರು ವರ್ಷಗಳ ಕಾಲ ಪರದೇಶದಲ್ಲಿ ಸುತ್ತಾಡಿದ ಕೋಹಿನೂರ್ ಮತ್ತೆ ಭಾರತಕ್ಕೆ ಬಂದದ್ದು ಹೀಗ.

೧೮೩೯ ರಲ್ಲಿ ರಣಜಿತಸಿಂಗ ಮರಣ ಹೊಂದಿದ. ಕೋಹಿನೂರನ್ನು ಜಗನ್ನಾಥ ದೇವಾಲಯಕ್ಕೆ ಕಾಣಿಕೆಯಾಗಿ ಅರ್ಪಿಸಬೇಕೆಂದು ಆತ ಮರಣ ಕಾಲಕ್ಕೆ ಹೇಳಿದ್ದನೆನ್ನುತ್ತಾರೆ. ಆದರೆ ಹಾಗಾಗಲಿಲ್ಲ.

೧೮೪೯ ರಲ್ಲಿ ಪಂಜಾಬವು ಬ್ರಿಟಿಶರ ಸ್ವಾಧೀನವಾಯಿತು. ಮುಂದೆ ಕೋಹಿನೂರು ರಾಣಿ ವಿಕ್ಟೋರಿಯಳಿಗೆ ಈಸ್ಟ ಇಂಡಿಯ ಕಂಪನಿಯ ಪರವಾಗಿ ಕಾಣಿಕೆಯಾಗಿ ಅರ್ಪಿಸಲ್ಪಟ್ಟಿತು. ರಣಜಿತನ ಮಗ ದಿಲೀಪನಿಂದ ಅದನ್ನು ಬ್ರಿಟಿಶರು ಕಸಿದೇಕೊಂಡರೆಂದರೂ ತಪ್ಪಾಗದು.

ಲಂಡನ್ ತಲುಪಿದಾಗ ಕೋಹಿನೂರ್ ವಜ್ರದ ತೂಕ ೧೮೬ ಕ್ಯಾರಟ್ ಇದ್ದಿತು. ಈ ಅಪ್ರತಿಮ ವಜ್ರವನ್ನು ನೋಡಲು ಜನ ಅತ್ಯಂತ ಆತುರರಾಗಿದ್ದುದರಿಂದ ೧೮೫೧ ರ ಮಹಾ ಪ್ರದರ್ಶನದಲ್ಲಿ ಇದನ್ನು ಜನರಿಗೆ ತೋರಿಸಲಾಯಿತು.

೧೮೫೨ ರಲ್ಲಿ ಆಮಸ್ಟರಡಾಮದ ಓರ್ವ ತಜ್ಞನಿಂದ ಈ ವಜ್ರವನ್ನು ರಾಣಿ ವಿಕ್ಟೋರಿಯಾ ಕೆತ್ತಿಸಿದಳು. ಈ ಕೆತ್ತನೆಯ ಕೆಲಸಕ್ಕೇ ರೂ. ೧,೨೦,೦೦೦ ವೆಚ್ಚ ಬಂದಿತು.

ಏಳನೆಯ ಎಡ್ವರ್ಡ ಅರಸರ ಸಿಂಹಾಸನಾರೋಹಣ ಕಾಲಕ್ಕೆ ಕೋಹಿನೂರನ್ನು ಮೊದಲನೆಯ ಸಲ ರಾಣಿ ಅಲೆಗ್ಝಾಂಡ್ರಾಳ ಕಿರೀಟದಲ್ಲಿ ಕೂಡಿಸಲಾಯಿತು. ಅಂದಿನಿಂದ ಅದು ಇಂಗ್ಲಂಡಿನ ರಾಣಿಯರ ಕಿರೀಟವನ್ನಲಂಕರಿಸಿದೆ.

ಕೋಹಿನೂರು ಜಗತ್ತಿನಲ್ಲಿಯ ಅತಿ ಹಳೆಯ ವಜ್ರವೆನ್ನುತ್ತಾರೆ. ಇದು ಮಹಾಭಾರತ ಕಾಲದಲ್ಲಿ ಕೂಡ ಇತ್ತು ಎನ್ನುವ ಭಾರತೀಯರೂ ಇದ್ದಾರೆ.

ಇಷ್ಟೊಂದು ಪ್ರಖ್ಯಾತವಾದ ಈ ವಜ್ರದ ಬೆಲೆಯನ್ನು ಇದು ವರೆಗೆ ಯಾರೂ ಕಟ್ಟಿಲ್ಲ. ಇದು ಎಂದೂ ಮಾರಾಟವಾಗಿಲ್ಲವೆಂಬುದು ಇದರ ಸುದೀರ್ಘ ಯಾತ್ರೆಯಲ್ಲಿನ ಒಂದು ವಿಚಿತ್ರ ಅಂಶವಾಗಿದೆ. ಅನೇಕರ ಕೈಸೇರಿದರೂ ಅದು ಯಾವಾಗಲೂ ಸುಲಿಗೆಯ ರೂಪದಲ್ಲಿ ಅಥವಾ ಕಾಣಿಕೆಯ ರೂಪದಲ್ಲಿ ಕೈಯಿಂದ ಕೈಗೆ ಬದಲಾಗಿದೆ.

ಕಾವ್ಯವನ್ನು ಹಾಡಿದರೇ ರಸ!

ಗೌರೀಶ ಕಾಯ್ಕಿಣಿ

ಹಳ್ಳಿಹಳ್ಳಿಗಳಲ್ಲಿ, ಈಗಲೂ ಕಂಡುಬರುವ ಯಕ್ಷಗಾನ ಕಲಾಪ್ರೇಮದಲ್ಲಿ, ತುಂಡು ಪದ್ಯಗಳ ಸರಾಗವಾದ ಹಾಡುಗಾರಿಕೆಯ ಆದರ ಆಸಕ್ತಿಗಳಿಗೆ ಸ್ಮಾರಕವಾಗಿ ಮನೆಮನೆಗಳ ಗಿಳಿಗೂಟಗಳಿಗೆ ಮೃದಂಗಗಳು ತೂಗಾಡುತ್ತವೆ! ಭಜನ-ಸಪ್ತಾಹ ನಮ್ಮ ಕರಾವಳಿಯ ರಸಿಕ ಭಕ್ತರ ಒಂದು ವಿಶೇಷ ಸಾಂಸ್ಕೃತಿಕ ರಸದೂಟ. ಹರಿಕೀರ್ತನೆ—ನಗರ ಸಂಕೀರ್ತನೆಗಳಿಗೆ ಮೆಚ್ಚದ, ಆ ಮೆಚ್ಚಿಗೆಗಾಗಿ ದಾನ ಧರ್ಮ ಮಾಡದ ಆಬಾಲವೃದ್ಧರು ಯಾರೂ ಇಲ್ಲ. ಇವೆಲ್ಲದರ ಇಂಗಿತವೇನು ? ಒಳ್ಳೆಯ ಪದ್ಯಗಳನ್ನು ಹಾಡುವದು ನಮ್ಮ ಜನಕ್ಕೆ ಒಳ್ಳೆಯ ಪಲ್ಲೆ ತಿನ್ನುವಷ್ಟೇ ಅಗತ್ಯದ ಹಾಗೂ ಅಭಿರುಚಿಯ ವಿಷಯವಾಗಿ ಬಂದಿದೆ. ಇದು ಕೇವಲ ನಮ್ಮ ರಸಿಕತನದ ಕುರುಹಷ್ಟೇ ಅಲ್ಲ ಈ ಕಾವ್ಯಪ್ರೇಮ – ಈ ಗಾಯನಪ್ರೇಮ ನಮ್ಮ ಜೀವನದ ಅಂತರಂಗಕ್ಕೆ ಒಂದು ಆಳವಾದ ಸಾಂತ್ವನೆ, ಉತ್ಕಟವಾದ ಉದ್ದೀಪನೆ ಹಾಗೂ ಋಜುವಾದ ಸಂಸ್ಕಾರ ಕೊಡುತ್ತ ಬಂದಿದೆಯೆಂಬುದಕ್ಕೆ ಇದು ಜೀವಂತ ಸಾಕ್ಷಿ.

ನಮ್ಮ ಪ್ರಾಚೀನ ಜನರು ಈ ಸಂಸ್ಕಾರ-ಸಾಂತ್ವನೆಗಳ ಯಥಾಯೋಗ್ಯ ಬೆಲೆಯನು ಅರಿತವರಾಗಿದ್ದರು. ಆದಕಾರಣವೇ ಹಳ್ಳಿ ಹಳ್ಳಿಗಳಲ್ಲಿ ಒಂದಿಲ್ಲ ಒಂದು ರೀತಿ ಕಾವ್ಯ-ಗಾಯನ ನಿತ್ಯಪಾಠವಾಯಿತು. ಕೇವಲ ಗಾಯನವೂ ಉತ್ತಮ ಹೃದಯಸಂಸ್ಕಾರ ನೀಡಬಲ್ಲದು ಕೇವಲ ಕಾವ್ಯವೂ ಅದೇ ರೀತಿ ಮಾಡಬಲ್ಲದು ಆದರೆ ಶುದ್ಧ ಸಂಗೀತಸಾಧನೆ ಅಥವಾ ಶುದ್ಧ ಕಾವ್ಯಾವಲೋಕನೆ ಅಶಿಕ್ಷಿತ, ಅರ್ಧಶಿಕ್ಷಿತ ಜನದ ಪರಿಮಿತ ಪ್ರಜ್ಞಾಪ್ರಪಂಚಕ್ಕೆ ಅಷ್ಟೊಂದು ಒಗ್ಗದ ವಸ್ತು ಅತ್ತ ಕಲೆ ಇತ್ತ ಶಾಸ್ತ್ರ ಕಾಲೊತ್ತಡಕಾಗುತ್ತವೆ ಆದರೆ ಕಾವ್ಯಗಾಯನ ಹಾಗಲ್ಲ. ಅದು "ಹಿತಾಯ ಚ ಸುಖಾಯ ಚ" ಉಭಯ ಕ್ಷೇಮಕರ. ಕಲಿತ ಒಳ್ಳೆಯ ಪದ್ಯ ಇಲ್ಲವೆ ಸೊಲ್ಲು ಕಂಠಗತ ಮಾಡುವುದು, ಕಂಠಗತ ಮಾಡಿದ್ದನ್ನು ಒಂದು ಇಂಪಾದ ಗತ್ತಿಗೆ ಹಾಡುವದು ಅನಾಯಾಸವಾದ, ಸ್ವಚ್ಛಂದವಾದ ಪ್ರಕೃತಿಸಹಜವಾದ ವ್ಯಾಪಾರವೆನಿಸುವದು. ಕಾವ್ಯದ ಭಾವ ರಾಗದ ಭಾಷೆಯಲ್ಲಿ ಇನ್ನಿಷ್ಟು ಮೈದುಂಬಿ ಕಳೆದುಂಬಿ ಉಕ್ಕುತ್ತದೆ ಕೆಲವೊಂದು ಕಾವ್ಯಕ್ಕೆ ಗಾಯನ ಹೀಗೆ ಅನಿವಾರ್ಯ ಪೂರಕ. ಆದ್ದರಿಂದಲೇ ಹಾಡುಗಬ್ಬವೂ ವಾಗ್ಗೇಯಕಾರರೂ ಉಂಟಾದರು ಕಾವ್ಯದ ಸಾಫಲ್ಯ ಓದುವಷ್ಟೇ ಓದಿಹೇಳುವದರಲ್ಲಿ, ಹಾಡಿಹೇಳುವದರಲ್ಲಿ ಇದೆ.

ಆದರೆ ಶೋಚನೀಯವೂ—ಅಷ್ಟೇ ಆಲೋಚನೀಯವೂ ಆದ ಸಂಗತಿಯೆಂದರೆ ಕಾವ್ಯಗಾಯನದತ್ತ ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಆಧುನಿಕ ಕಾಲದಲ್ಲಿ ತುಂಬ ಅನಾಸ್ಥೆ ಅಶ್ರದ್ಧೆ ಆಗಿಬಿಟ್ಟಿದೆ. ಹಿಂದಿನ ತಲೆಮಾರಿಗೆ ಭಕ್ತಿಗೀತಗಳು ಕೊಟ್ಟ ಮತ್ತು ಕೊಡಬಲ್ಲ ಸಾಂತ್ವನೆ ಸಂಸ್ಕಾರಗಳನ್ನು

“ ಜನಸೇವಕ ” ದಿಂದ ಸಂಗ್ರಹೀತ

ಇಂದಿನ ನಮ್ಮ ಹಾರ್ದಿಕ ಜೀವನಕ್ಕೆ ಭಾವಗೀತಗಳು ಕೊಡಬೇಕು. ಇಂದಿನ ಶಿಕ್ಷಣ ಕ್ಷೇತ್ರದಲ್ಲಿ ಹೃದಯದ ಕೃಷಿ ಹಿಂದೆ ಬಿದ್ದು ಮಾನಸಿಕ ಮರುಭೂಮಿ ಭರದಿಂದ ಹಬ್ಬತೊಡಗಿದೆ. "Poetry cannot save the soul; but it can make it worth saving." ಒಂದು ಜೀವವು ಆತ್ಮವಂತವಾಗಬೇಕಿದ್ದರೆ ಕಾವ್ಯದ ಸಂಸ್ಕಾರದಿಂದ ಬರುವ ಆರ್ಜವ—ಮಾರ್ದವಗಳು ಅವಶ್ಯವೆಷ್ಟೆಂದು ತಿಳಿದವರಿಗೆ ಹೇಳಬೇಕಿಲ್ಲ—ತಿಳಿಯದವರಿಗೂ ಹೇಳಬೇಕಿಲ್ಲವೇನೋ! ಪ್ರಾಚೀನ ಆರ್ಯರ ಕ್ರತುಶಕ್ತಿಯ, ಸಾಂಘಿಕ ಸತ್ವದ ಎಷ್ಟು ಪಾಲು ಅವರ ಸಾಮುದಾಯಿಕ ಸಾಮಗಾಯನದಿಂದ ಸಂಪನ್ನವಾಗುತ್ತಿತ್ತೋ—ಇನ್ನೂ ಸಂಶೋಧಿಸಬೇಕಾದ ಸಮಸ್ಯೆಯದು. ಇಂದು ನಮ್ಮ ಅಭ್ಯಾಸ ಪತ್ರಿಕೆಗಳಲ್ಲಿ ಇಂತಿಷ್ಟು ನೂರು ಸಾಲು ಪದ್ಯ ಕಂಠಪಾಠ ಮಕ್ಕಳಿಗೆ ಆಗಬೇಕೆಂದಿದೆ. ಆದರೆ ಅತ್ತ ಪೂರ್ತಿಯಾಗಿ ಸ್ಫೂರ್ತಿಯಿಂದ ಚಿತ್ತವೀಯುವ ಭಾಷಾ ಶಿಕ್ಷಕರು ಎಷ್ಟು ಜನ?

ಕಾವ್ಯದ ಅಭ್ಯಾಸಕ್ಕೆ ಅದರ ವಾಚನ ಮತ್ತು ಉಚ್ಚಾರವೇ ಜೀವಾಳ. ಅರ್ಥಕ್ಕಿಂತ "ಅರ್ಥದ ಮರ್ಮ' ಅರಿತುಕೊಳ್ಳಲಿಕ್ಕೂ ಕಾವ್ಯದ ಭಾವಾಸ್ವಾದಕ್ಕೂ ಅದರ ಸರಾಗವಾದ ಹಾರ್ದಿಕವಾದ ಓದಿಹೇಳುವ ಹಾಡಿಕೇಳುವ ಕ್ರಿಯೆ ಬೇಕು. ಆದರೆ ಕಾವ್ಯದ ಈ ಅಂಗವನ್ನೇ ನಮ್ಮ ಪಠ್ಯಕ್ರಮದಲ್ಲಿ ಪ್ರಯತ್ನಪಟ್ಟು ಕಡೆಗಣಿಸಲಾಗುತ್ತದೆ! ನಮ್ಮ ವಿದ್ಯಾರ್ಥಿಗಳ ಮಾತು ಹೇಗೂ ಇರಲಿ ನಮ್ಮ ಗುರು ಹಿರಿಯರಿಗೆ ಸಾಮೂಹಿಕವಾಗಿ ರಾಷ್ಟ್ರಗೀತ ಹಾಡಲಿಕ್ಕೂ ನಾಚಿಕೆ! ಸರಿಯಾಗಿ ಉಚ್ಚಾ- ಇಲ್ಲವೆ ಸ್ವರ-ಸಂಚಾರ ಬರುವದಿಲ್ಲವೆಂಬ ನಾಚಿಕೆಯಲ್ಲ, ಸಾರ್ವಜನಿಕವಾಗಿ ತನ್ನ ಕಂಠವನ್ನು ತಾನು ಕೇಳುವದೆಂದರೇನೇ ನಾಚಿಕೆ. ಇದು ರಾಷ್ಟ್ರಕ್ಕೆ ಒಂದು ಲಾಂಛನ!

ಕಾವ್ಯಗಾಯನದಿಂದ ವೈಯಕ್ತಿಕ ಹೃದಯ ಸಂಸ್ಕಾರವಾಗುವಂತೆ, 'Community [illegible] ಸಾಮೂಹಿಕ ಗಾಯನದಿಂದ ಸಮಾಜದ ಹೃದಯ ಪಾಕಗೊಳ್ಳುತ್ತದೆ, ಸಾಮಾಜಿಕ ಮನಸ್ಸಿಗೆ ಒಂದು ಅಚ್ಚುಕಟ್ಟು ಬರುತ್ತದೆ. ಪಾಶ್ಚಾತ್ಯರಾಷ್ಟ್ರದ ನಾಗರಿಕರಿಗೆ ಸಾಮುದಾಯಿಕ ಗಾಯನದಲ್ಲಿ ಗೌರವವೆನಿಸುತ್ತದೆ. ರಶಿಯಾದಂಥ ದೇಶವು ಸಾವಿರ—ಸಾವಿರ ಜನ ಮುಕ್ತಕಂಠದಿಂದ ದೇಶಪ್ರೇಮದ ಗೀತಗಳನ್ನು ಹಾಡುವ ಕಲೆಯನ್ನು ಪೂರ್ಣ ವ್ಯವಸ್ಥೆಗೇ ತಲ್ಪಿಸಿದೆ. ನಮ್ಮದೋ "ತ್ರಿಂಶತ್ ಕೋಟಿ ಕಂಠ ಕಲಕಲ ನಿನಾದ ಕರಾಲೆ"ಯಾದ ಭಾರತಮಾತೆ! ಆದರೆ ಈ ಸಾಮುದಾಯಿಕ ವಿಸಂವಾದವನ್ನು ಕೆಲಮಟ್ಟಿಗಾದರೂ ಹೋಗಲಾಡಿಸಿದ್ದು ಮಹಾರಾಷ್ಟ್ರದ ಭಕ್ತಿ-ಸಾಂಪ್ರದಾಯ. ಆಷಾಢ, ಕಾರ್ತಿಕಗಳ ಏಕಾದಶಿಗಳಿಗೆ ಪಂಢರಪುರದಲ್ಲಿ ಚಂದ್ರಭಾಗೆಯ ಮಳಲತಡಿಯಲ್ಲಿ ಸಾವಿರಗಟ್ಲೆ, ವಾರಕರಿ ಭಕ್ತರ ಸಮೂಹ ನೆನೆದು ಹರಿನಾಮ ಸಂಕೀರ್ತನೆ, ಸಂತ ಕವಿಗಳ ಭಜನ ಗಾಯನಗಳಲ್ಲಿ ಪ್ರಪಂಚವನ್ನೇ ಮರೆಯುತ್ತ ಒಂದು ರೀತಿ ಭಾವಸಮಾಧಿ, ನಾದಬ್ರಹ್ಮನ ಸಾಕ್ಷಾತ್ಕಾರ ಹೊಂದತೊಡಗಿದಂದಿನಿಂದ ಮಹಾರಾಷ್ಟ್ರದ ಮನಸ್ಸು ಒಂದು ಕೆಚ್ಚನ್ನು ಪಡೆಯಿತು. ಆದರೆ ಈ ಪ್ರಯೋಗ ಅಷ್ಟಕ್ಕೇ ಅಲ್ಲಿಗೇ ತಡೆಯಿತು.

ಇಲ್ಲಿ ಒಂದು ಆಖ್ಯಾಯಿಕೆ ಜ್ಞಾಪಕವಾಗುತ್ತದೆ. ಮೊದಲನೆಯ ಮಹಾಯುದ್ಧದ ಪ್ರಸಂಗದ ತನ್ನ ಸ್ಮೃತಿ ಚಿತ್ರಗಳನ್ನು ಬರೆದಿಟ್ಟ ಅಂದಿನ ಬ್ರಿಟಿಶ್ ಪ್ರಧಾನ ಮಂತ್ರಿ ಲಾಯಿಡ್ ಜಾರ್ಜ ಈ ನೆನಹನ್ನು ಒಳ್ಳೆ ಅಭಿಮಾನದಿಂದ ಹೇಳಿದ್ದಾನೆ. ಆಗ ವೇಲ್ಸಿನಲ್ಲಿ ಒಮ್ಮೆಲೇ ಕಣಿಯ ಕೆಲಸಗಾರರು ಸಂಪು ಹೂಡಿ ಕೂತರು. ಅದನ್ನು ತಗ್ಗಿಸಲು, ಅವರ ಆ ಹುರಿಗೊಂಡ ಉರಿಮೊರೆಯನ್ನು ಹಿಗ್ಗಿಸಲು ಮಾತಿನ ಮಾಂತ್ರಿಕ ಲಾಯಿಡ್ ಜಾರ್ಜ ಸ್ವತಃ ಹೋಗುವುದು ಶಕ್ಯವಿದ್ದಿಲ್ಲ. ಆತ ಇನ್ನೊಬ್ಬ ಮಂತ್ರಿಯನ್ನು ಕಳುಹಿದನು. ಆ ಮಂತ್ರಿಗೆ ವೇಲ್ಸಿಗೆ ಹೊರಡುವ ಮುನ್ನ ಲಾಯಿಡ್ ಜಾರ್ಜ ಒಂದು ಸೂಚನೆಯನ್ನು ಮಾತ್ರ ಕೊಡಲು ಮರೆಯಲಿಲ್ಲ. "ನೋಡು, ವೇಲ್ಸಿನ ಈ ಜನ ತುಂಬ ಸಂಗೀತದ ಮೆಚ್ಚುಗ್ಗಾ

ರರು." ಆ ಮಂತ್ರಿ ಅಲ್ಲಿಗೆ ಹೋದ. ಹುಬ್ಬುಗಂಟಿನ ಹೊಗೆಯಾಡುವ ಮುಖಗಳು ಸಾವಿರ ಸಾವಿರವಾಗಿ ಅವನನ್ನು ಇದಿರಿಸಿದ್ದವು. ಆ ಸಭೆಯಲ್ಲಿ ಆತ ಮಾತನಾಡುವದೆಂತು? ಮನವೊಲಿಸುವದೆಂತು? ಆದರೆ ಆತನಿಗೆ ತಮ್ಮ ಪ್ರಧಾನ ಮಂತ್ರಿ ಹೇಳಿದ ಮಂತ್ರ ನೆನಪಾಯಿತು. ಅವನು ಸಭಿಕರಿಗೆ ಒಂದು ಸಾಮೂಹಿಕ ಗೀತ ಹೇಳಲು ಬಿನ್ನವಿಸಿಕೊಂಡನು—ಅಲ್ಲ, ತಾನೇ ಹಾಡಲು ಆರಂಭಿಸಿದನು. ಜನ ಒಬ್ಬರ ಮೋರೆ ಒಬ್ಬರು ನೋಡತೊಡಗಿದರು. ಅವರಿಗೆ ತಿಳಿಯದೇ ಕೈ-ಕಾಲು ತಾಳಹಾಕಹತ್ತಿದವು. ತುಟಿ ಆಡಿದವು. ಕಣ್ಣು ಅರಳಿದವು. ಒಬ್ಬೊಬ್ಬರಾಗಿ ಆ ಹಾಡಿನ ಸೆಲೆಗೆ ಆ ಜನಸ್ತೋಮ ದನಿಗೂಡಿಸಿತು. ಹಾಡು ಹೊನಲಾಗಿ ಹರಿಯಿತು. ಕಡಲಾಗಿ ಭೋರ್ಗರೆಯಿತು ಸಾವಿರಗಟ್ಲೆ ಜನ ಒಕ್ಕೊರಲಿನಿಂದ ಆ ಹಾಡನ್ನೂ ಅದರ ಹಿಂದೆ ತಾವೇ ಎತ್ತಿಕೊಂಡ ಇನ್ನೊಂದನ್ನು ಹಾಡತೊಡಗಿದರು. ಹಾಡಿ ಮುಗಿದಾಗ ಆ ಸಭೆಯ ವಾತಾವರಣ ಪ್ರಸನ್ನವಾಗಿತ್ತು. ಸಂಗೀತ ರಾಜಕಾರಣವನ್ನು ಗದ್ದಿತು. ಒಂದು ರಾಷ್ಟ್ರೀಯ ಸಂಕಟ ಗಾಯನದಲ್ಲಿ ಸರಾಗವಾಗಿ ತೇಲಿಹೋಯಿತು. ಮುಂದಿನ ಸಭೆ ಆ ಸಂಧಾನದ ಮನೋವೃತ್ತಿಯಲ್ಲಿ ಮುಂದುವರಿಯಿತು!

ಕಾವ್ಯಗಾಯನದಿಂದ ನಾವು ಪಡೆಯುವದು ಮನಃಶುದ್ಧಿ ಮತ್ತು ಮನಃಶಕ್ತಿ. ಎಲ್ಲ ಕಲೆಯ, ಕಾವ್ಯದ, ಗುರಿ ಇದೇ ಸರಿ. ಆದರೆ ಇದನ್ನು ಹಗುರಾಗಿ ನವಿರಾಗಿ ಕೊಡಕೊಳ್ಳುವ ಇಬ್ಬರಿಗೂ ಸುಖವಾಗಿ ಸಾಧಿಸುವ ಸಿದ್ಧಿ ಕಾವ್ಯ ಗಾಯನದಲ್ಲಿದೆ. ನಮ್ಮ ಜನಕ್ಕೆ ವಿಶೇಷತಃ ಯುವಜನಕ್ಕೆ ಒಂದು ಭಾವಶುದ್ಧಿಯನ್ನೂ ರಸಿಕತೆಯ ಹೃದಯ ಸಂಪತ್ತನ್ನೂ ಸಂಪಾದಿಸಿಕೊಡುವ ತೀರ ಸುಗಮವಾದ ದಾರಿ ಕಾವ್ಯಗಾಯನದ್ದು.

ಭಾಷೆಯೇ ಒಂದು ಕಾವ್ಯ. ವ್ಯವಹಾರಕ್ಕೆ ಭಾಷೆ ಬೇಡ. ಕೈಸನ್ನೆಗಳಿಂದ ಸಕಲ ವ್ಯವಹಾರ ಸಾಗಿಸಬಹುದು! ಭಾಷೆ ಹುಟ್ಟಿದಾಗಲೇ ಕಾವ್ಯ ಹುಟ್ಟಿತು. ಆ ಹುಟ್ಟೇ ಹೇಳಿಕೆ, ಹಾಡಿಕೆ, ಕೇಳಿಕೆ ಮತ್ತು ಸೊಗಯಿಸುವಿಕೆಯ ಹುಟ್ಟು.

ಆ ಮರವೆ!

ಅತ್ಯಂತ ಮರೆವಿನ ಸ್ವಭಾವದವರಲ್ಲಿ ಮೂರು ಸಲ ಫ್ರಾನ್ಸದ ಮಂತ್ರಿಪದವಿಗೇರಿದ 'ಪೇನ ಲೀವ್ಹ' ಎಂಬವರೊಬ್ಬರು. ಸ್ವತಃ ಅವರ ಕಾರು ಅವರ ಸಲುವಾಗಿ ಕಾಯುತ್ತ ನಿಂತಿದ್ದರೂ ಅವರು ಟ್ಯಾಕ್ಸಿಯಲ್ಲಿ ಮನೆಗೆ ಹೋಗುತ್ತಿದ್ದರಂತೆ; ಟ್ಯಾಕ್ಸಿಯವನು ಅವರ ಮನೆಯ ವಿಳಾಸ ಕೇಳಿದರೆ ಎಷ್ಟೋ ಸಲ ಅವರು ತಮ್ಮ ಟೆಲಿಫೋನ ನಂಬರು ಕೊಡುತ್ತಿದ್ದರಂತೆ. ಒಂದು ಸಲ ಅವರು ತಮ್ಮ ಗೆಳೆಯನ ಬರವನ್ನು ನಿರೀಕ್ಷಿಸಿದ್ದರು. ತಮ್ಮ ಮನೆಯ ಬಾಗಿಲ ಮೇಲೆ ಅವರು "ಪೇನಲೀವ್ಹ ಹದಿನೈದು ನಿಮಿಷಗಳಲ್ಲಿ ಹಿಂತಿರುಗುತ್ತಾರೆ" ಎಂದು ಬರೆದ ಕಾಗದವನ್ನು ಚುಚ್ಚಿದ್ದರು. ಹಿಂತಿರುಗಿ ಬಂದು ಅವರು ತಾವೇ ಚುಚ್ಚಿದ ಕಾಗದವನ್ನು ನೋಡಿ ಬಾಗಿಲಲ್ಲಿಯೇ ಕುಳಿತು ತಮ್ಮ ಸಲುವಾಗಿಯೇ ಕಾದಿದ್ದರಂತೆ.

—'ಸ್ಯಾಂಟಿಫಿಕ್ ಅಮೇರಿಕನ್'

ಕಳಿಸಿದವರು: ಆರ್. ಎಂ. ಲಕ್ಕುಂಡಿ

“ ತಲೆ ತಿರುಗುವುದು ” ಒಂದು ರೋಗವಲ್ಲ—
ಬೇರೆ ರೋಗಗಳ ಲಕ್ಷಣ

ನಿಮಗೆ ಚಕ್ರ ಬರುತ್ತದೆಯೆ?

ತಲೆ ಸುತ್ತಿದ ಹಾಗೆ ಆಗುತ್ತದೆ, ಕಣ್ಣಿಗೆ ಚಕ್ರ ಬಂದಂತಾಗುತ್ತದೆ, ಎಂದು ಜನರನ್ನುವದು ಹಗಲೆಲ್ಲ ಕೇಳಿಬರುವ ಮಾತು. ಒಮ್ಮೆಯಾದರೂ ಈ ಬೇನೆಯನ್ನು ಅನುಭವಿಸಲಿಲ್ಲ ಎಂದು ಹೇಳುವವರನ್ನು ಕಾಣುವದು ಕಠಿಣ. ಚಕ್ರ ಬರುವದನ್ನು ಹಲವರು ಹಲವು ಬಗೆಯಾಗಿ ಹೇಳುತ್ತಾರೆ. ತಲೆ ತಿರುಗುತ್ತದೆ, ಕಣ್ಣಿಗೆ ಕತ್ತಲು ಬಂದಂತಾಗುತ್ತದೆ, ದೂಡಿದಂತಾಗುತ್ತದೆ, ಹಿಂದೆ ಮುಂದೆ ತೂನೆದಂತಾಗುತ್ತದೆ, ತತ್ತರಿಸಿದಂತಾಗುತ್ತದೆ ಎಂದು ನಾನಾ ಬಗೆಯಾಗಿ ಜನ ಈ ರೋಗದ ಲಕ್ಷಣವನ್ನು ಹೇಳುತ್ತಾರೆ. ಚಕ್ರ ಬರುವ ರೀತಿ ನಾನಾ ಬಗೆಯುದು, ತೀವ್ರ ಅಥವಾ ಸೌಮ್ಯ ಸ್ವರೂಪದ್ದು ಆಗಿದ್ದರೂ ಒಟ್ಟನಲ್ಲಿ ತಲೆ ಸುತ್ತುತ್ತಿರುವಂತೆನಿಸುವದೇ ಈ ರೋಗದ ಲಕ್ಷಣವೆನ್ನಬಹುದು.

ತಲೆ ಸುತ್ತುವದು ಅಂದರೆ ಚಕ್ರ ಬರುವದು ಅದರಷ್ಟಕ್ಕೆ ಅದೇ ಒಂದು ರೋಗವಲ್ಲ. ಶರೀರದಲ್ಲಿಯ ಯಾವದೋ ಒಂದು ಸುಪ್ತ ವಿಕಾರದ ಲಕ್ಷಣವದು. ಈ ವಿಕಾರ ಸೌಮ್ಯವಾಗಿರಬಹುದು, ಉಗ್ರವಾದದ್ದಿರಬಹುದು. ಅದಕ್ಕಾಗಿ ತಲೆ ಸುತ್ತುತ್ತಿದೆಯೆನ್ನುವ ರೋಗಿಯ ಉಪಚಾರ ಮಾಡುವಾಗ ಡಾಕ್ಟರರು ಅದರ ಮೂಲವನ್ನು ಹುಡುಕಿ ತೆಗೆಯಲು ರೋಗಿಯ ಸಾದ್ಯಂತ ತಪಾಸಣೆ ಮಾಡುತ್ತಾರೆ.

ಡಾಕ್ಟರರು ತಲೆ ಸುತ್ತುವಿಕೆಗೆ ‘ವರ್ಟಿಗೊ’ ಎಂಬ ಹೆಸರನ್ನಿಟ್ಟಿದ್ದಾರೆ. ವರ್ಟಿಗೋ ಮಿದುಳಿನ ವ್ರಣ ಅಥವಾ ಅಪಸ್ಮಾರದ ಮೂಲಕ ಉಂಟಾಗಬಹುದು. ಅರೆತಲೆ ನೋವಿನಿಂದ ಬಳಲುವವರು ಹಗಲೆಲ್ಲ ಚಕ್ರ ಬಂದಂತಾಗುತ್ತದೆಯೆಂದು ಹೇಳುತ್ತಿರುತ್ತಾರೆ.

ತಂಬಾಕು ಅಥವಾ ಮದ್ಯದ ಅತಿ ಸೇವನೆಯಿಂದಲೂ ವರ್ಟಿಗೊ ಕಾಣಿಸಿಕೊಳ್ಳಬಹುದು. ಉದ್ದಿಮೆಗಳಲ್ಲಿ ಉಪಯೋಗಿಸುವ ಅನೇಕ ಬಗೆಯ ಗ್ಯಾಸೂ ಇದಕ್ಕೆ ಕಾರಣವಾಗುವದು. ನಿದ್ದೆ ಬರಿಸುವ ಗುಳಿಗೆಗಳು, ಕ್ವಿನಾಯಿನ್, ಸ್ಟ್ರೆಪ್ಟೋಮ್ಯಾಸಿನ್, ಆಸ್ಪಿರಿನ್ ಮೊದಲಾದವುಗಳ ಸತತ ಉಪಯೋಗದಿಂದಲೂ ತಲೆ ಸುತ್ತುವ ಲಕ್ಷಣ ತೋರಿಬರುತ್ತದೆ.

ವೃದ್ಧರಿಗೆ ಶುದ್ಧ ರಕ್ತನಾಳಗಳ ಕಾಠಿಣ್ಯದಿಂದ ರಕ್ತ ಸಂಚಾರಕ್ಕೆ ತಡೆಯಾಗಿ ತಲೆ ಸುತ್ತಿದಂತೆನಿಸುತ್ತದೆ. ಒಮ್ಮೊಂದೊಮ್ಮೆ ಚಕ್ರ ಬಂದಂತಾಗಿ, ಮರುಕ್ಷಣದಲ್ಲೆ ಇಲ್ಲದಂತಾಗುವದಕ್ಕೆ ಮಿದುಳಿನ ರಕ್ತನಾಳವೊಂದರ ಅತಿ ಸಂಕೋಚನ ಕಾರಣವಾಗುತ್ತದೆ ರಕ್ತದ ಒತ್ತಡ ಹೆಚ್ಚಾಗಿರುವವರಿಗೂ ಈ ಬೇನೆಯ ಬಾಧೆ ಆಗಾಗ ಆಗುವದುಂಟು.

ಉನ್ಮಾದ ರೋಗದಲ್ಲಿ, ಚಿಂತಾಗ್ರಸ್ತ ಸ್ಥಿತಿಯಲ್ಲಿ, ನರಗಳ ದೌರ್ಬಲ್ಯ ಸ್ಥಿತಿಯಲ್ಲಿ ಕೂಡ ವರ್ಟಿಗೊ ರೋಗ ಅಂಟಿಕೊಳ್ಳುವದು. ತಲೆಗೆ ಪೆಟ್ಟು ಹತ್ತಿದಾಗ ಚಕ್ರ ಬಂದಂತಾದರೆ ಮಿದುಳಿಗೆ ನೋವಾಗಿದೆ ಎಂದು ತಿಳಿಯಬೇಕು. ಪಾಂಡುರೋಗದಿಂದ ಬಳಲುವವರೂ ತಲೆ ಸುತ್ತುವಿಕೆಯನ್ನು ಅನುಭವಿಸಬೇಕಾಗುವದು.

ಸಿಟ್ಟಿಗೆದ್ದಾಗ ಇಲ್ಲವೆ ಮನದಲ್ಲಿ ದ್ವೇಷ ಹತ್ತಿಕೊಂಡಾಗ ಚಕ್ರ ಬರುವ ಅನುಭವವು ಹಲವರಿಗೆ ಉಂಟಾಗುವದು. ಇದಕ್ಕೆ ಅಂಥ

“ ಹೆರಾಲ್ಡ್ ಆಫ್ ಹೆಲ್ತ್ ” ಆಧಾರದಿಂದ

F 2--11

ಸ್ಥಿತಿಯಲ್ಲಿ ಅವರಲ್ಲಿಯ ಭಾವನಾವೇಗದ ಮೂಲಕ ರಕ್ತದ ಒತ್ತಡ ಹೆಚ್ಚಾದದ್ದೇ ಕಾರಣವಾಗಿರುತ್ತದೆ. ಅದರಂತೆ ಕೆಲವರಿಗೆ ತೀರ ದಣಿದಾಗ ರಕ್ತದ ಒತ್ತಡ ಕಡಿಮೆಯಾಗುವದರ ಮೂಲಕ ಚಕ್ರ ಬಂದಂತಾಗುವದು. ಮಲಗಿಕೊಂಡೊಡನೆ ತಲೆ ಸುತ್ತುವದು ನಿಂತು ಆರಾಮವೆನಿಸುವದಾದರೆ ತಲೆ ಸುತ್ತಿದ್ದಕ್ಕೆ ಕಿವಿಯೊಳಗಿನ ಯಾವದೋ ಒಂದು ದೋಷ ಕಾರಣವಾಗಿತ್ತೆಂದು ತಿಳಿಯಲಡ್ಡಿಯಿಲ್ಲ.

ಚಕ್ರ ಬರುವದನ್ನು ನಿಲ್ಲಿಸಲು ಅಥವಾ ತಡೆಯಲು ಇಂಥದೇ ಒಂದು ಚಿಕಿತ್ಸೆ ಸರಿ ಎಂದು ಹೇಳಲು ಬರುವದಿಲ್ಲ. ಚಿಕಿತ್ಸೆ ಮಾಡುವಾಗ ಮೊದಲು ಮೂಲ ಕಾರಣವನ್ನು ಹುಡುಕುವದು ಅತ್ಯವಶ್ಯವಾದುದು. ಕಿವಿಯೊಳಗಿನ ಕೂಗಣೆಯು ಮೂಲಕ ತಲೆಗೆ ಚಕ್ರ ಬಂದಿದ್ದರೆ ಕೂಗಣೆ ತೆಗೆದೊಡನೆ ಅದು ನಿಲ್ಲುವದು. ಅತಿಯಾದ ತಂಬಾಕು ಅಥವಾ ಮದ್ಯಸೇವನೆಯಿಂದ ಬಂದದ್ದಾಗಿದ್ದರೆ ಅವುಗಳನ್ನು ತ್ಯಜಿಸಿದೊಡನೆ ಗುಣ ಕಂಡುಬರುವದು.

ಬಹಳ ಹೊತ್ತಿನವರೆಗೆ ತಲೆ ಸುತ್ತುತ್ತಿದ್ದರೆ ತಜ್ಞ ಡಾಕ್ಟರರ ಸಲಹೆಯನ್ನು ಪಡೆಯುವದು ಅಗತ್ಯ. ಏಕೆಂದರೆ ತಲೆ ಸುತ್ತುವದು ಒಂದು ರೋಗವಾಗಿರದೆ ಅದು ಶರೀರದಲ್ಲಿಯ ಒಂದು ಸುಪ್ತರೋಗದ ಲಕ್ಷಣವಾಗಿದೆ. ಈ ಸುಪ್ತ ರೋಗ ಹಲವು ಸಲ ಯಾವದೊಂದು ಕಠಿಣ ರೋಗವಾಗಿರಲೂ ಬಹುದು. ಆದ್ದರಿಂದ ಏನೋ ಪಿತ್ಥವಾಗಿ ಚಕ್ರ ಬಂದಿರಬೇಕು ಎಂದು ಉಪೇಕ್ಷೆ ಮಾಡದೆ ವೈದ್ಯಕೀಯ ಸಲಹೆ ಪಡೆಯುವದು ಒಳ್ಳೆಯದು. ಡಾಕ್ಟರರು ಅನೇಕ ವಿಧಾನಗಳಿಂತ ತಲೆ ಸುತ್ತುವದರ ನಿಜ ಕಾರಣವನ್ನು ಕಂಡು ಹಿಡಿಯಬಲ್ಲರು. ಡ್ರಾಮಾಮೈನ್ ಎಂಬ ಔಷಧಿ ತಲೆ ಸುತ್ತುವಿಕೆಗೆ, ವಿಶೇಷತಃ ಮೋಟರ ಮೊದಲಾದ ತೀವ್ರಗತಿಯ ವಾಹನಗಳಲ್ಲಿ ಕುಳಿತಾಗ ತಲೆ ಸುತ್ತಿದಂತಾಗುವದಕ್ಕೆ ಬಹಳ ಉಪಯುಕ್ತವಾಗಿದೆ. ರಕ್ತದ ಒತ್ತಡ ಅಧಿಕವಾಗಿ ತಲೆ ಸುತ್ತಿದಂತಾಗುತ್ತಿದ್ದರೆ ಉಪ್ಪಿಲ್ಲದೆ ಊಟ ಮಾಡುವದು ಬಹಳ ಹಿತವನ್ನು ಕೊಡುತ್ತದೆ. ಶುದ್ಧ ರಕ್ತನಾಳಗಳ ಕಾಠಿಣ್ಯದಿಂದ ಈ ಲಕ್ಷಣ ಕಾಣಿಸಿಕೊಂಡರೆ ಕೊಬ್ಬಿನ ಅಂಶ ಕಡಿಮೆಯಾಗಿರುವ ಆಹಾರ ಸೇವನೆ ಪಥ್ಯವಾಗುತ್ತದೆ.

ಪಾಂಡುರೋಗದಲ್ಲಿ ಹಗಲೆಲ್ಲ ಚಕ್ರ ಬಂದಂತಾಗುತ್ತಿದ್ದರೆ ಯೋಗ್ಯ ಆಹಾರದಿಂದ ರಕ್ತದಲ್ಲಿಯ ಕೆಂಪುಕಣಗಳನ್ನು ವರ್ಧಿಸಿದರೆ ಚಕ್ರ ಬರುವದು ನಿಲ್ಲುವದರ ಜೊತೆಗೆ ಪಾಂಡುರೋಗವೂ ಗುಣವಾಗುವದು. ರಕ್ತದ ಒತ್ತಡ ಕಡಿಮೆಯಾಗಿರುವದು ಕಾರಣವಾಗಿದ್ದರೆ ಪಥ್ಯದ ಆಹಾರ, ವಿಶ್ರಾಂತಿ ಮತ್ತಿನ್ನಿತರ ರೀತಿಗಳಿಂದ ರಕ್ತದ ಒತ್ತಡವನ್ನು ಹೆಚ್ಚಿಸಿದರೆ ತಲೆ ಸುತ್ತುವುದು ನಿಲ್ಲುವದು.

ಚಕ್ರ ಬರುವದಕ್ಕೆ ಕಣ್ಣಿನ ದೋಷ ಕಾರಣವಾಗಿರುವಾಗ ಯೋಗ್ಯ ಕನ್ನಡಕವನ್ನು ಧರಿಸಿದರೆ ಚಕ್ರ ಬರುವದು ನಿಲ್ಲುವದು. ಅನಾರೋಗ್ಯಕರವಾದ ಹೊಗೆಯ ಬಳಿಯಲ್ಲಿ ಕೆಲಸ ಮಾಡುವವರಿಗೆ ತಲೆ ಸುತ್ತಿದಂತಾಗುತ್ತಿದ್ದರೆ ಅವರು ಬೇರೆ ಕೆಲಸ ಮಾಡುವದು ಕ್ಷೇಮ.

ಕೆಲವು ಸಲ ತೂತು ಬಿದ್ದು ನೋವನ್ನುಂಟು ಮಾಡುವ ಹಲ್ಲೂ ತಲೆ ಸುತ್ತುವದಕ್ಕೆ ನೆಪವಾಗುವದು. ಆಗ ಅಂಥ ಹಲ್ಲನ್ನು ಕೀಳಿಸಿಕೊಂಡರೆ ರೋಗ ನಿವಾರಣೆಯಾಗುವದು. ಅದರಂತೆ ಗಲಗ್ರಂಥಿಗಳು (Tonsils) ಕಾರಣವಾಗಿದ್ದರೆ ಅವುಗಳ ಆಪರೇಶನ್ನಿನಿಂದ ಹಿತವಾಗುವದು.

ನರಗಳ ದೌರ್ಬಲ್ಯವು ತಲೆ ಸುತ್ತುವದಕ್ಕೆ ಕಾರಣವಾಗಿರುವಾಗ ಯಾವದನ್ನೂ ಅತಿಯಾಗಿ ಮಾಡುವದನ್ನು ಬಿಡಬೇಕಾಗುವದು. ಅವಸರವನ್ನು ತ್ಯಜಿಸಬೇಕಾಗುವದು. ಮನದ ಭಾವನೆಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕಾಗುವದು. ಬಂದದ್ದು ಬರಲಿ ಎಂಬ ಧೈರ್ಯವನ್ನು ರೂಢಿಸಿಕೊಳ್ಳಬೇಕಾಗುವದು. ಇದೊಂದೇ ರೋಗವಲ್ಲ, ಶರೀರದ ಯಾವದೇ ವ್ಯಾಧಿಯನ್ನು ನಿವಾರಿಸಿಕೊಂಡು ಆರೋಗ್ಯವನ್ನು ಪಡೆಯಲು ವಿಶ್ವಾಸ, ಧೈರ್ಯ, ನಿರ್ಧಾರಗಳು ಬೇಕಾಗುವವು ಎಂಬುದು ನೆನಪಿನಲ್ಲಿಡಬೇಕಾದ ಮಾತು.

ಈತನಿಗೆ ಒಂದು ಅಪಘಾತವು
ಜ್ಞಾನದೃಷ್ಟಿಯನ್ನು ಕೊಟ್ಟಿತು.

೪೦ ಅಡಿ ಎತ್ತರದಿಂದ ಬಿದ್ದ ಮನುಷ್ಯ

೧೯೪೩ ರ ಒಂದು ಘಟನೆ. ಹಾಲಂಡ್ ದೇಶದಲ್ಲಿ ಒಂದು ಮುಂಜಾನೆ ಪೀಟರ್ ಹರಕೋಸ್ ಎಂಬ ಪೇಂಟರನು ೪೦ ಅಡಿ ಎತ್ತರದ ಏಣಿಯ ಮೇಲೆ ನಿಂತು ಬಣ್ಣ ಬಳಿಯುತ್ತಿದ್ದವನು ಚಿಟ್ಟನೆ ಚೀರಿ ನೆಲಕ್ಕೆ ಬಿದ್ದ. ಆತನ ಮೆದುಳಿಗೆ ಬಲವಾದ ಪೆಟ್ಟು ತಗಲಿತು. ಆತನನ್ನು ಆಸ್ಪತ್ರೆಗೆ ಸಾಗಿಸಿದರು. ಆತನು ಸತ್ತನೆಂದೇ ಎಲ್ಲರೂ ತಿಳಿದಿದ್ದರು. ಆದರೆ ಅವನ ಪ್ರಾಣ ಇನ್ನೂ ಉಳಿದುಕೊಂಡಿತ್ತು. ಆಸ್ಪತ್ರೆಯಲ್ಲಿ ಅನೇಕ ವಾರಗಳವರೆಗೆ ಅವನು ಜೀವನ ಮರಣಗಳ ಮಧ್ಯೆ ತೂಗಾಡಿದ.

ಕೊನೆಗೆ ಒಂದು ದಿನ ಅವನು ಮರಣದ ಮೂರ್ಛೆಯಿಂದ ಎಚ್ಚರಗಾದಾಗ ಆತನ ಮಾನಸಿಕ ಶಕ್ತಿ ಆತನನ್ನೇ ಆಶ್ಚರ್ಯಗೊಳಿಸಿತು. ಕಣ್ಣಿಗೆ ಕಾಣದ ವಸ್ತುಗಳ ಬಗ್ಗೆ, ಕಿವಿಗೆ ಕೇಳಿಸದ ನುಡಿಗಳ ಬಗ್ಗೆ ಆತನಿಗೆ ತಿಳಿಯುತ್ತಿತ್ತು. ಎಕ್ಸರೇ ಯಂತ್ರದಲ್ಲಿ ಮಾನವನ ದೇಹದ ಅಂತರಂಗವೆಲ್ಲವೂ ಕಾಣಿಸುವಂತೆ ಅವನ ಮಿದುಳಿಗೆ ಪ್ರಪಂಚದ ಸರ್ವವ್ಯಾಪಾರವೂ ತಿಳಿಯತೊಡಗಿತು.

ಇದೀಗ ಅವನು ಹೇಳುವ ರೋಗದ ವಿವರಣೆ ಕೇಳಿ ಡಾಕ್ಟರರು ಚಕಿತರಾಗುತ್ತಿದ್ದಾರೆ. ಅವನಿಂದ ಆಗುತ್ತಿರುವ ಅಪರಾಧಿಗಳ ಶೋಧ ಯಾವ ಚತುರ ಗುಪ್ತ ಪೋಲೀಸ ದಲಕ್ಕೂ ಸಾಧ್ಯವಿಲ್ಲ. ಯಾವದೇ ಒಂದು ಯಂತ್ರ ಕೆಟ್ಟು ನಿಂತುಕೊಂಡಿದ್ದರೆ ಆ ಯಂತ್ರದ ಬಗ್ಗೆ ತನಗೆ ಏನೂ ಗೊತ್ತಿಲ್ಲದಿದ್ದರೂ ಇಂಥಲ್ಲಿ ಇಂಥ ಸಾಮಾನು ಹೋಗಿದೆ ಅಥವಾ ಮುರಿದಿದೆ ಎಂದು ಹೇಳಿಬಿಡುತ್ತಾನೆ.



ರೇಡಿಯೊ ಟೆಲಿವಿಜನ್ ಮುಂತಾದವುಗಳ ದೊಡ್ಡ ನಿರ್ಮಾಪಕ ಮಿ. ಫಿಲಿಪ್ಸ್ ಕೂಡ ಇವನ

ದಾವಣಗೆರೆಯ "ಸಂಸಾರ" ದಿಂದ

ಮೆದುಳಿನ ದಕ್ಷತೆಗೆ ಬೆರಗಾಗಿದ್ದಾನೆ. ಅಲ್ಲದೆ ಅವನಿಂದ ಅನೇಕ ವಿಷಯಗಳಲ್ಲಿ ಸಲಹೆ ಪಡೆದು ಪ್ರತಿ ವರ್ಷ ಫೀ ರೂಪದಲ್ಲಿ ತುಂಬಾ ದುಡ್ಡು ಕೊಡುತ್ತಿದ್ದಾನೆ.

೧೯೫೧ರಲ್ಲಿ ಜಗದ್ವಿಖ್ಯಾತವಾದ ಬ್ರಿಟನ್ನಿನ ಸ್ಟೋನ್ ಆಫ್ ಸ್ಕೋನ್ ಕಳವಾಯಿತು. ಜಗತ್ತಿನ ಕುಶಲ ಗುಪ್ತ ಪೋಲೀಸರೆನಿಸಿದ 'ಸ್ಕಾಟ್ಲೆಂಡ್ ಯಾರ್ಡ' ಪೋಲೀಸರಿಗೇ ಈ ಕಲ್ಲಿನ ಕಳ್ಳನ ಪತ್ತೆಯಾಗಲಿಲ್ಲ. ಆಗ ಈ ವಿಭಾಗದ ಅಧಿಕಾರಿ ಹರಕೋಸನ ಹತ್ತಿರ ಬಂದ. ಹರಕೋಸನು ಲಂಡನ್ನಿನ ವೆಸ್ಟ್ಮಿನಿಸ್ಟರ ಅಬೇಗೆ ಬಂದು ರಾಜ್ಯಾಭಿಷೇಕದ ಕುರ್ಚಿಯ ಮುಂದೆ ಕುಳಿತ. ಕಳವಾದ ಕಲ್ಲಿನ ಸ್ಥಳವನ್ನು ಕೈಮುಟ್ಟಿ ಹೇಳತೊಡಗಿದ:

"ಈ ಕಳವಿನಲ್ಲಿ ಐದು ಜನರಿದ್ದಾರೆ. ಇಬ್ಬರು ಒಳಗಿನವರು, ಮೂವರು ಹೊರಗಿನವರು. ಅವರು ಕುಳಿತು ತಿರುಗುವ ಮೋಟರಿನ ನಂಬರು . . . . ಅವರು ವಾಸಿಸುವ ಓಣಿಯ ಹೆಸರು ಲೋಆರ ಥೇಮ್ಸ್ ಸ್ಟ್ರೀಟ್. ಅವರ ಮುಖಚರ್ಯೆ ಹೀಗಿದೆ . . . . ."

ಹರಕೋಸನು ಇದಕ್ಕೂ ಮೊದಲು ಇಂಗ್ಲಂಡನ್ನೇ ನೋಡಿದವನಲ್ಲ. ಆದರೂ ಎಲ್ಲವನ್ನು ವಿವರವಾಗಿ ಬರೆದುಕೊಟ್ಟ. ಅವರ ಆಕೃತಿಯನ್ನೂ ಬರೆದ. ಯಾವ ಬೀಗದ ಕೈಯಿಂದ ಕಳ್ಳರು ವೆಸ್ಟ್ಮಿನಿಸ್ಟರ್ ಅಬೆಯ ಬಾಗಿಲ ತೆರೆದರೋ ಆ ಬೀಗದ ಕೈಯನ್ನು ಪೋಲೀಸರು ಹರಕೋಸನ ಕೈಗೆ ತಂದುಕೊಟ್ಟರು. ಅದನ್ನು ಮುಟ್ಟಿ ಹರಕೋಸನು ಪೋಲೀಸರೊಂದಿಗೆ ಕಾರಿನಲ್ಲಿ ಹೋಗಿ ಕಳ್ಳ ಬೀಗದ ಕೈ ಮಾಡಿಕೊಟ್ಟ ಕಮ್ಮಾರನ ಕಾರಖಾನೆಯನ್ನು ತೋರಿಸಿದ. ಹೀಗೇ ಒಂದೊಂದಾಗಿ ಕಳ್ಳರ ಗುಟ್ಟನ್ನೆಲ್ಲ ಹೇಳಿದ. ಕೊನೆಗೆ ಆ ಕಲ್ಲು ಕೆಲ ದಿನ ಲಂಡನ್ನಿನ ಇಂಥ ಮನೆಯಲ್ಲಿ ಬಚ್ಚಿಡಲ್ಪಟ್ಟಿದ್ದಿತೆಂದೂ ಇದೀಗ ಅದು ಗ್ಲಾಸ್‌ಗೋದ ಇಂಥ ಸ್ಥಳದಲ್ಲಿದೆ ಎಂದೂ ಹೇಳಿದ. ಐದೂ ಜನ ಕಳ್ಳರು ಹಿಡಿಯಲ್ಪಟ್ಟರು, ಕಲ್ಲು ಸಿಕ್ಕಿತು.

ಹರಕೋಸ್ ಜ್ಯೋತಿಷಿ ಅಲ್ಲ. ಯಂತ್ರ ಮಂತ್ರಗಳ ಸಿದ್ಧಿಯೂ ಅವನಲ್ಲಿಲ್ಲ. ಭೂತ ಪ್ರೇತಗಳ ವಶೀಕರಣವೂ ಇದಲ್ಲ. ಆತನಿಗೆ ಪಂಚಾಂಗವೂ ಬೇಕಾಗಿಲ್ಲ. ಗಣಿತದ ಅಂಕೆಸಂಖ್ಯೆಗಳೂ ಬೇಡ. ಅವನಿಗೆ ಬೇಕಾಗುವದು ಸಂಬಂಧಿಸಿದ ವ್ಯಕ್ತಿ ಅಥವಾ ಘಟನೆಗೆ ಸಂಬಂಧಿಸಿದ ಸಾಮಾನು. ಅದು ಒಂದು ವೇಳೆ ಕೂದಲೆಳೆ ಇರಲಿ, ಉಗುರಿನ ಚೂರು ಇರಲಿ, ಖಾಲಿ ಕವರು ಇರಲಿ—ಅಷ್ಟೇ ಸಾಕು ಅವನಿಗೆ

೧೯೫೨ರಲ್ಲಿ ಪ್ಯಾರೀಸಿನ ಪೋಲೀಸರು ಒಂದು ಕೊಲೆಯ ಸಂಬಂಧದ ಅಪರಾಧಿಗಳನ್ನು ಪತ್ತೆ ಹಚ್ಚುವದಕ್ಕಾಗಿ ಹರಕೋಸನನ್ನು ಕರೆಸಿದರು. ಕೊಲೆ ಆದವನ ಫೋಟೋ ತೋರಿಸಿ, ಕೊಲೆಯ ಸ್ಥಳಕ್ಕೆ ಕರೆದೊಯ್ದರು. ಸರಿ; ಇಷ್ಟರಿಂದಲೇ ಹರಕೋಸನು ಇಬ್ಬರು ಗಂಡಸರು ಒಬ್ಬ ಹೆಂಗಸು ಕೂಡಿ ಈ ಕೊಲೆ ಮಾಡಿದ್ದಾರೆಂದು ಹೇಳಿ ಥಟ್ಟನೆ ಅವರ ಹೆಸರು ಹೇಳಿಬಿಟ್ಟ. ಕೊಲೆ, ಕಳ್ಳತನದ ಅಪರಾಧಿಗಳ ಶೋಧಕ್ಕಾಗಿ ಮಾತ್ರವಲ್ಲ, ಎಲ್ಲ ವಿಷಯಗಳಿಗೂ ಹರಕೋಸನ ಮೆದುಳು-ಎಕ್ಸರೇ ಯಂತ್ರವಿದ್ದ ಹಾಗೇ ಇದೆ.

ಒಂದು ಸಲ ಫ್ರಾನ್ಸಿನ ಮೆಡಿಕಲ್ ಅಕಾಡೆಮಿಯ ವಿಶೇಷಜ್ಞನು ಎರಡು ಔಷಧ ಸೀಸೆಗಳನ್ನು ತಂದು ಪರೀಕ್ಷೆಗಾಗಿ ಅವನೆದುರಿಗೆ ಇಟ್ಟ. ಹರಕೋಸನು ಕೊಂಚ ಔಷಧಿಯನ್ನು ಬೆರಳಿಗೆ ಹಚ್ಚಿಕೊಂಡು ಹೇಳಿದ–"ಇದು ತಲೆನೋವಿನ ಔಷಧ. ಇಂಥ ಪುಡಿ ಜಾಸ್ತಿ ಹಾಕಿದ್ದೀರಿ, ಅದರಿಂದ ಅಪಾಯವಿದೆ. ಈ ಬಾಟ್ಲಿಯಲ್ಲಿ ಹಾಕಿರುವುದು ಇಲಿಗಳನ್ನು ಕೊಲ್ಲುವ ಔಷಧ, ಈ ಔಷಧ ತಯಾರಿಸುವುದರೊಳಗೆ ನೀವು ಇಷ್ಟು ಇಲಿಗಳನ್ನು ಕೊಂದಿರಿ" ಮುಂತಾಗಿ. ಡಾಕ್ಟರ್ ಚಕಿತನಾಗಿ ಈತ ಹೇಳಿದುದೆಲ್ಲ ಸತ್ಯವೆಂದು ಒಪ್ಪಿಕೊಂಡ.

ಇನ್ನೊಂದು ಸಲ ಹರಕೋಸನು ಪ್ಯಾರೀಸಿನಲ್ಲಿ ಒಂದು ಗ್ಲಾಸ್ ಫ್ಯಾಕ್ಟರಿಗೆ ಹೋದ. ಅಲ್ಲಿ ಒಂದು ಹೊಸ ಮಿಶನ್ ತರಿಸಿ ಆಗ ತಾನೆ ಜೋಡಿಸಿದ್ದರು. ಹರಕೋಸನು ಆ ಮಿಶನ್ ಮೇಲೆ ಕೈಯಿಟ್ಟು "ಸುಮ್ಮನೆ ದುಡ್ಡು ಖರ್ಚು ಮಾಡಿದಿರಿ, ಈ ಮಿಶನ್ ನಿಮಗೆ ಕೆಲಸ ಕೊಡು

ವದಿಲ್ಲ" ಎಂದು ಹೇಳಿದ. ಗ್ಲಾಸ್‌ಫ್ಯಾಕ್ಟರಿಯ ಇಂಜಿನಿಯರ್ ಎದೆ ತಟ್ಟಿಕೊಂಡು ಇದರಿಂದಲೇ ಕೆಲಸ ತೆಗೆದುಕೊಳ್ಳುತ್ತೇನೆ ಎಂದ. ಆದರೆ ಹರಕೋಸನ ಮಾತೇ ನಿಜವಾಯಿತು. ಆ ಮಿಶನ್ ನಡೆಯಲೇ ಇಲ್ಲ.

ಹರಕೋಸನ ಈ ಮೆದುಳಿನ ಶಕ್ತಿಗೆ ಏನೆನ್ನಬೇಕು? ವಿಜ್ಞಾನಿಗಳೂ ಈ ವಿಷಯದಲ್ಲಿ ಬಹು ದಿನಗಳಿಂದ ಬುದ್ಧಿ ವೆಚ್ಚ ಮಾಡಿ ಶೋಧ ನಡೆಸಿದ್ದಾರೆ. ಹರಕೋಸನಿಗಾದರೂ ತನ್ನ ವಿಷಯ ತನಗೇ ಗೊತ್ತಿಲ್ಲ. ಈತನ ಓರ್ವ ಬೆಲ್ಜಿಯನ್ ಮಿತ್ರ ಆರ್. ಎಂ. ಜೆ. ಫಿಲಿಪ್ಸ ಎಂಬವರು ಹೇಳುತ್ತಾರೆ— "ಪ್ರತಿಯೊಂದು ಜೀವಜಂತುವಿನಲ್ಲಿ ಪ್ರಾಣಿಯಲ್ಲಿ ಮನುಷ್ಯನಲ್ಲಿ ಒಂದು ಶಕ್ತಿ ಇದೆ. ಅದಕ್ಕೆ ಕರೆಂಟ್ ಅನ್ನಿರಿ, ಎನರ್ಜಿ ಅನ್ನಿರಿ, ವಿದ್ಯುತ್ ಅನ್ನಿರಿ ಅಥವಾ ಲೋಹಚುಂಬಕ ಆಕರ್ಷಣವೆನ್ನಿರಿ. ಈ ಶಕ್ತಿ ಹರಕೋಸನಲ್ಲಿ ಸುಪ್ತಾವಸ್ಥೆಯಲ್ಲಿದ್ದು ಸಜೀವಗೊಂಡಿದೆ. ವಿದ್ಯುತ್‌ದೀಪವನ್ನು ನಾವು ನೋಡುತ್ತೇವೆ. ಆದರೆ ದೀಪಕ್ಕೇನಾದರೂ ತನಗೆಷ್ಟು ಬೆಳಕಿದೆಯೆಂಬುದು ಗೊತ್ತಿದೆಯೇ? ರೇಡಿಯೋ ತನ್ನ ಹಾಡನ್ನು ತಾನು ತಿಳಿದುಕೊಂಡೀತೆ? ಅದರಂತೆ ಹರಕೋಸನಿಗೆ ತನ್ನ ಶಕ್ತಿ ತನಗೇ ಗೊತ್ತಿಲ್ಲ, ನಮಗೆ ಗೊತ್ತಾಗಿದೆ. ವಿದ್ಯುತ್ತಿನಂತೆ, ರೇಡಿಯೊ ಧ್ವನಿಯಂತೆ ಹರಕೋಸನ ಮೆದುಳು ಯಾವುದೇ ವಸ್ತುವನ್ನು ಮುಟ್ಟಿದರೂ ಅದಕ್ಕೆ ಸಂಬಂಧಿಸಿದ ಸಂಗತಿಗಳನ್ನೆಲ್ಲಾ ತನ್ನೆಡೆಗೆ ಎಳೆದುಕೊಂಡು ಅದರ ಚಿತ್ರವನ್ನು ಮೂಡಿಸುತ್ತದೆ."

ಪೋಲೀಸ ಹಾಗು ಆರೋಗ್ಯ ಇಲಾಖೆಯವರ ಕೆಲಸಕ್ಕಾಗಿ ಹರಕೋಸನು ಯಾವ ಸಂಭಾವನೆಯನ್ನೂ ತೆಗೆದುಕೊಳ್ಳುವದಿಲ್ಲ. ಎಲ್ಲ ಗುಟ್ಟು ರಟ್ಟು ಮಾಡುತ್ತಾನೆಂದು ಎಷ್ಟೋ ಕಳ್ಳರು ಕೊಲೆಗಡಕರು-ಈತನ ಅಂತ್ಯ ಮಾಡಲು ಹವಣಿಸಿದ್ದಾರೆ. ಹರಕೋಸನು ಯಾವಾಗಲೂ ಗಂಭೀರನಾಗಿಯೇ ಇರುವದಿಲ್ಲ. ದಾರಿಯಲ್ಲಿ ಹೋಗುವಾಗಲೂ ಎದುರಿನ ಮನೆಯವರ ಗೌಪ್ಯ ಸಂಗತಿಗಳನ್ನು ಹೇಳಿ ಮನರಂಜನೆಮಾಡಿಕೊಳ್ಳುತ್ತಾನೆ. ಉದಾಹರಣೆಗೆ, ದಾರಿಯಲ್ಲಿ ಒಬ್ಬ ಪೋಲೀಸ್ ಕಂಡೊಡನೆ "ಪಾಪ ಮದುವೆಯಾದ ಮೂರನೇ ದಿನಕ್ಕೆ ಡ್ಯೂಟಿಯ ಮೇಲೆ ಬರಬೇಕಾಯಿತೆ?" ಎಂದು. ಈ ವಿಷಯ ಅವನಿಗೇನು ಗೊತ್ತು ಎಂದು ಪೋಲೀಸನಿಗೆ ಆಶ್ಚರ್ಯ! ಇದೊಂದು ಈಶ್ವರೀ ವರ ಎಂದು ಮತ್ತೆ ಕೆಲವರ ಅಭಿಪ್ರಾಯ.

[ಕಳಿಸಿದವರು: ಸು. ಗು. ಕಾಮುಗೋಳ]

ತೆಂಗಿನ ಕಾಯಿಯ ಹಾಲಿನಲ್ಲಿ, ಭತ್ತಕ್ಕೆ ಬರುವ ರೋಗದಲ್ಲಿ
ಸಸ್ಯಗಳ ಗಾತ್ರವನ್ನು ಅಗಾಧವಾಗಿ ಹೆಚ್ಚಿಸುವ ಸತ್ವಗಳಿವೆ !

ಬರಲಿವೆ: 'ದೈತ್ಯ' ಸಸ್ಯಗಳು

—ಪಾವೆಂ

ನಮ್ಮ ಪಶ್ಚಿಮ ಕರಾವಳಿಯ ಜನ ನಿಜವಾದ ಹಾಲಿಗೆ ಪ್ರತಿಯಾಗಿ ತೆಂಗಿನಕಾಯಿಯ ಹಾಲನ್ನು ಉಪಯೋಗಿಸುವುದುಂಟು. ಉತ್ತಮ ತೆಂಗಿನಕಾಯಿಯ ಹಾಲು ರುಚಿಯಲ್ಲಿ ದನದ ಹಾಲನ್ನೂ ಮೀರಿಸುತ್ತದೆ. ಅದು ದೇಹಕ್ಕೆ ಬಲು ಪುಷ್ಟಿಕರವೆಂದು ಅಲ್ಲಿನ ಜನರ ನಂಬಿಕೆ. ಆದರೆ ವಿಜ್ಞಾನಿಗಳು ತೆಂಗಿನಕಾಯಿಯ ಹಾಲಿನಲ್ಲಿ ನಮ್ಮ ಕರಾವಳಿಯ ಜನರ ಕಲ್ಪನೆಗೆ ಮೀರಿದ ಒಂದು ಅದ್ಭುತ ಗುಣವನ್ನು ಕಂಡು ಹಿಡಿದಿದ್ದಾರೆ : ಅದು ಸಸ್ಯಗಳ ಬೆಳವಣಿಗೆಯನ್ನು ಹೆಚ್ಚಿಸಬಲ್ಲ " ಅಮೃತ " ವಾಗಿದೆ.

ಇದು ಅಮೇರಿಕದ ಕಾರ್ನೆಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಆಕಸ್ಮಿಕವಾಗಿ ಕಂಡು ಹಿಡಿದ ಸಂಗತಿ. ಅವರ ಹತ್ತಿರ ಕೆಲ ಚಿಕ್ಕ ಗಜ್ಜರಿ ಬೇರುಗಳ ತುಣುಕುಗಳಿದ್ದವು. ಅವನ್ನು ನಟ್ಟರೆ ಅವು ಸರ್ವಥಾ ಬೆಳೆಯಲಿಲ್ಲ. ಆ ಮೇಲೆ ಅಕಸ್ಮಾತ್ತಾಗಿ ಆ ಗಜ್ಜರಿ ತುಣುಕುಗಳಿಗೆ " ಕಾಯಿಹಾಲಿ "ನ ಸಂಪರ್ಕ ಬಂತು. ತಕೋ! ಅವು ಕೂಡಲೆ ಬೆಳೆಯತೊಡಗಿ ತಮ್ಮ ಮೂಲ ಗಾತ್ರಕ್ಕಿಂತ ನೂರಾರು ಪಟ್ಟು ದೊಡ್ಡವಾದವು.

ವಿಜ್ಞಾನಿಗಳು ಈ ಮಾಯಕವನ್ನು ಕಂಡು ವಿಸ್ಮಿತರಾದರು. ಕಾಯಿಹಾಲಿನಲ್ಲಿದ್ದ ಯಾವ ಸಂಜೀವನಿ ಗುಣವು ಈ ಅಗಾಧ ಬೆಳವಣಿಗೆಗೆ ಕಾರಣವಾಯಿತು ? ಇದಕ್ಕೆ ಉತ್ತರ ಅವರಿಗೆ ಬೇಕಾಗಿತ್ತು. ಬಿರುಗಾಳಿಯೊಂದರಲ್ಲಿ ಉದುರಿದ ಸಾವಿರಾರು ತೆಂಗಿನಕಾಯಿಗಳನ್ನು ತರಿಸಿಕೊಂಡು ನೂರಾರು ಕೊಡ ಕಾಯಿ ಹಾಲನ್ನು ತೆಗೆದು ಅದರೊಳಗಿನ ಪದಾರ್ಥಗಳನ್ನು ಬೇರ್ಪಡಿಸಿದರು. ಅವುಗಳಲ್ಲಿ ಒಂದಾನೊಂದು ಪದಾರ್ಥವೇ ಗಜ್ಜರಿಯ ಬೆಳವಣಿಗೆಗೆ ಉತ್ತೇಜನ ವಿತ್ತದ್ದೆಂದು ಅವರಿಗೆ ಮನವರಿಕೆಯಾಯಿತು. ಅವರೀಗ ಅದರ ಮೇಲೆ ಅಭ್ಯಾಸ ಪ್ರಾರಂಭಿಸಿದ್ದಾರೆ.

ಸಸ್ಯಗಳ ಬೆಳವಣಿಗೆಗೆ ಉತ್ತೇಜನ ಕೊಡುವ ವನಸ್ಪತಿ ಹಾಲು ತೆಂಗಿನಕಾಯಿಯ ಹಾಲೊಂದೇ ಅಲ್ಲ. ಸಸ್ಯಗಳನ್ನು ಹೆಚ್ಚು ಪುಷ್ಟವಾಗಿ, ಹೆಚ್ಚು ಎತ್ತರವಾಗಿ ಬೆಳೆಯುವಂತೆ ಮಾಡಲು ವಿವಿಧ ವನಸ್ಪತಿ ಕಾಯಿಗಳ ಹಾಲನ್ನೂ ಇತರ ವನಸ್ಪತಿ ಜನ್ಯ ದ್ರವ್ಯಗಳನ್ನೂ ಉಪಯೋಗಿಸಬಹುದೆಂದು ಗೊತ್ತಾಗುತ್ತಿದೆ. ಇವುಗಳಲ್ಲಿ ಕೆಲವು, ಗಿಡಗಳನ್ನು ಸಾಮಾನ್ಯ ಪ್ರಮಾಣಕ್ಕಿಂತ ಇಮ್ಮಡಿ ಮೂರ್ಮಡಿ ಎತ್ತರಕ್ಕೆ ಮತ್ತು ರಭಸದಿಂದ ಬೆಳೆಯುವಂತೆ ಮಾಡಿವೆ.

ಹಾಲು ಇರುವ ಬೀಜ ತೆಂಗಿನಕಾಯಿಯೊಂದೇ ಅಲ್ಲ. ಶೇಂಗಾ ಬೀಜ ಮೊದಲಾಗಿ ಬಹುತೇಕ ಎಲ್ಲ ಬೀಜಗಳಲ್ಲಿಯೂ ಬೆಳವಣಿಗೆಯ ಒಂದಲ್ಲ, ಒಂದು ಅವಸ್ಥೆಯಲ್ಲಿ ಹಾಲು ಇದ್ದೇ ಇರುತ್ತದೆ. ಅದು ಅತ್ಯಂತ ಸಾರವತ್ತಾಗಿರುತ್ತದೆ. ಬೀಜಗಳು ಸಸ್ಯಗಳ ತಾಯಿ ತಾನೆ? ತಾಯಂದಿರಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಪೌಷ್ಟಿಕ

ಸತ್ವವನ್ನು ನಿಸರ್ಗವು ಮೊಲೆಹಾಲಿನ ರೂಪದಲ್ಲಿ ಸೃಷ್ಟಿಸುವಂತೆ, ಸಸ್ಯಗಳು ಬಾಲ್ಯಾವಸ್ಥೆಯನ್ನು ದಾಟಿ ಸ್ವತಂತ್ರವಾಗಿ ಬೇರುಗಳಿಂದ ಆಹಾರವನ್ನು ಹೀರಿಕೊಳ್ಳಲು ಶಕ್ತವಾಗುವ ವರೆಗೆ ಬೀಜದೊಳಗಿರುವ ಈ "ಹಾಲಿನ" ಸತ್ವದಿಂದ ಅವುಗಳನ್ನು ಪೋಷಿಸುತ್ತದೆ.

ಕಾರ್ನೆಲ್ ವಿಶ್ವವಿದ್ಯಾಲಯದವರ ಅಭಿಪ್ರಾಯದಲ್ಲಿ ಈ "ವನಸ್ಪತಿ ಹಾಲು"ಗಳಷ್ಟು ಬೆಳವಣಿಗೆಗೆ ಉತ್ತೇಜನವೀಯುವ ಪದಾರ್ಥಗಳು ನಿಸರ್ಗದಲ್ಲಿ ಬಲು ವಿರಳ. ಇಂಗ್ಲಂಡಿನ ಅಕ್ರೋಟ (ವಾಲ್‌ನಟ್) ಮತ್ತು ಅಮೇರಿಕದ ಚೆಸ್ಟನಟ್ ಬೀಜಗಳಿಂದ ತೆಗೆದ ಹಾಲು ಕೂಡ ಬೆಳವಣಿಗೆಯನ್ನು ಹೆಚ್ಚಿಸುತ್ತದೆಂದು ಪ್ರಯೋಗಗಳಲ್ಲಿ ತಿಳಿದುಬಂದಿದೆ. ಆದರೆ ಇವುಗಳ ಹಾಲನ್ನು ತೆಗೆಯುವುದು ತೆಂಗಿನಕಾಯಿಯ ಹಾಲು ಹಿಂಡಿದಷ್ಟು ಸುಲಭವಲ್ಲ. ಅನಂತರ ಅವುಗಳಿಂದ ಸಸ್ಯಪೋಷಕ ಪದಾರ್ಥಗಳನ್ನು ವಿಂಗಡಿಸಿ ತೆಗೆಯುವುದೂ ಕಷ್ಟದಾಯಕವಾದದ್ದೇ.

ಸಸ್ಯಗಳ ಬೆಳವಣಿಗೆಯನ್ನು ಹೆಚ್ಚಿಸುವ ಇನ್ನೊಂದು ಅದ್ಭುತ ಪದಾರ್ಥವೆಂದರೆ "ಗಿಬರೆಲಿಕ ಆಮ್ಲ." ಅಮೇರಿಕದ ಬೆಲ್ಟ್ಸ್‌ವಿಲಿಯಲ್ಲಿರುವ ಒಕ್ಕಲುತನ ಸಂಶೋಧನ ಕೇಂದ್ರದವರು ಇದನ್ನು ವಿವಿಧ ಸಸ್ಯಗಳಿಗೆ ಒದಗಿಸಿದಾಗ ಅವು ರಭಸದಿಂದ ಬೆಳೆದು ತಮ್ಮ ಜಾತಿಯ ಇತರ ಸಸ್ಯಗಳಿಗಿಂತ ಇಮ್ಮಡಿ–ಮುಮ್ಮಡಿ ಎತ್ತರವಾದವು.

ವಿಚಿತ್ರವೆಂದರೆ, ಗಿಬರೆಲಿಕ್ ಆಮ್ಲವನ್ನು ಭತ್ತದ ಪೈರಿಗೆ ಮಾರಿಯೆನಿಸುವ "ಗಿಬರೆಲಾ" ಎಂಬ ಬೂಷ್ಟು (ಬುರುಸು)ನಿಂದ ತೆಗೆಯುತ್ತಾರೆ. ಜಪಾನದಲ್ಲಿ ಈ ಬೂಷ್ಟಿನ ಹಾವಳಿ ಬಹಳ. ಈ ಬೂಷ್ಟು ರೋಗ ತಗಲಿದರೆ ಬತ್ತದ ಸಸಿ ಬಹಳ ಉದ್ದಕ್ಕೆ ಬೆಳೆಯುತ್ತದೆ. ಆದರೆ ಅದು ತೆನೆ ಬಿಟ್ಟಾಗ ಕಾಳು ತೀರ ಕಡಿಮೆಯಾಗುತ್ತದೆ. ಈ ರೋಗವನ್ನು ಹೇಗೆ ಪ್ರತಿಬಂಧಿಸಬೇಕೆಂಬ ಯೋಚನೆಯಲ್ಲಿ ಜಪಾನಿ ವಿಜ್ಞಾನಿಗಳು ನಡೆಸಿದ ಪೃಥಕ್ಕರಣಗಳ ಫಲವಾಗಿ ಗಿಬರೆಲಿಕ್ ಆಮ್ಲವು ಶೋಧಿಸಲ್ಪಟ್ಟಿತು.

ಒಂದು ಸಸ್ಯಕ್ಕೆ ಮಾರಿಯಂತಿರುವ ಈ ರಾಸಾಯನಿಕ ದ್ರವ್ಯವೀಗ ಇತರ ಸಸ್ಯಗಳಿಗೆ ಜೀವಾತುವಾಗಿ ವಿನಿಯೋಗವಾಗುತ್ತಿದೆ. ಅಮೇರಿಕನ್ ವಿಜ್ಞಾನಿಗಳು ಅದನ್ನು ಹೂವಿನ ಗಿಡಗಳಿಗೆ, ಬೇಳೆ ಕಾಳುಗಳ ಸಸಿಗಳಿಗೆ, ಅರಣ್ಯದ ವೃಕ್ಷಗಳಿಗೆ ಹಾಕಿ ನೋಡಿದ್ದಾರೆ. ಪರಿಣಾಮ ಅವರನ್ನೇ ದಂಗುಬಡಿಸಿದೆ.

ಗುಲಾಬಿ, ಸೂರ್ಯಪಾನ (Sun Flower), ಡಾಲಿಯಾ ಮೊದಲಾದ ಹೂಗಿಡಗಳ ಎಳೆಕಾಂಡಗಳಿಗೆ ಗಿಬರೆಲಾ ಆಮ್ಲವನ್ನು ತಗಲಿಸಿದಾಗ ಅವು ನಾಲ್ಕೇ ವಾರಗಳಲ್ಲಿ ಇತರ ಸ್ವಜಾತಿಯ ಸಸಿಗಳಿಂದ ಮೂರು ಪಟ್ಟು ಎತ್ತರ ಬೆಳೆದವು. ಹೊಲ ತೋಟಗಳಲ್ಲಿ ಸೋಯಾ ಬೀಜ, ಬಟಾಣಿ, ಬದನೆ, ಜವೆಗೋದಿ, ಗೋವಿನಜೋಳ, ಮೆಣಸಿನ ಬಳ್ಳಿ ಇವುಗಳಿಗೆ ಈ ರಸಾಯನವನ್ನು ಕೊಟ್ಟಾಗ ಗಿಡಗಳು ಅದ್ಭುತವಾಗಿ ಬೆಳೆದದ್ದು ಮಾತ್ರವಲ್ಲದೆ ಮೊದಲಿನ ಎರಡು ಮೂರು ವಾರಗಳಲ್ಲಿ ಬಟಾಣಿ, ಸೋಯಾ ಬೀಜದ ಗಿಡಗಳು ಬಿಟ್ಟ ಪ್ರತಿ ಕಾಳಿನ ತೂಕವು ಸೇಕಡಾ ೩೦–೪೦ ರಷ್ಟು ಹೆಚ್ಚಾಯಿತು. ಅರಣ್ಯಗಳಲ್ಲಿ ಓಕ್, ಪೋಪ್ಲಾರ್, ಮೇಪಲ್ ವೃಕ್ಷಗಳ ಸಸಿಗಳು ಗಿಬೆರೆಲಿಕ್ ಆಮ್ಲ ಸೇಕದಿಂದ ದಿನದಿಂದ ದಿನಕ್ಕೆ ಉದ್ದಂಡವಾಗಿ ಬೆಳೆದವು.

ಜಗತ್ತಿನ ತೋಟಗಳೂ ಹೊಲಗಳೂ ಹೆಚ್ಚು ಬೆಳೆಕೊಡುವಂತೆ, ಅರಣ್ಯ ಸಂಪತ್ತು ಬೇಗಬೇಗನೆ ಪಕ್ವವಾಗುವಂತೆ ಈ ಸಂಶೋಧನೆಗಳನ್ನು ವಿನಿಯೋಗಿಸಲು ಎಷ್ಟು ಮಟ್ಟಿಗೆ ಸಾಧ್ಯವಾದೀತು?

ಗಿಬರೆಲಾ ಭತ್ತಕ್ಕೆ ಬರುವ ಸಾಮಾನ್ಯ ದುಷ್ಟ ರೋಗವಾಗಿದ್ದರೂ ಗಿಬರೆಲಿಕ್ ಆಮ್ಲವು ದುರ್ಲಭ ವಸ್ತುವಾಗಿರುವುದರಿಂದ ಪ್ರಯೋಗಗಳನ್ನು ಮುಂದುವರಿಸುವುದಕ್ಕೆ ಅಡಚಣಿಯಾಗಿದೆ. ಆದರೂ ಸಂಶೋಧಕರು ಈ ಆಮ್ಲದಿಂದ ಮಾನವಹಿತವನ್ನು ಸಾಧಿಸಬಹುದೆಂದು

ಆಶೆ ತಳೆದಿದ್ದಾರೆ.

ಉದಾಹರಣೆಗೆ, ತೋಟದ ಮತ್ತು ಅರಣ್ಯದ ವೃಕ್ಷಗಳ ಸಸಿಗಳಿಗೆ ಈ ದ್ರವ್ಯವನ್ನು ನೀರಿನೊಡನೆ ಬೆರಸಿ ಎರೆದರೆ ಅವುಗಳು ಬೇಗನೆ ವೃದ್ಧಿಂಗತವಾಗಿ ಬಲಗೊಳ್ಳುವವು. ಇದರಿಂದ ಎಳೆಯ ಅವಸ್ಥೆಯಲ್ಲಿ ಬರುವ ಅನೇಕ ಕುತ್ತುಗಳಿಂದ ಅವು ಪಾರಾಗಬಲ್ಲವು.

ಬಟಾಣಿ ಮೊದಲಾದ ಕಾಳುಗಳ ಸಸಿಗಳಿಗೂ ಎಳೆಯವಾಗಿದ್ದಾಗಲೇ ರೋಗಬಾಧೆ ಬರುವುದು ಹೆಚ್ಚು. ರಭಸದಿಂದ ಬೆಳೆದು ಅವು ಬೇಗನೆ ಎಳೆತನವನ್ನು ದಾಟಿದವೆಂದರೆ ಆ ಮೇಲೆ ಅವುಗಳ ಜೀವನ ಸುರಕ್ಷಿತವಾದಂತೆಯೇ. ಗಿಬರೆಲಿಕ ಆಮ್ಲವು ಅವುಗಳಿಗೆ ಈ ಅವಕಾಶವನ್ನು ಒದಗಿಸಬಲ್ಲವು.

ಆದರೆ ಕಾಳುಗಳ ಬೆಳೆಯಲ್ಲಿ ಈ ಸಂಶೋಧನೆಗಳು ಎಲ್ಲಕ್ಕಿಂತ ಫಲದಾಯಕವಾಗಲಿವೆಯೆಂದು ತೋರುತ್ತದೆ. ಸೋಯಾ ಬೀಜಗಳ ಬೆಳೆಗೆ ಗಿಬರೆಲಿಕ್ ಆಮ್ಲವನ್ನು ನೀರಲ್ಲಿ ಬೆರಸಿ ಹಾಕಿದಾಗ ಗಿಡಗಳು ಬಿಡುವ ಪ್ರಾರಂಭದ ಕಾಳುಗಳ ತೂಕ ಸೇಕಡಾ ೪೦ ರಷ್ಟು ಹೆಚ್ಚಾಗುವುದಾಗಿ ತಿಳಿದುಬಂದಿದೆಯಷ್ಟೇ. ಗಿಡಗಳು ಪೂರ್ಣ [illegible] ಬರುವ ಹೊತ್ತಿಗೆ ಸರಿಯಾಗಿ ಈ ಪರಿಣಾಮವನ್ನು ಉಂಟುಮಾಡಬಹುದಾದರೆ ಒಕ್ಕಲುತನದಲ್ಲಿ ಇದು ದೊಡ್ಡ [illegible]. [illegible]

ಎಲ್ಲಕ್ಕಿಂತ ಹೆಚ್ಚಾಗಿ ಗಿಬರೆಲಿಕ್ ಆಮ್ಲದ ಅತಿ ಸೂಕ್ಷ್ಮ ಪ್ರಮಾಣವೂ ಬೆಳವಣಿಗೆಯನ್ನು ಹೆಚ್ಚಿಸಲು ಸಾಕಾಗುತ್ತದೆ. ಹತ್ತು ಲಕ್ಷ ಪಾಲು ನೀರಿಗೆ ಒಂದು ಪಾಲು ಗಿಬರಲಿಕ್ ಆಮ್ಲವನ್ನು ಬೆರಸಿದರೆ ಧಾರಾಳವಾಯಿತು.

ವನಸ್ಪತಿ ಹಾಲುಗಳಿಂದಲೂ ಆಶ್ಚರ್ಯಕರ ಪ್ರಗತಿಗೆ ದಾರಿ ಕಾಣಬಹುದು. ಈ ವರೆಗೆ ಬೆಳವಣಿಗೆಗೆ ಉತ್ತೇಜನವೀಯುವ ನಾಲ್ಕು ವಿಧದ ರಾಸಾಯನಿಕಗಳನ್ನು ವನಸ್ಪತಿ ಹಾಲುಗಳಲ್ಲಿ ಪ್ರತ್ಯೇಕಿಸಲು ಸಾಧ್ಯವಾಗಿದೆ. ಇವುಗಳಲ್ಲಿ ಪ್ರತಿಯೊಂದೂ ಒಂದೊಂದು ವಿಧದಲ್ಲಿ ಸಸ್ಯದ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ಬೇರೆ ಬೇರೆ ಬೀಜಗಳ ಹಾಲುಗಳಲ್ಲಿ ಇನ್ನೂ ಅನೇಕ ಬಗೆಯಲ್ಲಿ ಬೆಳವಣಿಗೆಯನ್ನು ಪ್ರಚೋದಿಸುವ ಸತ್ವಗಳು ಸಿಗುವ ಸಂಭವವಿದೆ.

ಈ ವನಸ್ಪತಿ ಹಾಲುಗಳಲ್ಲಿ ಬೆಳವಣಿಗೆಯನ್ನು ಉತ್ತೇಜನಗೊಳಿಸುವ ದ್ರವ್ಯಗಳಷ್ಟೆ ಇರದೆ ಬೆಳವಣಿಗೆಯು ಆವಶ್ಯಕ ಪ್ರಮಾಣವನ್ನು ಮುಟ್ಟುತ್ತಲೇ ಹೆಚ್ಚಿನ ಬೆಳವಣಿಗೆಯನ್ನು ತಡೆಯುವ ದ್ರವ್ಯಗಳೂ ಕಂಡುಹಿಡಿಯಲ್ಪಟ್ಟಿವೆ.

ಬೆಳವಣಿಗೆ ಹೆಚ್ಚಿಸುವ ದ್ರವ್ಯಗಳ ಪರಿಣಾಮ ಮಿತಿಮೀರಿದಾಗ ಅದನ್ನು ಹಿಡಿತಕ್ಕೆ ತರುವ ದ್ರವ್ಯಗಳು ನೀರುಳ್ಳಿಗಡ್ಡೆ, ಬಟಾಟೆ ಮತ್ತು ಬಹುಶಃ ಗಜ್ಜರಿಯಲ್ಲಿಯೂ ಇವೆ.

ಗಿಬರೆಲಿಕ್ ಆಮ್ಲ ಮತ್ತು ವನಸ್ಪತಿ ಹಾಲುಗಳು ಇನ್ನೂ ಪ್ರಯೋಗಾವಸ್ಥೆಯಲ್ಲೇ ಇದ್ದರೂ ಒಂದು ದಿನ ಅವು ಮನುಷ್ಯನ ಆಹಾರ ಮತ್ತು ಕಟ್ಟಿಗೆಯ ಸಮಸ್ಯೆಯನ್ನು ಬಿಡಿಸಲು ನೆರವಾಗದಿರವೆಂಬ ವಿಶ್ವಾಸ ವಿಜ್ಞಾನಿಗಳಿಗಿದೆ. ಇದಲ್ಲದೆ ಜೀವಜಾತದ ಉತ್ಪತ್ತಿಯ ರಹಸ್ಯದ ಮೇಲೆಯೂ ಈ ಸಂಶೋಧನೆಗಳು ಬೆಳಕು ಕೆಡವಬಹುದು.

ದುರಹಂಕಾರ

ವ್ಯಕ್ತಿಗಳೂ ಅಷ್ಟೇ ರಾಷ್ಟ್ರಗಳೂ ಅಷ್ಟೇ, ಇತರರ ಬಗ್ಗೆ ಯಾರಿಗೆ ಕಡಿಮೆ ತಿಳಿವಳಿಕೆಯಿದೆಯೋ ಅವರು ತಮ್ಮಂಥ ಶ್ರೇಷ್ಠರು ಬೇರೆ ಇಲ್ಲ ಎಂದು ಬಗೆಯುತ್ತಾರೆ.

—ಸಿ. ಸಿ. ಕಾಲ್ಟನ್

ಇದುವೇ ಜೀವ ಇದು ಜೀವನ

ಒಂದು ರಾತ್ರಿ ಹನ್ನೊಂದು ಗಂಟೆಯ ಹೊತ್ತಿಗೆ ನನ್ನ ಹೆಂಡತಿ ವಿಮಲೆಗೆ ತನ್ನ ತಂಗಿಯೊಡನೆ ಮಾತಾಡಬೇಕೆಂದು ಒಮ್ಮೆಲೆ ಚಪಲವಾಯಿತು. ಅವಳು ಫೋನಿಗೆ ಹೋಗಿ ನಂಬರು ತಿರುಗಿಸಿದಳು. ಬಹಳ ಹೊತ್ತು ಗಂಟೆ ಬಾರಿಸುತ್ತಲೇ ಇತ್ತು. ಆಮೇಲೆ ಸಿಡುಕಿನ ದನಿಯೊಂದು "ಯಾರು ಮಾತಾಡುವವರು ?" ಎಂದು ಆಕಳಿಸುತ್ತ ಕೇಳಿತು.

"ನಾನು ವಿಮಲಾ. ಸ್ವಲ್ಪ ಕೃಷ್ಣಾನನ್ನು ಕರೆಯುತ್ತೀರಾ ?" ಎಂದಳು ನನ್ನವಳು.

"ಸ್ವಲ್ಪ ತಾಳಿ" ಎಂದಿತು ಆ ದನಿ.

ವಿಮಲಾ ಫೋನ್ ಹಿಡಿದುಕೊಂಡು ಕಾದೇ ಕಾದಳು. ಐದು ಮಿನಿಟಾಯಿತು, ಹತ್ತಾಯಿತು, ಹದಿನೈದೂ ದಾಟಿತು. ನಿಂತು ನಿಂತು ಕಾಲು ನೋಯುತೊಡಗಿತು. ಸಾಕಾಗಿ ಇನ್ನು ಟೆಲಿಫೋನ್ ಕೆಳಗಿಡಬೇಕು ಎನ್ನುತ್ತಿರುವಾಗ ಮತ್ತೆ ಆ ಬೇಸರದ ದನಿ ಕೇಳಿಸಿತು.

"ನೋಡು ತಂಗಿ, ಹನ್ನೊಂದು ಗಂಟೆ ರಾತ್ರಿಗೆ ಫೋನಿನಲ್ಲಿ ಯಾರನ್ನಾದರೂ ಕರೆಯಬೇಕಾದರೆ ಸರಿಯಾದ ನಂಬರನ್ನೇ ತಿರುಗಿಸುವಷ್ಟು ಜಾಗ್ರತೆ ತೆಗೆದುಕೊಳ್ಳಬೇಕವ್ವ-ಇನ್ನು ಮೇಲೆ-ಹಾಂ ?" ಎಂದಿತು ದನಿ.

— ನಾರಾಯಣ ರಾವ್, ಮದ್ರಾಸ್

ನಾನೂ ನನ್ನ ಗೆಳೆಯ ಚಂದ್ರೂ ಒಂದೇ ಹಾಸ್ಟಲಿನಲ್ಲಿ, ಅದೂ ಒಂದೇ ರೂಮಿನಲ್ಲಿ ಮೂರು ವರ್ಷಗಳಿಂದಲೂ ಇದ್ದೆವು. ಯಾವ ಸಿನೆಮಾ ಅಥವಾ ಹೋಟೆಲಿನಲ್ಲಿಯೂ ನಮ್ಮನ್ನು ಜೊತೆಯಾಗಿಯೇ ಕಾಣಬಹುದಾಗಿತ್ತು.

ಒಮ್ಮೆ ಪರೀಕ್ಷೆ ಹತ್ತಿರ ಬಂದಾಗ ನಾವಿಬ್ಬರೂ ಉತ್ತಮ ವರ್ಗದಲ್ಲಿ ತೇರ್ಗಡೆಯಾಗಬೇಕೆಂದು ನಿರ್ಧರಿಸಿದೆವು. ಇದಕ್ಕಾಗಿ ಪಟ್ಟು ಹಿಡಿದು ಓದಬೇಕೆಂದು, ಇಬ್ಬರಲ್ಲಿ ಯಾರೂ ಪರೀಕ್ಷೆ ತೀರುವ ವರೆಗೆ ಸಿನೇಮಾಕ್ಕೆ ಹೋಗಬಾರದು ಎಂದು ಪ್ರತಿಜ್ಞೆ ಮಾಡಿದೆವು. ಒಂದು ವೇಳೆ ಇದಕ್ಕೆ ತಪ್ಪಿದರೆ ಒಂದು ರೂಪಾಯಿ ದಂಡ ಕೊಡಬೇಕೆಂದು ಪಣವೂ ಆಯಿತು.

ಎರಡು ವಾರ ಕಳೆಯಿತು, ಓದಿನಿಂದ ತಲೆ ಚಿಟ್ಟೇರಿತು. ಆಗ್ಗೆ ಬೆಂಗಳೂರಿನಲ್ಲಿ "ಝುನಕ ಝುನಕ ಪಾಯಲ ಬಾಜೇ" ಚಿತ್ರ ನಡೆಯುತ್ತಿತ್ತು. ಅದರ ವರ್ಣನೆಗಳನ್ನು ಕೇಳಿ ನನ್ನ ಬಾಯಲ್ಲಿ ನೀರೂರಿತು. ಆದರೆ ಪ್ರಾರಬ್ಧ, ಚಂದ್ರೂ ಇಪ್ಪತ್ತನಾಲ್ಕು ತಾಸೂ ನನ್ನ ಸಂಗಡವೇ ಊಟ, ಓದು, ನಿದ್ದೆಗಳಲ್ಲಿ ಜತೆಗಾರನಾಗಿದ್ದ. ಹೇಗೆ ತಪ್ಪಿಸಿಕೊಳ್ಳುವುದು ?

ಒಂದು ರವಿವಾರ ನನಗೆ ತಾಳಲಾರದಾಯಿತು. ಚಂದ್ರೂನನ್ನೂ ಒಲಿಸಿ ಕರೆದುಕೊಂಡು ಹೋಗೋಣವೆಂದರೆ ಇಬ್ಬರಿಗೆ ಬೇಕಾದಷ್ಟು ಹಣ ನನ್ನಲಿಲ್ಲ, ಅಲ್ಲದೆ ಸೋಲೊಪ್ಪಿಕೊಳ್ಳಬೇಕಾಗುತ್ತದಲ್ಲ ಎಂದು ಎದೆಗುದಿ. ಮಧ್ಯಾಹ್ನ ಎರಡೂವರೆಗಂಟೆಗೆ ಚಂದ್ರೂ ಅಂಗಿ ಹಾಕಿಕೊಂಡು, "ಲೋ, ರಾಜೂ ರೂಮಿಗೆ ಹೋಗಿ ನೋಟ್ಸ್ ತೆಗೆದುಕೊಂಡು ಬರುತ್ತೇನೆ" ಎಂದು ಹೊರಬಿದ್ದ. ಇದೇ ಸಂಧಿಯೆಂದು ಆತ ಕಣ್ಮರೆಯಾದದ್ದೇ ನಾನೂ ಬೀಗ ಜಡಿದು ಸಿನೇಮಾ ಕಡೆ ಧಾವಿಸಿದೆ. ಫಿಲ್ಮು ಪ್ರಾರಂಭವಾಗಿ ಬಹಳ ದಿನಗಳಾದ್ದರಿಂದ ವಿಶೇಷ ಗದ್ದಲವಿದ್ದಿಲ್ಲ.

ನಾನು ತಿಕೀಟುಪಡೆದು ಒಳಹೊಕ್ಕನೋ ಇಲ್ಲವೊ "ಹಲೋ, ಶಿವು, ಇಲ್ಲೇ ಸೀಟ್ ಖಾಲಿ ಇದೆ ಬಾ" ಎಂದು ಯಾರೋ ಕರೆದಂತಾಯಿತು. ನೋಡುತ್ತೇನೆ, ಚಂದ್ರು!

ಅವನ ಪಕ್ಕದಲ್ಲಿ ನಾನು ನಗುತ್ತ ಕುಳಿತಾಗ ಆತ ಸಂತೈಸುವ ದನಿಯಲ್ಲಿ, "ಏನೂ ತಿಳಕೋಬೇಡಪ್ಪ, ಎಲ್ಲರೂ ಚೆನ್ನಾಗಿದೆ ಅಂದದ್ದರಿಂದ ನನಗೂ ನೋಡುವ ಆಸೆಯಾಯಿತು. ಇಬ್ಬರಿಗೆ ಸಾಲುವಷ್ಟು ಹಣ ಇಲ್ಲದ್ದರಿಂದ ನಿನ್ನನ್ನು ಕರೆಯಲಿಲ್ಲ. ಸುಳ್ಳು ಹೇಳಿ ಬಂದುಬಟ್ಟೆ. ಅಂತೂ ನಾನೇ ಸೋತೆ" ಎಂದ.

"ನಾನೂ ಹಾಗೆಯೇ" ಎಂದು ನಾನು ಅವನನ್ನು ಸಂತೈಸಿದೆ. — ಪಿ. ಶಿವಣ್ಣ

ರಾತ್ರಿ ಹತ್ತು ಹೊಡೆದಿರಬೇಕು. ಯಾವುದೋ ಅವಸರದ ಕಾರ್ಯಕ್ಕಾಗಿ ಸೈಕಲ್ಲಿನಲ್ಲಿ ಹೊರಟಿದ್ದೆ. ಊರ ಹೊರವಲಯದ ವಿರಳ ಮನೆಗಳ ಬೀದಿ ನಿರ್ಜನವಾಗಿತ್ತು. ಹೋಗುತ್ತಿದ್ದಂತೆ ಬೆಳದಿಂಗಳಲ್ಲಿ ಒಂದು ಕಂಪೌಂಡಿನಲ್ಲಿ ಬಿಳಿಯ ಪತ್ತಲವುಟ್ಟ ತರುಣಿಯೊಬ್ಬಳು ನನ್ನ ಕಣ್ಣಿಗೆ ಬಿದ್ದಳು. ನಾನು ಆಕೆಯನ್ನು ಸಮೀಪಿಸುತ್ತಿರುವಾಗ ಆಕೆ ಕೈಬೀಸಿ ನನ್ನನ್ನು ಕರೆದಂತಾಯಿತು. ನಾನು ಸೈಕಲ್ಲಿನ ವೇಗವನ್ನು ಕಡಿಮೆ ಮಾಡಿದೆ. ಹೌದು, ಸೆರಗು ಎಳೆದು ಬಿಗಿದಿದ್ದ ತರುಣಿ. ನಾನು ಪೆಡಲನ್ನು ಮತ್ತೆ ತುಳಿದು ಮುನ್ನುಗ್ಗಿದೆ. ಆಕೆ ಮತ್ತೊಮ್ಮೆ ಕೈ ಬೀಸಿ ಕರೆದಳು.

ನಾನು ತರುಣ. ನನ್ನ ಹೃದಯ ವೇಗವಾಗಿ ಬಡಿಯತೊಡಗಿತೆಂದು ಒಪ್ಪಿಕೊಳ್ಳುತ್ತೇನೆ. ಸೈಕಲ್ ನಿಲ್ಲಿಸಿ ಆಕೆಯೊಡನೆ ಮಾತಾಡಲೇ ಅನಿಸಿತು. ಆದರೆ ನನ್ನ ಕೆಲಸ ಅತಿ ಜರೂರಿನದಾದ್ದರಿಂದ ಮುಂದೆ ಸಾಗಲೇಬೇಕಾಯಿತು. ವಿಧಿಯನ್ನು ಶಪಿಸುತ್ತ ಬೈಸಿಕಲ್ಲನ್ನು ತಳ್ಳಿದೆ.

ಅರ್ಧ ತಾಸಿನ ಮೇಲೆ ನಾನು ತಿರುಗಿ ಅದೇ ದಾರಿಯಲ್ಲಿ ಬರುತ್ತಿದ್ದಾಗ ಆ ರಮಣಿ ಅದೇ ಭಂಗಿಯಲ್ಲಿ ಅಲ್ಲೇ ಕದಲದೆ ನಿಂತದ್ದನ್ನು ದೂರದಿಂದಲೇ ನೋಡಿದಾಗ ನನಗಾದ ಚೋದ್ಯ ಎಷ್ಟೆನ್ನಲಿ? ಈ ಸಲ ಮಾತಾಡಿಸಿಯೇ ಬಿಡುವೆನೆಂದು ಸೈಕಲ್ಲನ್ನು ಸಾವಕಾಶಗೊಳಿಸಿ ಆ ಕಂಪೌಂಡಿನ ಮುಂದೆ ಇಳಿದು ಸೈಕಲ್ಲನ್ನು ಸ್ಟ್ಯಾಂಡಿನ ಮೇಲೆ ನಿಲ್ಲಿಸಿ ಹೊರಡುವವನಿದ್ದೆ.

ದುರದೃಷ್ಟ! ಅಷ್ಟರಲ್ಲಿ ಮನೆಯೊಳಗಿಂದ ಒಬ್ಬ ಮುದುಕಿ ಹೊರ ಬಂದು ಆ ತರುಣಿಯ ಕಡೆಗೇ ಸಾಗಬೇಕೆ? "ಇವರಿಗೆ ಎಷ್ಟು ಹೇಳಿದರೂ ಇಲ್ಲ. ಪತ್ತಲವನ್ನು ಹೊರಗೇ ಬಿಟ್ಟು ಬಿಟ್ಟದ್ದಾರೆ. ಈಗಿನ ಹುಡುಗಿಯರೇ ಹೀಗೆ" ಎಂದು ಕೂಗುತ್ತ ಆಕೆ ಆ ತರುಣಿಯ ಸೆರಗನ್ನು ಹಿಡಿದು ಬಿಚ್ಚತೊಡಗಿದಳು.

ನನ್ನ ಬೆಳುದಿಂಗಳ ತರುಣಿ ತರುಣಿಯಲ್ಲ, ಸತ್ತು ಒಣಗಿ ಹೋದ ನೋಟು ಮರದ ಕಡಿದುಳಿದ ಬೊಡ್ಡೆ; ಅದರ ಮೇಲೆ ಒಣಗಲು ಹಾಕಿದ ಬಿಳಿ ಪತ್ತಲ ಅದಕ್ಕೆ ಸುತ್ತಿಕೊಂಡಿತ್ತು ಎಂದು ಆಗ ನನಗೆ ಗೊತ್ತಾಯಿತು.

— ಎಚ್. ಸಿ. ಐಹೊಳ್ಳಿ

ನಿಮಗೂ ಈ ಅನುಭವ ಬಂದಿದೆಯೆ ?

ನಿದ್ದೆಗೇಡು



ಕೆ. ಡಿ. ಕುರ್ತಕೋಟಿ

ನಿದ್ದೆಗೊಮ್ಮೆ ನಿತ್ಯ ಮರಣ
ಎದ್ದಸಲ ನವೀನ ಜನನ
ನನಗೆ ಏಕೆ ಬಾರದೋ

— ಅಂಬಿಕಾತನಯದತ್ತ

ನಾವಿನ್ನೂ ಶಾಲೆ ಕಲಿಯುವ ಹುಡುಗನಾಗಿದ್ದಾಗ ನನಗೆ ಬಹು ಬೇಗ ನಿದ್ದೆ ಬರುತ್ತಿತ್ತು. ಇದು ಸರ್ವಸಾಮಾನ್ಯವಾದ ಸಂಗತಿ. ಅದರಲ್ಲಿ ಕಾದಂಬರಿ ಕೈಯಲ್ಲಿ ಸಿಕ್ಕರೆ ಬೆಳತನಕ ಓದುವ ವಿದ್ಯಾರ್ಥಿ, ಪಠ್ಯಪುಸ್ತಕ ಕೈಗೆ ಬಂದೊಡನೆ ತೂಕಡಿಸಲು ಪ್ರಾರಂಭಿಸುತ್ತಾನೆ. ನನ್ನ ಗೆಳೆಯನೊಬ್ಬ ಆಗಾಗ ಹೇಳುತ್ತಿದ್ದ ಮಾತು ನನಗಿನ್ನೂ ಮರೆತಿಲ್ಲ. ಪಠ್ಯಪುಸ್ತಕಗಳನ್ನೆಲ್ಲ ಅಫೀಮಿನ ಮಸಿಯಲ್ಲಿ ಮುದ್ರಿಸಿರುತ್ತಾರೆ ಎಂದು ಅವನು ಹೇಳುತ್ತಿದ್ದ. ಈಗಲೂ ಈ ಮಾತು ನಿಜವೇ. ವಿದ್ಯಾರ್ಥಿಗೂ ಅಭ್ಯಾಸಕ್ಕೂ ಪೂರ್ವಜನ್ಮದ ವೈರವಿರಬೇಕು. ನನಗೆ ಮಾತ್ರ ವಿದ್ಯಾರ್ಥಿದೆಸೆಯಲ್ಲಿ, ಈ ಅನಿವಾರ್ಯವಾದ ನಿದ್ದೆಯ ಮೂಲಕ ಬಹಳ ದುಃಖವೆನಿಸುತ್ತಿತ್ತು. ಆಗ ನನಗೆ ನಿದ್ದೆ ಮಾಡದಿರುವವರೆಲ್ಲ ಪುಣ್ಯಶಾಲಿಗಳೆಂದು, ಮಹಾಪುರುಷರೆಂದು ನಂಬಿಕೆಯಿತ್ತು. ನಿದ್ದೆಯನ್ನು ತಮ್ಮ ವಶದಲ್ಲಿಟ್ಟುಕೊಂಡವರೆಲ್ಲ ವೀರರೆಂದೆನಿಸುತ್ತಿತ್ತು. ನೆಪೋಲಿಯನ್ ಕುದುರೆಯ ಮೇಲೆ ಕುಳಿತುಕೊಂಡೇ ನಿದ್ದೆ ಮುಗಿಸಿ ಏಳುತ್ತಿದ್ದನೆಂದು ನಾನು ಕೇಳಿದ್ದೆ. ಅವನ ಬಗ್ಗೆ ನನಗೆ ಅತಿಶಯವಾದ ಗೌರವವಿತ್ತು. ನೆಪೋಲಿಯನ್ನನಂತೆಯೇ ನನ್ನ ಕಣ್ಣಿನಲ್ಲಿ ಆದರಣೀಯ ವ್ಯಕ್ತಿ ಎಂದರೆ ನಮ್ಮ ಕಕ್ಕನೊಬ್ಬ. ಅವನ ಮಲಗುವ ಕೋಣೆಯಲ್ಲಿ ಕೈಯಿಟ್ಟ ಕಡೆಗೊಂದು ಪುಸ್ತಕವಿರುತ್ತಿತ್ತು. ಅವನು ಬೆಳಗಿನ ನಾಲ್ಕು ಗಂಟೆಯವರೆಗೆ ಓದುತ್ತ ಮಲಗಿರುತ್ತಿದ್ದ. ನೆಪೋಲಿಯನ್ನನಂತೆ ವೀರನಾಗಬೇಕು, ನಮ್ಮ ಕಕ್ಕನಂತೆ ವಿದ್ವಾಂಸನಾಗಬೇಕೆಂದು ನಾನು ಆಗ ಬಹಳ ಹಂಬಲಿಸುತ್ತಿದ್ದೆ.

ಅದಕ್ಕಾಗಿ ನಾನು ಪ್ರಯತ್ನವನ್ನೂ ಮಾಡುತ್ತಿದ್ದೆ. ಆಗ ನನಗೆ ೧೮ ವರ್ಷ. ಹರೆಯದ ಕಾವು ಕೆಲವರಲ್ಲಿ ವಿಕೃತ ವೈರಾಗ್ಯವಾಗಿ ಪರಿಣಮಿಸುತ್ತದೆ. ನಮ್ಮ ತರುಣರು, ಗಡ್ಡ ಬಿಡುವದು, ಬರಿ ನೆಲದ ಮೇಲೆ ಮಲಗುವದು, ಹಟತೊಟ್ಟವರಂತೆ ಚಹಕುಡಿಯುವದನ್ನು ತ್ಯಜಿಸುವದು (ಸಿಗರೇಟು ಮಾತ್ರ ಸೇದುತ್ತಿರುತ್ತಾರೆ!) ಬರಿಗಾ

ಲಿನಿಂದ ನಡೆಯುವದು ಮೊದಲಾದ ಅಸಹಜವಾದ ಚಟಗಳನ್ನು ಕಲಿಯುವದಕ್ಕೆ ಇದೇ ಕಾರಣ. ನಾನೂ ಈ ನಿಯಮಕ್ಕೆ ಅಪವಾದವಾಗಿರಲಿಲ್ಲ. ನಿದ್ದೆ ಕಟ್ಟುವದರಿಂದ ಮನುಷ್ಯನ ಆತ್ಮಶಕ್ತಿ ವರ್ಧಿಸುತ್ತದೆಂದು ನನ್ನ ತಿಳಿವಳಿಕೆಯಾಗಿಬಿಟ್ಟಿತ್ತು. ಆದ್ದರಿಂದ ನಿದ್ದೆಯನ್ನು ನಿರೋಧಗೊಳಿಸಲು ನಾನಾ ಉಪಾಯಗಳನ್ನು ಮಾಡಿನೋಡಿದೆ, ಒಂದೂ ಫಲಕಾರಿಯಾಗಲಿಲ್ಲ. ದೀಪ ದೊಡ್ಡದು ಮಾಡಿ, ಕಣ್ಣಿಗೆ ತಣ್ಣೀರು ಸುರುವಿಕೊಂಡು, ಬರಿಯ ಚಾಪೆಯೊಂದನ್ನೇ ಹಾಸಿಕೊಂಡು ಓದುತ್ತ ಕುಳಿತರೆ, ನಾಲ್ಕು ಪುಟ ಓದುವಷ್ಟರಲ್ಲಿಯೇ ಜಗತ್ತೇ ಮರವೆಯಾಗುತ್ತಿತ್ತು. ಕಣ್ಣು ತೆರೆದು ನೋಡಿದರೆ ಬೆಳಗಿನ ಎಂಟು ಗಂಟೆಯಾಗಿರುತ್ತಿತ್ತು. ಯಾರೋ ತಂದು ನನ್ನನ್ನು ಹಾಸಿಗೆಯ ಮೇಲೆ ಮಲಗಿಸಿರುತ್ತಿದ್ದರು.

ಆಗಿನದಕ್ಕೂ ಈಗಿನದಕ್ಕೂ ಎಷ್ಟು ಅಂತರ! ನಾನೇನೂ ಈಗ ಮುದುಕನಾಗಿಲ್ಲ. ಇನ್ನೂ ಪ್ರಾಯದ ಅಂಚಿನಲ್ಲಿಯೇ ಇದ್ದೇನೆ. ಆದರೆ ನನ್ನ ವಿಷಯದಲ್ಲಿ ವಯಸ್ಸು ಹಾಗೂ ಜೀವನೋತ್ಸಾಹ ಎರಡೂ ವ್ಯಸ್ತ ಪ್ರಮಾಣದಲ್ಲಿ ಇವೆ. ಮೊದಲಿಗಿಂತ ಈಗ ಮನಸ್ಸು ಹೆಚ್ಚು ಸೂಕ್ಷ್ಮವಾಗಿದೆ. ಹೊರಗೆ ಕಾಣದಿದ್ದರೂ ಒಳಗೆ ಅಪಾರ ಯಾತನೆಯನ್ನು ಅನುಭವಿಸುತ್ತಿರುತ್ತೇನೆ. ಮೊದಲಿನಂತೆ ಅತ್ತು ಮನಸ್ಸನ್ನು ಹಗರುಮಾಡಿಕೊಳ್ಳಲೂ ಈಗ ಸ್ವಾತಂತ್ರ್ಯವಿಲ್ಲ. ವಯಸ್ಸಿನೊಡನೆ ಜೀವನದ ಭಾರ ಹೆಚ್ಚಾಗುತ್ತ ನಡೆಯುತ್ತದೆ. ಯಾರೋ ಎಲ್ಲಿಯೋ ಅಂದ ಮಾತು ಮನಸ್ಸಿನ ಗವಿಯಲ್ಲಿ ಸೆರೆಸಿಕ್ಕವರಂತೆ ಬಹುಕಾಲದ ವರೆಗೆ ತೊಂದರೆ ಕೊಡುತ್ತದೆ. ಯಾವುದೋ ಅಕಸ್ಮಾತ್ತಾಗಿ ಕಂಡ ನೋಟ ಭಯಗೊಳಿಸುತ್ತದೆ. ನನ್ನ ರೀತಿನೀತಿಗಳ ಬಗ್ಗೆ ಇನ್ನೊಬ್ಬರು ಮಾಡಿದ ಟೀಕೆ ನನ್ನ ಬಾಳಿನ ಬೇರನ್ನೇ ಹಿಡಿದು ಅಲುಗಾಡಿಸುತ್ತದೆ. ಇಂಥ ಸಮಯಗಳಲ್ಲಿ ನಾನು ಮೊದಲು ಸ್ವಾಗತಿಸುತ್ತಿದ್ದ ನಿದ್ದೆಗೇಡು ಈಗ ಮನಸ್ಸಿಗೆ ಒಲ್ಲದ ಅತಿಥಿಯಂತೆ ಅನಿವಾರ್ಯವಾಗಿದೆ.

ಮಕ್ಕಳಿಗೆ ನಿದ್ದೆ ಒಂದು ವರ. ಆದರೆ ದೊಡ್ಡವರಾದ ಮೇಲೆ ಅದನ್ನು ಕಷ್ಟಪಟ್ಟು ಒಲಿಸಿಕೊಳ್ಳಬೇಕಾಗುತ್ತದೆ, ತಪಸ್ಸು ಮಾಡಬೇಕಾಗುತ್ತದೆ. ರಾತ್ರಿ ಒಂಬತ್ತು ಗಂಟೆಗೇ ನಾನು ಮಲಗಲು ಪ್ರಾರಂಭಿಸುತ್ತೇನೆ. ದಿನದ ದುಡಿತದಿಂದ ದಣಿದ ದೇಹ ಹಾಸಿಗೆಯ ಆಸರೆಯನ್ನು ಪಡೆಯಲು ಹಾತೊರೆಯುತ್ತಿರುತ್ತದೆ. ಮನಸ್ಸು ಆ ಹೊತ್ತಿಗಂತೂ ಗೆಲುವಾಗಿಯೇ ಇರುತ್ತದೆ. ಒಂದು ದಿನದ ಕಷ್ಟವಾದರೂ ಪರಿಹಾರವಾಯಿತಲ್ಲ ಎಂದು ಉಸುರ್ಗರೆಯುತ್ತದೆ. ದೀಪ ಆರಿಸಿ ಹಾಸಿಗೆಯ ಮೇಲೆ ಮಲಗಿ, ಹತ್ತಿರದಲ್ಲಿಯ ಚಹದಂಗಡಿಯ ರೇಡಿಯೋ ಸಂಗೀತವನ್ನು ಕೇಳುತ್ತ ಸವಿಗನಸನ್ನು ಕಾಣಲು ಬಯಸುತ್ತೇನೆ. ಆದರೆ ಯಾವುದೋ ವಿಚಾರ ನೆನಪಾಗಿ ಮನಸ್ಸೇ ದಿಗಿಲುಗೊಳ್ಳುತ್ತದೆ. ಕೂಸಿಗೆ ಮೈಯಲ್ಲಿ ಸರಿಯಿಲ್ಲ; ನಾಳೆಯೇ ಸಂತೆ, ಕೈಯಲ್ಲಿ ಹಣವಿಲ್ಲ; ಯಾರದೋ ಒಲ್ಲದ ಕೆಲಸಕ್ಕಾಗಿ ನಾಡದು ಊರಿಗೆ ಹೋಗಬೇಕು; ಉದ್ರಿಯಂಗಡಿಯ ಬಾಕಿ ತೀರಿಸಿಲ್ಲ— ಹೀಗೆ ಸಂಸಾರದ ಅನಂತ ತಾಪತ್ರಯಗಳು ಕಣ್ಣಿಗೆ ಕಟ್ಟುತ್ತವೆ. ನಿದ್ದೆ ರೇಡಿಯೋ ಸಂಗೀತದೊಡನೆಯೇ ಕರಗಿ ಹೋಗುತ್ತದೆ. ನಿದ್ದೆಗಾಗಿ ಶ್ರುತಿಗೊಳಿಸಿದ ದೇಹ, ಜೋಲು ಬಿದ್ದ ತಂತಿಯಂತೆ ನಿರ್ವಿಣ್ಣವಾಗುತ್ತದೆ. ನಸುಕಿನಲ್ಲಿ ಏನೋ ಜೊಂಪು ಹತ್ತಿದರೆ ಪುಣ್ಯವೆನ್ನಬೇಕು.

ನನಗೆ ಈ ನಿದ್ದೆಗೇಡಿನ ಅನುಭವ ಸಾಕಷ್ಟು ಬಂದಿದೆ. ಈ ಅನುಭವದ ರಸವಾವುದೋ ನನಗೆ ಇನ್ನೂ ಗೊತ್ತಾಗಿಲ್ಲ. ಭಯಾನಕವೆಂದು ಹೇಳಿದರೆ ಸತ್ಯಕ್ಕೆ ಸಮೀಪವಾಗಬಹುದು. ರಾತ್ರಿ ಹನ್ನೆರಡು ಹೊಡೆಯುವವರೆಗೆ ಅಷ್ಟೇನೂ ಭೀಕರವಾಗಿರಲಾರದು ಇನ್ನೂ ನಿದ್ದೆ ಬರಬಹುದೆಂಬ ಆಶೆ ಸಮಾಧಾನವನ್ನೀಯುತ್ತದೆ. ನಿದ್ದೆ ಬರದಿದ್ದರೂ ಸುತ್ತಲಿನ ವಾತಾವರಣ ಇನ್ನೂ ಎಚ್ಚರಾಗಿರುತ್ತದೆ. ಬೀಟಿನ ಪೋಲೀಸರು ಕಬ್ಬಿಣದ ಬೂಟುಗಳನ್ನು ಸಪ್ಪಳ ಮಾಡುತ್ತ ತಿರುಗಾಡುತ್ತಿರುತ್ತಾರೆ. ದೂರದ ಥೇಟರಿನಿಂದ ಒಮ್ಮೊಮ್ಮೆ ಮಧುರವಾದ ಹಾಡು ಕೇಳಿ ಬರುತ್ತದೆ. ಹನ್ನೆ

ರಡರ ಗಾಡಿಗೆ ಕಾಯುತ್ತ ಕುಳಿತ ಟಾಂಗಾದವರು ಉರಿಯ ಸುತ್ತಲೂ ಕುಳಿತು ಹರಟೆ ಹೊಡೆಯುತ್ತಿರುತ್ತಾರೆ. ಹನ್ನೆರಡಕ್ಕಂತೂ ದಿನದ ಗದ್ದಲಕ್ಕೆ ಕೊನೆಯುಕ್ಕು ಬಂದಂತೆ ಒಮ್ಮೆಲೇ ಕೋಲಾಹಲ ಪ್ರಾರಂಭವಾಗುತ್ತದೆ ಹನ್ನೆರಡರ ಮೇಲುಗಾಡಿ ಕರ್ಕಶವಾಗಿ ಸಿಳ್ಳು ಹಾಕುತ್ತ ಧಾವಿಸಿ ಬರುತ್ತದೆ. ಗಾಡಿಯಿಂದಿಳಿದು ಬಂದ ಪ್ರವಾಸಿಕರನ್ನು, ಸನೇವಾದಿಂದ ಮರಳಿದ ಜನರು ಸ್ವಾಗತಿಸುತ್ತಾರೆ. ಯಾರೋ ಪರಊರಿನವರು ನೆರೆಮನೆಯ ಬಾಗಿಲನ್ನು ಬಡಿದು ಒಳಗಿನವರನ್ನು ಎಬ್ಬಿಸಲು ಭಗೀರಥಪ್ರಯತ್ನ ನಡೆಸಿರುತ್ತಾರೆ. ಆದರೆ ಇಷ್ಟೆಲ್ಲ ಸದ್ದು–ಗದ್ದಲ ಒಮ್ಮೆಲೇ ಕಡಿಮೆಯಾಗುತ್ತದೆ ಮುಂದೆ ಎಲ್ಲವೂ ಅಭೇದ್ಯ ನಿಶ್ಶಬ್ದ, ಭಯಾನಕ ಮೌನ ಮುಗಿಲಿನಂತೆ ಅನಂತವಾಗಿ ಹಬ್ಬಿಕೊಳ್ಳುತ್ತದೆ.

ಆ ಮೇಲೆ ಮಾತ್ರ ರಾತ್ರಿಯ ಮರುಭೂಮಿಯನ್ನು ನಾವೊಬ್ಬರೇ ದಾಟಬೇಕು. ಹೊರಳಿ ಹೊರಳಿ ಬೇಸರ ಬರುತ್ತದೆ. ಕಣ್ಣು ಮುಚ್ಚಿ ಮುಚ್ಚಿ ಎವೆಗಳು ನೋಯುತ್ತವೆ. ಬೇಸರದಿಂದ ಕಣ್ಣು ತೆರೆದೇ ಮಲಗಿಕೊಳ್ಳುತ್ತೇನೆ. ಅದರಿಂ-ದೇನು ಲಾಭ ಎಂದುಕೊಂಡು ಮತ್ತೆ ಕಣ್ಣು ಮುಚ್ಚುತ್ತೇನೆ. ಆದರೆ ನಿದ್ದೆ ನಮ್ಮನ್ನು ಮರೆತೇ ಬಿಟ್ಟಿರುತ್ತದೆ. ಇಷ್ಟಾದರೂ ವಿಚಾರಚಕ್ರ ತಿರುಗುತ್ತಲೇ ಇರುತ್ತದೆ. ನೀರಿಲ್ಲದ ಆಳವಾದ ಬಾವಿಯಿಂದ ನೀರು ಸೇದಿದಂತೆ ಎಲ್ಲ ವ್ಯರ್ಥವಾಗುತ್ತದೆ. ಮುಚ್ಚಿದ ಕಣ್ಣುಗಳ ಕತ್ತಲೆಯಲ್ಲಿ ವರ್ಣರಹಿತವಾದ, ಆಕಾರವಿಲ್ಲದ ಚಿತ್ರಗಳು ದೆವ್ವಗಳಂತೆ ಹೆದರಿಸುತ್ತವೆ. ದೀಪ ಹಚ್ಚಿ ಪುಸ್ತಕವನ್ನೋದಲು ಕೂಡ ಬೇಸರ ಬಂದಿರುತ್ತದೆ.

ಈ ನಿದ್ದೆಗೇಡು ನನಗೆ ಅನೇಕ ಪಾಠಗಳನ್ನು ಕಲಿಸಿದೆ. ಮೊದಲು ನನಗೆ ಏಕಾಂತ, ಧ್ಯಾನ ಇವೆಲ್ಲ ಪೂಜ್ಯವಾಗಿದ್ದವು. ಮನುಷ್ಯ ಆದಷ್ಟು ನಿರ್ಜನತೆಯಲ್ಲಿದ್ದುಕೊಂಡು, ಮೌನವಾಗಿ ಉಚ್ಚ ವಿಚಾರಗಳನ್ನು ಧ್ಯಾನಿಸುತ್ತಿರಬೇಕೆಂದು ನನಗನಿಸುತ್ತಿತ್ತು. ಆದರೆ ಒಂಟಿಗತನ ಎಷ್ಟು ಭಯಾನಕವಾಗಿರುತ್ತದೆಂಬ ಕಲ್ಪನೆ ನನಗೆ ನಿದ್ದೆಗೇಡಿನಿಂದಲೇ ಬಂದದ್ದು. ನಮ್ಮ ಮನಸ್ಸು ಕನ್ನಡಿಯಂತೆ ಎಲ್ಲ ವಸ್ತುಗಳನ್ನೂ ಪ್ರತಿಬಿಂಬಿಸುತ್ತದೆ. ಕನ್ನಡಿಯಲ್ಲಿ ಪ್ರತಿಬಿಂಬ ಮಾಯವಾಗುವಂತೆ ಮನಸ್ಸಿನಲ್ಲಾಗುವದಿಲ್ಲ ಮನಸ್ಸಿನಲ್ಲಿಯ ಈ ಸಂಗ್ರಹದ ಸಂಖ್ಯೆ ಎಣಿಕೆಗೆ ಮೀರಿದ್ದು. ಸಮಾಧಾನದಿಂದಿದ್ದಾಗ ಭಯ, ಲೋಭ, ಆಸೆ, ಚಿಂತೆ ಮೊದಲಾದ ಭಾವನೆಗ-ಳೆಲ್ಲ ಜಲಚರಗಳಂತೆ ಮನಸ್ಸಿನ ತಳದಲ್ಲಿಯೇ ವಾಸಿಸುತ್ತವೆ. ಅಪ್ಪಿತಪ್ಪಿ ಯಾವುದಾದರೂ ಹೊಳೆವ ರೆಕ್ಕೆ ಗೋಚರವಾಗಬಹುದು. ಆದರೆ ಚಿತ್ತದ ಸಮತೆ ಕೆಟ್ಟು ಹೋದಾಗ, ನಾವು ಒಂಟಿಗರಾಗಿದ್ದಾಗ, ನಮ್ಮ ಮನಸ್ಸು ಬಿರುಗಾಳಿಯ ಹೊಡೆತಕ್ಕೆ ಸಿಕ್ಕ ಪ್ರಚಂಡವಾದರೂ ಏಕಾಕಿಯಾದ ಸಮುದ್ರದಂತೆ ಭೋರ್ಗರೆಯುತ್ತದೆ. ಆಗ ತಳದಲ್ಲಿ ಸುಖವಾಗಿ ಮಲಗಿದ್ದ ವಿಕೃತಭಾವನೆಗಳೆಲ್ಲ ಮೇಲೆದ್ದು ದೆವ್ವ ಕುಣಿತವನ್ನು ಪ್ರಾರಂಭಿಸುತ್ತವೆ. ನಮ್ಮ ಜೀವನವೇ ನಮ್ಮ ಅಂಕೆ ಮೀರಿ ಹೋಗುತ್ತಿರುವದನ್ನು ಕಂಡರೆ ಯಾರಿಗೆ ಸಂಕಟವಾಗಲಾರದು ?

ಈ ನಿದ್ದೆಗೇಡಿಗೆ ಇನ್ನೂ ಒಂದು ಮುಖ ಇದೆ. ಸಾವಿನ, ನೋವಿನ, ಸನ್ನಿಧಾನದಲ್ಲಿ ರಾತ್ರಿ ಕಳೆಯಬೇಕಾದ ಪ್ರಸಂಗ. ಇಲ್ಲಿ ನಿದ್ದೆಮಾಡಲು ಪ್ರಯತ್ನವಿರುವದಿಲ್ಲ. ಮಾಡಿದರೂ ನಿದ್ದೆ ಹತ್ತುವದು ಸಾಧ್ಯವಾಗುವದಿಲ್ಲ. ಎರಡು ಮೂರು ದಿನ ಅಲಕ್ಷ್ಯ ಮಾಡಿದ ಬೇನೆ ಅಂದು ಉಲ್ಬಣವಾಗಿರಬೇಕು. ಹಗ್ಗದ ಮೇಲೆ ನಡೆಯುವದಕ್ಕಿಂತ ಈ ಅನುಭವ ಮನಸ್ಸನ್ನು ಹೆಚ್ಚು ಕಾತರಗೊಳಿಸುತ್ತದೆ. ಭಯ, ಅನುಮಾನ, ಚಿಂತೆ ಒಂದರ ಹಿಂದೆ ಒಂದು ನಡೆದು ಬರುತ್ತವೆ. ರೋಗಿಯ ಪ್ರತಿಯೊಂದು ಚಲನವಲನವೂ ಭಯ ಹುಟ್ಟಿಸುತ್ತದೆ ರೋಗಿ ನಿದ್ದೆ ಮಾಡದೆ ನರಳಿ ಸಂಕಟಪಡುತ್ತಿದ್ದರೆ ನೋಡಲೂ ಆಗುವದಿಲ್ಲ, ನೋಡದಿರಲೂ ಆಗುವದಿಲ್ಲ. ಸ್ವಲ್ಪ ನಿದ್ದೆ ಹತ್ತಿದರೂ ಮತ್ತೆ ಗಾಬರಿಯಾಗುತ್ತದೆ ಮೃತ್ಯುವಿನ ನೆರಳು ಕವಿದ ಆ ಹೊತ್ತಿನಲ್ಲಿ ಪ್ರತಿಯೊಂದು

ಅತಿಶಯವಾಗಿ, ಅದ್ಭುತವಾಗಿ, ಭಯಾನಕವಾಗಿ ಕಾಣುತ್ತದೆ. ನಿದ್ದೆ ಮರಣದಂತೆ ಭಾಸವಾಗುತ್ತದೆ. ದೀಪ ನಡುಗಿದರೆ, ಹಲ್ಲಿ ಲೊಚಗುಟ್ಟಿದರೆ ಮೃತ್ಯುವಿನ ಶಕುನ ಕಂಡಂತಾಗುತ್ತದೆ. ಈ ರಾತ್ರಿ ಕಳೆದು ಬೆಳಗು ಬಂದರೆ ಸಾಕು, ಅಶ್ವಮೇಧವನ್ನು ಮಾಡಿದಂತಾಗುತ್ತದೆ ಎಂದೆನಿಸುತ್ತದೆ. ರಾತ್ರಿಯೆಂದರೆ ಮೃತ್ಯುಕಾಲ ಎಂಬ ನಂಬಿಕೆ ಸಾವಿರಾರು ವರ್ಷಗಳಿಂದ ಮನುಷ್ಯ ಹೃದಯದಲ್ಲಿ ಬೇರೂರಿದ ಭಾವನೆಯಾಗಿದೆ.

ಮನುಷ್ಯ ಸ್ವಭಾವತಃ ಏಕಾಕಿಯಾಗಿ ಜೀವಿಸಲಾರ. ಶಾಂತಿ, ಮೌನ, ಏಕಾಂತಪ್ರಿಯತೆ ಇವು ಸುಸಂಸ್ಕೃತಿಯ ಲಕ್ಷಣಗಳೇನೋ ನಿಜ. ಸಂತೆಯ ಗದ್ದಲದಲ್ಲಿ ಸುಖದ ಸಂಸಾರ ನಡೆಯಲಾರದೆಂಬುದೂ ಅಷ್ಟೇ ನಿಜ. ಆದರೆ ಏಕಾಂತ ವೇದಾಂತಕ್ಕೂ ಎಳೆಯಬಹುದು, ವಿಕೃತಿಗೂ ಎಳೆಯಬಹುದು. ಮನಸ್ಸಿನಲ್ಲಿ ಅವಿವೇಕ ಯಾವ ಹೊತ್ತಿಗೆ ಜಾಗೃತವಾದೀತೋ ಹೇಳಲು ಸಾಧ್ಯವಿಲ್ಲ, ಏಕಾಕೀತನ ಅಸಹನೀಯವೆನಿಸಿದಾಗ ಮನುಷ್ಯ ಅವಿವೇಕವನ್ನೇ ಜೊತೆಮಾಡಿಕೊಳ್ಳುತ್ತಾನೆ. ಅದರೊಂದಿಗೇ ಆಟವಾಡುತ್ತಾನೆ. ಮನುಷ್ಯನಿಗೆ ಏಕಾಂತ, ಜಾತ್ರೆಯಲ್ಲಿ ಮರೆಮಾಡಿ ಕೊಂಡು ಸಂಸಾರ ಹೂಡಿದಂತಿರಬೇಕು. ಸುತ್ತಲೂ ಜನರು ಕುಳಿತು ಮಾತಾಡುತ್ತಿರುವಾಗ, ಒಮ್ಮೊಮ್ಮೆ ನಾವು ನಿದ್ದೆಯ ಸೋಗು ಹಾಕಿ ಅವರ ಮಾತನ್ನು ಗುಟ್ಟಾಗಿ ಕೇಳುತ್ತಿರುವದಿಲ್ಲವೇ? ಅದರಂತೆಯೇ ಇದೆ ಮನುಷ್ಯನ ಏಕಾಂತದ ಸುಖ.

ಇದೆಲ್ಲ ನಿಜ. ಆದರೇನು? ಸುಲಭವಾಗಿ ಕಾಣುವ ಈ ಸಮಸ್ಯೆಯೂ ಇನ್ನೂ ಬಗೆ ಹರಿದಿಲ್ಲ. ಒಮ್ಮೊಮ್ಮೆ ನನಗೆ ನಿದ್ದೆ ಕೂಡ ನಮ್ಮ ಕೈಯಲ್ಲಿಲ್ಲವೆನ್ನುವಂತಾಗಿದೆ. ನಿದ್ದೆಯ ಸುಖ ಪಡೆಯಲು ಕಣ್ಣು ಪುಣ್ಯಮಾಡಿ ಬಂದಿರಬೇಕು ಎಂದೆನಿಸುತ್ತದೆ. ದೇಹ ದಣಿದಿರುತ್ತದೆ; ಕಣ್ಣು ಹಾತೊರೆಯುತ್ತವೆ; ಮನಸ್ಸು ಕರೆದೂ ಕರೆದೂ ಬೇಸರಿಯುತ್ತದೆ. ಆದರೂ ನಿದ್ದೆ ಬರುವದಿಲ್ಲ. ಅದರ ಕಡೆಗೆ ಲಕ್ಷ್ಯಕೊಟ್ಟಷ್ಟೂ ಅದು ನಮ್ಮಿಂದ ದೂರ ಸರಿಯುತ್ತದೆ. ಗಳಿಗೆಗಳು ಒಂದರ ಮೇಲೊಂದರಂತೆ ಜಾರುತ್ತವೆ; ಕತ್ತಲೆ ಆಳವಾಗುತ್ತ ನಡೆಯುತ್ತದೆ. ನಿಶ್ಶಬ್ದತೆ ವಾಸಕಸಜ್ಜಿಕೆಯಾಗಿ ಕಾಯುತ್ತಿರುತ್ತದೆ. ಆಗಾಗ ಗಂಟೆಗಳು ಧ್ವನಿ ಮಾಡಿ ನಿರಾಶೆಯಿಂದ ಸುಮ್ಮನಾಗುತ್ತವೆ ಎಷ್ಟು ನಿರಾಶೆಗೊಳಿಸಿದರೂ ನಿದ್ದೆ ನಮಗೆ ಬೇಡವೆನಿಸುವದಿಲ್ಲ. ಯಾವಾಗಲೋ ಎಲ್ಲಿಂದಲೋ ಬರುತ್ತದೆಂಬ ಭರವಸೆಯಿಂದಲೇ ಅದನ್ನು ಕಾಯುತ್ತಿರುತ್ತೇವೆ. ಈಗ, ಇನ್ನೊಂದು ಕ್ಷಣಕ್ಕೆ ಬಂದೀತು, ಈಗ ನಾನು ಕನಸಿನಲ್ಲಿಯೇ ವಿಚಾರ ಮಾಡುತ್ತೇನೆ, ಎಂದು ಭಾವಿಸಿಕೊಂಡು ನಿದ್ದೆ ಮಾಡುವ ಭ್ರಮೆಯನ್ನು ತಂದುಕೊಳ್ಳುತ್ತೇವೆ. ನಿದ್ದೆಯ ನೆನಪೂ ಒಲಿದ ಜೀವದ ನೆನಪಿನಂತೆ ಸುಖಾವಹವಾಗಿರುತ್ತದೆ. ನಿದ್ದೆಯ ಆಸೆ ಜೀವನದ ಆಸೆಯಷ್ಟೇ ತೀವ್ರವಾಗಿದೆ; ಅದರ ಬೇರುಗಳು ನಮ್ಮ ಜಾಗೃತಚಿತ್ತದ ಆಚೆಗೂ ಇಳಿದಿವೆ. ನಿದ್ದೆ ಮುಗಿದ ಮೇಲಿನ ಜಾಗೃತಿಯೇ ದಿವ್ಯತೆಯ ಲಕ್ಷಣ.

ಸದ್ಗೃಹಸ್ಥ ?

ತಲೆ ಬೇಸರ ಬರುವಂತೆ ಉದ್ದ ಭಾಷಣ ಬಿಗಿಯುತ್ತಿದ್ದ ಆ ಭಾಷಣಕಾರ ಮಾತು ನಿಲ್ಲಿಸಲೇ ಇಲ್ಲ. ಸಭಿಕರೆಲ್ಲ ಒಬ್ಬೊಬ್ಬರಾಗಿ ಎದ್ದು ಹೋಗತೊಡಗಿ ಕೊನೆಗೆ ಸಭಾಗೃಹದಲ್ಲಿ ಒಬ್ಬನೇ ಒಬ್ಬ ಮಾತ್ರ ಉಳಿದ. ಆಗ ಆ ಭಾಷಣಕಾರ ಆತನನ್ನುದ್ದೇಶಿಸಿ, "ಇಷ್ಟು ಜನರಲ್ಲಿ ನೀವಾದರೂ ಒಬ್ಬರು ಸದ್ಗೃಹಸ್ಥರು ಎಂದು ಗೊತ್ತಾಯಿತಲ್ಲ, ಸಂತೋಷ" ಎಂದ.

"ಛೆ! ಛೆ! ನಿಮ್ಮ ನಂತರ ನನ್ನ ಭಾಷಣವಿದೆ" ಎಂದನಾ ಸದ್ಗೃಹಸ್ಥ.

ನಿಮ್ಮ ಶಬ್ದ ಭಾಂಡಾರ ಬೆಳೆಯಲಿ

ಶಬ್ದಭಾಂಡಾರವು ಹಣದ ಭಾಂಡಾರಕ್ಕಿಂತಲೂ ಅಮೂಲ್ಯವಾಗಿದೆ

ಇಲ್ಲಿ ಪ್ರತಿ ತಿಂಗಳು ಕೆಲವು ಶಬ್ದಗಳನ್ನು ಪರಿಚಯ ಮಾಡಿ ಕೊಡಲಾಗುವದು. ಆಯಾ ಶಬ್ದದ ಮುಂದೆ ನಾಲ್ಕು ಅರ್ಥಗಳನ್ನು ಕೊಟ್ಟಿದ್ದು, ಅವುಗಳಲ್ಲಿ ಒಂದು ಮಾತ್ರ ಸರಿಯಾಗಿರುತ್ತದೆ. ನಿಮಗೆ ಸರಿಯೆನಿಸಿದ ಅರ್ಥವನ್ನು ಮೊದಲು ಆರಿಸಿಕೊಳ್ಳಿರಿ. ಆಮೇಲೆ ಇದರ ಬೆನ್ನಿನ ಪುಟ ನೋಡಿರಿ. ಅಲ್ಲಿ ಸರಿಯಾದ ಅರ್ಥಗಳನ್ನು ವಿವರಿಸಿದೆ.

೧. ಉನ್ಮೀಲನ
(ಅ) ಹುಚ್ಚು (ಆ) ಮುಚ್ಚುವುದು (ಇ) ತೆರೆಯುವಿಕೆ (ಈ) ಮೇಲೇರುವಿಕೆ.

೨. ನಿಮೀಲನ
(ಅ) ತೆರೆಯುವಿಕೆ (ಆ) ಮುಳುಗಿ ಹೋಗುವುದು (ಇ) ಚಂಚಲತೆ (ಈ) ಮುಚ್ಚಿಕೊಳ್ಳುವುದು.

೩. ಈಡು
(ಅ) ಸರಿಸಮಾನ (ಆ) ಸವಿ (ಇ) ಮನೆ (ಈ) ತಿಳಿಯುವಿಕೆ.

೪. ಬೀಡು
(ಅ) ತ್ಯಜಿಸು (ಆ) ವಸತಿ (ಇ) ತಾಂಬೂಲ (ಈ) ಚದರಿಸು.

೫. ನಿಮೇಷ
(ಅ) ಕಣ್ಮುಚ್ಚಿ ತೆರೆಯುವುದು (ಆ) ಕುಂಗಿ (ಇ) ಆಲಸ್ಯ (ಈ) ವಾಸಸ್ಥಾನ.

೬. ಅವಲೋಕನ
(ಅ) ಪರಲೋಕಕ್ಕೆ ಹೋಗುವಿಕೆ (ಆ) ನೋಡುವುದು (ಇ) ಕಣ್ಮುಸಕು (ಈ) ಹೊರಡುವುದು.

೭. ಉಪೋಷಣೆ
(ಅ) ಚೆನ್ನಾಗಿ ಊಟಮಾಡುವುದು (ಆ) ಬೊಗಸೆಯಲ್ಲಿ ನೀರುಕುಡಿ (ಇ) ಉಪವಾಸ (ಈ) ತಿರಸ್ಕಾರ.

೮. ಪ್ರೋಕ್ಷಣೆ
(ಅ) ಕಳಿಸುವಿಕೆ (ಆ) ಪರೀಕ್ಷಿಸುವುದು (ಇ) ಪ್ರೀತಿ (ಈ) ಸಿಂಪಡಿಸುವುದು.

೯. ಗೀಳು
(ಅ) ಹಂಬಲ (ಆ) ಗೆರೆಹಾಕು (ಇ) ಗೊಂದಲ (ಈ) ಕೆಳ ತರಗತಿಯದು.

೧೦. ಕ್ಷಿಪ್ರ
(ಅ) ಹೊಲ (ಆ) ಒಗೆತ (ಇ) ಬೇಗನೆ (ಈ) ಕ್ಷುಲ್ಲಕ.

೧೧. ಕ್ಷಿಪಣಿ
(ಅ) ಒಂದು ಆಧುನಿಕ ಅಸ್ತ್ರ (ಆ) ಚಿಲ್ಲರೆ (ಇ) ವಿರೋಧ (ಈ) ಸೊರಗಿ ಹೋಗುವುದು.

೧೨. ನಿಲುವೆ
(ಅ) ತಡೆಹಾಕುವುದು (ಆ) ಇರವು (ಇ) ನಿರ್ಧಾರ (ಈ) ಉದ್ದವಾದ.

'ಶಬ್ದ ಭಾಂಡಾರ' ದ ಸರಿಯಾದ ಅರ್ಥಗಳು

೧. ಉನ್ಮೀಲನ
(ಇ) ತೆರೆಯುವಿಕೆ; ಅರಳುವಿಕೆ; ಎಚ್ಚರಗೊಳ್ಳುವಿಕೆ. ಉದಾ: ಸರೋವರದ ಕಮಲಗಳು ಮೆಲ್ಲಮೆಲ್ಲಗೆ ಉನ್ಮೀಲನಗೊಂಡವು. (ಗುಣವಾಚಕ—ಉನ್ಮೀಲಿತ) [ಸಂಸ್ಕೃತ]

೨. ನಿಮೀಲನ
(ಈ) ಮುಚ್ಚಿಕೊಳ್ಳುವುದು; ಕಣ್ಮರೆಯಾಗುವುದು; ಕಣ್ಣು ಮಿಟುಕಿಸುವುದು. (ಗುಣವಾಚಕ–ನಿಮೀಲಿತ). ಉದಾ: ಅವಳ ಕಣ್ಣುಗಳು ನಿಮೀಲಿತವಾಗಿದ್ದವೆಂದರೆ ಮುಚ್ಚಿದ್ದವು. [ಸಂಸ್ಕೃತ]

೩. ಈಡು
(ಅ) ಸರಿಸಮ (ಅವನಿಗೆ ಇವನು ಈಡೆ?); ಧಾರಾಳ (ಈಡಾಗಿ ಊಟ ಹೊಡೆದ); ಇಡುವ ವಸ್ತು, ಒತ್ತೆ; ಕೋವಿಗೆ ತುಂಬುವ ಮದ್ದು ಅಥವಾ ತೋಟಿ (ಅತನ ಈಡು ತಪ್ಪದು) [ಕನ್ನಡ]

೪. ಬೀಡು
(ಅ) ವಸತಿ, ಮನೆ, ಪಾಳೆಯ, ಶಿಬಿರ (ಇದು ವೀರನಾರಾಯಣನ ಬೀಡು); ಜನಸಮೂಹ; ಒಂದು ಬಗೆಯ ಉಕ್ಕು. [ಕನ್ನಡ]

೫. ನಿಮೇಷ
(ಅ) ಕಣ್ಮುಚ್ಚಿತೆರೆಯುವಿಕೆ; ನಿಮಿಷ; ಕ್ಷಣ. ಅನಿಮೇಷನೇತ್ರ = ರೆಪ್ಪೆ ಒಡಿಯದ ಕಣ್ಣು [ಸಂಸ್ಕೃತ]

೬. ಅವಲೋಕನ
(ಅ) ನೋಡುವಿಕೆ, ನೋಟ; ಪರೀಕ್ಷಿಸುವಿಕೆ; (ಎತ್ತರದಲ್ಲಿ ನಿಂತು) ಪರಿಶೀಲಿಸುವುದು; ಕಣ್ಣು. [ಸಂಸ್ಕೃತ—ಅವ+ಲೋಕನ]

೭. ಉಪೋಷಣೆ
(ಇ) ಉಪವಾಸ, ನಿರಾಹಾರ [ಸಂಸ್ಕೃತ]

೮. ಪ್ರೋಕ್ಷಣೆ
(ಈ) ನೀರು ಸಿಂಪಡಿಸುವುದು, ತಳಿಯುವುದು; (ಪವಿತ್ರ ಜಲದಿಂದ ಸಿಂಪಡಿಸಿ) ಶುದ್ಧೀಕರಿಸುವುದು; ಪ್ರಾಣಿಗಳನ್ನು ಯಜ್ಞದಲ್ಲಿ ಬಲಿಕೊಡುವುದು. [ಸಂಸ್ಕೃತ]

೯. ಗೀಳು
(ಅ) ಅತಿ ಹಂಬಲ (ಅವನಿಗೆ ಮದುವೆಯದೇ ಗೀಳು ಹಿಡಿದಿದೆ); ಆರ್ಭಟ, ಗೋಳು; ಕೂಗಾಟ. (ಗೀಳಿಡು = ಗರ್ಜಿಸು) [ಕನ್ನಡ].

೧೦. ಕ್ಷಿಪ್ರ
(ಇ) ಬೇಗನೆ; ಶೀಘ್ರವಾದ; ಬಿಲ್ಲಿನಂತೆ ಸುಲಭವಾಗಿ ಬಾಗುವ [ಸಂಸ್ಕೃತ].

೧೧. ಕ್ಷಿಪಣಿ
(ಅ) ಒಂದು ಆಧುನಿಕ ಅಸ್ತ್ರ [ಇಂಗ್ಲೀಷಿನಲ್ಲಿ ಮಿಸೀಲ್], ದೂರದಿಂದ ಒಗೆಯುವ ಅಸ್ತ್ರ; ದೋಣಿನಡೆಸುವ ಹುಟ್ಟು; ಚಾಟಿಯ ಏಟು [ಸಂ. ಕ್ಷಿಪ್ = ಒಗೆ, ಹಾಕು ಎಂಬ ಧಾತುವಿನಿಂದ]

೧೨. ನಿಲುಮೆ
(ಅ) ಇರವು, ನಿಲುವು; ಸ್ಥಿರವಾದ ಅಭಿಮತ (ಈ ವಿಷಯದಲ್ಲಿ ನನ್ನ ನಿಲುಮೆ ಇದೆಂದರೆ ನನ್ನ ಅಭಿಮತ ಇದು) [ಕನ್ನಡ ನಿಲ್ ಧಾತುವಿನಿಂದ]

ನಿಮ್ಮ ಶಬ್ದಶಕ್ತಿಯ ತರಗತಿ

ನೀವು ಎಷ್ಟು ಶಬ್ದಗಳಿಗೆ ಅರ್ಥ ಆರಿಸಿದ್ದು ಸರಿಯಾಗಿದೆಯೆಂದು ಎಣಿಸಿ ಕೆಳಗಿನಂತೆ ನಿಮ್ಮ ಶಬ್ದಶಕ್ತಿಯ ತರಗತಿಗಳನ್ನು ಅರಿಯಿರಿ.

೭—೮ ಸರಿಯಿದ್ದರೆ....ಸಾಧಾರಣ
೯ - ೧೦ ,, ...ಉತ್ತಮ
೧೦ - ೧೨ ,, ...ಅತ್ಯುತ್ತಮ



ಜಹಾಂಗೀರ ಟಾಟಾ :
ಭಾರತದ ಉದ್ಯೋಗ ಚಕ್ರವರ್ತಿ

೧೦೦ ಕೋಟಿ ಬಂಡವಳದ ಅವರ ಸಂಸ್ಥೆ ಏಶಿಯದಲ್ಲೇ ದೊಡ್ಡದು.

ನೀವು ಭಾರತೀಯರಾಗಿದ್ದರೆ ಪ್ರತಿದಿನ ನಿಮಗೆ ಒಂದಲ್ಲ ಒಂದು ರೀತಿ ಟಾಟಾರ ಸಂಪರ್ಕ ಬಂದೇ ಬರುವ ಸಂಭವ ಹೆಚ್ಚು. ನೀವು ಉಟ್ಟ ಬಟ್ಟೆ ಟಾಟಾ ಗಿರಣಿಯಿಂದ ಬಂದಿರಬಹುದು; ನೀವು ಮೈತೊಳೆದುಕೊಳ್ಳುವ ಇಲ್ಲವೆ ಬಟ್ಟೆ ಒಗೆಯುವ ಸಾಬೂನೋ ತಲೆಗೆ ಹಚ್ಚಿಕೊಳುವ ತೈಲವೋ ಟಾಟಾ ಕಾರಖಾನೆಯ ಕೊಡುಗೆಯಾಗಿರಬಹುದು ; ನೀವು ಓಡಾಡುವ ರೇಲು ಗಾಡಿಯನ್ನು ಟಾಟಾ ಎಂಜಿನು ಎಳೆಯುತ್ತಿರಬಹುದು ; ನೀವು ಉಳುವ ರಂಟೆ ಟಾಟಾ ಉಕ್ಕಿನಿಂದಾಗಿರಬಹುದು.

ಭಾರತದ ಆರ್ಥಿಕ ಜೀವನದಲ್ಲಿ ಟಾಟಾರವರ ಸಾಧನೆ ಅತ್ಯದ್ಭುತವಾದುದು. ಅದು ಭಾರತದಲ್ಲಿ ಏಕೆ ಏಶಿಯದಲ್ಲೇ-ಅತಿ ದೊಡ್ಡ ಔದ್ಯಮಿಕ ಸಂಸ್ಥೆಯಾಗಿದೆ. ದೇಶಕ್ಕೆ ಅತ್ಯಂತ ಅವಶ್ಯಕ ಪದಾರ್ಥಗಳಾದ ಉಕ್ಕು, ರಾಸಾಯನಿಕಗಳು, ಜಲವಿದ್ಯುತ್ತು ಮತ್ತು ಎಂಜಿನಿಯರಿಂಗ್ ಕೌಶಲವನ್ನು ಟಾಟಾರವರು ಒದಗಿಸುತ್ತಾರೆ. ಇಷ್ಟು ದೊಡ್ಡ ಸಂಸ್ಥೆಯ ಹಿಂದಿರುವ ವ್ಯವಹಾರ ಕುಶಲರೇ ಜಹಾಂಗೀರ ರತನಜಿ ಟಾಟಾ.

ಟಾಟಾ ಸಂಸ್ಥೆಗಳ ಇಂದಿನ ಬಂಡವಾಳ ರೂ. ೧೦೦ ಕೋಟಿಗೂ ಮಿಕ್ಕಿದೆ. ಜಮಶೇದಪುರದ ಅವರ ಉಕ್ಕಿನ ಕಾರಖಾನೆ ಕಾಮನ್‌ವೆಲ್ತಿನಲ್ಲೇ ದೊಡ್ಡದು. ಭಾರತದ ಅರ್ಧ ಉಕ್ಕಿನ ಅಗತ್ಯವನ್ನು (೧೦,೦೦,೦೦೦ ಟನ್) ಅದೇ ಪೂರೈಸುತ್ತದೆ. ಅದನ್ನು ೧೯೬೧ ರೊಳಗೆ ೨೦,೦೦,೦೦೦ ಟನ್ನಿಗೇರಿಸುವ ಯೋಜನೆಯಿದೆ. ೧೯೧೧ ರಲ್ಲಿ ಸ್ಥಾಪಿತವಾದ ಈ ಕಾರಖಾನೆ ಭಾರ

ತದ ಮೊಟ್ಟಮೊದಲ ಉಕ್ಕಿನ ಕಾರಖಾನೆ.

ಈಚೆಗೆ ಮುಂಬಯಿಯಲ್ಲಿ ಸ್ಥಾಪಿತವಾದ ಎರಡು ಕೋಟಿ ವೆಚ್ಚದ ಟಾಟಾ ರಸಾಯನಿಕ ಕಾರಖಾನೆ ಭಾರತದ ಬೇಡಿಕೆಯಲ್ಲಿ ಅರ್ಧದಷ್ಟು ಸೋಡಾಆ್ಯಶ್ ಉತ್ಪಾದಿಸುತ್ತಿದೆ. ಏಶಿಯದಲ್ಲೇ ಅತಿ ದೊಡ್ಡವೆನಿಸಿಕೊಂಡ ಅಣೆಕಟ್ಟುಗಳನ್ನು ಮುಂಬಯಿ ಬಳಿ ಕಟ್ಟಿ ಟಾಟಾರವರು ಉತ್ಪಾದಿಸುತ್ತಿರುವ ವಿದ್ಯುತ್ತು ಭಾರತದ ವಿದ್ಯುತ್ ಪೂರೈಕೆಯಲ್ಲಿ ಕಾಲಂಶಕ್ಕಿಂತ ಹೆಚ್ಚು ಒದಗಿಸುತ್ತದೆ. ಜಮಶೇದಪುರದ ಟಾಟಾ ರೇಲ್ವೆ ಎಂಜಿನ್ ಕಾರಖಾನೆ ವರ್ಷಕ್ಕೆ ೧೦೦ ರೇಲ್ವೆ ಎಂಜಿನುಗಳನ್ನು ಉತ್ಪಾದಿಸತಕ್ಕದ್ದು.

ಇವಲ್ಲದೆ ಇತರ ಎಷ್ಟೋ ಉದ್ದಿಮೆಗಳಲ್ಲಿಯೂ ಟಾಟಾರ ಕೈ ಇದೆ.

ಟಾಟಾ ಉದ್ದಿಮೆಗಳ ಕಥೆ ೯೦ ವರ್ಷಗಳ ಹಿಂದೆ, ೧೮೬೮ ರಲ್ಲಿ, ಜಮಶೇದಜಿ ಟಾಟಾರವರು ಒಂದು ಚಿಕ್ಕ ಜವಳಿ ಗಿರಣಿ ಪ್ರಾರಂಭಿಸಿದಾಗ ಆರಂಭವಾಯಿತು. ಪಾಶ್ಚಾತ್ಯ ಉತ್ಪಾದನ ಪದ್ಧತಿಯನ್ನು ಅಳವಡಿಸಿಕೊಂಡ ಅವರ ಗಿರಣಿ ಯಶಸ್ವಿಯಾಯಿತು. ಬೇರೆ ಗಿರಣಿಗಳನ್ನು ಅವರು ಪ್ರಾರಂಭ ಮಾಡಿದರು. ಜಮಶೇದಜಿಯವರು ೧೯೦೪ ರಲ್ಲಿ ಮರಣ ಹೊಂದಿದಾಗ ಟಾಟಾರವರು ಭಾರತದ ಅತಿ ದೊಡ್ಡ ಉದ್ದಿಮೆಗಾರರಾಗಿದ್ದರು.

ಜಮಶೇದಜಿಯ ಮರಣಾನಂತರ ಅವರ ಕಕ್ಕನ ಮಗ ರತನಜಿಯವರು ಟಾಟಾ ಉದ್ದಿಮೆಗಳ ಭಾರವನ್ನು ವಹಿಸಿದರು. ಭಾರತದ ಪ್ರಥಮ ಉಕ್ಕಿನ ಕಾರಖಾನೆ ಕಟ್ಟುವ ಕನಸು ಕಂಡು ಅದನ್ನು ನನಸು ಮಾಡಿದವರವರು. ಅವರೇ ಟಾಟಾ ಜಲವಿದ್ಯುತ್ ಯೋಜನೆಗಳ ಕರ್ತರು ಕೂಡ.

ಜಹಾಂಗೀರ ಟಾಟಾ ರತನಜಿಯವರ ಮಗ. ೧೯೦೪ ಜುಲೈ ೨೯ ರಲ್ಲಿ ಪ್ಯಾರೀಸಿನಲ್ಲಿ ಹುಟ್ಟಿದ ಜಹಾಂಗೀರರು ಟಾಟಾರವರ ಪರಂಪರೆಯನ್ನು ಪೂರ್ವಜರಿಗಿಂತಲೂ ಮಿಗಿಲಾಗಿ ಮುಂಬರಿಸಿದರು. ಹದಿನೆಂಟನೇ ವಯಸ್ಸಿನಲ್ಲೇ ಟಾಟಾ ಕಂಪನಿಯಲ್ಲಿ ನೌಕರರಾಗಿ ಜೀವನರಂಗಕ್ಕಿಳಿದ ಅವರು ೧೯೨೬ ರೊಳಗೆ ಅದರ ಡೈರೆಕ್ಟರರಾಗಿ, ೧೯೩೮ ರಲ್ಲಿ ಅಧ್ಯಕ್ಷ ಪದಕ್ಕೆ ಆರಿಸಲ್ಪಟ್ಟರು.

ಫ್ರೆಂಚ ತಾಯಿ, ಭಾರತೀಯ ಪಾರ್ಶಿ ತಂದೆಗಳ ಮಗುವಾದ ಜಹಾಂಗೀರರು ಅತ್ಯಾಧುನಿಕ ಉದಾತ್ತ ವಿಚಾರ ಸರಣಿಯವರು. ಅವರಿಗೆ ವಿಮಾನಯಾನದಲ್ಲಿ ತುಂಬ ಆಸ್ಥೆ. ಭಾರತದಲ್ಲಿ ವೈಮಾನಿಕ ಲೈಸೆನ್ಸು ಪಡೆದವರು ಜಹಾಂಗೀರರೇ. ಅವರು ಭಾರತದ ಮೊಟ್ಟಮೊದಲ ವಿಮಾನ ಸಾರಿಗೆಯ ಸಂಸ್ಥೆಯನ್ನೂ ಕಟ್ಟಿ ಯಶಸ್ವಿಯಾಗಿ ಮಾಡಿ ತೋರಿಸಿದ್ದಾರೆ.

ಅವರು ಅಧ್ಯಕ್ಷಪದಕ್ಕೇರಿದ ಕೆಲ ಸಮಯದಲ್ಲೇ ಎರಡನೇ ಮಹಾಯುದ್ಧಾರಂಭವಾಯಿತು. ಆಗ ಟಾಟಾ ಉಕ್ಕಿನ ಕಾರಖಾನೆಯನ್ನು ಅವರು ವಿಸ್ತರಿಸಿದರು.

ಟಾಟಾರವರು ಕೂಲಿಕಾರರಿಗೆ ಒದಗಿಸಿದ ಸೌಕರ್ಯಗಳನ್ನು ಬೇರಾವ ಉದ್ದಿಮೆಗಾರನೂ ಒದಗಿಸಿಲ್ಲ. ತಮ್ಮ ಹತ್ತಾರು ಸಾವಿರ ಕೆಲಸಗಾರರಿಗೆ ಅವರು ಭಾರತದಲ್ಲಿ ಮತ್ತಾವನೂ ಕೊಡದಷ್ಟು ಸಂಬಳ ಕೊಡುತ್ತಿದ್ದಾರೆ. ಮೇಲಾಗಿ ಅಗ್ಗ ಬಾಡಿಗೆಯ ಮನೆಗಳು, ಪುಕ್ಕಟೆ ಔಷಧ, ಆಟಪಾಟಗಳ ಸೌಕರ್ಯ, ಚಲಚ್ಚಿತ್ರ ಪ್ರದರ್ಶನಗಳು ಇವೆಲ್ಲವನ್ನೂ ಒದಗಿಸಿದ್ದಾರೆ. ಜಮಶೇದಪುರದಲ್ಲಿ ಕಾರಖಾನೆಯ ಕೆಲಸಗಾರರಿಗಾಗಿ ಅತ್ಯಾಧುನಿಕವಾದ ನಗರವನ್ನೇ ಕಟ್ಟಿದ್ದಾಗಿದೆ. ಭಾರತದಲ್ಲಿ ಕೆಲಸಗಾರರಿಗೆ ಎಲ್ಲಾದರೂ ಫ್ಲಶ್‌ಪಾಯಖಾನೆ, ವಿಶಾಲ ಮನೆಗಳು, ಶುದ್ಧ ನೀರು, ಒಳ್ಳೇ ರಸ್ತೆಗಳು ದೊರಕಿರುವುದಾದರೆ ಅದು ಟಾಟಾನಗರದಲ್ಲಿ. ಅಲ್ಲಿ ೪೪ ಧರ್ಮಾರ್ಥ ಶಾಲೆಗಳಲ್ಲಿ ಎಂಟು ಭಾಷೆಗಳಲ್ಲಿ ಕೆಲಸಗಾರರ ಮಕ್ಕಳಿಗೆ ವಿದ್ಯಾದಾನವಾಗುತ್ತಿದೆ. ಕೆಲ ವರ್ಷಗಳ ಹಿಂದೆ ಅವರು ಕೆಲಸಗಾರರಿಗೆ ಕಂಪನಿಯ ಲಾಭದಲ್ಲಿ ಪಾಲು ಕೊಡುವ ಹೊಸ ಪದ್ಧತಿಯನ್ನು ಬಳಕೆಗೆ ತಂದರು. ಈ ಎಲ್ಲ ಸುಧಾರಣೆಗಳಿಗೆ ಜಹಾಂಗೀರರೇ ಮುಖ್ಯ ಪ್ರೇರಕ ಶಕ್ತಿಯಾಗಿದ್ದಾರೆ.

ಟಾಟಾರವರ ಪ್ರಗತಿಪರ ವಿಚಾರಗಳು ಅಲ್ಲಿಗೇ ನಿಂತಿಲ್ಲ. ಪಾರ್ಶಿಗಳು ದಾನಬುದ್ಧಿಗೆ ಹೆಸರಾ

ದವರು. ಆದರೆ ಟಾಟಾರ ದಾನಬುದ್ಧಿ ಅಪರೂಪ ವರ್ಗದ್ದು. ಟಾಟಾ ಕುಟುಂಬಕ್ಕೆ ಸೇರಿದ ಕಂಪನಿಯ ಪಾಲುಗಳಲ್ಲಿ ನೂರಕ್ಕೆ ಎಂಭತ್ತೈದರಷ್ಟು ದಾನಧರ್ಮಕ್ಕಾಗಿ ವಿಶ್ವಸ್ತನಿಧಿಯಾಗಿ ರೂಪಾಂತರಗೊಳಿಸಲ್ಪಟ್ಟಿದೆ. ಈ ನಿಧಿಯಿಂದಲೇ ಭಾರತೀಯ ವಿಜ್ಞಾನ ಸಂಸ್ಥೆ ನಡೆಯುತ್ತಿದೆ. ಈ ಸಂಸ್ಥೆಯ ಕಟ್ಟಡಕ್ಕೇ ೮೦ ಲಕ್ಷ ರೂಪಾಯಿ ವೆಚ್ಚ ಮಾಡಲಾಗಿದೆ. ವಿಜ್ಞಾನ ಪ್ರಗತಿಗೆ ಖಾಸಗಿವ್ಯವಹಾರಸ್ಥರು ನೆರವಾಗುವ ಅಗತ್ಯವನ್ನು ಮೊಟ್ಟಮೊದಲು ಕಂಡುಕೊಂಡವರು ಟಾಟಾರವರೇ. ಇದಲ್ಲದೆ ಮುಂಬಯಿಯಲ್ಲಿ ಟಾಟಾ ಸ್ಮಾರಕ ಆಸ್ಪತ್ರೆ, ರಕ್ತ ರೋಗಗಳ ವಿಷಯ ಸಂಶೋಧನೆ ನಡೆಸುತ್ತಿರುವ ಒಂದು ಸಂಸ್ಥೆ, ಸಮಾಜ ಸೇವಾ ವಿದ್ಯಾಲಯ ಮತ್ತು ವಿದೇಶಗಳಲ್ಲಿ ಭಾರತೀಯ ವಿದ್ಯಾರ್ಥಿಗಳಿಗಾಗಿ ಶಿಷ್ಯವೃತ್ತಿಗಳು ಟಾಟಾ ಧರ್ಮನಿಧಿಯಿಂದ ನಡೆಯುತ್ತಿವೆ.

ಒಂದು ನೂರು ಕೋಟಿ ಬಂಡವಳದ ಸಂಸ್ಥೆಗಳ ಈ ನಾಯಕ ಮುಂಬಯಿಯಲ್ಲಿ ಒಂದು ಸಾಮಾನ್ಯ ಮನೆಯಲ್ಲಿ ಸರಳ ಜೀವನ ನಡೆಸುತ್ತಿದ್ದಾರೆ. ಅವರ ಪತ್ನಿ ಥೆಲ್ಮಾ ವಿಕಾಜಿ ಗಂಡನಿಗೆ ತಕ್ಕ ಪ್ರಗತಿಪರ ವಿಚಾರದವರೇ. ಜಹಾಂಗೀರರಿಗೆ ವಿಮಾನಯಾನದ ಮೋಹ ಬಹಳ. ಉಕ್ಕಿನ, ಎಂಜಿನ್ನುಗಳ, ರಸಾಯನಿಕಗಳ, ಜವಳಿಯ, ತೈಲ-ಸಾಬೂನುಗಳ, ಸಿಮೆಂಟಿನ, ಗ್ಲಿಸರೀನಿನ, ಔಷಧ ಸಾಮಗ್ರಿಗಳ ಅಸಂಖ್ಯ ಕಂಪನಿಗಳನ್ನು ನಡೆಸುವ ಕಾರ್ಯಭಾರದ ನಡುವೆಯೂ ಜಹಾಂಗೀರರು ಹೊತ್ತು ದೊರಕಿಸಿಕೊಂಡು ತಮ್ಮ ಸ್ವಂತ ವಿಮಾನವನ್ನು ತಾವೇ ನಡೆಸಿ ಆನಂದಪಡುತ್ತಾರೆ.

ಟಾಟಾ ಸಂಸ್ಥೆ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲೂ ಸಾಕಷ್ಟು ತ್ಯಾಗ ಮಾಡಿದೆ. ಪ್ರಧಾನ ಮಂತ್ರಿ ನೆಹರೂರವರೊಡನೆ ಜಹಾಂಗೀರರಿಗೆ ಬಹಳ ಹೊಕ್ಕು ಬಳಕೆ. ೧೯೪೨ರಲ್ಲಿ ಮಹಾತ್ಮಾ ಗಾಂಧಿಯವರು "ಚಲೇಜಾವ್" ಚಳವಳಿ ಹೂಡಿದಾಗ ಟಾಟಾರವರು ಮಾಡಿದ ಕೆಲಸ ಚಿರಸ್ಮರಣೀಯವಾದುದು. ಮಹಾತ್ಮಾ ಗಾಂಧಿಯವರನ್ನು ಸೆರೆ ಹಿಡಿದೊಡನೆ ಟಾಟಾ ಕೆಲಸಗಾರರು ಪ್ರತಿಭಟನಾರ್ಥವಾಗಿ ಸುದೀರ್ಘ ಸಂಪು ಹೂಡಿದರು. ಆಗ ಟಾಟಾ ಕೂಲಿಕಾರರ ಬೆಂಬಲಕ್ಕೆ ನಿಂತರು. ಈ ಸಂಪಿನಿಂದ ಟಾಟಾರವರಿಗೆ ೧೫೦ ಲಕ್ಷ ರೂಪಾಯಿ ಹಾನಿಯಾಯಿತು. ದೇಶಭಕ್ತ ಟಾಟಾ ಅದನ್ನು ಲೆಕ್ಕಿಸಲಿಲ್ಲ. ಮೂರು ತಿಂಗಳ ಸಂಪಿನ ಅವಧಿಯ ಸಂಬಳವನ್ನು ಕೂಲಿಕಾರರಿಗೆ ಬೋನಸ್ ಎಂದು ಎಣಿಸಿಕೊಟ್ಟು ಕಾರಖಾನೆಯನ್ನು ಮುಚ್ಚಿದರು.

ಸ್ವಾತಂತ್ರ್ಯ ಬಂದ ಮೇಲೆ ದೇಶದ ಔದ್ಯೋಗಿಕ ಅಭಿವೃದ್ಧಿಯ ಯತ್ನಗಳಲ್ಲಿ ಟಾಟಾ ಯಾವಾಗಲೂ ಮುಂದಾಗಿರುತ್ತಾರೆ. ೧೯೫೫ ರಲ್ಲಿ ರಾಷ್ಟ್ರಪತಿಗಳು ಅವರಿಗೆ ಪದ್ಮ ವಿಭೂಷಣ ಪದವಿಯಿತ್ತು ಗೌರವಿಸಿದರು.

ನೀವು ಈ ಕಥೆ ಕೇಳಿದ್ದೀರಾ?

ಅತ್ತೆಗೆ ಗೊತ್ತಿಲ್ಲದಿದ್ದ ಉಪಾಯ

ಬಹಳ ವರ್ಷ ಕಾಡೀ ಬೇಡೀ ಅತ್ತೂ ಕರೆದೂ ಮಗನನ್ನು ಮದುವೆಗೆ ಒಪ್ಪಿಸಿದ್ದಾಯಿತು. ಸೊಸೆ ಮನೆಗೆ ಬಂದಳು. " ಕೊನೆಗೊಮ್ಮೆ ನಾನೂ ಅತ್ತೆಯಾದೆನಲ್ಲ" ಎಂದು ಮುದುಕಿ ಉಬ್ಬಿದಳು.

ಅತ್ತೆಯಾದ ಮೇಲೆ ಅತ್ತೆಯ ಅಧಿಕಾರ ತೋರಿಸಬೇಡವೆ? ಅವಳು ತನ್ನ ಸೊಸೆಯ ಮೇಲೆ ಹೇಗೆ ಅಧಿಕಾರ ಚಲಾಯಿಸಬೇಕೆಂದು ಯೋಚಿಸುತ್ತ ತನ್ನ ಅತ್ತೆ ತನಗೆ ಮಾಡಿದ್ದನ್ನು ನೆನೆದುಕೊಂಡು ಅದನ್ನೇ ತನ್ನ ಸೊಸೆಯ ಮೇಲೆ ಪ್ರಯೋಗಿಸಬೇಕೆಂದು ನಿರ್ಧರಿಸಿಕೊಂಡಳು.

ಸೊಸೆ ಮನೆಗೆ ಬಂದ ಕೆಲ ದಿನಗಳಲ್ಲೇ ಒಂದು ದಿನ ಸಂಜೆ ಅವಳ ತವರುಮನೆಯವರು ಕರೆಯಲಿಕ್ಕೆ ಬಂದರು. "ಅತ್ತೇ, ಅಪ್ಪ ಕರೆಕಳಿಸಿದ್ದಾನೆ. ಎರಡು ದಿನ ಹೋಗಿ ಬರಲೇ ?" ಸೊಸೆ ಅತ್ತೆಯನ್ನು ಕೇಳಿದಳು

ಅತ್ತೆಗೆ ಇಂಥದೇ ಸಂದರ್ಭದಲ್ಲಿ ತನ್ನ ಅತ್ತೆ ಮಾಡಿದ್ದು ನೆನಪಾಯಿತು. ಅವಳು ಅಡಿಗೆ ಮನೆಗೆ ಹೋಗಿ ಸಾಸಿವೆಯ ಕರಡಿಗೆಯನ್ನು ತೆಗೆದು ಅದನ್ನು ಕೈಬಿಟ್ಟಳು. ಕರಡಿಗೆ ದೊಪ್ಪನೆ ಬಿದ್ದು ಸಾಸಿವೆಯೆಲ್ಲ ಚೆಲ್ಲಾಪಿಲ್ಲಿಯಾಯಿತು.

" ಸಾಸಿವೆ ಕೆಳಗೆ ಬಿತ್ತಲ್ಲವ್ವಾ, ಅದನ್ನಷ್ಟು ಆರಿಸಿ ಕರಡಿಗೆಯಲ್ಲಿ ತುಂಬಿಟ್ಟು ಆ ಮೇಲೆ ಬೇಕಾದರೆ ತವರುಮನೆಗೆ ಹೋಗು" ಎಂದು ತನ್ನತ್ತೆ ತನಗೆ ಹೇಳಿದ್ದನ್ನೇ ಸೊಸೆಗೆ ಒಪ್ಪಿಸಿದಳು. ತನ್ನತ್ತೆ ತನಗೆ ಹೀಗೆ ಮಾಡಿದಾಗ ತಾನು ಒಂದೊಂದೇ ಸಾಸಿವೆಯನ್ನು ಆರಿಸಿ ಕರಡಿಗೆಯಲ್ಲಿ ಹಾಕಬೇಕಾದರೆ ಮಧ್ಯರಾತ್ರಿಯಾಗಿತ್ತು. ಕರೆಯಲು ಬಂದವರು ತಿರುಗಿ ಹೋದದ್ದರಿಂದ ತನಗೆ ಆ ಸಲ ತವರುಮನೆಗೆ ಹೋಗಲಿಕ್ಕೇ ಆಗಿರಲಿಲ್ಲ.

ಸೊಸೆ ಒಂದು ಕ್ಷಣ ಮುಖ ಸೊಟ್ಟಮಾಡಿಕೊಂಡಳು ಆ ಮೇಲೆ ಒಂದು ಕಸಬರಿಗೆ ತಂದಳು. ಚೆಲ್ಲಿದ ಸಾಸಿವೆಯನ್ನು ಉಡುಗಿ ಬಂದಷ್ಟನ್ನು ಕರಡಿಗೆಯಲ್ಲಿ ತುಂಬಿದಳು. ಉಳಿದದ್ದನ್ನು ಕಸದ ಮೂಲೆಗೆ ಒಂದಿಸಿದಳು. "ಅತ್ತೇ, ತುಂಬಿಟ್ಟಿದ್ದೇನೆ !" ಎಂದು ಹೇಳಿ ಉತ್ತರದ ದಾರಿ ಕಾಯದೆ ದಡದಡನೆ ಇಳಿದು ತವರಿನವರ ಸಂಗಡ ಹೋಗಿಬಿಟ್ಟಳು.

ಅತ್ತೆ ಮೂಗಿನ ಮೇಲೆ ಬೆರಳಿಟ್ಟು, " ಆಹಾ ! ನನಗೆ ಈ ಉಪಾಯ ಹೊಳೆಯದೆ ಹೋಯಿತಲ್ಲ ! " ಎಂದು ಪರಿತಪಿಸಿದಳು.

ಮೂವರು ಹೆಂಡಂದಿರ ಕಥೆ

ಆತ ದೊಡ್ಡ ಶ್ರೀಮಂತ ಆದರೆ ಅವನ ದುರ್ದೈವಕ್ಕೆ ಉಚ್ಚಾರ ಸರಿಯಾಗಿಲ್ಲದ ಹೆಂಡತಿ ಅವನಿಗೆ ಸಿಕ್ಕಿದಳು. ಮತ್ತೇನೂ ಇಲ್ಲ ಅವಳಿಗೆ "ಸ" ಎಂಬ ಅಕ್ಷರ ಬರುತ್ತಿದ್ದಿಲ್ಲ "ಸುಳ್ಳು" ಅನ್ನೋದಕ್ಕೆ "ಚುಳ್ಳು" ಅನ್ನುತ್ತಿದ್ದಳು.

ಶ್ರೀಮಂತ ಇನ್ನೊಂದು ಮದುವೆ ಮಾಡಿಕೊಂಡ ಆ ಮೇಲೆ ಅವನಿಗೆ ಗೊತ್ತಾಯಿತು— ಈಕೆಗೆ " ಸ " ಬರುತ್ತದೆ, ಆದರೆ "ಡ" ಬರೋದಿಲ್ಲ–ಅಂತ ''ಡಬ್ಬಿ''ಯನ್ನು ಅವಳು "ಯಬ್ಬಿ" ಅಂತ ಉಚ್ಚರಿಸುತ್ತಿದ್ದಳು.

ಶ್ರೀಮಂತ ಮತ್ತೊಬ್ಬಳನ್ನು ಮದುವೆಯಾದ. ಅವನ ಹಣೇಬರಹಕ್ಕೆ ಇವಳಿಗೆ "ಡ"ದ ಹತ್ತಿರ ''ದ'' ''ರ'' ಅಥವಾ "ಲ" ಬಂದರೆ ಅವಷ್ಟೂ ಯಕಾರವಾಗಿ ಬಿಡುತ್ತಿದ್ದವು.

ಕೊನೆಗೆ ಶ್ರೀಮಂತ ತನ್ನ ಅದೃಷ್ಟವೇ ಇಷ್ಟು ಎಂದು ಮೂರಕ್ಕೆ ಮುಕ್ತಾಯ ಮಾಡಿದ.

ಒಂದು ದಿನ ಯಾರೋ ದೊಡ್ಡ ಮನುಷ್ಯರು ಮನೆಗೆ ಬಂದರು. ಅವರ ಮುಂದೆ ತನ್ನ ಹೆಂಡಂದಿರ ಬಣ್ಣ ಬೆಳಕಿಗೆ ಬರಬಾರದೆಂದು ಶ್ರೀಮಂತ ಅತಿಥಿಗಳು ಇರುವಷ್ಟು ಸಮಯ ಮಾತಾಡತಕ್ಕದ್ದಲ್ಲ ಎಂದು ಅವರಿಗೆ ತಾಕೀತು ಮಾಡಿದ.

ಎಲ್ಲರೂ ಊಟಕ್ಕೆ ಕೂತರು. ಒಂದು ಬದಿಗೆ ಯಜಮಾನ, ಅತಿಥಿ, ಮತ್ತೊಂದು ಬದಿಗೆ ಮೂವರು ಮಹಿಷಿಯರು. ಅಡಿಗೆಯವ ಬಡಿಸ ತೊಡಗಿದ.

ಅರ್ಧ ಊಟವಾಗಿತ್ತು. ಅಷ್ಟರಲ್ಲಿ ಅಡಿಗೆಯವ "ಸಾಸಮಿ" (ಕನ್ನಡ ಜಿಲ್ಲೆಯ ಒಂದು ವಿಶಿಷ್ಟ ಮೇಲೋಗರ) ಯನ್ನು ತಂದು ಬಡಿಸಿದ. ಅದಕ್ಕೆ ಉಪ್ಪು ಕಡಿಮೆಯಾಗಿತ್ತು.

ಮೊದಲನೆಯಾಕೆ ಅದನ್ನು ನೆಕ್ಕಿ ನೋಡಿ, ಗಂಡನ ತಾಕೀತನ್ನು ಮರೆತು, "ಚಾಚಮಿಗೆ ಉಪ್ಪು ಚಪ್ಪೆ" ಎಂದು ಟೀಕಿಸಿದಳು.

ಎರಡನೆಯವಳಿಗೆ ತನ್ನ ಸವತಿಯ ಈ ಅವಿಧೇಯತೆ ಸಹಿಸಲಿಲ್ಲ. ಅವಳು "ಮಾತಾಯಬೇಯ ಅಂತ ಹೇಯಿದ್ದಲ್ವಾ?" ಎಂದು ಎಚ್ಚರಿಕೆ ಕೊಟ್ಟಳು.

ಮೂರನೆಯವಳು "ಯಾಯಿ ಮಾತಾಯಿ, ನಾ ಮಾತಾಯೆ" ಎಂದು ತನ್ನ ವಿಧೇಯತೆಯನ್ನು ಪ್ರದರ್ಶಿಸಿದಳು.

[ಹಳ್ಳಿಗರ ಬಾಯಲ್ಲಿರುವ ಇಂಥ ಚುಟುಕು ಕಥೆಗಳನ್ನು ಓದುಗರು ಸಂಗ್ರಹಿಸಿ ಕಳಿಸಿದರೆ ಉತ್ತಮವಾಗಿದ್ದುದನ್ನು ಪ್ರಕಟಿಸಲಾಗುವುದು.]

ಪುಸ್ತಕ ವಿಭಾಗ



"ಯುಗ ಸಮಾಪ್ತಿ"

ಭಾರತದಲ್ಲಿ ಹೈದರಾಬಾದವನ್ನು ಸೇರ್ಪಡೆಗೊಳಿಸಲು ನಡೆದ ವಿಫಲ ಸಂಧಾನಗಳು
ಮತ್ತು ಪೋಲೀಸ ಕ್ರಮದ ಕಥೆ

ಶ್ರೀ ಕೆ. ಎಂ. ಮುನಶಿಯವರು ಇಂಗ್ಲೀಷಿನಲ್ಲಿ ಬರೆದ *The End of an Era* ಪುಸ್ತಕದ ಸಂಗ್ರಹ. ಪ್ರಕಾಶಕರು Bharatiya Vidya Bhavan, Bombay ರೂ. ೧೭. ೫೦

ಸಂಗ್ರಹ: ಜಿ. ಜಿ. ಹೆಗಡೆ

ಹಿನ್ನೆಲೆ

ಸ್ವತಂತ್ರ ಸಾರ್ವಭೌಮರಾಗಬೇಕೆಂಬ ನಿಜಾಮರ ಮಹತ್ವಾಕಾಂಕ್ಷೆ ಇಂದು ನಿನ್ನೆನದಾಗಿರಲಿಲ್ಲ. ೧೯೧೧ರಲ್ಲಿ ಅವರು ಪಟ್ಟಕ್ಕೆ ಬಂದಾಗಿನಿಂದ ತಮ್ಮ ಸ್ಥಾನಮಾನ ಇತರ ಭಾರತೀಯ ರಾಜಮಹಾರಾಜರಿಗಿಂತ ಬೇರೆಯಾದುದು; ತಾವು ಬ್ರಿಟಿಶ ಅರಸರಿಗೆ ಸಮಾನ ಅಂತಸ್ತಿನವರು; ರಾಜ್ಯದ ಆಂತರಿಕ ಆಡಳಿತದಲ್ಲಿ ಸರ್ವತಂತ್ರ ಸ್ವತಂತ್ರರು ಎಂದು ಸಾಧಿಸಲು ಯತ್ನಿಸಿದರು. ಆದರೆ ಬ್ರಿಟಿಶ ವೈಸರಾಯರು ಅವರ ಈ ಹೇಳಿಕೆಗಳನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸಿ ಅವರ ಭ್ರಮನಿರಸನಗೊಳಿಸುತ್ತ ಬಂದಿದ್ದರು. ವಾಸ್ತವಿಕವಾಗಿ ಮೊಗಲ ಸಾಮ್ರಾಜ್ಯದ ದಕ್ಷಿಣದ ನವಾಬರಾಗಿದ್ದ ನಿಜಾಮರ ಪೂರ್ವಜರು ಇತಿಹಾಸದಲ್ಲಿ ಎಂದೂ ಸ್ವತಂತ್ರ ರಾಜರಾಗಿದ್ದಿಲ್ಲ.

ಬ್ರಿಟಿಶರು ದೇಶವನ್ನು ವಿಚ್ಛೇದಿಸಿ ಸ್ವಾತಂತ್ರ್ಯವಿತ್ತು ಹೋಗುವರೆಂದು ೧೯೪೭ರಲ್ಲಿ ಖಾತ್ರಿಯಾದೊಡನೆ ನಿಜಾಮರು ಮತ್ತೆ ಸ್ವತಂತ್ರ ನಿರಂಕುಶಾಧಿಪತಿಗಳಾಗುವ ಹಳೇ ಕನಸನ್ನು ಕಾಣತೊಡಗಿದರು. ವಿಚಿತ್ರವೆಂದರೆ, ತಮ್ಮ ಆಳಿಕೆಯ ಕಾಲದಲ್ಲಿ ಎಂದೂ ನಿಜಾಮರ ಸ್ವಾತಂತ್ರ್ಯಕ್ಕೆ ಮನ್ನಣೆ ಕೊಡದಿದ್ದ ಬ್ರಿಟಿಶ ಅಧಿಕಾರಿಗಳೇ ಭಾರತ ಸ್ವತಂತ್ರವಾದಾಗ ಹೈದರಾಬಾದವೂ ಸ್ವತಂತ್ರವಾಯಿತೆಂದು ನಿಜಾಮರಿಗೆ ಪ್ರೇರಣೆಯಿತ್ತು ಪ್ರೋತ್ಸಾಹಿಸಿದರು. ಈ ಸಮಯದಲ್ಲಿ ಅತ್ಯಂತ ಸಮರ್ಥ ಮತ್ತು ಧೂರ್ತ ಬ್ರಿಟಿಶ ವಕೀಲರಾದ ಸರ್ ವಾಲ್ಟರ್ ಮಾಂಕ್ಟನ್ನರು ನಿಜಾಮರಿಗೆ ಸಲಹೆಗಾರರಾಗಿ ದೊರೆತರು. ಈ ಮನುಷ್ಯ ಭಾರತದ ಕೊನೆಯ ವೈಸರಾಯರಾದ ಲಾರ್ಡ್ ಮೌಂಟಬ್ಯಾಟನ್ನರ ಮಿತ್ರರೂ ಬ್ರಿಟಿಶ ಕಾನ್ಸರ್ವೆಟಿವ್ ಪಕ್ಷದ ಪ್ರಮುಖರೊಡನೆ ನಿಕಟ ಸಂಬಂಧವುಳ್ಳವರೂ ಇದ್ದು ನಿಜಾಮರ ಪರವಾಗಿ ಸಂಧಾನ ಮತ್ತು ಪ್ರಚಾರ ಮಾಡುವುದರಲ್ಲಿ ಮುಖ್ಯ ಪಾತ್ರ ವಹಿಸಿದ್ದರಿಂದ ನಿಜಾಮರ ಛಲಕ್ಕೆ ಬಲ ಬಂತು.

ಜಿನ್ನಾ ಸಾಹೇಬರು ನಿಜಾಮರಿಗೆ ಯಾವ ಸಹಾಯದ ಆಶ್ವಾಸನ ಕೊಡದೇ ನಿಜಾಮರ ಕನಸಿಗೆ ಪ್ರೋತ್ಸಾಹವಿತ್ತರೆಂಬುದು ಖಂಡಿತ. ಪಾಕಿಸ್ತಾನದಿಂದ ಸಹಾಯ ಬಂದೀತೆಂಬ ನಂಬಿಕೆ ಕೊನೆಯು ವರೆಗೂ ನಿಜಾಮರಿಗಿತ್ತೇ ಇತ್ತು.

ಹೀಗೆ ಭಾರತ ಸ್ವತಂತ್ರವಾದಾಗ ನಿಜಾಮರು ಸ್ವತಂತ್ರ ನಿರಂಕುಶ ಮುಸ್ಲಿಂ ಪ್ರಭುತ್ವವನ್ನು ಸ್ಥಾಪಿಸಲು ಬದ್ಧಪ್ರತಿಜ್ಞರಾಗಿದ್ದರು. ಜಾತ್ಯಂಧ ಇತ್ತಿಹಾದುಲ್ ಮುಸಲ್ಮೀನ್ ಸಂಸ್ಥೆ ಅವರಿಗೆ ಬೆಂಬಲವಾಗಿತ್ತು. ನಿಜಾಮರು ಸೇರ್ಪಡೆ ಪತ್ರಕ್ಕೆ ಅಂಕಿತವಿಕ್ಕಲು ನಿರಾಕರಿಸಿ ಸ್ವಾತಂತ್ರ್ಯ ಸಾರುವೆನೆಂದರು. ತಮ್ಮ ಸೈನ್ಯಬಲ ಹೆಚ್ಚಿಸಿಕೊಳ್ಳಲು ಮೊದಲು ಭಾರತದ ನೆರವನ್ನೇ ಪಡೆದು ಕೊನೆಗೆ ಅದರ ಕೊರಳು ಕೊಯ್ದು ಪಾಕಿಸ್ತಾನದ ಸಹಾಯದಿಂದ ದಕ್ಷಿಣದಲ್ಲಿ ಮುಸ್ಲಿಂ ಪ್ರಭುತ್ವವನ್ನು ಸ್ಥಾಪಿಸಲು ಕಾಲಹರಣಕ್ಕಾಗಿ ಸಂಧಾನದ ಆಟ ಹೂಡಿದರು.

ಅವರ ಪ್ರತಿನಿಧಿಗಳು ಹೈದರಾಬಾದದಿಂದ ದಿಲ್ಲಿಗೆ ಅಲ್ಲಿಂದ ಹೈದರಾಬಾದಿಗೆ ಎಡತಾಕಿದರು. ದಿಲ್ಲಿಯಲ್ಲಿ ಒಪ್ಪಿಕೊಂಡದ್ದನ್ನು ಹೈದರಾಬಾದಿಗೆ ಬಂದು ನಿರಾಕರಿಸಿ ಮತ್ತೆ ಹೊಸ ಸಂಧಾನದ ಸೋಗು ಪ್ರಾರಂಭಿಸುತ್ತಿದ್ದರು. ಈ ತಂತ್ರದ ದೆಸೆಯಿಂದ ಭಾರತ ಸರಕಾರ ವಷ್ಟೇ ಅಲ್ಲ, ನಿಜಾಮರ ಬಗ್ಗೆ ಸಹಾನುಭೂತಿಯಿದ್ದ ಮೌಂಟಬ್ಯಾಟನ್ನರೂ ಮಾಂಕ್ಟನ್ನರೂ ಬೇಸತ್ತು ಹೋದರು. ಕೊನೆಗೆ ಭಾರತವು ಪೋಲೀಸ ಕ್ರಮ ಕೈಕೊಂಡು ಸಮಸ್ಯೆಯನ್ನು ಮುಗಿಸಬೇಕಾಯಿತು.

ಈ ಮಹಾ ನಾಟಕದ ಕಥೆಯನ್ನು ಆಗ ಹೈದರಾಬಾದದಲ್ಲಿ ಭಾರತದ ಏಜಂಟ ಜನರಲ್ಲರಾಗಿದ್ದ ಕೆ. ಎಂ. ಮುನಶಿಯವರು ತಮ್ಮ ಅನುಪಮವಾದ ಶೈಲಿಯಲ್ಲಿ ಇಲ್ಲಿ ವರ್ಣಿಸಿದ್ದಾರೆ.

ಯುಗ ಸಮಾಪ್ತಿ

ಅಂದು ಬಹುಶಃ ೧೯೪೭ನೇ ಇಸವಿಯ ಡಿಸೆಂಬರ ೨೦ ನೆಯ ತಾರೀಖು ಇರಬೇಕು.

ಆಗ ಭಾರತದ ಉಪಪ್ರಧಾನ ಮಂತ್ರಿಗಳೂ ಸಂಸ್ಥಾನ ಶಾಖೆಯ ಮಂತ್ರಿಗಳೂ ಆಗಿದ್ದ ಸರದಾರ ವಲ್ಲಭಭಾಯಿ ಪಟೇಲರು, "ಮುನ್ಶಿ, ನೀವು ಹೈದರಾಬಾದಕ್ಕೆ ಹೋಗುತ್ತೀರಾ ?" ಎಂದು ಕೇಳಿದರು.

ನಾವು ಚಹ ಕುಡಿಯುತ್ತ ಕುಳಿತಿದ್ದೆವು. ಸರದಾರರ ಮಾತು ಕೇಳಿ ನನಗೆ ಆಶ್ಚರ್ಯವಾಯಿತು. ತುಸು ಬೆಚ್ಚಿದೆನೆನ್ನಲೂಬಹುದು. "ಯಥಾಸ್ಥಿತ ಒಪ್ಪಂದದಂತೆ ನಾವು ಹೈದರಾಬಾದಕ್ಕೆ ಒಬ್ಬ ಏಜಂಟರನ್ನು ಕಳಿಸಬೇಕಾಗಿದೆ" ಎಂದು ಸರದಾರರು ಹೇಳಿದರು.

ಅವರು ಗಂಭೀರವಾಗಿಯೆ ಈ ಪ್ರಶ್ನೆ ಕೇಳಿದ್ದರು. ವಿಷಯ ನಿಜವಾಗಿಯೂ ಮಹತ್ವದ್ದಾಗಿತ್ತು. ಕಳೆದ ಕೆಲ ತಿಂಗಳು ಅತ್ಯಂತ ಉದ್ವೇಗ ಪೂರ್ಣವಾಗಿದ್ದವು ಸರದಾರರು ಸ್ವತಃ ಹೇಳಿದಂತೆ ಹೈದರಾಬಾದವು ಭಾರತದ ಹೊಟ್ಟೆಯಲ್ಲಿನ 'ಹುಣ್ಣು'ಗಿತ್ತು.

ಉದ್ರೇಕಕಾರಕ ದೀರ್ಘ ಚರ್ಚೆಯ ನಂತರ ನವಂಬರ ೨೯ ರಂದು ಭಾರತ ಮತ್ತು ಹೈದರಾಬಾದಗಳ ನಡುವೆ ಒಂದು ವರ್ಷದ ಯಥಾಸ್ಥಿತ ಒಪ್ಪಂದವಾಗಿತ್ತು. ಸರದಾರರು ಘಟನಾ



ಕೆ. ಎಂ. ಮುನಶಿ

"ಈ ಸೈತಾನ ಇಲ್ಲಿಗೇಕೆ ಬರುತ್ತಾನಂತೆ?"

ಸಮಿತಿಯಲ್ಲಿತ್ತ ಹೇಳಿಕೆಯಲ್ಲಿ ಈ ಅವಧಿಯಲ್ಲಿ ಶಾಶ್ವತ ಸೇರ್ಪಡೆಗೆ ಹಾದಿ ಸುಗಮವಾದೀತೆಂಬ ಆಶೆಯನ್ನು ವ್ಯಕ್ತಪಡಿಸಿದ್ದರು. ಅಷ್ಟರಲ್ಲಿ ಹೊಸ ಸಲಹೆಗಾರರ ಬಲದಿಂದ ಹೈದರಾಬಾದದ ನಿಜಾಮರು ಸ್ವತಂತ್ರ ಸಾರ್ವಭೌಮರಾಗುವ ನಿಶ್ಚಯವನ್ನು ಮಾಡಿಕೊಂಡಿದ್ದರು. ೧೯೪೭ ರ ಅಗಸ್ಟ ೧೫ ರಂದು ಬ್ರಿಟಿಶರು ಭಾರತವನ್ನು ಬಿಟ್ಟು ಹೋದಾಗ ಈ ಸಾರ್ವಭೌಮತ್ವ ನಿಜಾಮರಿಗೆ ಪ್ರಾಪ್ತವಾಯಿತೆಂದು ಅವರೂ ಅವರ ಸಲಹೆಗಾರರೂ ವಾದಿಸತೊಡಗಿದ್ದರು.

ರಜಾಕಾರರ ಭಯೋತ್ಪಾದಕ ಚಟುವಟಿಕೆಗಳಿಗೆ ಅಂಜಿ ನೂರಾರು ಕುಟುಂಬಗಳು ಹೈದರಾಬಾದದ ಸುತ್ತ ಮುತ್ತಲಿನ ಭಾರತದ ಪ್ರದೇಶಗಳಿಗೆ ಓಡಿಬಂದಿದ್ದರು. ಯಥಾಸ್ಥಿತ ಒಪ್ಪಂದ ಮಾಡಿಕೊಂಡು ಭಾರತ ಸರಕಾರವು ಹೈದರಾಬಾದದ ಮೇಲಿನ ಹಿಡಿತವನ್ನು ಕಳೆದುಕೊಂಡಿತು ಎಂದು ದೇಶದ ಜನತೆಗೆನಿಸಿತ್ತು.

೧೯೨೮ರ ಬಾರ್ಡೋಲಿ ಸತ್ಯಾಗ್ರಹದ ದಿನಗಳಿಂದಲೂ ನಾನು ಆದವ್ಯ ಸರದಾರ ಪಟೇಲರಿಗೆ ನಿಕಟ ಸಹವರ್ತಿಯಾಗಿದ್ದೆ. ನಮ್ಮೀರ್ವರಲ್ಲಿ ಆತ್ಮೀಯತೆ ಬೆಳೆದು ಬಂದಿತ್ತು. ಅಂತೇ ಅವರು ಹೈದರಾಬಾದದ ಮಾತನ್ನೆತ್ತಿದಾಗ ನಾನೇ ಅಲ್ಲಿಗೆಹೋಗಬೇಕೆಂದು

ಅವರು ಬಯಸಿದ್ದಾರೆಂದು ನನಗೆ ವಿದಿತವಾಗಿ ಹೋಯಿತು.

"ಮೊದಲು ನಾನು ಬಾಪೂವಿನ ಸಲಹೆ ಕೇಳಬೇಕು. ನಾನು ಹೋಗುವದೇ ಆದರೆ ಘಟನಾ ಸಮಿತಿಯ ಸದಸ್ಯನೆಂದು ಹೋಗುವೆ. ಸಂಬಳವನ್ನು ಸ್ವೀಕರಿಸುವದಿಲ್ಲ" ಎಂದೆ.

"ಬಾಪೂವಿನ ಸಲಹೆ ಪಡೆಯಿರಿ" ಎಂದರು ಸರದಾರರು. ಅಂದೇ ಸಂಜೆ ನಾನು ಮಹಾತ್ಮಾ ಗಾಂಧಿಯವರನ್ನು ಕಂಡೆ.

ನಾನು ಸರದಾರರ ಸೂಚನೆಯನ್ನು ಅವರಿಗೆ ತಿಳಿಸಿದಾಗ ಅವರು 'ಸರಿ' ಎಂದರಲ್ಲದೆ ನನಗೆ ನಿರಾಕರಿಸುವ ಅವಕಾಶವನ್ನೂ ಕೊಡಲೊಪ್ಪಲಿಲ್ಲ.

"ಇದು ಕೇವಲ ಸರಕಾರೀ ಕೆಲಸವಲ್ಲ, ಇದು ನಿಮ್ಮ ಧರ್ಮ" ಎಂದರು.

ಮೂಸಾ ನದಿಯ ದಂಡೆಯಲ್ಲಿ— ಅದೃಷ್ಟವು ವಿಚಿತ್ರ ಆಟಗಳನ್ನು ಆಡುತ್ತಿದ್ದ; ನಿಜಾಮರು ದೊಡ್ಡ ಪಣಕ್ಕಾಗಿ ಆಟ ಹೂಡಿದ್ದ ಸ್ಥಳದಲ್ಲಿ ನನಗಾಗಿ ರೋಮಾಂಚಕಾರಿ ಭವಿತವ್ಯ ಕಾದಿದೆಯೆಂದು ನನಗನಿಸಿತು.

ಆದರೆ ಮರುದಿನ ನಾನು ಮುಂಬಯಿಗೆ ಹೊರಟಾಗ ಯಾವ ನಿರ್ಧಾರಕ್ಕೂ ಬಂದಿರಲಿಲ್ಲ.

ಮರುದಿನ ದಿಲ್ಲಿಯಿಂದ ಟೆಲಿಫೋನಿನಲ್ಲಿ ಸರದಾರ ಪಟೇಲರು ಕೇಳಿದರು: "ನೀವು ಹೈದರಾಬದಕ್ಕೆ ಹೋಗುವದು ಯಾವಾಗ?" ಎಂದು.

"ನಿಜಾಮರು ನನ್ನನ್ನು ಒಪ್ಪುವರೇ? ನೀವು ನನ್ನನ್ನು ನೇಮಿಸಿಯಾದ ಬಳಿಕ ಆ ನೇಮಕವನ್ನು ರದ್ದುಗೊಳಿಸುವ ಪ್ರಸಂಗ ಬಂದರೆ ಮರ್ಯಾದೆಯಲ್ಲ," ನಾನಂದೆ.

ಭಾರತದ ಏಜಂಟ್ ಜನರಲ್ಲನಾಗಿ ನಾನು ಹೋದರೆ ಹೈದರಾಬಾದವೇನೂ ಸಂತೋಷಪಟ್ಟುಕೊಳ್ಳುವದಿಲ್ಲವೆಂದು ನನಗೆ ಗೊತ್ತಿತ್ತು.

ಹತ್ತು ವರ್ಷಗಳ ಹಿಂದೆ ನಾನು ಮುಂಬಯಿಯ ಗೃಹಮಂತ್ರಿಯಾಗಿದ್ದಾಗ, ಹೈದರಾಬಾದದಲ್ಲಿ ಸತ್ಯಾಗ್ರಹಮಾಡಲು ಹೊರಟಿದ್ದ ಆರ್ಯ ಸಮಾಜ ಸತ್ಯಾಗ್ರಹಿಗಳನ್ನು ಸೊಲ್ಲಾಪುರದಲ್ಲಿ ತಡೆಹಿಡಿಯಬೇಕೆಂಬ ನಿಜಾಮರ ಕೇಳಿಕೆಯನ್ನು ನಾನು ನಿರಾಕರಿಸಿದ್ದೆ. ಮತ್ತೆ, ೧೯೪೧ ರಲ್ಲಿ ಮುಸ್ಲಿಂ ಲೀಗಿನ ವಿಘಾತಕ ನೀತಿಗೆ ಎದುರಾಗಿ ನಿಂತು ಅಖಂಡ ಹಿಂದುಸ್ತಾನಕ್ಕಾಗಿ ಬಲವಾದ ಚಳವಳಿಯನ್ನು ನಡೆಸಲು ನಾನು ಕಾಂಗ್ರೆಸ್ಸಿನಿಂದ ಹೊರಬಿದ್ದಿದ್ದೆ. ಆಗ ನನ್ನ ಬಹುಕಾಲದ ಸ್ನೇಹಿತ ಜಿನ್ನಾರು ನನ್ನ ಮೇಲೆ ಉರಿದುಬಿದ್ದಿದ್ದರು. ಆ ಮಾತು ಕೂಡ ನಿಜಾಮರ ಸರಕಾರಕ್ಕೆ ಗೊತ್ತಿರದೆ ಹೋಗಿರಲಿಕ್ಕಿಲ್ಲ.

ಆದರೆ ಸರದಾರರು ದೃಢ ನಿಶ್ಚಯ ಮಾಡಿದ್ದರು. ಅವರೊಮ್ಮೆ ಒಂದು ಮಾತು ಆಡಿದರೆಂದರೆ ಅದಕ್ಕೆ ಬದಲೆಂಬುದಿರಲಿಲ್ಲ. ೧೯೪೮, ಜನವರಿ ೫ ರಂದು ಹೈದರಾಬಾದನ್ನು ನಾನು ತಲುಪಲೇಬೇಕಾಗಿತ್ತು.

ಡಿಸೆಂಬರ ೨೫ ರಂದು ನನ್ನ ನೇಮಕದ ಸುದ್ದಿ ಪ್ರಕಟವಾದಾಗ ದೇಶವು ಅದನ್ನು ಸ್ವಾಗತಿಸಿತು. ಕಲಕತ್ತೆಯ ತಮ್ಮ ಓರ್ವ ಮಿತ್ರನಿಗೆ ಡಾ. ಆರ್. ಸಿ. ಮುಜುಮದಾರರು ಈ ಸುದ್ದಿ ತಿಳಿಸಿದಾಗ ಅವರು "ನಿಜಾಮರ ಕಥೆ ಮುಗಿಯಿತು" ಎಂದರಂತೆ.

ನನ್ನ ನೇಮಕದಿಂದ ನಿಜವಾಗಿಯೂ ನಿಜಾಮರಿಗೆ ಸಂತೋಷವಾಗಿರಲಿಲ್ಲ. ಹೈದರಾಬಾದದ ಮಂತ್ರಿಯೊಬ್ಬ ಇನ್ನೊಬ್ಬ ಮಂತ್ರಿಗೆ, "ಈ ಸೈತಾನ ಇಲ್ಲಿಗೇಕೆ ಬರುತ್ತಾನೆ?" ಎಂದು ಕೂಡ ಕೇಳಿದನಂತೆ. ಇತ್ತಿಹಾದ-ಉಲ್-ಮುಸಲ್ಮೀನದ ಅಧ್ಯಕ್ಷ ಕಾಸೀಮ ರಜವಿಯಂತೂ ಕಿಡಿಕಿಡಿಯಾಗಿದ್ದನು.

೧೯೪೮ ಪ್ರಾರಂಭವಾಗುವದರೊಳಗಾಗಿ ಗಾಂಧೀಜಿಯ ವಿಶ್ವಾಸಪಾತ್ರರಾದ ಸುಧೀರ ಘೋಷ ಮತ್ತು ಸಂಸ್ಥಾನ ಮಂತ್ರಿ ಶಾಖೆಯ ಒಬ್ಬ ಅಧಿಕಾರಿ ಹೈದ್ರಾಬಾದಕ್ಕೆ ಹೋಗಿ ಬಿಟ್ಟಿದ್ದರು.

ನಮಗಾಗಿ ವಸತಿ ಸೌಕರ್ಯವನ್ನು ಏರ್ಪಡಿಸಿ ಕೊಡುವ ಇಚ್ಛೆ ನಿಜಾಮ ಸರಕಾರಕ್ಕಿರಲಿಲ್ಲ. ಸುಧೀರರು ಹೈದ್ರಾಬಾದ ರೆಸಿಡೆನ್ಸಿಗೆ ಹೋದರು. ಸುರುವಾಯಿತು ಗಲಾಟೆ. ಒಮ್ಮೆ ನನ್ನ ಪಕ್ಷಕಾರ ಗಿದ್ದ, ಈಗ ಹೈದರಾಬಾದದ ಮುಖ್ಯಮಂತ್ರಿಯಾ ಗಿದ್ದ ಮೀರ ಲಾಯಕ ಅಲಿಯವರು, ಸುಧೀರರು ಕೂಡಲೆ ಹೈದರಾಬಾದ ರೆಸಿಡೆನ್ಸಿಯನ್ನು ಬಿಟ್ಟು ಹೋಗಬೇಕು ಎಂದು ಸರದಾರ ಪಟೇಲರಿಗೆ ತಿಳಿಸಿದರು.

ಲಾರ್ಡ್ ಮೌಂಟಬ್ಯಾಟನ್ ಮತ್ತು ನಿಜಾ ಮರಲ್ಲಿ ತಂತಿಗಳು ಓಡಾಡಿದವು. ಸಿಕಂದರಾ ಬಾದದಲ್ಲಿದ್ದ ಹಿಂದೀ ಸೈನ್ಯದ ಮುಖ್ಯಾಧಿಕಾ ರಿಯು ಜನವರಿ ೧೫ ರಂದು ತೆರವು ಮಾಡಲಿದ್ದ "ಡೆಕ್ಕನ್ ಹೌಸಿ"ಗೆ ನಾನು ಹೋಗುವ ವರೆಗೆ ಬೋಲಾರಾಮ ರೆಸಿಡೆನ್ಸಿಯಲ್ಲಿ (ಈಗ ರಾಷ್ಟ್ರಪತಿ ನಿಲಯ) ಇರಲು ನನಗೆ ಅವಕಾಶಕೊಡಬೇ ಕೆಂದು ಲಾರ್ಡ ಮೌಂಟಬ್ಯಾಟನ್ ಹೇಳಿದರೆ ಹೈದರಾಬಾದ ರೆಸಿಡೆನ್ಸಿ ಮತ್ತು ಬೋಲಾರಾಮ ರೆಸಿಡೆನ್ಸಿ ಎರಡನ್ನೂ ಕೊಡುವದಿಲ್ಲ ಎಂದು ನಿಜಾ ಮರು ಹೇಳಿದರು. "ಅದು ಒಪ್ಪಂದಕ್ಕೆ ವಿರುದ್ಧ; ಅದು ಘಟನೆಗೆ ಅಸಂಗತ. ಈ ಏಜಂಟ ಜನರಲ್ಲ ರಿಗೆ ಬ್ರಿಟಿಶ ರೆಸಿಡೆಂಟನ ಸ್ಥಾನಮಾನ ಬಂದೀತು. ಹನ್ನೊಂದು ದಿನಗಳ ವರೆಗೆ ಮುನ್ಷಿ ಲಾಯಕ ಅಲಿಯ ಅತಿಥಿಯಾಗಿರಬೇಕು" ಎಂದು ನಿಜಾ ಮರ ಆಗ್ರಹ.

ಕಾಸೀಂ ರಜವಿ ಒಂದು ಸಭೆಯಲ್ಲಿ ಗುಡು ಗಿದ: "ಭಾರತ ಒಕ್ಕೂಟದ ಗಾಳಿ ಕೂಡ ಹೈದರಾಬಾದ ರಾಜ್ಯದತ್ತ ಬೀಸಲು ನಾನು ಅಪ್ಪಣೆ ಕೊಡುವದಿಲ್ಲ. ಮುನ್ಷಿ ರೆಸಿ ಡೆನ್ಸಿಯಲ್ಲಿ ಇಳಿದುಕೊಂಡರೆ ಅವರನ್ನು ತಡೆ ಗಟ್ಟುವದಿಷ್ಟೇ ಅಲ್ಲ, ಆ ಕಟ್ಟಡದ ಇಟ್ಟಂಗಿಗ ಳನ್ನು ಕಿತ್ತು ಮೂಸಾ ನದಿಗೆ ಎಸೆದೇವು" ಎಂದು.

ಕೊನೆಗೆ ಲಾರ್ಡ ಮೌಂಟಬ್ಯಾಟನ್ನರ ಮಾತಿಗೆ ಬೆಲೆ ಕೊಡುವದಕ್ಕಾಗಿ ಭಾರತದ ಏಜಂಟ ಜನ ರಲ್ಲರು ಜನವರಿ ೫ರಿಂದ ೧೫ರ ತನಕ ಹನ್ನೊಂದು ದಿನಗಳ ವರೆಗೆ ಬೋಲಾರಾಮ ರೆಸಿಡೆನ್ಸಿಯಲ್ಲಿ ರಲು ಅಡ್ಡಿಯಿಲ್ಲ, ಆದರೆ ಅವರು ಅಲ್ಲಿ ಅದ ಕ್ಕಿಂತ ಒಂದು ದಿನವೂ ಹೆಚ್ಚಿಗೆ ಇರತಕ್ಕದ್ದಲ್ಲ, ಎಂದು ನಿಜಾಮರು ಹೇಳಿದರು.

ಜನವರಿ ೫ರಂದು ಭಾರತದ ರಾಷ್ಟ್ರಧ್ವಜವನ್ನು ಹಚ್ಚಿದ ವಿಮಾನದಲ್ಲಿ ನಾವು ಹೈದರಾಬಾದಕ್ಕೆ ಹೋದೆವು. ಹೆಚ್ಚಾಗಿ ಹಿಂದುಗಳೇ ಇದ್ದ ಜನರ ದೊಡ್ಡ ಗುಂಪೊಂದು ಹಕೀಮಪೇಟ ವಿಮಾನ ನಿಲ್ದಾಣದಲ್ಲಿ "ಗಾಂಧೀಜೀಕೀ ಜಯ!" ಎಂಬ ಘೋಷದಿಂದ ನಮ್ಮನ್ನು ಸ್ವಾಗತಿಸಿತು. ಹೈದ-ರಾಬಾದದ ಜನರು ಇತ್ತಿಹಾದದ ಕೃತಿಗಳಿಂದ ಗರ್ಭಗಲಿತರಾಗಿ ಹೋಗಿದ್ದರು. ಯಥಾಸ್ಥಿತಿ ಒಪ್ಪಂದ ತಮ್ಮನ್ನು ತೋಳದ ಬಾಯಿಗೊಡ್ಡಿತು ಎಂದು ಅವರ ಭಾವನೆಯಾಗಿಬಿಟ್ಟಿತ್ತು. ಆದರೆ ಏಜಂಟ ಜನರಲ್ಲರ ನೇಮಕ ಅವರಿಗೆ ತುಸು ಧೈರ್ಯ ತಂದಿತು. ನನ್ನ ನೇಮಕದ ಸುದ್ದಿ ಪ್ರಕಟವಾದೊಡನೆ ಓಡಿಹೋಗಿದ್ದ ಎಷ್ಟೋ ಹಿಂದುಗಳು ಸಿಕಂದರಾಬಾದಕ್ಕೆ ಮರಳಿದರು.

ಬೋಲಾರಾಮ ರೆಸಿಡೆನ್ಸಿಯಲ್ಲಿ ನಿಝಾಮರ ಧ್ವಜದ ಪಕ್ಕದಲ್ಲೇ ಭಾರತದ ರಾಷ್ಟ್ರಧ್ವಜವನ್ನು ನಾನು ಹಾರಿಸಿದೆ. ಬಳಿಕ ಅತಿಥಿಗಳನ್ನು ಚಹಾ ಪಾನ ಸಮಾರಂಭದ ಮೂಲಕ ಭೆಟ್ಟಿಯಾದೆ. ಅಧಿಕಾರಿಗಳು ಮತ್ತು ಇತ್ತಿಹಾದ ಒಲವಿನ ಧುರೀಣರು ಆ ಸಮಾರಂಭದಲ್ಲಿ ಇಲ್ಲದಿರುವದು ಎದ್ದು ಕಾಣಿಸುತ್ತಿತ್ತು.

ಭಾರತದ ಏಜಂಟ ಜನರಲ್ಲರ ಆಗಮನವನ್ನು ದುರ್ಲಕ್ಷಿಸಿ ಹೈದರಾಬಾದನ್ನು ಸ್ವತಂತ್ರ ರಾಜ್ಯ ವೆಂದೆಣಿಸಿಕೊಂಡು ವರ್ತಿಸಲು ನಿಜಾಮರು, ಅವರ ಮಂತ್ರಿಮಂಡಳ ಮತ್ತು ಇತ್ತಿಹಾದ ಜನರು ನಿರ್ಧರಿಸಿದ್ದರು. ಅವರು ಅದರಲ್ಲಿ ನಿಜ ವಾಗಿಯೂ ಯಶಸ್ವಿಗಳಾಗಿದ್ದಾರೆಯೆ ? ಎಂದು ನನಗೂ ಯೋಚನೆಯುಂಟಾಯಿತು.

“ಮಹಾಘನತೆವೆತ್ತ” ನಿಜಾಮರು

ಅಸಫಜಾಹಿ ವಂಶದ ಏಳನೆಯ ಅರಸರಾದ ‘ಹೀಜ್ ಎಕ್ಸಾಲ್ಟೆಡ್ ಹಾಯ್‌ನೆಸ್’ (ಮಹಾಘನತೆವೆತ್ತ) ಮೀರ ಉಸ್ಮಾನ ಅಲಿ ಖಾನರನ್ನು ಕಾಣುವದು ಹೈದರಾಬಾದಿಗೆ ಏಜಂಟ ಜನರಲ್ಲನಾಗಿ ಹೋಗಿದ್ದ ನನ್ನ ಪ್ರಥಮ ಕರ್ತವ್ಯವಾಗಿತ್ತು.

೧೯೪೮, ಜನವರಿ ೯ ರಂದು ಹೈದರಾಬಾದದ ಮುಖ್ಯಮಂತ್ರಿ ಮೀರ ಲಾಯಕ ಅಲಿಯವರೊಂದಿಗೆ ನಾನು "ಕಿಂಗ್ ಕೋಠಿ"ಗೆ ಹೋದೆ. ನಿಜಾಮರೂ ಅವರ ರಾಣಿವಾಸವೂ ಅವರ ಅರಬ ಕಾವಲುಗಾರರೂ ವಾಸಿಸುವ ಹಲವಾರು ಮನೆಗಳ ಒಂದು ವಿದ್ರೂಪ ಗುಂಪೇ "ಕಿಂಗ್ ಕೋಠಿ".

ಜಗತ್ತಿನಲ್ಲಿಯೇ ಅತಿ ಶ್ರೀಮಂತನೆನಿಸಿದ, ವಿಕ್ಷಿಪ್ತ ವ್ಯಕ್ತಿಯೆಂದೆನಿಸಿದ ನಿಜಾಮರನ್ನು ಪ್ರತ್ಯಕ್ಷ ಭೆಟ್ಟಿಯಾಗುವ ವಿಚಾರದಿಂದ ನನ್ನ ಕುತೂಹಲ ತುಸು ಕೆರಳಿತ್ತು.

ಕಾರಿನಿಂದಿಳಿದೊಡನೆ ಜಗುಲಿಯ ಮೇಲೆ ನಿಂತಿದ್ದ ಬಾಗಿದ ಬೆನ್ನಿನ ಬಡಕಲ ದೇಹದ ಮುದುಕನೊಬ್ಬನನ್ನು ನಾನು ಕಂಡೆ. ಆತ ಮಾಸಿದ ಫೆಜ್ ಟೊಪ್ಪಿಗೆ ಹಾಕಿಕೊಂಡಿದ್ದ. ಗುನಿಗಡಿದ ಮಫ್ಲರ್ ಸುತ್ತಿಕೊಂಡಿದ್ದ. ಸಿಂಪಿಗನಲ್ಲಿಂದ ಬಂದಮೇಲೆ ಮತ್ತೊಮ್ಮೆ ಇಸ್ತ್ರಿಯನ್ನು ಕಾಣದ ಹಳೆಯ ಶೇರವಾನಿ ಮತ್ತು ಪಾಯಜಾಮುಗಳನ್ನು ಧರಿಸಿದ್ದ. ಯಾರಿರಬಹುದು ಈ ಮನುಷ್ಯ? ಎಂದು ಸೋಜಿಗಪಟ್ಟೆ. ಆದರೆ ಲಾಯಕ ಅಲಿ ವಿನಯದಿಂದ ಅವನಿಗೆ ಹೈದರಾಬಾದ ಪದ್ಧತಿಯಂತೆ ನೆಲ ಮುಟ್ಟಿ ಕುರ್ನಿಸಾತ್ ಮಾಡಿದಾಗ ಸಂದೇಹ ಉಳಿಯಲಿಲ್ಲ. ಮಹಾಘನತೆವೆತ್ತ ನಿಜಾಮರ ಸಮ್ಮುಖದಲ್ಲೇ ನಾನು ನಿಂತಿದ್ದೆ.

ದಣಿದ ದೇಶಾವರಿ ನಗುವಿನಿಂದ ನಿಜಾಮರು ನನ್ನನ್ನು ಸ್ವಾಗತಿಸಿ ಕೈಕುಲುಕಿದರು. ಬಳಿಕ ನಾವು ನಿಜಾಮರ ಕೋಣೆಯನ್ನು ಪ್ರವೇಶಿಸಿದೆವು. ಕೋಣೆ ಕೊಳಕೋ ಕೊಳಕಾಗಿತ್ತು ಮಾಸಿದ ಪ್ರತಿಮೆಗಳೂ ಅಲಂಕಾರಿಕ ಕೂಜೆಗಳೂ ಅಸ್ತವ್ಯಸ್ತವಾಗಿ ಹರವಿ ಬಿದ್ದಿದ್ದ ಆ ಕೋಣೆ ಒಂದು ಮೋಡಕಾ ಬಾಜಾರದಂತೆ ಕಾಣುತ್ತಿತ್ತು.

ನಮ್ಮ ಸಂಭಾಷಣೆ ಮಾಮೂಲಿ ಆಗಿತ್ತು. ನನ್ನ ಕಾದಂಬರಿಗಳನ್ನು ಕುರಿತು ನಿಜಾಮರು ಎಲ್ಲೋ ಕೇಳಿ ತಿಳಿದುಕೊಂಡಿರಬೇಕು. ಅದನ್ನು ಪ್ರಸ್ತಾಪಿಸಿದರು. ಅಸಫಜಾಹಿ ವಂಶದ ಮೂಲಪುರುಷನ ಮಾತೂ ಬಂತು. ಭಾರತದಲ್ಲಿನ ತಲೆ ಭಾರವಾದ ಆದಾಯ ಕರದ ವಿಚಾರ ಎತ್ತಿದರು. ನಾನೆಷ್ಟು ಆದಾಯ ಕರ ಕೊಡುತ್ತೇನೆಂದು ಸೂಚ್ಯವಾಗಿ ವಿಚಾರಿಸಿದರು.

ಆದರೆ ಈ ಸಂದರ್ಶನದಲ್ಲಿ ಮುಖ್ಯವಾಗಿದ್ದ ಭಾರತ-ಹೈದರಾಬಾದ ಸಂಬಂಧವನ್ನು ಕುರಿತಾದ ವಿಚಾರವನ್ನು ಬುದ್ಧಿಪೂರ್ವಕವಾಗಿಯೇ ಪ್ರಸ್ತಾಪಿಸಲಿಲ್ಲ. ತಮ್ಮ ವೈಶಿಷ್ಟ್ಯಪೂರ್ಣ ಅಂಗಭಂಗಿಗಳೊಡನೆ ನಿಜಾಮರು ನನ್ನ ಮೇಲೆ ಒಂದಕ್ಕೊಂದು ಸಂಬಂಧವಿಲ್ಲದ ಪ್ರಶ್ನೆಗಳ ಮಳೆಯನ್ನೆ, ಉತ್ತರದ ನಿರೀಕ್ಷಣೆಯನ್ನೂ ಮಾಡದೆ, ಸುರಿಸಿದರು. ಆಗಾಗ ತಮ್ಮ ತೊಡೆ ಚಪ್ಪರಿಸಿಕೊಂಡು ತಮ್ಮ ಮಾತನ್ನು ತಾವೇ ಸಮರ್ಥನೆ ಮಾಡಿಕೊಳ್ಳುತ್ತಿದ್ದರು.

ನನ್ನ ಮೊದಲನೆಯ ಭೆಟ್ಟಿ ಹೀಗೆ ಕೊನೆಗಂಡಿತು. ಅದೇ ಕೊನೆಯದೂ ಆಯಿತು —ಅವರು ಕಟ್ಟಿದ ಗಾಳಿಗೋಪುರ ಸಪ್ಟಂಬರ ೧೭ ರಂದು ಕುಸಿದು ಬೀಳುವವರೆಗೆ.

ನಿಜಾಮರು ಜಗತ್ತಿನಲ್ಲಿಯೇ ಶ್ರೀಮಂತ ಮನುಷ್ಯ ಮತ್ತು ನಿಗೂಢ ವ್ಯಕ್ತಿಯೆಂದು ಭಾರತದಲ್ಲೆಲ್ಲ ಮತ್ತು ಜಗತ್ತಿನ ಇತರ ಭಾಗಗಳಲ್ಲಿ ಪ್ರತೀತಿ ಇತ್ತು. ಅವರ ನಡೆನುಡಿ, ಧನಲೋಭ,

ನಿರಂಕುಶಾಧಿಕಾರದ ಸ್ವಭಾವಗಳ ಅನೇಕಾನೇಕ ಕಥೆಗಳನ್ನು ಎಲ್ಲೆಡೆಗೂ ಕೇಳಬಹುದಿತ್ತು. ಹೈದರಾಬಾದದಲ್ಲಿ ಕೂಡ ಅಂಥ ಕಥೆಗಳಿಗೆ ಕೊರತೆಯಿರಲಿಲ್ಲ.

ನಿಜಾಮರಿಗೆ ಎರಡೇ ಮೋಹಗಳಿದ್ದವು–ಧನ ಮತ್ತು ಅಧಿಕಾರ ಮೋಹ ಆದರೆ ಈ ಎರಡರಲ್ಲಿ ಧನದ ಮೋಹವೇ ಪ್ರಬಲವಾಗಿತ್ತು. ಸರಕಾರಿ ಬೊಕ್ಕಸದಿಂದ ಅವರಿಗೆ ಪ್ರತಿವರ್ಷ ೫೦ ಲಕ್ಷ ರೂಪಾಯಿಗಳಲ್ಲದೆ ಚಿಲ್ಲರೆ ವೆಚ್ಚಕ್ಕಾಗಿ ಬೇರೆ ಹಣ ದೊರೆಯುತ್ತಿತ್ತು. ಮೇಲೆ ರಾಜ್ಯದ ಬಹುದೊಡ್ಡ ಭಾಗವನ್ನಾಕ್ರಮಿಸಿದ ಸರ್ಫ-ಇ-ಖಾಸ ಪ್ರದೇಶದಿಂದ ವರ್ಷಕ್ಕೆ ೨॥ ಕೋಟಿ ರೂಪಾಯಿಗಳ ಆದಾಯ ಬರುತ್ತಿತ್ತು. ಈ ಭೂಮಿಯನ್ನು ಅವರು ತಮ್ಮ ಖಾಸಗಿ ಆಸ್ತಿಯೆಂದು ಪರಿಗಣಿಸಿದ್ದರು

ಆಮೇಲೆ 'ನಜರಾಣೆ' ಗಳ ಅನಂತ ಪ್ರವಾಹ ಅವರೆಡೆಗೆ ಹರಿದು ಬರುತ್ತಿತ್ತು, ಆಮಂತ್ರಿತರಾಗಿಯಾಗಲಿ, ಹಾಗೆಯೇ ಆಗಲಿ, ಮಹಾಘನ ಹೊಂದಿದ ನಿಜಾಮರನ್ನು ಭೆಟ್ಟಿಯಾಗಲು ಬಂದ ಪ್ರತಿಯೊಬ್ಬ ಪ್ರತಿಷ್ಠಿತ ವ್ಯಕ್ತಿಯೂ ೧೨೫ ರೂಪಾಯಿಗಳನ್ನಾಲಿ ಅಷ್ಟೇ ಬೆಲೆಯ ಚಿನ್ನದ ನಾಣ್ಯವಾದ ಒಂದು ಅಶ್ರಫಿಯನ್ನಾಗಲಿ ಭೆಟ್ಟಿಯ ಸೌಭಾಗ್ಯ ಪ್ರಾಪ್ತಿಯ ಬೆಲೆಯೆಂದು ಕಾಣಿಕೆ ಕೊಡಬೇಕಾಗುತ್ತಿತ್ತು. ತಮ್ಮ ಹುಟ್ಟಿದ ಹಬ್ಬದ ದಿನ ಅವರು ಶ್ರೀಮಂತ ಸರದಾರರಿಂದ ಹಿಡಿದು ತೀರ ಸಣ್ಣ ಸಂಬಳದ ನೌಕರನ ವರೆಗೆ ಪ್ರತಿಯೊಬ್ಬನಿಂದಲೂ ನಜರಾಣೆ ಸ್ವೀಕರಿಸುತ್ತಿದ್ದರು

ಹಣ ತರುವ ವಿಭಾಗ ಯಾವದೇ ಇರಲಿ, ಅದು ನಿಜಾಮರಿಗೆ ಅತ್ಯಂತ ಪ್ರಿಯವಾಗಿತ್ತು; ಹಣ ವೆಚ್ಚ ಮಾಡುವ ಪ್ರಸಂಗ ಕಲ್ಪನಾತೀತವಾದ ಭಯವನ್ನು ಹುಟ್ಟಿಸುತ್ತಿತ್ತು. ಅವರು ಹೊಸ ಬಟ್ಟೆಗಳನ್ನು ತೊಡುತ್ತಿದ್ದುದು ಅಪರೂಪ ಸಾಮಾನ್ಯವಾಗಿ ೧೯೧೮ ನೇ ಮಾಡೆಲ್ಲಿನ ಒಂದು ಹಳೆಯ ತಗಡಿನ ಡಬ್ಬಿಯಂಥ ಖಟರಾ ಕಾರಿನಲ್ಲಿ ಸಂಚರಿಸುತ್ತಿದ್ದರು. ಅವರು ಎಂದೂ ಅತಿಥಿ ಸತ್ಕಾರದ ಹವ್ಯಾಸಕ್ಕೆ ಹೋದವರಲ್ಲ.

ಕಿಂಗ್ ಕೋಠಿಯ ನಜರ–ಇ-ಬಾಗದಲ್ಲಿ ನೆಲಮನೆಗಳು, ತಿಜೋರಿಗಳು, ಕಪಾಟುಗಳು, ಮೇಜುಗಳು ಮತ್ತು ನೆಲದ ಮೇಲೆ ಕೂಡ ಅಗಣಿತವಾದ ಸಂಪತ್ತು–ನೋಟುಗಳು, ನಾಣ್ಯಗಳು, ಬೆಳ್ಳಿ ಬಂಗಾರ ಮುತ್ತು ರತ್ನಾದಿಗಳು ತುಂಬಿ ಬಿದ್ದಿದ್ದವು ಎಂದು ಜನಶ್ರುತಿ. ನೆಲದ ಮೇಲೆ ಬಿದ್ದಿದ್ದ ಸಂಪತ್ತನ್ನು ಮುಚ್ಚಲು ಹಾಸಿದ ಬಿಳಿ ಅರಿವೆಗಳ ಮೇಲೆ ಅದನ್ನು ಪ್ರಾಚೀನ ಕಥೆಗಳಲ್ಲಿ ಬರುವ ರಾಕ್ಷಸರಂತೆ ಕಾಯುತ್ತಿದ್ದ ಪಾರಿವಾಳ ಮತ್ತು ಹೆಗ್ಗಣಗಳ ಮಲ-ಮೂತ್ರ ಯಥೇಚ್ಛವಾಗಿ ಬಿದ್ದಿರುತ್ತಿತ್ತು. ಅಲ್ಲಿದ್ದ ಇಲಿಗಳಿಗೆ ನಿಜಾಮರೊಡನೆ ಬಹಳ ಸ್ನೇಹವಂತೆ. ನಿಜಾಮರು ತಮ್ಮ ಅಗಣಿತೈಶ್ವರ್ಯವನ್ನು ಅವಲೋಕಿಸುತ್ತ ಅರೆಹೀರಿದ ಕಾಫಿಯನ್ನೇ ಮರೆತು ತಲ್ಲೀನರಾಗಿ ಕುಳಿತಾಗ ಸ್ನೇಹಾಕಾಂಕ್ಷಿಗಳಾದ ಈ ಅಸಹ್ಯ ಜಂತುಗಳು ಮಹಾಘನತೆವೆತ್ತ ಈ ವ್ಯಕ್ತಿಯ ಸನ್ನಿಧಾನದಲ್ಲಿ ಸ್ವಲ್ಪವೂ ಅಂಜಿಕೆಯಿಲ್ಲದೆ ಬಸಿಯಲ್ಲಿಯ ಕಾಫಿಯನ್ನು ಕುಡಿಯುತ್ತಿದ್ದವಂತೆ. ಈ ಕಥೆ ಎಷ್ಟು ಸತ್ಯವೋ ನಾ ಕಾಣೆ ಆದರೆ ಅದು ಹೇಳದೆ ಬಿಡಲಾರದಷ್ಟು ಸ್ವಾರಸ್ಯವಾಗಿದೆ.

ನಿಜಾಮರ ಜನಾನಾಖಾನೆ ದೊಡ್ಡದು. ನಿಜಾಮರ ಯೋಗಕ್ಷೇಮವನ್ನು ನೋಡಿಕೊಳ್ಳುವದು ರಾಜಕುಮಾರ ಮತ್ತು ಕುಮಾರಿಯರ ತಾಯಿಯಾದ ಮುಖ್ಯ ಬೇಗಂ. ಈ ಬೇಗಂ ತನ್ನದೇ ಮನೋರಾಜ್ಯದಲ್ಲಿ ವಾಸಿಸುವ ವಿಕ್ಷಿಪ್ತ ವ್ಯಕ್ತಿ. ಇಸ್ಲಾಂ ಧರ್ಮಕ್ಕೆ ಮತಾಂತರಗೊಳಿಸಲ್ಪಟ್ಟಿದ್ದ ಹಿಂದು ಸ್ತ್ರೀಯೊಬ್ಬಳು ಕಿಂಗ್ ಕೋಠಿಯಲ್ಲಿರುತ್ತಿದ್ದಳು. ಆದರೆ ಅವಳಿಗೆ ಪ್ರತ್ಯೇಕ ಮನೆಯಿತ್ತು. ಪ್ರತ್ಯೇಕ ಪ್ರತ್ಯೇಕ ಬಿಡಾರಗಳಲ್ಲಿರುತ್ತಿದ್ದ ಇನ್ನೂ ಅನೇಕ ಸ್ತ್ರೀಯರಿದ್ದರು. ಈ ಅಪ್ಸರಲೋಕದ ಬಗ್ಗೆ ಅನೇಕ ಸ್ವಾರಸ್ಯದ ಕಥೆಗಳು ಪ್ರಚಲಿತವಿದ್ದವು.

ಕಿಂಗ್ ಕೋಠಿಯಲ್ಲಿ ಅವರ ಇನ್ನೂ ಅನೇಕ ಪುತ್ರರು ಮತ್ತು ಪುತ್ರಿಯರು ವಾಸಿಸುತ್ತಿದ್ದರು. ನಿಜಾಮರ ಕುಮಾರರಾದ ವರ್ಹ್ಹಾಡದ ರಾಜಕುಮಾರ (ಯುವರಾಜ) ಮತ್ತು ಮ್ಯುಝುಂಜಾಹರು ಮೊದಲು ತಂದೆ ನಿಜಾಮರೊಂದಿಗೆ ಇರುತ್ತಿದ್ದರು. ಆದರೆ ಒಮ್ಮೆ ಇವರು ಪುತ್ರಧರ್ಮವನ್ನು ಮರೆತು ಬಂಡೆದ್ದಿದ್ದರು. ಆಗ ಗವರ್ನರ ಜನರಲ್ಲರಾಗಿದ್ದ ಲಾರ್ಡ ವಿಲಿಂಗ್ಡನ್ನರು ಈ ಜಗಳದಲ್ಲಿ ಕೈಹಾಕಬೇಕಾಯಿತು. ಅನಂತರ ಈ ರಾಜಕುಮಾರರು ಬೇರೆಯಾಗಿ ಇರತೊಡಗಿದರೂ ದುಂದುಗಾರಿಕೆಯ ಜೀವನವನ್ನೇ ನಡೆಸಿದರು. ಅವರಿಗೆ ಕೊಡಲ್ಪಡುತ್ತಿದ್ದ ಬಹು ದೊಡ್ಡ ವರ್ಷಾಶನ ಸಾಲದೆ ಅವರು ಸಾಲ ಮಾಡಿದರು. ಮುಂದೆ ಈ ರಾಜಕುಮಾರರ ಅದೃಷ್ಟ ತಿರುಗಿದಾಗ ಚಕ್ರಬಡ್ಡಿ ಸಹಿತ ಹಣ ಸಿಗುವದೆಂಬ ಆಸೆಯಿಂದ ಸಾಹುಕಾರರು ಸಾಲ ಕೊಟ್ಟಿದ್ದರು. ಹೈದರಾಬಾದವು ಭಾರತದಲ್ಲಿ ವಿಲೀನವಾದ ನಂತರ ಈ ಸಾಹುಕಾರರ ಅದೃಷ್ಟ ಅವರ ಅಪೇಕ್ಷೆಯಂತೆ ತೆರೆಯಿತು ಎಂದು ಕೇಳಿದ್ದೇನೆ.

ಸಂಸ್ಥಾನದ ಆಡಳಿತದಲ್ಲಿ ನಿಜಾಮರ ತಂತ್ರ ವೈಶಿಷ್ಟ್ಯಪೂರ್ಣವಾದದ್ದಾಗಿತ್ತು. ತಾವೇ ಸ್ವತಃ ಧನಸಹಾಯ ಮಾಡಿ ಬೆಳೆಸಿದ ವಿರೋಧಿ ಪಕ್ಷವೊಂದನ್ನು ಅವರು ತಮ್ಮ ಸರಕಾರದ ವಿರುದ್ಧ ನಿಲ್ಲಿಸುತ್ತಿದ್ದರು. ಮಂತ್ರಿಮಂಡಳವನ್ನು ದುರ್ಲಕ್ಷಿಸಿ ತಾವೇ ನಿರ್ಣಯ ಮಾಡುತ್ತಿದ್ದರು. ನಿರ್ಣಯಗಳಿಗೆ ಬರುವ ಮೊದಲು ತಮ್ಮ ಸಲಹೆಪಡೆಯುವದಗತ್ಯ ಎಂದು ಮಂತ್ರಿಗಳು ಹೇಳಿದರೆ ಅವರ ಮೇಲೆ ಹರಿಹಾಯುತ್ತಿದ್ದರು. ತಮ್ಮ ಅಭಿಪ್ರಾಯಕ್ಕೆ ವಿರೋಧ ಮಾಡಿದವರನ್ನು ಮನೆಗೆ ಕಳಿಸುತ್ತಿದ್ದರು.

ನಿಜಾಮರು ತುಂಬ ಮಹತ್ವಾಕಾಂಕ್ಷಿಗಳು. ಹೈದರಾಬಾದನ್ನು ಇಸ್ಲಾಂ ರಾಜ್ಯವನ್ನಾಗಿ ಮಾಡಬೇಕೆಂಬುದು ಅವರ ಒಂದೇ ಒಂದಾದ ಧ್ಯೇಯವಾಗಿತ್ತು. ಜಿನ್ನಾರ ಪಾಕಿಸ್ತಾನದ ಕಲ್ಪನೆಗಿಂತಲೂ ನಿಜಾಮರದು ಒಂದು ತೂಕ ಮೇಲಿನದು—ಮತ್ತು ಹಳೆಯದು. ಏಕೆಂದರೆ ಅವರು ತಮ್ಮ ಪ್ರಜೆಗಳಲ್ಲಿ ನೂರಕ್ಕೆ ೮೬ರಷ್ಟಿದ್ದ ಹಿಂದುಗಳನ್ನು ನಿರ್ವೀರ್ಯರನ್ನಾಗಿ ಮಾಡುವದರಲ್ಲಿ ಯಶಸ್ವಿಗಳಾಗಿದ್ದರು.

ಮುಸ್ಲಿಂ ಸಮಾಜದ ಸರ್ವಮಾನ್ಯ ವರಿಷ್ಠ ಮತ್ತು ಸರಕಾರೀ ಅನುಗ್ರಹಗಳ ದಾತ ಎಂಬೆರಡು ಕಾರಣಗಳಿಂದ ನಿಜಾಮರ ಅಧಿಕಾರ ಮೆರೆಯುತ್ತಿತ್ತು. ಶ್ರೀಮಂತ ಮತ್ತು ಸುಸಂಸ್ಕೃತ ಮುಸಲ್ಮಾನ ಸರದಾರರ ವರ್ಗವು ತನ್ನ ಅಂತಸ್ತು, ಸರಕಾರದ ಅನುಗ್ರಹ ಮತ್ತು ತಮ್ಮ ಮಕ್ಕಳ ಭವಿತವ್ಯಕ್ಕಾಗಿ ನಿಜಾಮರನ್ನು ಅವಲಂಬಿಸಿತ್ತು. ಸಂಸ್ಥಾನದ ಅಧಿಕಾರಿಗಳಲ್ಲಿ ನೂರಕ್ಕೆ ೭೫ ರಷ್ಟು ಜನ ಮುಸಲ್ಮಾನರು. ಇವರು ಪರಂಪರಾಗತವಾಗಿ ಲಂಚಗುಳಿಗಳು. ಜನರಲ್ಲಿ ಅವರಿಗೆ ಸಹಾನುಭೂತಿಯಿರಲಿಲ್ಲ. ಅವರು ಜಾತ್ಯಂಧತೆಯಿಂದ ಪೀಡಿತರಾಗಿದ್ದರು. ಪೋಲೀಸ ಮತ್ತು ಸೈನ್ಯಪಡೆಯಲ್ಲಿ ನೂರಕ್ಕೆ ೯೫ ರಷ್ಟು ಜನ ಮುಸಲ್ಮಾನರಿದ್ದರು. ನಿಜಾಮರ ಸರ್ವಾಧಿಕಾರತ್ವವನ್ನು ಎತ್ತಿಹಿಡಿಯುವ ವರೆಗೆ ಬೇಕಾದ್ದನ್ನು ಮಾಡಲು ಮುಸ್ಲಿಮರಿಗೆ ಸಾಧ್ಯವಿತ್ತು.

ಮುಸಲ್ಮಾನರ ಸಂಖ್ಯೆ ಪಟ್ಟಣಗಳಲ್ಲಿಯೆ ಅಧಿಕವಾಗಿತ್ತು. ಹಳ್ಳಿಗಳಲ್ಲಿ ನೂರಕ್ಕೆ ೯೫ ರಷ್ಟು ಜನ ಹಿಂದುಗಳು. ಎರಡು ಶತಮಾನಗಳ ದಾಸ್ಯ ಜೀವನದಿಂದ ಹೈದರಾಬಾದದ ಹಿಂದುಗಳು ನಿರ್ವೀರ್ಯರಾಗಿದ್ದರು. ಈ ದೈನ್ಯ ಭಾವನೆಯನ್ನು ಸುಶಿಕ್ಷಿತ ಹಿಂದುಗಳಲ್ಲಿಯೂ ಕಾಣಬಹುದಾಗಿತ್ತು. ಹಿಂದುಗಳಲ್ಲಿ ಒಬ್ಬನಿಗಾದರೂ ನಿಜಾಮರ ವಿರುದ್ಧ, ಮುಸ್ಲಿಂ ಅಧಿಕಾರಿಗಳ ವಿರುದ್ಧ, ಮುಸ್ಲಿಂ ಸಮಾಜದ ವಿರುದ್ಧ ಮಾತಾಡುವ ಧೈರ್ಯವಿರಲಿಲ್ಲ. ಸರಕಾರದ ಅನುಗ್ರಹ ಸಂಪಾದನೆಗಾಗಿ ಮೆಳ್ಳೆಗಣ್ಣಿನವರ ರಾಜ್ಯದಲ್ಲಿ ಮೆಳ್ಳೆ

ಗಣ್ಣಿನವರಾಗುವ ಸೋಗನ್ನು ಅವರು ಧರಿಸುತ್ತಿದ್ದರು. "ಆಲಾ ಹಜರತ"ರು (ನಿಜಾಮ) ಜಾಣ ಮತ್ತು ನ್ಯಾಯನಿಷ್ಠುರ ಪ್ರಭುಗಳು, ಹಿಂದು ಮತ್ತು ಮುಸ್ಲಿಮರು ಅವರ ಎರಡು ಕಣ್ಣುಗಳಂತಿದ್ದು ಇಬ್ಬರನ್ನೂ ಅವರು ಸಮಾನತೆಯಿಂದ ನಡೆಸಿಕೊಳ್ಳುತ್ತಾರೆ ಎಂದು ಬಹಿರಂಗದಲ್ಲಿ ಹಿಂದುಗಳು ಹೇಳುತ್ತಿದ್ದರು. ಆದರೆ ಅವರ ಅಂತರಂಗದಲ್ಲಿದ್ದ ಸಂಕಟ, ದ್ವೇಷ ವರ್ಣನಾತೀತವಾಗಿತ್ತು.

ಇಂಥ ಆಲಾ ಹಜರತರೊಡನೆ ಏಜಂಟ ಜನರಲ್‌ನಾಗಿದ್ದಷ್ಟು ಕಾಲ ನನ್ನ ವ್ಯವಹಾರ ನಡೆಯಬೇಕಾಗಿತ್ತು.

ಅಗ್ನಿಭಕ್ಷಕ ಕಾಸೀಮ ರಜವಿ

ಇಷ್ಟೊಂದು ದಿನಗಳ ನಂತರ ಕಾಸೀಮ ರಜವಿ ಮಧ್ಯಯುಗದ ಯಾವನೋ ಕಾಲ್ಪನಿಕ ನಾಯಕ ಎಂದೆನಿಸಬಹುದು. ಆದರೆ ದುರ್ದೈವದಿಂದ ಆಗ ಆತ ಹೈದರಾಬಾದದ ಜನರಿಗೂ ಭಾರತಕ್ಕೂ ತನ್ನ ಇರವನ್ನು ಚುಚ್ಚಿಹೇಳುವ ಜೀವಂತ ವ್ಯಕ್ತಿಯಾಗಿದ್ದ.

ಅಲಿಗಡ ಮುಸ್ಲಿಂ ವಿಶ್ವವಿದ್ಯಾಲಯದ ಪದವೀಧರ ರಜವಿ. ಲಾತೂರ ಎಂಬ ಚಿಕ್ಕ ಪಟ್ಟಣದಲ್ಲಿ ವಕೀಲಿ ನಡೆಸುತ್ತಿದ್ದನೀತ. ರಜವಿ ಆ ಊರಿನಲ್ಲಿ ಒಬ್ಬ ಅಪಾಯಕಾರಿ ಪುಂಡನ ನೇತೃತ್ವದಲ್ಲಿ ಕೆಲಸ ಮಾಡುತ್ತಿದ್ದ ಗುಂಡಾ ಜನರಿಗೆ ಕಾಯದೆ ಸಲಹೆಗಾರನಾಗಿದ್ದ. ಇಂಥವನು ೧೯೪೬ ರಲ್ಲಿ ನಿಜಾಮರ ಒಪ್ಪಿಗೆಯಿಂದ ಇತ್ತಿಹಾದುಲ್ ಮುಸಲ್ಮೀನ್ ಸಂಸ್ಥೆಯ ಅಧ್ಯಕ್ಷನಾದ.

ಭಾವನಾಪೂರ್ಣವಾಗಿ ಭಾಷಣಗಳನ್ನು ಬಿಗಿಯಬಲ್ಲ ಉರಿಗಣ್ಣಿನ ಕಾಸೀಮ ರಜವಿ ಸಂಕುಚಿತ ವಿಚಾರದ ಧರ್ಮಾಂಧನಾಗಿದ್ದ. ತಾನೊಬ್ಬ ದೇವನಿರ್ಮಿತ ಧುರೀಣನೆಂದೂ ದಕ್ಷಿಣದ ಮುಸಲ್ಮಾನರನ್ನು ಭಾರತ ಒಕ್ಕೂಟದಿಂದ ವಿಮೋಚನೆಗೊಳಿಸುವದು ತನ್ನ ಧ್ಯೇಯವೆಂದೂ ಆತ ನಂಬಿದ್ದ. ಆದರೆ ಇದು ಮೊದಲನೆಯ ಘಟ್ಟ ಮಾತ್ರ. ಮದ್ರಾಸ ರಾಜ್ಯದ ಪೂರ್ವ ಕರಾವಳಿಯ ಸರ್ಕಾರ ಜಿಲ್ಲೆಗಳನ್ನು ಹೈದರಾಬಾದಕ್ಕೆ ಸೇರಿಸುವದು ಎರಡನೆಯದಾಗಿತ್ತು. ಅವನ ಮುಸಲ್ಮಾನ ಧರ್ಮವೀರರು ಬಳಿಕ ದಿಲ್ಲಿಗೆ ದಂಡೆತ್ತಿ ಹೋಗಿ ಮೊಗಲರ ಕೆಂಪು ಕೋಟೆಯ ಮೇಲೆ ಆಸಫಿಯಾ (ನಿಜಾಮರ) ಧ್ವಜವನ್ನು ಹಾರಿಸಬೇಕು ಮತ್ತು "ನಮ್ಮ ಸಾರ್ವಭೌಮರ ಪಾದಗಳನ್ನು ಬಂಗಾಲ ಉಪಸಾಗರದ ತೆರೆಗಳು ತೊಳೆಯುವವರೆಗೂ ವಿಶ್ರಮಿಸಲಾಗದು."

ಕೇವಲ 'ಕಾಫಿರ'ರಾದ, ಕಲ್ಲು ಮತ್ತು ಮಂಗಗಳನ್ನು ಪೂಜಿಸುವ, ಧರ್ಮದ ಹೆಸರಿನಲ್ಲಿ ಆಕಳ ಮೂತ್ರವನ್ನು ಕುಡಿದು, ಅದರ ಸಗಣಿ ತಿನ್ನುವ, ಎಲ್ಲ ರೀತಿಯಲ್ಲೂ ಕಾಡು ಮನುಷ್ಯರಾದ ಹಿಂದುಗಳನ್ನು ಗುಲಾಮರನ್ನಾಗಿ ಮಾಡಿಕೊಳ್ಳುವ ಹಕ್ಕು ಮುಸಲ್ಮಾನರಿಗಿದೆ ಎಂದು ರಜವಿಯ

ಕಾಸೀಮ ರಜವಿ



ಆಗ್ರಹದ ವಾದ. ಅದೇ ಮುಸಲ್ಮಾನನಾಗುವ ದೆಂದರೆ ಬೆಂಕಿಯೊಡನೆ ಆಟವಾಡಿದಂತೆ; "ಜಗತ್ತಿನ ಎಲ್ಲ ಶಕ್ತಿಗಳನ್ನು ಧಿಕ್ಕರಿಸಿ ಇಡೀ ಜಗತ್ತನ್ನೇ ತನ್ನ ಶತ್ರುವನ್ನಾಗಿ ಮಾಡಿಕೊಳ್ಳು ವವನೇ ಮುಸಲ್ಮಾನ."

ರಜವಿಯ ನೇತೃತ್ವದಲ್ಲಿ ಇತ್ತಿಹಾದ ಸ್ವಯಂಸೇವಕರಾದ ರಜಾಕಾರರು ಧರ್ಮವೀರರ ಸೋಗನ್ನು ಧರಿಸಿದರು. ರಜಾಕಾರ ದಲವನ್ನು ಸೇರುವಾಗ ಸೇರುವವನು "ನನ್ನ ಧುರೀಣನು ಕರೆಯಿತ್ತಾಗ ಇತ್ತಿಹಾದ ಮತ್ತು ಹೈದರಾಬಾದಕ್ಕಾಗಿ ಪ್ರಾಣಾರ್ಪಣ ಮಾಡುವೆ" ಎಂದು ಗಂಭೀರ ಪ್ರತಿಜ್ಞೆಯನ್ನು ಮಾಡಬೇಕಾಗಿತ್ತು. "ದಕ್ಷಿಣದಲ್ಲಿ ಮುಸ್ಲಿಂ ಪ್ರಭುತ್ವದ ಹಿರಿಮೆಯನ್ನು ಕಾಯ್ದುಕೊಳ್ಳಲು ದೇಹದಲ್ಲಿ ಉಸಿರಿರುವವರೆಗೂ ಹೋರಾಡುವೆನೆಂದು ಅಲ್ಲಾನ ಹೆಸರಿನಲ್ಲಿ ಆಣೆ ಮಾಡುವೆ" ಎಂಬ ವಾಕ್ಯಗಳಿಂದ ಅವನ ಪ್ರತಿಜ್ಞೆ ಪೂರ್ಣವಾಗುತ್ತಿತ್ತು.

೧೯೪೮, ಜನೇವರಿ ತಿಂಗಳಲ್ಲಿ ನಾನು ಹೈದರಾಬಾದಕ್ಕೆ ಹೋದಾಗ ರಜಾಕಾರರ ದಲದಲ್ಲಿ ೩೦ ಸಾವಿರ—ಗಂಡಸರು, ಹೆಂಗಸರು, ಹುಡುಗರು—ಸ್ವಯಂಸೇವಕರಿದ್ದರು. ಅಗಸ್ಟ ತಿಂಗಳ ಹೊತ್ತಿಗೆ ಆ ಸಂಖ್ಯೆ ಒಂದು ಲಕ್ಷವನ್ನು ಮೀರಿತ್ತು. ೫ ಲಕ್ಷ ಜನರನ್ನು ಕಲೆಹಾಕುವದು ದಲದ ಗುರಿಯಾಗಿತ್ತು.

ಯಥಾಸ್ಥಿತ ಒಪ್ಪಂದದ ರಾಮಾಯಣ

೧೯೪೭, ಜೂನ್ ೧೧ರಂದು ಹೊರಡಿಸಿದ 'ಫರ್ಮಾನ'ದಲ್ಲಿ ಅಗಸ್ಟ ೧೫ ರಂದು ತಾವು ಸ್ವತಂತ್ರ ಸಾರ್ವಭೌಮರಾಗುವೆವೆಂದು ನಿಜಾಮರು ಸಾರಿದಾಗ ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸು ಹೈದರಾಬಾದವು ಭಾರತ ಒಕ್ಕೂಟದಲ್ಲಿ ಸೇರ್ಪಡೆಯಾಗಬೇಕು ಮತ್ತು ಹೊಣೆಗಾರ ಸರಕಾರ ಸ್ಥಾಪಿತವಾಗಬೇಕು ಎಂದು ಸತ್ಯಾಗ್ರಹವನ್ನು ಹೂಡಲು ನಿರ್ಧರಿಸಿತು.

ಸಂಸ್ಥಾನ ಕಾಂಗ್ರೆಸ್ಸು ಪ್ರಾರಂಭಿಸಿದ ಸೇರ್ಪಡೆ ಸತ್ಯಾಗ್ರಹ ಕಾಳ್ಗಿಚ್ಚಿನಂತೆ ಹಬ್ಬಿತು. ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದುಕೊಂಡು ಸುಮಾರು ೯೦೦೦ ಜನರು ಬಂಧನಕ್ಕೊಳಗಾದರು. ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರಾದ ರಮಾನಂದತೀರ್ಥರೂ ಬಂಧಿಸಲ್ಪಟ್ಟರು.

ರಜವಿ ಕೂಡ ಸುಮ್ಮನಿರಲಿಲ್ಲ. ನಿಜಾಮ ಸರಕಾರವೇನಾದರೂ ಭಾರತ ಒಕ್ಕೂಟವನ್ನು ಸೇರಿದಲ್ಲಿ ಅದರ ಮೇಲೆ ಪ್ರತ್ಯಕ್ಷ ಕ್ರಮ ತೆಗೆದುಕೊಳ್ಳುವ ಅಂಜಿಕೆ ಹಾಕಿದನು. ಸತ್ಯಾಗ್ರಹದಲ್ಲಿ ಭಾಗವಹಿಸಿದ ಹಳ್ಳಿಗಳಲ್ಲಿ ಭಯೋತ್ಪಾದಕ ಚಟುವಟಿಕೆಗಳು ಆರಂಭಿಸಲ್ಪಟ್ಟವು. ಸಿಕಂದರಾಬಾದದಲ್ಲಿಯ ಹಿಂದುಗಳಲ್ಲಿ ಬಹಳಷ್ಟು ಜನರು ನೆರೆಯ ಭಾರತದ ಪ್ರಾಂತಗಳಿಗೆ ಓಡಿಹೋದರು.

ಸರದಾರರು ಸಂಸ್ಥಾನಗಳ ಸೇರ್ಪಡೆಯ ಸಂಧಾನವನ್ನು ಮೌಂಟಬ್ಯಾಟನ್ನರಿಗೆ ಬಿಟ್ಟಿದ್ದರು. ಸೇರ್ಪಡೆಗಾಗಿ ಗೊತ್ತುಪಡಿಸಿದ ಕೊನೆಯ ದಿನವಾದ ಅಗಸ್ಟ ೧೫ ಬಂದಿತು, ಬಂದಂತೆಯೇ ಹೋಯಿತು. ಉಳಿದ ಸಂಸ್ಥಾನಗಳೆಲ್ಲ ಸೇರ್ಪಡೆ ಪತ್ರವನ್ನೊಪ್ಪಿಕೊಂಡರೂ ನಿಜಾಮರು ಭಾರತದಲ್ಲಿ ಸೇರಿಕೊಳ್ಳಲಿಲ್ಲ. ಬದಲಿಗೆ ಅಗಸ್ಟ ೧೫ ರಿಂದ ತಾವು ಸ್ವತಂತ್ರ ಸಾರ್ವಭೌಮರಾದೆವೆಂದು ಅವರು ಅಗಸ್ಟ ೨೭ರ ಫರ್ಮಾನದಲ್ಲಿ ಸಾರಿದರು.

ಆದರೆ ನಿಜಾಮರ ಬ್ರಿಟಿಶ ಸಲಹೆಗಾರರಾದ ಸರ್ ವಾಲ್ಟರ್ ಮಾಂಕ್‌ಟನ್, ಪ್ರಧಾನ ಮಂತ್ರಿ ಛತ್ತಾರಿ ನವಾಬ ಇವರ ರಾಜೀನಾಮೆ ಮೊದಲಾದ ಕಾರಣಗಳಿಂದ ಹೆದರಿ ನಿಜಾಮರು ಭಾರತ ಒಕ್ಕೂಟದೊಡನೆ ಸಂಧಾನ ಪ್ರಾರಂಭಿಸಲೇಬೇಕಾಯಿತು. ಸಪ್ಟಂಬರ ೨೨ ರಂದು ಛತ್ತಾರಿ ನವಾಬರು, ಅಲಿ ಯವಾರ ಜಂಗ, ಸರ್ ವಾಲ್ಟರ ಮಾಂಕ್ಟನ್ ಮತ್ತು ಸರ್ ಸುಲ್ತಾನ ಅಹಮದರು ಹೈದರಾಬಾದದ ಪರವಾಗಿ ಭಾರತದ ಗವರ್ನರ

ಜನರಲ್ ಲಾರ್ಡ್ ಮೌಂಟಬ್ಯಾಟನ್ನರನ್ನು ಕಂಡರು.

ದೀರ್ಘ ಮಾತುಕತೆಗಳ ನಂತರ ಒಂದು ವರ್ಷದ ಮಟ್ಟಿಗೆಂದು ಯಥಾಸ್ಥಿತ ಒಪ್ಪಂದದ ಕರಡು ಸಿದ್ಧವಾಯಿತು. ಅದರಲ್ಲಿ ವಿದೇಶ ವ್ಯವಹಾರ, ಸಾರಿಗೆ ಸಂಪರ್ಕ ಮತ್ತು ಸಂರಕ್ಷಣೆ ಈ ಮೂರು ವಿಷಯಗಳ ಅಧಿಕಾರ ಕೇಂದ್ರ ಸರಕಾರದ್ದೆಂದು ಹೇಳಲಾಗಿತ್ತು.

ನಿಜಾಮರು ಇದಕ್ಕೆ ಖಂಡಿತ ಅಂಕಿತವಿಕ್ಕುವರೆಂದು ಭರವಸೆಕೊಟ್ಟು, ಅಕ್ಟೋಬರ ೨೨ ನೆಯ ದಿನಾಂಕ ಪುಭ್ಯಾಹ್ನ ಈ ಶಿಷ್ಟಮಂಡಳ ಹೈದರಾ-ಬಾದಕ್ಕೆ ಹಿಂತಿರುಗಿತು. ಅದು ನೇರವಾಗಿ ಕಿಂಗ್ ಕೋಠಿಗೆ ಹೋಗಿ ಯಥಾಸ್ಥಿತ ಒಪ್ಪಂದದ ಕರಡು ಮತ್ತು ನಿಜಾಮರಿಗೆ ಭಾರತ ಸರಕಾರದಿಂದ ಕೊಡಲಾದ ಸವಲತ್ತುಗಳ ಮತ್ತು ಅವರು ಹೊರಡಿಸಬೇಕಾದ ಫರ್ಮಾನದ ವಿಚಾರವಾಗಿ ಬರೆದ ಪತ್ರವನ್ನು ನಿಜಾಮರಿಗೆ ಓದಿ ತೋರಿಸಿತು. ನಿಜಾಮರು ಸ್ವಲ್ಪ ಅನು-ಮಾನಿಸಿದರು. ಕಡೆಗೆ ಅದನ್ನು ತಮ್ಮ ಕಾರ್ಯವಾಹಿ ಮಂಡಳಕ್ಕೆ ಸಲಹೆಗಾಗಿ ಕಳಿಸಿದರು.

ಕಾರ್ಯವಾಹಿಮಂಡಳವು ಒಪ್ಪಂದವನ್ನು ಸಾದ್ಯಂತವಾಗಿ ಮೂರು ದಿನ ಚರ್ಚಿಸಿತು.

ಒಮ್ಮೆ ನಿಜಾಮರ ಅಧ್ಯಕ್ಷತೆಯಲ್ಲಿ ಅದರ ಸಭೆ ಕಿಂಗ್ ಕೋಠಿಯಲ್ಲಿ ಸೇರಿತು. ಹೈದರಾಬಾದದ ಸೇನಾಪತಿ ಎಲ್. ಎಡ್ರೂಸ, ಮತ್ತು ವಿಶೇಷ ಆಮಂತ್ರಣದ ಮೇರೆಗೆ ರಾಜಾ ಬಹಾದ್ದೂರ ಎಸ್. ಅರವಮುಡು ಅಯ್ಯಂಗಾರರೂ ಈ ಸಭೆಗೆ ಬಂದಿದ್ದರು.

ಪ್ರತಿಯೊಬ್ಬರೂ ತಂತಮ್ಮ ಅಭಿಪ್ರಾಯಗಳನ್ನು ಹೇಳಬೇಕೆಂದು ನಿಜಾಮರು ಕೇಳಿಕೊಂಡರು. ಪಕ್ಕಾ ದರಬಾರಿಯಂತೆ ಪಿಂಗಳೆ ವೆಂಕಟರಾಮ ರೆಡ್ಡಿಯವರು "ಮಹಾಪ್ರಭುಗಳ ಅಭಿಪ್ರಾಯವೇ ನನ್ನ [illegible]ಯ" ಎಂದರು.

ಮಹಾಘ [illegible]ತಿವೆತ್ತ [illegible] 'ನಿಮ್ಮ ಸ್ವಂತ ಅಭಿಪ್ರಾ[illegible] ಕೊಳ್ಳಲು ನಿಮ್ಮನ್ನಿಲ್ಲ [illegible]ನೆ [illegible] ನಾನು ಹೇಳಿದ್ದನ್ನು ಪ್ರತಿಧ್ವನಿಸಲಿಕ್ಕಲ್ಲ' [illegible] ಗುಡುಗಿದರು.

ರಾಜಾ ಬಹಾದ್ದೂರರು ನಿಜಾಮರ ಅನುಮತಿ ಪಡೆದು, "ನಾವು ಇಂಗ್ಲಂಡ್, ಜರ್ಮನಿ ಅಥವಾ ಫ್ರಾನ್ಸಿನಂತೆ ಎಂದಾದರೂ ಸ್ವತಂತ್ರರಾಗಿದ್ದೆವೇ?" ಎಂದು ಕೇಳಿದರು. ''ಇಲ್ಲ"ವೆಂದು ಎಲ್ಲರೂ ಉತ್ತರವಿತ್ತರು.

''ಭಾರತ ಒಕ್ಕೂಟಕ್ಕೂ ಹೈದರಾಬಾದಕ್ಕೂ ಯುದ್ಧವಾದರೆ ನಾವೆಷ್ಟು ದಿನ ತಾಳಬಲ್ಲೆವು?"

ಸೇನಾಪತಿ ಎಲ್ ಎಡ್ರೂಸರು, ''ಹೆಚ್ಚೆಂದರೆ, ನಾಲ್ಕು ದಿನ" ಎಂದುತ್ತರವಿತ್ತರು. ನಿಜಾಮರು "ಎರಡೇ ದಿನ" ಎಂದು ಅದನ್ನು ತಿದ್ದಿದರು

"ಹಾಗಿದ್ದರೆ ಯಥಾಸ್ಥಿತ ಒಪ್ಪಂದಕ್ಕೆ ಸಹಿ ಹಾಕುವದೇ ಜಾಣತನ. ಉಳಿದ ಸಂಸ್ಥಾನಗಳಿಗಿಂತ ನಮಗೆ ಹೆಚ್ಚಿನ ಸವಲತ್ತುಗಳು ದೊರೆತಿವೆ" ಎಂದು ರಾಜಾಬಹಾದ್ದೂರರು ಹೇಳಿದರು. ನವಾಬ ಮಹದಿ ಯಾರ ಜಂಗರು ಅನುಮೋದಿಸಿದರು. ಮೊಯಿನ ನವಾಜ ಜಂಗ ಮತ್ತು ಇನ್ನೊಬ್ಬರು ಮಾತ್ರ ಈ ಅಭಿಪ್ರಾಯವನ್ನೊಪ್ಪಲಿಲ್ಲ.

"ಅಯ್ಯಂಗಾರರ ಅಭಿಪ್ರಾಯ ನನಗೆ ಸಮ್ಮತವಿದೆ" ಎಂದರು ನಿಜಾಮರು. ೬ ವಿರುದ್ಧ ೩ ಮತಗಳಿಂದ ಕಾರ್ಯವಾಹಿ ಮಂಡಳವು ಒಪ್ಪಂದ ಕರಡನ್ನು ಒಪ್ಪಿತು.

೨೫ ನೆಯ ದಿನಾಂಕ ರಾತ್ರಿ ನಿಜಾಮರು ಮಂಡಳದ ನಿರ್ಣಯವನ್ನು ಒಪ್ಪಿ ಕೆಲ ಚಿಲ್ಲರೆ ತಿದ್ದುಪಡಿಗಳೊಂದಿಗೆ ಯಥಾಸ್ಥಿತ ಒಪ್ಪಂದಕ್ಕೆ ಸಹಿ ಹಾಕುವದಾಗಿ ವಚನವಿತ್ತರು.

೨೭ರಂದು ಮುಂಜಾನೆ ೮॥ ಗಂಟೆಗೆ ಶಿಷ್ಟ ಮಂಡಳವು ದಿಲ್ಲಿಗೆ ಹೊರಡಬೇಕಾಗಿತ್ತು. ಆದರೆ ಅಂದು ಬೆಳಗಿನ ಜಾವ ಮೂರು ಗಂಟೆಗೆ ೨೦-೨೫ ಸಾವಿರ ರಜಾಕಾರರು ಭರ್ಚಿ ಖಡ್ಗಧಾರಿಗಳಾಗಿ "ಶಿಷ್ಟಮಂಡಳವು ದಿಲ್ಲಿಗೆ ಹೋಗುವದನ್ನು ಬಲಪ್ರಯೋಗದಿಂದ ತಡೆಯುವೆವು" ಎಂದು ಕೂಗುತ್ತ ಸರ್ ವಾಲ್ಟರ್ ಮಾಂಕ್ ಟನ್, ಛತ್ತಾರಿ ನವಾಬ ಮತ್ತು ಸರ್ ಸುಲ್ತಾನರ ವಸತಿಗಳನ್ನು ಸುತ್ತುಗಟ್ಟಿದರು. ಕೊನೆಗೆ ಅವರು ಸೈನ್ಯಶಾಖೆಗೆ ಫೋನ್ ಮಾಡಿ ಅಲ್ಲಿಂದ ಪಹಾರಾಗ

ಬೇಕಾಯಿತು.

ಶಿಷ್ಟಮಂಡಳ ಗೊತ್ತಾದ ವೇಳೆಗೆ ಹೊರಡಲಿಲ್ಲ. ಮಧ್ಯಾಹ್ನ ನಿಜಾಮರು ಪರಿಸ್ಥಿತಿಯ ಪರಾಮರ್ಶೆಗಾಗಿ ಶಿಷ್ಟಮಂಡಳವನ್ನು ಕರೆಸಿಕೊಂಡರು. ಅವರು ಇತ್ತಿಹಾದನ್ನು ಕಟು ಶಬ್ದಗಳಲ್ಲಿ ಖಂಡಿಸಿ, ರಜವಿಯನ್ನು ಶಪಿಸಿ, "ಕಾಸೀಮ ರಜವಿ ಒಪ್ಪಂದವನ್ನು ಒಪ್ಪುವಂತೆ ಮಾಡಲು ನಿಶ್ಚಯಿಸಿದ್ದೇನೆ" ಎಂದರು.

೨೮ನೆಯ ದಿನಾಂಕ ಮುಂಜಾನೆ ನಿಜಾಮರು ಮತ್ತೆ ಶಿಷ್ಟಮಂಡಳವನ್ನು ಕರೆಯಿಸಿಕೊಂಡರು. ತಮ್ಮ ಮುಖ್ಯ ಕಾರ್ಯದರ್ಶಿಗೆ "ಈಗಿಂದೀಗ ರಜವಿಯನ್ನು ಕರೆಸು" ಎಂದು ಅಪ್ಪಣೆ ಮಾಡಿದರು.

ಕೆಲ ನಿಮಿಷಗಳಲ್ಲಿ ರಜವಿ ಬಂದು ಎದುರಿಗೆ ನಿಂತ. "ಯಥಾಸ್ಥಿತ ಒಪ್ಪಂದಕ್ಕೆ ನಿನ್ನ ಆಕ್ಷೇಪವೇನು?" ನಿಜಾಮರು ಅವನನ್ನು ಕೇಳಿದರು.

ರಜವಿ ನಿರ್ಧಾರದ ಉತ್ತರವಿತ್ತ: "ಆಲಾ ಹಜರತರು ಯಥಾಸ್ಥಿತ ಒಪ್ಪಂದಕ್ಕೆ ಸಹಿ ಹಾಕಿದರೆ ಹೈದರಾಬಾದದ ಇತಿಶ್ರೀಯಾದಂತೆ. ಈ ಶಿಷ್ಟಮಂಡಳ ಕೆಲಸಕ್ಕೆ ಬಾರದ್ದು. ಹೊಸ ಶಿಷ್ಟಮಂಡಳವನ್ನು ರಚಿಸಲು ನನಗೆ ಅವಕಾಶ ಕೊಡಿರಿ. ಈ ಶಿಷ್ಟಮಂಡಳಕ್ಕೆ ಸಾಧ್ಯವಾಗದ್ದನ್ನು ಸಾಧಿಸುವ ನಂಬಿಗೆ ನನಗಿದೆ."

"ಸರ್ ವಾಲ್ಟರ ಮಾಂಕ್ಟನ್ನರಿದ್ದ ಶಿಷ್ಟಮಂಡಳ ಅಯಶಸ್ವಿಯಾಗಿರುವಾಗ ಇನ್ನೊಂದು ಶಿಷ್ಟಮಂಡಳ ಯಶಸ್ವಿಯಾಗುವದೆಂಬುದಕ್ಕೆ ನಿಮ್ಮ ಆಧಾರವೇನು?" ಸರ್ ಸುಲ್ತಾನ ಅಹಮ್ಮದರು ರಜವಿಯನ್ನು ಕೇಳಿದರು.

"ಭಾರತಕ್ಕೆ ಉತ್ತರದಲ್ಲೇ ಬೇಕಾದಷ್ಟು ತೊಂದರೆಗಳಿವೆ. ನಾವು ಪಟ್ಟು ಹಿಡಿದದ್ದಾದರೆ ನಮಗೆ ಏನನ್ನೂ ಮಾಡುವ ಪರಿಸ್ಥಿತಿಯಲ್ಲಿ ಅದು ಇಲ್ಲ. ನನಗೆ ಒಂದು ಅವಕಾಶವನ್ನು ಕೊಟ್ಟು ನೋಡಿರಿ."

ನಿಜಾಮರು ಹೊಯ್ದಾಡುವಂತೆ ಕಾಣಿಸಿತು. ಶಿಷ್ಟಮಂಡಳದ ನಾಲ್ವರು ಸದಸ್ಯರು ರಾಜೀನಾಮೆಯಿತ್ತರು. ಕಾಸೀಮ ರಜವಿ ಅಪ್ಪಣೆ ಪಡೆದು ಹೊರಟುಹೋದ.

"ಕಳ್ಳ! ಮೂರು ಕಾಸಿನವ! ಇವನ ತಲೆ ಕೆಟ್ಟಿರಬೇಕು!" ಎಂದು ರಜವಿ ಹೋದ ಬಳಿಕ ನಿಜಾಮರು ಅವನನ್ನು ಬಯ್ದರು.

ಆದರೆ ಅವರು ಶಿಷ್ಟಮಂಡಳದವರ ರಾಜೀನಾಮೆಗಳನ್ನು ಸ್ವೀಕರಿಸಿದರು!

ಪ್ರವೇಶ: ಲಾಯಿಕ ಅಲಿ

ರಜವಿಯ ಕೈ ಮೇಲಾಯಿತು. ಅಕ್ಟೋಬರ ೩೧ ರಂದು ದಿಲ್ಲಿಗೆ ಪತ್ರ ಬರೆದು ಭಾರತ ಸರಕಾರದೊಂದಿಗೆ ನಡೆದ ಸಂಧಾನ ವಿಫಲವಾದರೆ ಪಾಕಿಸ್ತಾನವನ್ನು ಸೇರುವದಾಗಿ ನಿಜಾಮರು ಬೆದರಿಕೆ ಹಾಕಿದರು. ರಜವಿಯ ಮನಸಿನಂತೆ ಹೊಸ ಶಿಷ್ಟಮಂಡಳ ರಚಿತವಾಯಿತು.

ಮೊಯಿನ ನವಾಜ ಜಂಗ, ಅಬ್ದುಲ್ ರಹೀಮ, ಪಿಂಗಳೆ ವೆಂಕಟರಾಮ ರೆಡ್ಡಿ ಇವರನ್ನೊಳಗೊಂಡ ಈ ಶಿಷ್ಟಮಂಡಳ ನವಂಬರ ೨ ರಂದು ದಿಲ್ಲಿಗೆ ಹೋಯಿತು. ಆದರೆ ಲಾರ್ಡ್ ಮೌಂಟ-ಬ್ಯಾಟನ್ನರು, "ಮೊದಲು ಒಪ್ಪಂದವಾದಂತೆ ಯಥಾಸ್ಥಿತ ಒಪ್ಪಂದಕ್ಕೆ ಸಹಿ ಬೀಳಲೇಬೇಕು. ಇಂದಿಗೂ ಭಾರತದ ಸೈನ್ಯವು ಜಗತ್ತಿನ ಪ್ರಬಲ ಸೈನ್ಯಗಳಲ್ಲೊಂದಾಗಿದೆಯೆಂದು ಮರೆಯದಿರಿ. ಒಪ್ಪಂದಕ್ಕೆ ಸಹಿ ಹಾಕದಿದ್ದರೆ ನಿಜಾಮರಿಗೆ ತುಂಬಿಬಾರದ ಹಾನಿಯಾಗುವದು" ಎಂದು ಸ್ಪಷ್ಟವಾಗಿ ಹೇಳಿದರು.

ಕೊನೆಗೆ ನವಂಬರ ೨೯ರಂದು ಕೆಲವೊಂದು ಚಿಕ್ಕಪುಟ್ಟ ತಿದ್ದುಪಡಿಗಳೊಂದಿಗೆ ನಿಜಾಮರು ಯಥಾಸ್ಥಿತ ಒಪ್ಪಂದಕ್ಕೆ ಸಹಿ ಹಾಕಿದರು. ಈ ವಿಷಯವನ್ನು ಅಂದೇ ಸರದಾರರು ಘಟನಾ ಸಮಿತಿಯಲ್ಲಿ ಸಾರಿದರು. ಅದು ಸ್ವಾಗತಿಸಲ್ಪಟ್ಟರೂ ನಮ್ಮವರಿಗೆ ಸಂದೇಹವಿದ್ದೇ ಇದ್ದಿತು. ನಿಜಾಮರು ಗೆದ್ದರು, ಭಾರತದಲ್ಲಿ ಸೇರುವದನ್ನು ತಪ್ಪಿಸಿಕೊಂಡರು ಎಂದೇ ಸಾರ್ವಜನಿಕರು ತಿಳಿದುಕೊಂಡರು.

ಈಗ ತನ್ನ ಬಂಟ ಮೀರ ಲಾಯಿಕ ಅಲಿಯನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ರಜವಿ

ಒತ್ತಾಯಪಡಿಸಿದನು. ರಜವಿ ಮತ್ತು ಭಾರತ ಒಕ್ಕೂಟಗಳ ನಡುವೆ ಇದ್ದ ನಿಜಾಮರಿಗೆ, ಅತ್ತ ಇಲಿ ಇತ್ತ ದರಿ ಎಂಬಂತಾಗಿತ್ತು. ಜಿನ್ನಾರ ಸಲಹೆ ಕೇಳಿ ಅವರು ತಮ್ಮ ನಿರ್ಣಯವನ್ನು ಮಾಡಿದರು. ಮೀರ ಲಾಯಕ ಅಲಿ ಹೈದರಾಬಾದದ ಮುಖ್ಯ ಮಂತ್ರಿಯಾದರು.

ಬಳಿಕ ರಜವಿ ಹೈದರಾಬಾದದ ಧರ್ಮವೀರನಾಗಿಬಿಟ್ಟ. ಮುಖ್ಯ ಮಂತ್ರಿಯನ್ನು ಮಾತ್ರವಲ್ಲ, ಇತರ ಮಂತ್ರಿಗಳನ್ನೂ ರಜವಿಯ ಅಪೇಕ್ಷೆಯಂತೆಯೇ ನಿಜಾಮರು ನೇಮಿಸಿದಾಗ ನಿಜಾಮರ ಮೇಲಿನ ಇತ್ತಿಹಾದದ ವಿಜಯ ಸಂಪೂರ್ಣವಾಯಿತು.

ಈ ಮಂತ್ರಿಮಂಡಲದಲ್ಲಿ ಪಿಂಗಳೆ ವೆಂಕಟರಾಮ ರೆಡ್ಡಿ (ಉಪ ಪ್ರಧಾನಿ), ಮೊಯಿನ್ ನವಾಜ ಜಂಗ್, ಅಬ್ದುರ್ರಹಮಾನ್, ಕಾಂಗ್ರೆಸ್ಸಿನಲ್ಲಿ ವಿರೋಧಿ ಗುಂಪಿನ ನಾಯಕರಾದ ಶ್ರೀ ರಾಮಾಚಾರ್, ಲಿಂಗವಂತರ ಪರವಾಗಿ ಶ್ರೀ ಮಲ್ಲಿಕಾರ್ಜುನಪ್ಪ, ಹರಿಜನರ ಪರವಾಗಿ ವೆಂಕಟರಾವ್ ಇವರಲ್ಲದೆ ಜೋಶಿ ಎಂಬ ಗುಜರಾಥಿ ಇದ್ದರು. ರಾಮಾಚಾರ್ಯರು ಕೆಲ ದಿನಗಳಲ್ಲೇ ಬೇಸತ್ತು ರಾಜೀನಾಮೆಯಿತ್ತರು.

ಶ್ರೀ ಜೋಶಿಯವರು ಸರದಾರ ಪಟೇಲರಲ್ಲಿ ತಮ್ಮ ಪ್ರಭಾವವಿದೆಯೆಂದು ರಜವಿಗೆ ಹೇಳಿ ಮಂತ್ರಿಯಾಗಿದ್ದರು. ಅವರು ಸರದಾರರಿಗೆ ಪತ್ರ ಬರೆದು ರಜವಿಯನ್ನು ಕಾಣಲು ಕೇಳಿಕೊಂಡರು.

ದಿಲ್ಲಿಯಲ್ಲಾದ ಸರದಾರ–ರಜವಿ ಭೆಟ್ಟಿಯ ಕಥೆ ನನಗೆ ಹಿಂದಿನಿಂದ ತಿಳಿಯಿತು. ಸರದಾರರು ಒಂದು ಪ್ರತಿಮೆಯಂತೆ ನಿಶ್ಚಲರಾಗಿ ಸ್ಥಿರಮುದ್ರೆಯಿಂದ ಕುಳಿತಿದ್ದರು. ಜೋಶಿ ನಮಸ್ಕಾರ ಮಾಡಿ ದೇಶಾವರಿ ನಗೆ ನಕ್ಕರು. ರಜವಿ ತಲೆಯಲ್ಲಾಡಿಸಿ ಸಲಾಮು ಮಾಡಿದಂತೆ ಮಾಡಿ ಕುರ್ಚಿಯ ಮೇಲೆ ಕುಳಿತನು.

ಸರದಾರರು ಮೌನವನ್ನು ಭಂಗಿಸಿ,"ಒಳ್ಳೇದು, ಏನು ಬೇಕು ನಿಮಗೆ?" ಎಂದು ಕೇಳಿದರು.

ರಜವಿ ಮೈಮೇಲೆ ಬಂದವರಂತೆ ಒಂದು ಕ್ಷಣ ಕಣ್ಣು ಕೆಕ್ಕರಿಸಿ,"ನಿಮ್ಮ ಹೃದಯ ಬದಲಾಗಬೇಕೆನ್ನುತ್ತೇನೆ" ಎಂದ.



ಲಾಯಕ ಅಲಿ
"ಶಹಾದತ ಎಂಬುದೊಂದಿದೆಯಲ್ಲ!"

ಸರದಾರರು ತುಸು ತಡೆದು, "ವಿಷಪೂರಿತ ಹೃದಯಕ್ಕೆ ಮಾತ್ರ ಬದಲಾವಣೆಯ ಅಗತ್ಯವಿರುತ್ತದೆ" ಎಂದರು.

"ಹೈದರಾಬಾದ ಸ್ವತಂತ್ರವಾಗಿರಲು ನೀವೇಕೆ ಬಿಡುವದಿಲ್ಲ?"

"ಬೇರೆ ಯಾವ ಸಂಸ್ಥಾನಕ್ಕೂ ಕೊಡದ ಸವಲತ್ತು ಹೈದರಾಬಾದಕ್ಕೆ ಕೊಟ್ಟಿದ್ದೇನೆ. ಇನ್ನು ಹೆಚ್ಚಿಗೇನೂ ಸಾಧ್ಯವಿಲ್ಲ."

"ಆದರೆ ಹೈದರಾಬಾದದ ತೊಂದರೆಗಳನ್ನು ನೀವು ತಿಳಿದುಕೊಳ್ಳಬೇಕು."

"ನೀವು ಪಾಕಿಸ್ತಾನದೊಂದಿಗೆ ಮಸಲತ್ತು ಮಾಡಿರದಿದ್ದರೆ ಇದರಲ್ಲಿ ತೊಂದರೆಯೇನೋ ಕಾಣೆ," ಸರದಾರರೆಂದರು.

"ನೀವು ನಮ್ಮ ತೊಂದರೆಗಳ ವಿಚಾರ ಮಾಡದಿದ್ದರೆ ನಾವು ಮಣಿಯುವದಿಲ್ಲ. ಕೊನೆಯ ಮನುಷ್ಯನ ವರೆಗೂ ಹೋರಾಡಿ ಮಡಿಯುವೆವು."

"ನೀವಾಗಿಯೇ ಆತ್ಮಹತ್ಯೆ ಮಾಡಿಕೊಳ್ಳುವದಾದರೆ ನಾನು ಹೇಗೆ ತಡೆಯಲಿ?"

"ಹೈದರಾಬಾದದ ಮುಸ್ಲಿಮರ ಪರಿಚಯ ನಿಮಗಿಲ್ಲ. ನಮ್ಮ ಸ್ವಾತಂತ್ರ್ಯಕ್ಕಾಗಿ ನಾವು

ಸರ್ವಸ್ವವನ್ನೂ ಬಲಿದಾನ ಮಾಡುವೆವು.''

"ಬಲಿದಾನದ ಪ್ರಶ್ನೆಯೇ ಉದ್ಭವಿಸಿದರೆ ತಾನೇನು ಮಾಡಬಲ್ಲೆನೆಂಬುದನ್ನು ಭಾರತವು ತೋರಿಸಿಕೊಟ್ಟಿದೆ. ಆದರೆ ಹೈದರಾಬಾದವಿನ್ನೂ ತೋರಿಸಿಕೊಡಬೇಕಾಗಿದೆ."

ರಜವಿ ಉದ್ರೇಕದಿಂದ 'ದೀನ್' ಮತ್ತು 'ಮಿಲಾತ'ಕ್ಕಾಗಿ ರಕ್ತ ಸುರಿಸುವ ಸುದೀರ್ಘ ಆಕ್ರೋಶ ಮಾಡಿದ.

ಸರದಾರರು ಗಂಭೀರ ಮೌನದಿಂದ ಅದೆಲ್ಲವನ್ನೂ ಕೇಳಿಕೊಂಡು, "ಕೈಮೀರುವ ಮೊದಲು ಬೆಳಕನ್ನು ಕಾಣಬೇಕೆಂದು ನಿಮಗೆ ಸೂಚಿಸುತ್ತೇನೆ. ಹಗಲು ಕಂಡ ಬಾವಿಯಲ್ಲಿ ರಾತ್ರಿ ಬೀಳಬೇಡಿರಿ" ಎಂದರು.

ನಾ ಕಂಡ ಪರಿಸ್ಥಿತಿ

ಜನವರಿ ೧೫ ರಂದು ನಾವು ಬೋಲಾರಾಮ ರೆಸಿಡೆನ್ಸಿಯಿಂದ ನೆರೆಯ ಡೆಕ್ಕನ್ ಹೌಸಿಗೆ ಸ್ಥಳಾಂತರಿಸಿದೆವು. ಅಲ್ಲಿ ಇದುವರೆಗೆ ಸಿಕಂದರಾಬಾದದಲ್ಲಿದ್ದ ನಮ್ಮ ಸೈನ್ಯದ ಹಿರಿಯಧಿಕಾರಿ ವಾಸವಾಗಿದ್ದ. ನಾನು 'ಡೆಕ್ಕನ್ ಹೌಸ್' ದ ಹೆಸರನ್ನು 'ದಕ್ಷಿಣಾ ಸದನ' ಎಂದು ಬದಲಾಯಿಸಿದೆ.

ಬಹು ಬೇಗನೆ ನನಗೆ ಪರಿಸ್ಥಿತಿಯ ಗಾಂಭೀರ್ಯದ ಅರಿವಾಯಿತು.

ರಜಾಕಾರರು ಗಂಡಾಂತರ ಸ್ವರೂಪಿಗಳಾಗಿದ್ದರು. ಹೈದರಾಬಾದ ಮತ್ತು ಇತರ ಜಿಲ್ಲೆಗಳ ಊರುಗಳಲ್ಲಿ ಅವರು ಮತ ಪ್ರದರ್ಶನಗಳನ್ನು ನಡೆಸಿ ತಮ್ಮನ್ನು ವಿರೋಧಿಸುವವರನ್ನು, ಹೈದರಾಬಾದದಲ್ಲಿ ಹೊಣೆಗಾರ ಸರಕಾರ ಬೇಕು ಅಥವಾ ಹೈದರಾಬಾದವು ಭಾರತದಲ್ಲಿ ಸೇರ್ಪಡೆಯಾಗಬೇಕು ಎಂದು ಹೇಳುವವರನ್ನು ಥಳಿಸುತ್ತಿದ್ದರು. ಭಾರತದ ಒಕ್ಕೂಟ ಪ್ರದೇಶದಲ್ಲಿ ನಾನಾ ವೇಷಗಳನ್ನು ಧರಿಸಿ ಬಂದು ಶಸ್ತ್ರಾಸ್ತ್ರಗಳನ್ನು ಕಳ್ಳತನದಿಂದ ಪೂರೈಸಲು ಮತ್ತು ಹೈದರಾಬಾದ ಪೋಲೀಸ ಮತ್ತು ಸೈನ್ಯಗಳಿಗೆ ಮುಸ್ಲಿಂ ಉಮೇದುವಾರರನ್ನು ಕಲೆಹಾಕಿ ಕಳಿಸಿಕೊಡಲು ಏಜಂಟರನ್ನು ನಿಯಮಿಸುತ್ತಿದ್ದರು.

ಅವರಿಗೆ ತಮ್ಮ ಚಟುವಟಿಕೆಗಳನ್ನು ನಡೆಸಲು ಬೇಕಾದಷ್ಟು ಅನುಕೂಲತೆಗಳಿದ್ದವು. ಅವರು ಎಷ್ಟೋ ಮೂರು ಟನ್ನಿನ ಲಾರಿಗಳನ್ನೂ ನೂರು ಗಟ್ಟಲೆ ಜೀಪ್ ಗಾಡಿಗಳನ್ನೂ ಒಂದು ಟನ್ ಟ್ರಕ್ಕುಗಳನ್ನೂ ಉಪಯೋಗಿಸುತ್ತಿದ್ದರು. ಪೆಟ್ರೋಲಿನ ಕೊರತೆಯಿದ್ದರೂ ಅವರಿಗೆ ಸರಕಾರೀ ಡಿಪೊಗಳಿಂದ ವಿಪುಲವಾಗಿ ಪೆಟ್ರೋಲು ದೊರೆಯುತ್ತಿತ್ತು. ನಿಜಾಮರಿಂದಲ್ಲದೇ ಮತ್ತಾರಿಂದ ಇಷ್ಟು ಸಹಾಯ ದೊರಕಬಹುದಾಗಿತ್ತು?

ಹೈದರಾಬಾದವು ಶಸ್ತ್ರಾಸ್ತ್ರ ತಯಾರಿಕೆಗಾಗಿ ಸಿದ್ಧತೆ ನಡೆಸುತ್ತಿತ್ತು. ರಜಾಕಾರರ ಮತ್ತು ಪೋಲೀಸರ ಸಂಚಾರ ತೀವ್ರಗತಿಯಿಂದಾಗಲೆಂದು ಟ್ರಕ್ಕುಗಳನ್ನು, ಮೋಟರುಗಳನ್ನು ದೊಡ್ಡ ಸಂಖ್ಯೆಯಲ್ಲಿ ಕೊಳ್ಳಲಾಗುತ್ತಿತ್ತು.

ಕರಾವಳಿ ಸಂಪಾದನೆಗಾಗಿ ಗೋವೆಯನ್ನು ಖರೀದಿಗೆ ಕೊಳ್ಳುವ ಸಂಧಾನವನ್ನ ಆಂಗ್ಲ ಗೃಹಸ್ಥನೊಬ್ಬ ನಡೆಯಿಸುತ್ತಿದ್ದ. ಝೆಕೊಸ್ಲೊವಾಕಿಯ ಮತ್ತು ಫ್ರಾನ್ಸುಗಳಿಂದ ಹೈದರಾಬಾದ ಸೈನ್ಯಕ್ಕಾಗಿ ಶಸ್ತ್ರಾಸ್ತ್ರ ಕೊಳ್ಳಲು ಸೇನಾಪತಿ ಎಲ್. ಎಡ್ರೂಸರು ಹೋಗಿದ್ದರು.

ಪಾಕಿಸ್ತಾನದಲ್ಲೊ, ಇರಾಕದಲ್ಲೊ ೫೦ ಬಾಂಬರ ವಿಮಾನಗಳುಳ್ಳ "ಮಯೂರ ವಿಮಾನ ದಲ"ವನ್ನು ಹೈದರಾಬಾದವು ಇಟ್ಟುಕೊಂಡಿತ್ತು ಎಂದೂ ಕೇಳಿಬಂತು. ಭಾರತವೇನಾದರೂ ಹೈದರಾಬಾದದ ಮೇಲೆ ಸೈನಿಕ ಕ್ರಮ ಕೈಕೊಂಡರೆ ಕೂಡಲೆ ಮುಂಬಯಿ ಮತ್ತು ಅಹಮದಾಬಾದಗಳ ಮೇಲೆ ಬಾಂಬು ದಾಳಿ ಮಾಡಲು ಈ ವಿಮಾನಪಡೆಯನ್ನು ಸಿದ್ಧವಾಗಿಡಲಾಗಿತ್ತು.

ಯಥಾಸ್ಥಿತಿ ಒಪ್ಪಂದದ ಪ್ರಕಾರ ಭಾರತದ ಅಂಚೆ, ತಂತಿ, ಟೆಲಿಫೋನುಗಳನ್ನು ನಿಜಾಮ ಸರಕಾರಕ್ಕೆ ಒಪ್ಪಿಸಬೇಕಾಗಿತ್ತು ಹಾಗಾದಲ್ಲಿ ಇತ್ತಿಹಾದದವರು ಮನಸ್ಸು ಮಾಡಿದ ಕ್ಷಣದಲ್ಲಿ ಉತ್ತರ, ದಕ್ಷಿಣಗಳ ಸಂಬಂಧ ತಪ್ಪುವ ಗಂಡಾಂತರವಿತ್ತು.

ಸಿಕಂದರಾಬಾದದಿಂದ ಭಾರತದ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳಬೇಕೆಂದು ನಿಜಾಮ ಸರಕಾರವು ಆಗ್ರಹಪಡಿಸುತ್ತಿತ್ತು. ಲಾರ್ಡ್ ಮೌಂಟಬ್ಯಾಟನ್ನರು ಈ ಸೂಚನೆಯನ್ನು ಒಪ್ಪಿಕೊಂಡಿದ್ದರು. ಹಾಗಾದಲ್ಲಿ ಅದರ ಇರುವಿಕೆಯಿಂದ ಇದ್ದ ಅಲ್ಪ ಸ್ವಲ್ಪ ಭಯವೂ ತಪ್ಪಿ ಇತ್ತಿಹಾದವು ಸರ್ವತಂತ್ರ ಸ್ವತಂತ್ರವಾಗುವಂತಿತ್ತು.

ಆದ್ದರಿಂದ ಜನವರಿ ೧೧ ರಂದು ನಾನು ಮುಂಬಯಿಯಲ್ಲಿ ಸರದಾರರನ್ನು ಭೆಟ್ಟಿಯಾದೆ. ನಮ್ಮ ಚರ್ಚೆಯ ಫಲವಾಗಿ ಸರದಾರರು ತಮ್ಮ ಗಡಿಗಳಲ್ಲಿ ರಜಾಕಾರರ ಚಟುವಟಿಕೆಗಳಿಗೆ ಆಸ್ಪದವಿರದಂತೆ ನೋಡಿಕೊಳ್ಳಲು ಪ್ರಾಂತ ಸರಕಾರಗಳಿಗೆ ಆದೇಶವಿತ್ತರು. ಸೈನ್ಯವು ಸಿಕಂದರಾಬಾದದಿಂದ ಹೊರಟುಹೋದ ಮೇಲೆ ಪರಿಸ್ಥಿತಿ ತಿಳಿಯಾಗುವವರೆಗೆ ಸಿಕಂದರಾಬಾದ ಬರಾಕು ಮತ್ತು ತಂತಿ ಟೆಲಿಫೋನುಗಳನ್ನು ನಿಜಾಮರಿಗೆ ವಹಿಸಿ ಕೊಡಬಾರದೆಂದು ಅವರು ಅಪ್ಪಣೆಯಿತ್ತರು.

ಸಂಧಾನ ಪರ್ವ

ನಾನು ಹೈದರಾಬಾದಕ್ಕೆ ಬಂದದ್ದು ಜನವರಿ [illegible] ರಂದು ; ಪೋಲೀಸ ಕ್ರಮ ಜರುಗಿದ್ದು ಸಪ್ಟಂಬರ ೧೩ ರಂದು. ಈ ಅವಧಿಯಲ್ಲಿ ಭಾರತ-ಹೈದರಾಬಾದಗಳ ಸಂಬಂಧ ಹಿತಕರವಾಗಲೆಂದು ನಡೆದ ಪ್ರಯತ್ನಗಳಲ್ಲಿ ನಾಲ್ಕು ಮುಖ್ಯ ಘಟ್ಟಗಳನ್ನು ಹೇಳಬಹುದು.

ಮೊದಲನೆಯದು, ಜನವರಿ ೧೦ ರಿಂದ ಜನವರಿ ೩೧ರ ವರೆಗಿನ ಸಮಯ. ಯಥಾಸ್ಥಿತ ಒಪ್ಪಂದದಂತೆ ನಡೆಯಲು ಲಾಯಕ ಅಲಿಯವರನ್ನು ಒಪ್ಪಿಸಲು ನಾನು ಯತ್ನಿಸಿದೆ ; ವಿಫಲನಾದೆ.

ಎರಡನೆಯದು, ಫೆಬ್ರುವರಿ ೧ ರಿಂದ ಮಾರ್ಚ ೩೧ರ ವರೆಗೆ ಭಾರತ-ಹೈದರಾಬಾದಗಳ ಶಾಶ್ವತ ಸಂಬಂಧದ ಸರ್ವಸಮ್ಮತ ತಳಹದಿಯೊಂದಕ್ಕೆ ಲಾಯಕ ಅಲಿ ಒಪ್ಪುವಂತೆ ಮಾಡಲು ನಾನು ಪ್ರಯತ್ನಿಸಿದೆ; ಅದೂ ಅಯಶಸ್ವಿಯಾಯಿತು.

ಮೂರನೆಯದು, ಎಪ್ರಿಲ ೧ ರಿಂದ ಜೂನ ೧೯ ರ ಸಮಯ. ಸರ್ ವಾಲ್ಟರ ಮಾಂಕ್ಟನ್ನರ ಸಹಾಯದಿಂದ, ಹೈದರಾಬಾದಕ್ಕೆ ಅತ್ಯಂತ ಮಹತ್ವದ ಸವಲತ್ತುಗಳನ್ನು ಕೊಡಮಾಡಿ ಲಾರ್ಡ ಮೌಂಟಬ್ಯಾಟನ್ನರು ಇಂಥದೇ ಒಂದು ಒಪ್ಪಂದ ಮಾಡಿಸಲು ಯತ್ನಿಸಿದರು; ಅವರೂ ಸೋತರು.

ನಾಲ್ಕನೆಯದು, ಇತ್ತಿಹಾದದವರ ಹಿಡಿತದಿಂದ ತಪ್ಪಿಸಿಕೊಂಡು ಒಂದು ಒಪ್ಪಂದಕ್ಕೆ ಬರಲು ನಿಜಾಮರು ದುರ್ಬಲ ಪ್ರಯತ್ನ ಮಾಡಿ ಸೋತರು.

ಸ್ವಾತಂತ್ರ್ಯ ಸಾರುವ ನಿಜಾಮರ ನಿರ್ಣಯ ಭಾರತ ಸರಕಾರಕ್ಕೆ ಗೊತ್ತಿತ್ತು. ಯುದ್ಧ ಪ್ರಸಂಗ ಬಂದರೆ ಅದಕ್ಕೆ ಸಿದ್ಧತೆ ಮಾಡಿಕೊಳ್ಳಲು ಸಮಯ ಬೇಕೆಂದೇ ಯಥಾಸ್ಥಿತ ಒಪ್ಪಂದಕ್ಕೆ ನಿಜಾಮರು ಒಪ್ಪಿದ್ದರು.

ಯಥಾಸ್ಥಿತ ಒಪ್ಪಂದದ ಕಲಮುವಾರು ಚರ್ಚೆ ನಡೆದ ಕಾಲಕ್ಕೆ ನನಗೆ ವಿಚಿತ್ರ ಅನುಭವ ಬಂತು. ಒಪ್ಪಂದದ ಕಲಮುಗಳನ್ನು ಪಾಲಿಸುವ ಇಚ್ಛೆ ಅವರಿಗಿದ್ದಿಲ್ಲವೆಂಬುದು ಸ್ಪಷ್ಟವಾಗಿತ್ತು.

ಅವರ ಉದ್ದೇಶ ನನಗೆ ಅರ್ಥವಾಗುತ್ತಿತ್ತು. ವ್ಯಾಪಾರದ ಮುಸುಕಿನಲ್ಲಿ ಅವರು ವಿದೇಶಗಳ ಸರಕಾರಗಳೊಂದಿಗೆ ಸಂಬಂಧ ಬೆಳೆಸಲೆತ್ನಿಸುತ್ತಿದ್ದರು. ಪಾಕಿಸ್ತಾನದ ಸಂಬಂಧ ಬೆಳೆಸಿಕೊಂಡು ತಮ್ಮ ಆರ್ಥಿಕ ಸ್ಥಿತಿಯನ್ನು ಬಲಪಡಿಸಿಕೊಳ್ಳಲಿಚ್ಛಿಸುತ್ತಿದ್ದರು.

ಏನೇ ಹೇಳಲಿ, ಲಾಯಕ ಅಲಿ ಜಿನ್ನಾರಲ್ಲಿ ನಿಷ್ಠರಾಗಿದ್ದರೆಂದೂ ಪಾಕಿಸ್ತಾನದ ಅರ್ಥಮಂತ್ರಿ, ಗುಲಾಮ ಮಹಮ್ಮದರನ್ನು ತಮ್ಮ ಮಾರ್ಗದರ್ಶಿಗಳೆಂದು ಎಣಿಸಿದ್ದರೆಂದೂ ನನಗೆ ಗೊತ್ತಾಯಿತು.

ಅಶೋಕ ವನದ ಸೀತೆ

ನನಗೆ ಜನರ ಸಂಪರ್ಕವನ್ನು ತಪ್ಪಿಸಲು ನಿಜಾಮ ಸರಕಾರ ನಿರ್ಧರಿಸಿತು. ಲಾಯಕ ಅಲಿ

ಮತ್ತು ಮೊಯಿನ ನವಾಜ ಜಂಗರೊಡನೆ ಮಾತ್ರ ನಾನು ಸಂಪರ್ಕವಿಟ್ಟುಕೊಳ್ಳಬಹುದು ಎಂಬ ಸ್ಥಿತಿ ಬಂತು.

ಸಾರ್ವಜನಿಕ ರಸ್ತೆಗಳಲ್ಲಿ ನಾನು ಹೊರಟಾಗ ಹಿಂದಾಗಲಿ, ಮುಂದಾಗಲಿ ಸಾಯಕಲ್ ಸವಾರರಾದ ರಜಾಕಾರರಿರುತ್ತಿದ್ದರು. ಲಾಯಕ ಅಲಿಯ ಭೆಟ್ಟಿಗೆ ಹೋದಾಗ ಮಾತ್ರ ರಜಾಕಾರರ ಕಾವಲು ನನ್ನ ಮೇಲಿರುತ್ತಿರಲಿಲ್ಲ. ದಕ್ಷಿಣಾಸದನದ ಆವಾರದಲ್ಲಿಯೇ ನಾನು ದಿನದ ಹೆಚ್ಚು ಸಮಯವನ್ನು ಕಳೆಯತೊಡಗಿದೆ.

" ಅಶೋಕವನದಲ್ಲಿ ಏಕಾಂಗಿಯಾಗಿ ಕುಳಿತ ಸೀತೆಯಂತಿದ್ದೇನೆ ನಾನು " ಎಂದು ನಾನು ಸರದಾರರಿಗೆ ತಿಳಿಸಿದೆ. ಆದರೆ ನಾನು ನಿತ್ಯವೂ ಅನೇಕರನ್ನು ಕಾಣುತ್ತಲಿದ್ದೆ. ಅವರೇ ನನ್ನ ಕಣ್ಣು ಮತ್ತು ಕಿವಿಗಳಾಗಿದ್ದರು. ತುಸು ಸಮಯದಲ್ಲಿಯೇ ನಿಜಾಮರು, ಲಾಯಕ ಅಲಿ ಮತ್ತು ರಜವಿಗೆ ಸಂಬಂಧಪಟ್ಟ ಯಾವದೇ ವಿಚಾರವಿರಲಿ, ಇಪ್ಪತ್ತನಾಲ್ಕು ತಾಸುಗಳಲ್ಲಿಯೇ ಅದು ನನಗೆ ತಿಳಿಯುವಂತಾಯಿತು.

ಗೃಹಸ್ಥಧರ್ಮವೆಂದು ನಾನು ವರ್ಹಾಡದ ರಾಜಕುಮಾರ ಮತ್ತು ಅವರ ತಮ್ಮ ಮುಝಂಜಾಹರನ್ನು ಭೆಟ್ಟಿಯಾದೆ. ವರ್ಹಾಡದ ರಾಜಕುಮಾರಿ ವಿದೇಶದಿಂದ ಮರಳಿದಾಗ ನಾನೂ ನನ್ನ ಪತ್ನಿಯೂ ಬಂದು ಕಾಣುವೆವು ಎಂದು ತಿಳಿಸಿದಾಗ ವರ್ಹಾಡದ ರಾಜಕುಮಾರರು, "ದಯವಿಟ್ಟು ಬರಬೇಡಿ. ಭೆಟ್ಟಿಗೆ ನಾನು ನಿಜಾಮರ ಅಪ್ಪಣೆ ಪಡೆಯಬೇಕಾಗುತ್ತದೆ. ಅವರ ಗುಪ್ತಚಾರ ನಮ್ಮ ಭೆಟ್ಟಿಯ ಕಾಲದಲ್ಲಿ ಇರಲು ಅವಕಾಶವಿತ್ತರೆ ಮಾತ್ರ ಅಪ್ಪಣೆ ಸಿಗುತ್ತದೆ. ಇದು ನಮ್ಮಿಬ್ಬರಿಗೂ ಗೌರವವಲ್ಲ " ಎಂದು ಹೇಳಿಕಳಿಸಿದರು.

ಹೈದ್ರಾಬಾದದ ಪ್ರಮುಖ ಸರದಾರರಾದ ಸರ್ ಸಾಲಾರ ಜಂಗರನ್ನು ಕಂಡಾಗ ಅವರು ನನ್ನನ್ನು ತಮ್ಮ ಖಾಸಗಿ ಕೋಣೆಗೆ ಕರೆದೊಯ್ದು ಪಿಸುಮಾತಿನಲ್ಲಿ, "ಮುನ್ಶಿ ಸಾಹೇಬ, ಈ ಜನ ಎಂದೂ ಭಾರತದಲ್ಲಿ ಸೇರ್ಪಡೆಯಾಗುವದಿಲ್ಲ. ನಮ್ಮ ಜೀವಿತವಿತ್ತಗಳು ರಜವಿಯ ಕೃಪೆಯನ್ನವಲಂಬಿಸಿವೆ. ಈ ಸಮಸ್ಯೆಯನ್ನು ಬಿಡಿಸಬೇಕಾಗಿದ್ದರೆ ನಿಮ್ಮ ಸೈನ್ಯವನ್ನು ಸಿಕಂದರಾಬಾದದಿಂದ ಕಳಿಸಬೇಡಿರಿ " ಎಂದರು.

ನಿಜಾಮರು ತಮ್ಮ ಮಗ, ಮಂತ್ರಿಗಳು, ಅಧಿಕಾರಿಗಳು, ಶತ್ರುಗಳು— ಎಲ್ಲರ ಮೇಲೂ ಗುಪ್ತಚಾರರನ್ನಿಟ್ಟಿದ್ದರು. 'ಯಥಾ ರಾಜಾ ತಥಾ ಪ್ರಜಾ' ಎಂಬಂತೆ ರಾಜಕುಮಾರರು, ಮಂತ್ರಿಗಳೇ ಮೊದಲಾದವರ ಗುಪ್ತಚಾರರು ಕಿಂಗ್‌ಕೋಠಿಯಲ್ಲಿದ್ದರು !

ನಿಜಾಮರ ಪೋಲೀಸರೂ ನನ್ನ ಮೇಲೆ ಗುಪ್ತಚಾರರನ್ನಿಟ್ಟಿದ್ದರು. ರಜವಿ ಕೂಡ ದಕ್ಷಿಣಾಸದನದ ಸಮೀಪದಲ್ಲಿ ತನ್ನ ಜನರನ್ನು ಇಟ್ಟಿದ್ದ. ಇಡೀ ಪರಿಸ್ಥಿತಿ ವಿಶಾಖದತ್ತನ "ಮುದ್ರಾರಾಕ್ಷಸ" ನಾಟಕದಲ್ಲಿಯಂತಿತ್ತು.

ಇತ್ತೆಹಾದ ಹರಿಜನರನ್ನು (ಮಂತ್ರಿ ವೆಂಕಟರಾಯರ ಪಕ್ಷದವರು) ಬಿಟ್ಟರೆ ಉಳಿದೆಲ್ಲ ಹಿಂದುಗಳು ವಿಮೋಚನೆಗಾಗಿ ಹಾತೊರೆಯುತ್ತಿದ್ದರು. ಸಹಾಯ ನೀಡಲು ಸಿದ್ಧರಾಗಿದ್ದರು.

ನಿಜಾಮರ ಡಾಕ್ಟರರಾದ ಕರ್ನಲ್ ವಾಘರೆ ಅವರೂ ನನಗೆ ವಿಷಯಗಳನ್ನು ತಿಳಿಸುತ್ತಿದ್ದರು. ಅವರು ನನ್ನ ಡಾಕ್ಟರರೂ ಆಗಿದ್ದರು. ಆದರೆ ಕೆಲ ತಿಂಗಳಲ್ಲಿ ಅವರಿಗೆ ಅದರ ಪ್ರಾಯಶ್ಚಿತ್ತ ಸಿಕ್ಕಿತು. ನಿಜಾಮರು ಅವರನ್ನು ಕೆಲಸದಿಂದ ತೆಗೆದುಹಾಕಿದರು.

ಅಸೋಸಿಯೇಟೆಡ್ ಪ್ರೆಸ್ ಆಫ್ ಇಂಡಿಯಾ, ಯುನೈಟೆಡ್ ಪ್ರೆಸ್ ಆಫ್ ಇಂಡಿಯ ಮತ್ತು ಹಿಂದು ಪತ್ರಿಕೆಗಳ ಸುದ್ದಿಗಾರರು ಧೈರ್ಯಶಾಲಿಗಳೂ ಚತುರರೂ ಆದ ತರುಣರಾಗಿದ್ದರು. ತಮಗೆ ಗಂಡಾಂತರವಿದ್ದರೂ ಲೆಕ್ಕಿಸದೆ ಅವರು ಸುದ್ದಿ ಸಂಗ್ರಹಿಸಿ ನನಗೆ ಪೂರೈಸುತ್ತಿದ್ದರು. ಇವರಲ್ಲೆಲ್ಲ ಹೈದರಾಬಾದದ ಪತ್ರಿಕೋದ್ಯಮಿ ಶಾಸ್ತ್ರಿ ಹೆಚ್ಚಿನ ಧೈರ್ಯಶಾಲಿ. ಹರಿಜನ ಮಂತ್ರಿ ವೆಂಕಟರಾಯರಿಗೆ ಈತ ನಂಬಿಗೆಯ ಕಾರ್ಯದರ್ಶಿಯಂತಿದ್ದ. ರಜವಿಗಾಗಿ ಇಂಗ್ಲಿಷಿನಲ್ಲಿ ಬರೆಹಗಳನ್ನೂ ಬರೆದುಕೊಡುತ್ತಿದ್ದ.

ಭಾರತದಲ್ಲಿ ಸೇರ್ಪಡೆ ಹೊಂದುವದರಲ್ಲೇ ಹಿತವಿದೆಯೆಂದು ನಂಬಿ ಇತ್ತೆಹಾದನ್ನು ಅನು

ಪಮ ಧೈರ್ಯದಿಂದ ಎದುರಿಸಿದ ಇಮ್ರೋಜ ಪತ್ರಿಕೆಯ ಸಂಪಾದಕ ತರುಣ ರಾಷ್ಟ್ರೀಯ ಮುಸಲ್ಮಾನ ಶೋಯಿಬುಲ್ಲಾಖಾನರ ಪರಿಚಯ ನನಗಾಯಿತು. ಕೊನೆಗೆ ಶೋಯಿಬುಲ್ಲಾಖಾನರು ತಮ್ಮ ಖಂಡಿತವಾದಿತ್ವಕ್ಕಾಗಿ ಪ್ರಾಣ ತೆರಬೇಕಾಯಿತು.

ನನಗೆ ಸಹಾಯಕರಾದ ಇತರ ಮುಸ್ಲಿಮರಲ್ಲಿ ನಿಜಾಮರ ಪ್ರೀತಿಯನ್ನು ಗಳಿಸಿದ್ದ ಆಸ್ಥಾನಿಕ ನವಾಬ ಹೋಶಯಾರ ಜಂಗರು ಹೆಚ್ಚಿನವರು. ನಿಜಾಮರಿಗೆ ತಿಳಿಯದಂತೆ ರಜಾಕಾರರ ಕಣ್ಣು ತಪ್ಪಿಸಿ ಅಪರರಾತ್ರಿಯಲ್ಲಿ ಬಂದು ಅವರು ನನ್ನನ್ನು ಕಾಣುತ್ತಿದ್ದರು. ಇವರ ಮೂಲಕವೇ ದಿನ ದಿನವೂ ಬದಲಾಗುತ್ತಿದ್ದ ನಿಜಾಮರ ಮನಸ್ಸಿನ ಹೊಳವೂ ನನಗೆ ತಿಳಿಯುತ್ತಿತ್ತು.

“ನಿಮಗೆ ಹೆಂಗಸರ ಸಹವಾಸ ಸೇರುವುದಿಲ್ಲವೆ?”

೧೯೪೮ ಜನವರಿ ೩೦ ರಂದು ಗಾಂಧೀಜಿಯ ಕೊಲೆಯಾಯಿತು. ನಾನು ಅಂದು ದಿಲ್ಲಿಯಲ್ಲಿಯೇ ಇದ್ದೆ. ನಾನು ತಿರುಗಿ ಬೋಲಾರಾಮಕ್ಕೆ ಬರುವ ಮುಂಚೆ ಸರದಾರರು ನನ್ನೊಡನೆ ಎಲ್ಲವನ್ನೂ ಚರ್ಚಿಸಿ ನಾನು ಅನುಸರಿಸಬೇಕಾದ ಮಾರ್ಗವನ್ನು ಸೂಚಿಸಿದರು. ಮೊದಲನೆಯ ಘಟ್ಟ ಮುಗಿದಿತ್ತು. ನಿಜಾಮ ಸರಕಾರವು ಯಥಾಸ್ಥಿತ ಒಪ್ಪಂದದ ಶರ್ತುಗಳನ್ನು ಪಾಲಿಸದ್ದರಿಂದ ಅದರ ಕಾರ್ಯಾಚರಣೆಯನ್ನು ಕುರಿತು ಚರ್ಚಿಸುವದರಲ್ಲಿ ಅರ್ಥವಿರಲಿಲ್ಲ. ಮಾರ್ಚ ೩೧ ರೊಳಗೆ ಬೇರೆಯ ಶಾಶ್ವತ ಒಪ್ಪಂದವಾಗುವಂತೆ ಸಂಧಾನ ನಡೆಸಲು ನಾನು ಪ್ರಯತ್ನಿಸಬೇಕೆಂದು ಸರದಾರರು ಹೇಳಿದರು.

ಮೊದಲೇ ನಿಶ್ಚಯಿಸಿದಂತೆ ಲಾಯಕ ಅಲಿ ನನ್ನೊಡನೆ ನಮ್ಮೆದುರಿನ ಸಮಸ್ಯೆಯನ್ನು ಚರ್ಚಿಸಲು ಫೆಬ್ರುವರಿ ೧೧ ರಂದು ಬಂದರು. ಯಥಾಸ್ಥಿತ ಒಪ್ಪಂದದ ಚರ್ಚೆಯನ್ನು ಬದಿಗಿರಿಸಿ ನಾವು ಶಾಶ್ವತ ಒಪ್ಪಂದದ ರೂಪರೇಷೆಗಳನ್ನು ಹಾಕೋಣವೆಂಬ ನನ್ನ ಸೂಚನೆಗೆ ಅವರು ತತ್‌ಕ್ಷಣ ಒಪ್ಪಿಗೆಯಿತ್ತರು.

ಲಾಯಕ ಅಲಿ ಸವಿ ಮಾತಾಡುತ್ತಿದ್ದರು. ಆದರಾತಿಥ್ಯದಲ್ಲಿ ಎತ್ತಿದ ಕೈ. ಆದರೆ ಅವರನ್ನು ಅವರ ಮೊದಲಿನ ನಿಲುಮೆಯಿಂದ ಕದಲಿಸುವದು ಯಾರಿಗೂ ಸಾಧ್ಯವಿರಲಿಲ್ಲ.

ಸಂರಕ್ಷಣೆಯನ್ನು ಭಾರತ ಸರಕಾರಕ್ಕೆ ಒಪ್ಪಿಸಲು ಹೈದರಾಬಾದ ಸಿದ್ಧವಿದೆ; ಆದರೆ ಹೈದರಾಬಾದದ ಸೈನ್ಯದ ಮೇಲಾಗಲಿ ಅದರ ಸಂಖ್ಯೆಯ ಮೇಲಾಗಲಿ ಭಾರತ ಸರಕಾರಕ್ಕೆ ನಿಯಂತ್ರಣವಿರತಕ್ಕದ್ದಲ್ಲ. ವಿದೇಶ ವ್ಯವಹಾರವನ್ನು ಭಾರತ ಸರಕಾರಕ್ಕೊಪ್ಪಿಸಲಿಕ್ಕೂ ಅಡ್ಡಿಯಿಲ್ಲ ; ಆದರೆ ಹೈದರಾಬಾದದ ನಾಗರಿಕರಾರು ವಿದೇಶೀಯರಾರು ಎಂದು ಗೊತ್ತುಪಡಿಸುವ ಮತ್ತು ಪರದೇಶಗಳೊಡನೆ ಒಪ್ಪಂದ ಮಾಡಿಕೊಳ್ಳುವ ಅಧಿಕಾರ ಹೈದರಾಬಾದಕ್ಕೇ ಇರಬೇಕು. ಸಂಪರ್ಕವನ್ನೂ ಭಾರತ ಸರಕಾರ ತೆಗೆದುಕೊಳ್ಳಲಿ; ಆದರೆ ಹೈದರಾಬಾದದಲ್ಲಿ ಹಾಯ್ದು ಹೋಗುವ ಭಾರತದ ಸಂಪರ್ಕ ಸೌಕರ್ಯಗಳು ಹೈದರಾಬಾದ ಸರಕಾರದ ವಶದಲ್ಲೇ ಇರಬೇಕು: ಇದು ಅವರ ವಾದವಾಗಿತ್ತು. ಮತ್ತೆ ೧೯೪೭ ಸೆಪ್ಟೆಂಬರ ಅಕ್ಟೋಬರಗಳ ಸಂಧಾನದ ಪುನರಾವರ್ತನೆಯೇ. ಸಂಬಂಧಪಟ್ಟ ಅಧಿಕಾರವೆಲ್ಲ ಹೈದರಾಬಾದದ ಹತ್ತಿರ ಇರಬೇಕು, ಅಂದರೆ ಮಾತ್ರ ಈ ಮೂರು ವಿಷಯಗಳನ್ನು ಭಾರತ ಒಕ್ಕೂಟಕ್ಕೆ ಬಿಟ್ಟುಕೊಡಬಹುದು !

ಗಾಂಧೀಜಿಯವರ ಅಸ್ಥಿಗಳನ್ನು ಸಂಗಮದಲ್ಲಿ ವಿಸರ್ಜಿಸಿದ ದಿನ ರಾತ್ರಿ ಲಾಯಕ ಅಲಿಯ ಖಾಸಗಿ ನಿವಾಸದಲ್ಲಿ ನಾವು ಚರ್ಚೆಯನ್ನು ಮುಂದುವರಿಸಿದೆವು. ಈ ಸಲ ರಜಾಕಾರರ ಸಮಸ್ಯೆಯೂ ಚರ್ಚೆಗೆ ಬಂತು. ಅವರನ್ನು ನಿಯಂತ್ರಿಸುವದರ ಅಗತ್ಯವನ್ನು ನಾನು ಮತ್ತೊಮ್ಮೆ ಪ್ರತಿಪಾದಿಸಿದೆ. ಆಗ ಭಾರತ ಸರಕಾರವು (ಯಥಾಸ್ಥಿತ ಒಪ್ಪಂದದ ಕರಾರುಗಳೇನೇ ಇರಲಿ) ೨೫,೦೦೦ ಸೈನ್ಯವನ್ನೂ ೩೫,೦೦೦ ಪೋಲೀಸರನ್ನೂ ಇಟ್ಟುಕೊಳ್ಳಲು ಹೈದರಾಬಾದಕ್ಕೆ ಅವಕಾಶವೀಯಬೇಕು. ಅವರಿಗೆಲ್ಲ ಬೇಕಾಗುವ ಶಸ್ತ್ರಾಸ್ತ್ರ ಸಾಮಗ್ರಿಯನ್ನು ಒದಗಿಸಬೇಕು- ಅಂದರೆ ಮಾತ್ರ ತಾವು ರಜಾಕಾರರನ್ನು ನಿಯಂ

ತ್ರಿಸುವದಾಗಿ ಲಾಯಕ ಅಲಿ ಹೇಳಿದರು.

ನಾವು ಬೀಳ್ಕೊಂಡಾಗ ಮಧ್ಯರಾತ್ರಿಯಾಗಿತ್ತು. "ನಿಮ್ಮ ಬೇಡಿಕೆಯನ್ನು ಭಾರತ ಸರಕಾರ ಮನ್ನಿಸುವಂತೆ ಮಾಡಲು ರಜಾಕಾರರೇ ನಿಮ್ಮ ದಿವ್ಯಾಸ್ತ್ರ ಎಂದು ನೀವು ನಂಬುತ್ತೀರೇನು?" ಎಂದು ನಾನು ಖಂಡತುಂಡವಾಗಿ ಕೇಳಿದೆ.

"ನೀವು ಯಾವಾಗಲೂ ಹೈದರಾಬಾದದ ಸಲುವಾಗಿ ವ್ಯರ್ಥ ಚಿಂತೆ ಮಾಡುತ್ತೀರಿ! ಕ್ಲಬ್ಬಿಗೇಕೆ ಬರುವದಿಲ್ಲ? ಆರಾಮವನ್ನೇಕೆ ತೆಗೆದುಕೊಳ್ಳುವದಿಲ್ಲ?" ಲಾಯಕ ಅಲಿ ಹುಡುಗಾಟ ಮಾಡಿದರು.

"ನಾನು ಕ್ಲಬ್ಬಿನ ಮನುಷ್ಯನಲ್ಲ."

"ಬ್ರಿಜ್ ಆಟ ನಿಮಗೆ ಸೇರುವದಿಲ್ಲವೇ?"

"ಬ್ರಿಜ್ ಆಟ ಕಲಿಯದಿರಲು ಬಹಳ ವರ್ಷಗಳ ಹಿಂದೆಯೇ ನಿರ್ಧರಿಸಿದೆ."

ಲಾಯಕ ಅಲಿಯ ಕಣ್ಣುಗಳು ತುಂಟತನದಿಂದ ಮಿನುಗಿದವು. "ಹೆಂಗಸರ ಸಹವಾಸ ನಿಮಗೆ ಸೇರುವದಿಲ್ಲವೇ?" ಎಂದು ಕೇಳಿದರು.

"ಹೆಂಗಸರದೇ! ಸೇರುತ್ತದೆ. ಆದರೆ ಒಂದು ಜೀವಮಾನದಲ್ಲಿ ಒಬ್ಬಳಿಗಿಂತ ಹೆಚ್ಚು ಹೆಂಗಸರನ್ನು ಆಳಲಾರೆ" ಎಂದೆ ನಾನು.

ಪ್ರಬಲ ಸಂಯಮ ಶಕ್ತಿಯಿದ್ದರೂ ಲಾಯಕ ಅಲಿಗೆ ತನ್ನ ಅಸಮಾಧಾನವನ್ನು ಮುಚ್ಚಿಟ್ಟುಕೊಳ್ಳುವದು ಸಾಧ್ಯವಾಗಲಿಲ್ಲ. ನಗುತ್ತಲೇ ಅವರು, "ಕಿಡಿಕಿಯಿಂದ ನಿಮ್ಮನ್ನು ಹೊರಗೆಸೆಯಬೇಕು ಎಂದೆನಿಸುತ್ತದೆ" ಎಂದು ಹೇಳಿದರು.

ನಾನೂ ನಕ್ಕೆ. "ಹಾಗೆ ಮಾಡುವ ಮನಸ್ಸಿದ್ದರೆ ಈಗಲೇ ಮಾಡಿರಿ. ಇಂದು ಗಾಂಧೀಜಿಯ ಚಿತಾಭಸ್ಮವನ್ನು ಹಿಂಬಾಲಿಸಿದ ಒಂದು ಲಕ್ಷ ಜನರು ನನ್ನ ಸ್ಮಶಾನ ಯಾತ್ರೆಯನ್ನು ಹಿಂಬಾಲಿಸಬಹುದು. ಈ ಸಂದರ್ಭ ನನಗೆ ಇನ್ನು ಬರಲಾರದು" ಎಂದು ಹೇಳಿದೆ.

ಕೈಚೀಲದಲ್ಲಿ ವಿಷ

ಈ ಅವಧಿಯಲ್ಲಿ ನನ್ನ ಸ್ವಂತ ಜೀವನ ನಿರಂತರ ತ್ರಾಸದ್ದಾಗಿತ್ತು.

ಫೆಬ್ರುವರಿಯ ನಂತರ ನನಗೆ ಹೊರಗಿನವರಿಂದ ಆಮಂತ್ರಣ ಬರುವದು ನಿಂತೇಹೋದಂತಾಯಿತು. ಅಪ್ಪಿತಪ್ಪಿ ಆಮಂತ್ರಣ ಬಂದರೂ ನಾನು ನಿರಾಕರಿಸುತ್ತಿದ್ದೆ. ಏಕೆಂದರೆ ಆಮಂತ್ರಣ ಇತ್ತ ಯಜಮಾನನಿಗೆ ಅದರಿಂದ ತುಂಬ ಕೇಡುಂಟಾಗುವ ಸಂಭವವಿದೆಯೆಂದು ನನಗೆ ಗೊತ್ತಿತ್ತು.

ಜುಲೈ ತಿಂಗಳ ವರೆಗೆ ನನ್ನ ಪತ್ನಿ ಪ್ರತಿ ತಿಂಗಳು ಕೆಲ ದಿನಗಳ ಮಟ್ಟಿಗೆ ಬೋಲಾರಾಮಕ್ಕೆ ಬಂದು ಹೋಗುತ್ತಿದ್ದಳು. ಆದರೆ ಈ ಭೆಟ್ಟಿಗಳಿಂದ ಅವಳಿಗೆ ಅಸುಖವೇ ಉಂಟಾಗುತ್ತಿತ್ತು. 'ದಕ್ಷಿಣಾಸದನ'ದ ಜೀವನದಲ್ಲಿ ರಸವಿರಲಿಲ್ಲ. ಹಗಲೆಲ್ಲ ಬಹುತರವಾಗಿ ನಾನು ಸಂದರ್ಶನ, ವರದಿ ಮತ್ತು ಪತ್ರವ್ಯವಹಾರಗಳಲ್ಲಿ ಮಗ್ನನಾಗಿರುತ್ತಿದ್ದೆ. ಅವಳು ಹೋಗಿಬರಬಹುದಾದ ಸ್ಥಳವಾವದೂ ಇರಲಿಲ್ಲ. ಮನೆಯ ಸಮೀಪದಲ್ಲಿರುವ ಪೋಲೀಸ, ರಜಾಕಾರ ಶಿಬಿರಗಳು ಅವಳನ್ನು ಎದೆಗುಂದಿಸುತ್ತಿದ್ದವು. ನನ್ನ ಪರಿಸ್ಥಿತಿ ಅವಳಿಗೆ ಕಳವಳಕ್ಕೆ ಕಾರಣವಾಗಿತ್ತು. ದಿನವೂ ಬರುತ್ತಿದ್ದ ರಜಾಕಾರರ ಅತ್ಯಾಚಾರದ ವರದಿಗಳನ್ನು ಕೇಳಿ ಅವಳು ಉರಿದೇಳುತ್ತಿದ್ದಳು.

ಭಾರತದ ಧ್ವಜವನ್ನು ಹೊತ್ತ ಏಜಂಟ ಜನರಲ್ಲರ ಕಾರು ರಜಾಕಾರರಿಂದ ತುಂಬಿದ ಒಂದಾದರೂ ಲಾರಿಯನ್ನು ಕಾಣದೆ ಸಾಗುವದು ಅಪರೂಪವಾಗಿತ್ತು. ಈ ರಜಾಕಾರರು ಧಿಕ್ಕಾರದ ಘೋಷಣೆ ಮಾಡುತ್ತಲೋ ಅಥವಾ ಕೆಳಗಿನಂಥ ಪದ್ಯಗಳನ್ನು ಹಾಡುತ್ತಲೋ ಸಾಗುತ್ತಿದ್ದರು.

ನಿಜಾಮು ಕೆ ಕದಮೋಂ ಪೆ ನೆಹರು ಕೊ
ಝುಕಾ ದೇಂಗೆ
ಪಟೇಲ ಮುನ್ಶಿ ಕೊ ಕಬರೋಂ ಮೇ
ಗಡ ದೇಂಗೆ *

* ನಿಜಾಮರ ಪಾದಗಳಿಗೆ ನೆಹರೂ ಎರಗುವಂತೆ ಮಾಡುವೆವು, ಪಟೇಲ ಮತ್ತು ಮುನ್ಶಿಯವರನ್ನು ಗೋರಿಗಳಲ್ಲಿ ಹುಗಿಯುವೆವು.

ನಾನು ಈ ಮರ್ಕಟ ಚೇಷ್ಟೆಯನ್ನು ಕಂಡು ನಗಬಲ್ಲವನಾಗಿದ್ದೆ; ಆದರೆ ನನ್ನ ಹೆಂಡತಿಗೆ ಅದು ಸಾಧ್ಯವಿರಲಿಲ್ಲ.

ಹಳ್ಳಿಗಳಲ್ಲಿ ರಜಾಕಾರರು ಸ್ತ್ರೀಯರ ಮೇಲೆ ಅತ್ಯಾಚಾರ ಮಾಡಿದ, ಅವರನ್ನು ಅಪಹರಿಸಿಕೊಂಡು ಹೋದ ಸುದ್ದಿಗಳನ್ನು ಮೇಲಿಂದ ಮೇಲೆ ಕೇಳಿ ಅವಳೊಂದು ವಿಷದ ಬಾಟ್ಲಿಯನ್ನು ಸಂಪಾದಿಸಿಟ್ಟುಕೊಂಡಳು. ಹೈದರಾಬಾದಕ್ಕೆ ಬರುವಾಗೆಲ್ಲ ಅವಳ ಕೈಚೀಲದಲ್ಲಿ ತೀಕ್ಷ್ಣ ವಿಷದ ಚಿಕ್ಕ ನಾಸಿಪುಡಿ ಡಬ್ಬಿಯೊಂದು ಇದ್ದೇ ಇತ್ತು. "ಸತೀತ್ವ ಹಾನಿಗಿಂತಲೂ ಮರಣವೇ ಲೇಸು ಎಂದವಳು ಯೋಚಿಸಿದ್ದಳು."

ಅಕ್ಟೋಬರದಲ್ಲಿ ನನಗೆ ಇದು ಗೊತ್ತಾದಾಗ ನಾನು ಆ ಡಬ್ಬಿಯನ್ನು ಎಸೆದುಬಿಡುವಂತೆ ಮಾಡಿದೆ. ಅದರಲ್ಲಿದ್ದ ವಿಷವು ಒಂದಿಡೀ ಸೈನ್ಯದಲವನ್ನೇ ಕೊಲ್ಲುವಷ್ಟಿದ್ದಿತು. ಪುಣ್ಯಕ್ಕೆ ಯಾರೂ ಏನೂ ಪ್ರಮಾದವನ್ನು ಎಸಗಲಿಲ್ಲ.

ಮಾರ್ಚ ತಿಂಗಳ ಪ್ರಾರಂಭದಲ್ಲಿ ಲಾಯಕ ಅಲಿಯನ್ನೊಳಗೊಂಡ ಹೈದರಾಬಾದ ಶಿಷ್ಟಮಂಡಳವು ಎಂದಿನಂತೆ ಹೊಸದಿಲ್ಲಿಗೆ ಹೋಯಿತು. ಮಾರ್ಚ ೨ ರಂದು ಲಾರ್ಡ ಮೌಂಟಬ್ಯಾಟನ್ನರೊಂದಿಗೆ ಮೊದಲಿನ ಜಾಡಿನಲ್ಲೇ ಚರ್ಚೆ ನಡೆಯಿತು.

ಲಾಯಕ ಅಲಿಯ ನಿಲುಮೆ ಬದಲಾಗಲಿಲ್ಲ. ಹೈದರಾಬಾದ ಭಾರತದಲ್ಲಿ ಸೇರ್ಪಡೆಹೊಂದುವದು ಅಥವಾ ಅಲ್ಲಿ ಹೊಣೆಗಾರ ಸರಕಾರ ಸ್ಥಾಪಿಸುವದು ಸಾಧ್ಯವಿಲ್ಲ. ಹಿಂದುಗಳ ಬಹುಮತವಿರುವ ಸರಕಾರ ಸ್ಥಾಪಿಸುವ ಪ್ರಶ್ನೆಯೇ ಇಲ್ಲ. ರಜಾಕಾರರ ಅತ್ಯಾಚಾರಗಳ ವರದಿಯೆಲ್ಲ ಸುಳ್ಳು. ಇದು ಅವರ ಪಲ್ಲವಿಯಾಗಿತ್ತು.

ಈ ಚರ್ಚೆ ನಡೆದಿದ್ದಾಗ ನಾನೂ ದಿಲ್ಲಿಯಲ್ಲಿದ್ದೆ. ಲಾಯಕ ಅಲಿಗೆ ಸಂಧಾನ ಬೇಕಾಗಿಲ್ಲ ಎಂದು ಸರದಾರರು ಮನಗಂಡಿದ್ದರು. ನಿಜಾಮ ಸರಕಾರ ಯಥಾಸ್ಥಿತ ಒಪ್ಪಂದದ ಕಲಮುಗಳನ್ನು ಉಲ್ಲಂಘಿಸಿರುವದನ್ನು ಪ್ರತಿಭಟಿಸಿ ರಜಾಕಾರರನ್ನು ಪ್ರತಿಬಂಧಿಸಬೇಕೆಂಬ ಬೇಡಿಕೆಯನ್ನು ಮುಂದೊಡ್ಡುವ ಒಂದು ಪತ್ರ ತಯಾರಿಸಲು ಅವರು ನನಗೂ ಮೆನನ್ನರಿಗೂ ಹೇಳಿದರು. ಲಾಯಕ ಅಲಿ ಈ ಬೇಡಿಕೆಯನ್ನು ಮನ್ನಿಸದಿದ್ದರೆ ನೆರೆಯ ಭಾರತದ ಜಿಲ್ಲೆಗಳಲ್ಲಿ ಹಾವಳಿ ಹಬ್ಬದಂತೆ ತಡೆಗಟ್ಟಲು ಗಡಿಯನ್ನು ಮುಚ್ಚಬೇಕಾಗುವದೆಂದು ಅವರು ಹೇಳಿದ್ದರು.

'ಸರದಾರರು ಸಾಯುತ್ತಿದ್ದಾರೆ!'

ಮಾರ್ಚ ೧೯ ಮತ್ತು ೨೦ ರಂದು ನಾನು ಹೊಸದಿಲ್ಲಿಯಲ್ಲಿದ್ದಾಗ ನಾನೂ ವಿ. ಪಿ. ಮೆನನ್ನರೂ ಪರಿಸ್ಥಿತಿಯನ್ನು ಬಹು ಜಾಗರೂಕತೆಯಿಂದ ಪರಿಶೀಲಿಸಿದೆವು. ಆ ಹೊತ್ತಿಗೆ ಆಂಧ್ರ-ಹೈದರಾಬಾದ ಗಡಿಗಳಲ್ಲಿ ಕಮ್ಯುನಿಸ್ಟರ ಹಿಂಸಾಚಾರಗಳು ವಿಪರೀತ ಹೆಚ್ಚಿದ್ದವು; ರಜಾಕಾರರನ್ನು ಪ್ರತಿಭಟಿಸುವ ಸೋಗಿನಲ್ಲಿ ಅವರು ಬಲ ಹೆಚ್ಚಿಸಿಕೊಳ್ಳುತ್ತಿದ್ದರು.

ರಜಾಕಾರರ ವಿಸರ್ಜನೆಯಾಗದಿದ್ದರೆ ಕಮ್ಯುನಿಸ್ಟರ ಬಲ ಹೆಚ್ಚಿ ತೆಲುಗು ಜಿಲ್ಲೆ ಮತ್ತು ಪ್ರದೇಶಗಳಲ್ಲಿ ಅವರು ಇನ್ನಷ್ಟು ಬಲವಾಗಿ ಬೇರೂರುತ್ತಿದ್ದರು. ಅದೇ ಕಾಲಕ್ಕೆ ನಿಜಾಮರ ಸರಕಾರ ದುರ್ಬಲವಾಗಿ ಕೊನೆಗೆ ಆಂಧ್ರದ ಮೇಲೆ ಕಮ್ಯುನಿಸ್ಟರಿಗೆ ಸಂಪೂರ್ಣ ಹಿಡಿತ ಸಿಗುತ್ತಿತ್ತು. ಹೈದ್ರಾಬಾದದೊಡನೆ ಮೌಂಟಬ್ಯಾಟನ್ನರ ಸಂಧಾನವು ಭಾರತ ಸರಕಾರದ ಕೈಕಟ್ಟಿತ್ತು. ದಕ್ಷಿಣ ಭಾರತವು ಅಸುರಕ್ಷಿತತೆಯ ಮಡುವಿನಲ್ಲಿ ಬಿದ್ದಿತ್ತು. ನಿರ್ಣಾಯಕ ಕ್ರಮ ತೆಗೆದುಕೊಳ್ಳಬಹುದಾದ ಒಬ್ಬನೇ ಒಬ್ಬ ಮನುಷ್ಯ (ಸರದಾರ ಪಟೇಲರು) ಕಠಿಣ ಬೇನೆಗೆ ತುತ್ತಾಗಿ ಮಲಗಿದ್ದ.

ನಾನು ತಯಾರಿಸಿದ ಪತ್ರದ ಕರಡನ್ನು ವಿ. ಪಿ. ಮೆನನ್ನರು ತಿದ್ದಿ ಬರೆದರು. ಅದರಲ್ಲಿ ನಿಜಾಮ ಸರಕಾರವು ಯಥಾಸ್ಥಿತ ಒಪ್ಪಂದವನ್ನು ಭಂಗಿಸಿದ್ದರ ಸಂಪೂರ್ಣ ವಿವರಗಳು ಇದ್ದವು. ರಜಾಕಾರರನ್ನು ಪ್ರತಿಬಂಧಿಸಬೇಕೆಂದಿತ್ಯಾದಿಯಾಗಿ ಆ ಪತ್ರದಲ್ಲಿ ನಿಜಾಮ ಸರಕಾರವನ್ನು

ಕೇಳಿಕೊಳ್ಳಲಾಗಿತ್ತು.

ನಾವು ತಯಾರಿಸಿದ ಪತ್ರಕ್ಕೆ ಸರದಾರರು ಒಪ್ಪಿಗೆಯಿತ್ತರು. ಅವರ ಸೂಚನೆಯಂತೆ ಅದನ್ನು ಪಂಡಿತಜಿಯವರಿಗೂ ತೋರಿಸಿದೆವು. ಅವರೂ ಅದನ್ನು ಒಪ್ಪಿದರು. ವಿ. ಪಿ. ಮೆನನ್ನರ ಮಾರ್ಚ ೨೩ರ ಈ ಪತ್ರವನ್ನು ನಾನು ೨೬ರಂದು ಹೈದರಾಬಾದ ಸರಕಾರಕ್ಕೆ ತಲುಪಿಸಿದೆ.

ಮಾರ್ಚ ೨೯ರಂದು ಲಾಯಕ ಅಲಿ, ರಜವಿ ಮತ್ತು ಕೆಲ ಇತ್ತಿಹಾದ ಧುರೀಣರ ಉನ್ನತ ಮಟ್ಟದ ಸಭೆ ಸೇರಿತು. ಭಾರತ ಸರಕಾರವು ಖಂಡಿತವಾಗಿಯೂ ಕಾಶ್ಮೀರದಲ್ಲಿ ಸೋಲುವದು; ಹೈದರಾಬಾದದ ಮೇಲೆ ಕ್ರಮ ತೆಗೆದುಕೊಳ್ಳುವ ಗಂಡಾಂತರವನ್ನು ಅದು ಬರಮಾಡಿಕೊಳ್ಳಲಾರದು; ಅದು ಹಾಗೇನಾದರೂ ಪ್ರಯತ್ನಿಸಿದಲ್ಲಿ ಭಾರತದ ಮುಸ್ಲಿಮರೆಲ್ಲ ಹಿಂದುಗಳ ವಿರುದ್ಧ ಏಳುವರು. ಸರದಾರರು ಸಾಯುತ್ತಿದ್ದಾರೆ. ಅವರು ಸತ್ತರೆಂದರೆ ಮುನ್ಶಿ ಹೈದರಾಬಾದದಿಂದ ಹೊರಟು ಹೋಗುವನು ಮತ್ತು ಕಾಲಹರಣದ ಸಂಧಾನಚಕ್ರ ಮತ್ತೆ ಮೊದಲಿನಂತೆ ತಿರುಗತೊಡಗುವದು ಎಂದು ಈ ಸಭೆ ಅಭಿಪ್ರಾಯಪಟ್ಟಿತು.

ಮಾರ್ಚ ತಿಂಗಳು ಗತಿಸಿತು. ಶಾಶ್ವತ ಸೇರ್ಪಡೆಗೆಂದು ಸರದಾರರು ಹಾಕಿದ್ದ ಮಿತಿ ಮುಗಿಯಿತು, ಅದರಂತೆ ಸಂಧಾನಕ್ಕಾಗಿ ನನ್ನಿಂದಾದದ್ದನ್ನೆಲ್ಲ ಮಾಡುವೆನೆಂದು ಗಾಂಧೀಜಿಗೆ ನಾನಿತ್ತ ವಚನದ ಅವಧಿಯೂ ಕೊನೆಗಂಡಿತು.

ಮಾರ್ಚ ೨೩ರ ನಮ್ಮ ಪತ್ರ ತಲಪಿದೊಡನೆ ಲಾಯಕ ಅಲಿ, ಮೊಯಿನ ನವಾಜ ಮತ್ತು ರಜವಿ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತಮ್ಮ ಕೈಗೆ ತೆಗೆದುಕೊಂಡರು. ನಿಜಾಮರನ್ನು ಸಂಪೂರ್ಣವಾಗಿ ಹಿನ್ನೆಲೆಗೆ ತಳ್ಳಲಾಯಿತು. ಇತ್ತಿಹಾದದ ಕಾವಲು ಭಟ ದೀನ ಯಾರ ಜಂಗರು ಸದಾ ನಿಜಾಮರ ಮಗ್ಗಲಲ್ಲಿ ಇರುತ್ತಿದ್ದರು. ಸರ್ ವಾಲ್ಟರ ಮಾಂಕ್ಟನ್ನರು ಕೂಡ ಅವರನ್ನು ಮೊದಲಿನಂತೆ ಸ್ವತಂತ್ರವಾಗಿ ಕಾಣುವುದು ಅಶಕ್ಯವಾಯಿತು. ಮೊದಲಿನಂತೆ ಕಾಗದಗಳೆಲ್ಲವನ್ನೂ ನಿಜಾಮರ ಮುಂದಿರಿಸುವದು ನಿಂತಿತು. ಲಾಯಕ ಅಲಿ ಈಗ ಬಾಯಿದೆರೆಯಾಗಿ ಮಾತ್ರ ವಿವರಗಳನ್ನು ಅವರಿಗೆ ತಿಳಿಸುತ್ತಿದ್ದರು.

ಈಗ ಒಂದು ಲಕ್ಷದಷ್ಟಿದ್ದ ರಜಾಕಾರರು ಸಂಸ್ಥಾನದ ಜೀವಿತ ವಿತ್ತಗಳನ್ನು ನಿಯಂತ್ರಿಸತೊಡಗಿದ್ದರು. ಎಂದಿನಂತೆ ಅವರು ಕೊಲೆ-ಕೊಳ್ಳಿ-ಸುಲಿಗೆಗಳಲ್ಲಿ ನಿರತರಾದರು. ೧೯೪೭, ಏಪ್ರಿಲ ದಿಂದ ೧೯೪೮ ಮಾರ್ಚದೊಳಗೆ ೨೫೦ ಹಳ್ಳಿಗಳನ್ನು ಲೂಟಿ ಮಾಡಲಾಗಿತ್ತು. ಇಲ್ಲವೆ ಸುಡಲಾಗಿತ್ತು. ೪,೦೦೦ ಮನೆಗಳಿಗೆ ಬೆಂಕಿಹಚ್ಚಿ, ೫೦೦ ಜನರನ್ನು ಕೊಲೆ ಮಾಡಲಾಗಿತ್ತು ಇಲ್ಲವೆ ಗಾಯಗೊಳಿಸಲಾಗಿತ್ತು. ೪೫೦ ಸ್ತ್ರೀಯರ ಮಾನಭಂಗವಾಗಿತ್ತು. ಇಷ್ಟಿದ್ದರೂ ಇದೆಲ್ಲ ಸುಳ್ಳು ಎಂದು ಹೈದರಾಬಾದ ಆಕಾಶವಾಣಿ ಸಾರುತ್ತಿತ್ತು.

ಗಾಬರಿಗೊಂಡ ಹಳ್ಳಿಗರು ಹೈದರಾಬಾದನ್ನು ಬಿಟ್ಟು ಭಾರತದ ಪ್ರದೇಶಗಳಿಗೆ ಓಡಿ ಬರುತ್ತಿದ್ದರು. ಭಾರತದ ಗಡಿ ಹಳ್ಳಿಗಳ ಮೇಲೆ ರಜಾಕಾರರ ದಾಳಿ ನಡೆಯುತ್ತಿತ್ತು. ಈ ಗಡಿಗಳಲ್ಲಿದ್ದ ಪೋಲೀಸರು ರಜಾಕಾರರ ದಾಳಿಯನ್ನು ತಡೆಗಟ್ಟುವದರ ಜೊತೆಗೆ ಕಳ್ಳತನದಿಂದ ಹೈದರಾಬಾದಕ್ಕೆ ಶಸ್ತ್ರಾಸ್ತ್ರಗಳು ಹೋಗದಂತೆ ನೋಡಿಕೊಳ್ಳಬೇಕಾಗುತ್ತಿತ್ತು. ಹೊಸದಿಲ್ಲಿಯಲ್ಲಿ ಯಾವ ಫಲಶ್ರುತಿಯೂ ಇಲ್ಲದೆ ತಿಂಗಳುಗಟ್ಟಲೆ ಸಂಧಾನದ ಮಾತು ನಡೆಯುತ್ತಿದ್ದಾಗ ಪರಿಸ್ಥಿತಿ ದಿನೇ ದಿನೇ ಹದಗೆಟ್ಟದ್ದನ್ನು ನೋಡುತ್ತಿದ್ದರೂ ನಾನು ಅಸಹಾಯನಾಗಿ ಕೂಡ್ರಬೇಕಾಗಿತ್ತು.

ಯುದ್ಧ ಸನ್ನಾಹ

ಇತ್ತ ನಿಜಾಮರ ಸರಕಾರ ಸೈನ್ಯ ಸಿದ್ಧತೆಯನ್ನು ತ್ವರಿತಗತಿಯಿಂದ ನಡೆಸುತ್ತಿತ್ತು. ಸಶಸ್ತ್ರ ದಲಗಳನ್ನು ಯುದ್ಧಕ್ಕಣಿಗೊಳಿಸಲಾಗುತ್ತಿತ್ತು. ಸಂಸ್ಥಾನ ಸೈನ್ಯ ಯೋಜನೆಯಂತೆ ಹೈದರಾಬಾದದಲ್ಲಿ ೭,೦೦೦ ಸೈನ್ಯವಿರಬೇಕಿತ್ತು. ಆದರೆ ಅನ

ಧಿಕೃತ ರೀತಿಯಲ್ಲಿ ೧೯೪೭ ರಲ್ಲಿ ಈ ಸಂಖ್ಯೆ ೧೩,೦೦೦ ಕ್ಕೇರಿಸಲ್ಪಟ್ಟಿತ್ತು. ೧೯೪೮ರ ಎಪ್ರಿಲ ದಷ್ಟೊತ್ತಿಗೆ ಕಾಯಂ ಸೈನ್ಯದ ಸಂಖ್ಯೆ ೨೨,೪೯೩ ಆಗಿತ್ತು. ಇನ್ನೂ ೭,೦೦೦ ಜನರಿಗೆ ತರಬೇತಿ ಕೊಡಲ್ಪಡುತ್ತಿತ್ತು. "ಸುಂಕದ ಪೋಲೀಸರು" ಇತ್ಯಾದಿ ಬೇರೆ ಬೇರೆ ಹೆಸರುಗಳಿಂದ ಇನ್ನೂ ೪,೮೭೦ ಜನರಿಗೆ ಯುದ್ಧ ಶಿಕ್ಷಣಕೊಡುತ್ತಿದ್ದರು.

ಪೋಲೀಸ ದಲದ ಸಂಖ್ಯೆಯೂ ೩೮,೦೦೦ ಕ್ಕೇರಿಸಲ್ಪಟ್ಟಿತ್ತು. ಅದರಲ್ಲಿ ಲಭ್ಯವಿದ್ದ ಆಧುನಿಕ ಅಸ್ತ್ರಗಳನ್ನು ಹೊಂದಿದ್ದ ಕಾದಿಟ್ಟ ಸಶಸ್ತ್ರ ಪೋಲೀಸರು ೧೨,೦೦೦ ಇದ್ದರು. ಇದಲ್ಲದೆ ೧೫,೦೦೦ ಜನರ ಗೃಹರಕ್ಷಕ ಮತ್ತು ನಾಗರಿಕ ರಕ್ಷಕ ಪಡೆಗಳಿದ್ದವು. ಸಶಸ್ತ್ರ ರಜಾಕಾರರ ಸಂಖ್ಯೆ ೫೦,೦೦೦ದಿಂದ ೧,೦೦,೦೦೦ದ ವರೆಗಿತ್ತು.

ಸಂಸ್ಥಾನದ ಎಂಟು ಕಾರಖಾನೆಗಳು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ತೊಡಗಿದ್ದವು. ಪೆಟ್ರೋಲನ್ನು ದೊಡ್ಡ ಪ್ರಮಾಣದಲ್ಲಿ ಸಂಗ್ರಹಿಸಿದ್ದರು. ದಿನಕ್ಕೆ ೩,೫೦೦ ಗ್ಯಾಲನ್ನಗಳಷ್ಟು ಪಾವರ ಅಲ್ಕೊಹಾಲನ್ನು ತಯಾರಿಸುತ್ತಿದ್ದರು. ೨೨,೦೦೦ ಜನರಿಗೆ ಸಾಲುವಷ್ಟು ಬರಾಕುಗಳಿದ್ದರೂ ಇನ್ನೂ ೨೫,೦೦೦ ಜನರಿಗಾಗಿ ಬರಾಕುಗಳನ್ನು ಕಟ್ಟತೊಡಗಿದ್ದರು.

ಒಂದು ವಿಮಾನದಲದ ತರಬೇತಿಯೂ ನಡೆದಿತ್ತು. ಹೈದರಾಬಾದ ಮತ್ತು ಬೀದರಗಳಲ್ಲಿ ಹೊಸ ವಿಮಾನ ನಿಲ್ದಾಣಗಳನ್ನು ಕಟ್ಟತೊಡಗಿದ್ದರು. ವಿಮಾನಮಾರ್ಗವಾಗಿ ಶಸ್ತ್ರಾಸ್ತ್ರಗಳನ್ನು ಕದ್ದುಮುಚ್ಚಿ ತರಲು ಸಿಡ್ನೀ ಕಾಟನ್ ಎಂಬ ಬ್ರಿಟಿಶ ಸಾಹಸಿಯನ್ನು ನೇಮಿಸಿಕೊಂಡಿದ್ದರು. ಜೂನ ತಿಂಗಳ ಸುಮಾರಿಗೆ ಪಾಕಿಸ್ತಾನದಿಂದ ವಿಮಾನಗಳಲ್ಲಿ ಶಸ್ತ್ರಾಸ್ತ್ರಗಳನ್ನು ತರುವದು ನಿತ್ಯ ಕ್ರಮವಾಯಿತು.

ಒಕ್ಕೂಟದ ಪೋಲೀಸರು ಗಡಿಯಲ್ಲಿ ಸರ್ಪಕಾವಲಿಟ್ಟಿದ್ದರೂ ಭಾರತದ ತುಂಬೆಲ್ಲ ಹೈದರಾಬಾದದ ದಲಾಲಿಗಳು ಹರಡಿಕೊಂಡು ಶಸ್ತ್ರಾಸ್ತ್ರ, ಮದ್ದುಗುಂಡು, ವಾಹನಗಳು, ಪೆಟ್ರೋಲ, ಉಕ್ಕು ಮುಂತಾದ ಅನೇಕ ವಸ್ತುಗಳನ್ನು ಕಳ್ಳತನದಿಂದ ಹೈದರಾಬಾದಕ್ಕೆ ಸಾಗಿಸಲು ಯತ್ನಿಸುತ್ತಿದ್ದರು. ಹೈದರಾಬಾದನ್ನು ಬಲಪಡಿಸುವ ಯಾವದೇ ಯೋಜನೆಯನ್ನಾದರೂ ಸೂಚಿಸಿದವರಿಗೆ ಧನಸಹಾಯ ಸಿಗುವದು ಖಂಡಿತವಾಗಿತ್ತು.

ಹೈದರಾಬಾದಕ್ಕೆ ಅರಬರನ್ನು ಪೂರೈಸಲು ಮಕಾಲಾದ ನವಾಬನೊಂದಿಗೆ ಒಪ್ಪಂದ ಮಾಡಿಕೊಂಡಿದ್ದರೆಂದು ಸುದ್ದಿಯಿತ್ತು. ಇಂಥದೇ ಇನ್ನೊಂದು ಒಪ್ಪಂದವನ್ನು ಶಸ್ತ್ರಾಸ್ತ್ರಗಳ ಪೂರೈಕೆಗಾಗಿ ಮತ್ತು ಅವನ್ನು ಮಕಾಲಾದಲ್ಲಿ ಸಂಗ್ರಹಿಸಿಡುವದಕ್ಕಾಗಿ ಮಧ್ಯಪೂರ್ವ ದೇಶಗಳೊಂದಿಗೆ ಮಾಡಿಕೊಂಡಿದ್ದರು ಎಂದೂ ನನಗೆ ತಿಳಿಯಿತು.

ಪಂಡಿತಜಿಯ ಎಚ್ಚರಿಕೆ

ಎಪ್ರಿಲ್ ೨೪ರಂದು ನಾನು ಪಂಡಿತಜಿಯವರನ್ನು ಭೆಟ್ಟಿಯಾದೆ. ಅ. ಭಾ. ಕಾಂಗ್ರೆಸ್ಸಿನ ಸಭೆಗಾಗಿ ಅವರು ಮುಂಬೈಗೆ ಬಂದಿದ್ದರು. ಅವರಿಗೆ ನಾನು ಪರಿಸ್ಥಿತಿಯನ್ನು ಸಂಪೂರ್ಣವಾಗಿ ವಿವರಿಸಿದೆ. ಕ್ರಮ ತೆಗೆದುಕೊಳ್ಳುವ ಕಾಲ ಬೇಗನೆ ಬರುವದೆಂದು ಅವರು ನನಗೆ ಆಶ್ವಾಸನವಿತ್ತರು.

ಏ. ಐ. ಸಿ. ಸಿ. ಯ ಗುಪ್ತಸಭೆಯಲ್ಲಿ ಹೈದರಾಬಾದದ ವಿಚಾರದಲ್ಲಿ ಸರಕಾರದ ಸಡಿಲು ಧೋರಣೆಗಾಗಿ ಟೀಕೆಗಳ ಸುರಿಮಳೆಯಾಯಿತು. ಪಂಡಿತಜಿಯವರು ನಿಸ್ಸಂದಿಗ್ಧ ಉತ್ತರವಿತ್ತರು. ಅವರ ಭಾಷಣವು ಇಡೀ ದೇಶಕ್ಕೆ ಧೈರ್ಯವನ್ನಿತ್ತಿತು. ಅವರು ಹಿಂದಿಯಲ್ಲಿ ಮಾತಾಡಿದ್ದರು. "ಹೈದರಾಬಾದಕ್ಕೆ ಯುದ್ಧ ಅಥವಾ ಸೇರ್ಪಡೆ—ಎರಡೇ ಮಾರ್ಗಗಳಿವೆ" ಯೆಂದು ಅವರು ಹೇಳಿದರೆಂದು [ತಪ್ಪಾಗಿ] ವರದಿಯಾಯಿತು. ಇಡೀ ದೇಶವನ್ನು ಇದು ರೋಮಾಂಚಿತಗೊಳಿಸಿತು. ಮೌಂಟಬ್ಯಾಟನ್ನರು "ಘಾತವಾಯಿತು" ಎಂದರಂತೆ.

ಎಪ್ರಿಲ್ ೨೬ ರಂದು ಮುಂಬಯಿ ಪತ್ರಿಕೋದ್ಯಮಿಗಳ ಸಂಘದವರಿತ್ತ ಸತ್ಕಾರ ಕೂಟದಲ್ಲಿ ಪಂಡಿತಜಿಯವರು ಭಾರತ ಸರಕಾರದ ನಿಲುಮೆಯನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದರು. "ರಜಾಕಾರರ ಚಟುವಟಿಕೆಗಳಿಂದ ಹೈದರಾಬಾದದ

ಜನರ ಸುರಕ್ಷಿತತೆಗೆ ಗಂಡಾಂತರ ಬಂದರೆ ಭಾರತ ಸರಕಾರವು ಹೈದರಾಬಾದಲ್ಲಿ ಕೈಹಾಕುವದು. ಈ ಶತ್ರುತ್ವದ ಕೃತ್ಯಗಳು ನಿಲ್ಲಬೇಕಾದ ಕಾಲ ಒದಗಿದೆ. ಹೈದರಾಬಾದ ಸರಕಾರ ಅದನ್ನು ನಿಲ್ಲಿಸಲಾರದಾದರೆ ಇತರ ಕ್ರಮಗಳನ್ನು ಕೈಕೊಳ್ಳಲಾಗುವದು."

ಎಪ್ರಿಲ್ ಕೊನೆಯ ನಂತರ ನಿಜಾಮ ಸರಕಾರದ ಪ್ರಬಲಾಸ್ತ್ರವೆಂದರೆ ವಿದೇಶೀ ಸುದ್ದಿಗಾರರ ತಂಡವಾಗಿತ್ತು. ಗ್ರೀನ್ಸಲ್ಯಾಂಡ್ಸ್ ಗೆಸ್ಟ್ ಹೌಸಿನಲ್ಲಿ ಇವರು ಸರಕಾರದ ಸ್ವರ್ಗತುಲ್ಯ ಆತಿಥ್ಯವನ್ನು ಉಪಭೋಗಿಸುತ್ತಿದ್ದರು. ಸುಗ್ರಾಸ ಭೋಜನ, ಸುಂದರ ಜೊತೆಗಾತಿಯರು, ಆಯ್ದ ಸ್ಥಳಗಳಿಗೆ ಸುಖಪ್ರವಾಸ ಎಲ್ಲ ಅವರಿಗೆ ಲಭಿಸುತ್ತಿತ್ತು. ಅವರು ನಿಜಾಮ ಸರಕಾರದ ಸುದ್ದಿ ಶಾಖೆಯ ವಾಣಿಯಾಗಿದ್ದರು.

ಮೌಂಟಬ್ಯಾಟನ್ನರ ಮಹತ್ವಾಕಾಂಕ್ಷೆ

ತಮ್ಮ ಅವಧಿ ಮುಗಿಯುವದರೊಳಗಾಗಿ ಭಾರತ—ಹೈದರಾಬಾದ ಸಮಸ್ಯೆಯನ್ನು ಬಿಡಿಸಬೇಕೆಂಬುದು ಲಾರ್ಡ್ ಮೌಂಟಬ್ಯಾಟನ್ನರ ಮಹತ್ವಾಕಾಂಕ್ಷೆಯಾಗಿತ್ತು. ಕೊನೆಗೆ ಯಾವ ತರಹದ್ದಾದರೂ ಚಿಂತೆಯಿಲ್ಲ, ಭಾರತ—ಹೈದರಾಬಾದ ಸಂಬಂಧವನ್ನು ಕುದುರಿಸಿ ಭಾರತದಲ್ಲಿ ತಾವಾಡಿದ ಭಾಗ್ಯವಿಧಾಯಕ ಪಾತ್ರಕ್ಕೆ ಕೀರ್ತಿ ಕಲಶವನ್ನಿಡಬೇಕೆಂದು ಅವರು ಬಯಸಿದ್ದರು.

ತಾವಿನ್ನು ಆರೂವರೆ ವಾರಗಳಲ್ಲಿ ಭಾರತವನ್ನು ಬಿಟ್ಟು ಹೋಗುವದಾಗಿ ಮೇ ೧ ರಂದು ಅವರು ನಿಜಾಮರಿಗೆ ಪತ್ರ ಬರೆದು ದಿಲ್ಲಿಗೆ ಅವರನ್ನು ಆಮಂತ್ರಿಸಿದರು. ನಿಜಾಮರು ದಿಲ್ಲಿಗೆ ಒಮ್ಮೆ ಬಂದರೆ ಸಾಕು, ಈ ಸಮಸ್ಯೆ ಬಗೆ ಹರಿಯುವದು ಎಂದು ಅವರು ನನಗೊಮ್ಮೆ ಹೇಳಿದ್ದರು.

ನಿಜಾಮರು ಅದನ್ನೇ ಪ್ರತಿಧ್ವನಿಸಿದರು. "ಮೌಂಟಬ್ಯಾಟನ್ನರು ದಯವಿಟ್ಟು ಹೈದರಾಬಾದಕ್ಕೆ ಬರಬಹುದೇ ? ನಾನು ಹೊಸದಿಲ್ಲಿಗೆ ಬರಲಾರೆ. ಬಂದರೆ ತಪ್ಪು ಕಲ್ಪನೆಗೆಡೆಯಾದೀತು" ಎಂದು ನಿಜಾಮರ ಉತ್ತರದಲ್ಲಿತ್ತು.

ಈ ಕಾಲದಲ್ಲಿ ಹೊಸದಿಲ್ಲಿಯ ಸರಕಾರೀ ಭವನದಲ್ಲಿ ಅಕಸ್ಮಾತ್ತಾಗಿ ದಿವ್ಯ ವಿಚಾರವೊಂದು ಹೊಳೆಯಿತು. ನಿಜಾಮರು ಶತ್ರುಗಳಿಂದ ಸುತ್ತುವರಿಯಲ್ಪಟ್ಟುಭಯಭೀತರಾಗಿದ್ದರಿಂದ ಲಾರ್ಡ್ ಮೌಂಟಬ್ಯಾಟನ್ನರ ಪತ್ರಿಕಾ ಕಾರ್ಯದರ್ಶಿ ಕ್ಯಾಂಬೆಲ್ ಜಾನ್ಸನ್ನರು 'ರಾಜದೂತ'ನಾಗಿ ಹೈದರಾಬಾದಕ್ಕೆ ತೆರಳಬೇಕು; ಅಲ್ಲಿ ಅವರು ನಿಜಾಮರ ಪರಿಸ್ಥಿತಿಯನ್ನು ಅರಿತುಕೊಳ್ಳುವರು, ಅವರ ಮಂತ್ರದ ಕೋಲಿನ ಸ್ಪರ್ಶದಿಂದ ಅರಮನೆಯಲ್ಲಿ ಕ್ರಾಂತಿ ಸಂಭವಿಸೀತು, ಸೇರ್ಪಡೆ ಸಾಧಿಸೀತು ಎಂದು.

ಇವರ ದೃಷ್ಟಿಯಲ್ಲಿ ನನ್ನ ಅಸ್ತಿತ್ವವೇ ಇರಲಿಲ್ಲ. ಆದರೆ ಸರದಾರರು ಈ ವಿಚಾರವನ್ನು ಬೆಂಗಳೂರಲ್ಲಿದ್ದ ನನಗೆ ತಿಳಿಸಿ ಕ್ಯಾಂಬೆಲ್–ಜಾನ್ಸನ್ನರ ಯೋಗಕ್ಷೇಮ ನೋಡಿಕೊಳ್ಳಲು ನಾನು ಕೂಡಲೆ ಹೈದರಾಬಾದಕ್ಕೆ ತೆರಳಬೇಕೆಂದು ಹೇಳಿದರು.

ಕ್ಯಾಂಬೆಲ್–ಜಾನ್ಸನ್ ನಿಜಾಮರನ್ನು ಭೆಟ್ಟಿಯಾದರು. ಆದರೆ ಅವರಿಗೆ ಮಂತ್ರದಕೋಲಿನಿಂದ ಸ್ಪರ್ಶ ಮಾಡುವ ಅವಕಾಶವೇ ಸಿಗಲಿಲ್ಲ. ನಿಜಾಮರನ್ನು ಅವರು ಭೆಟ್ಟಿಯಾದಾಗಲೆಲ್ಲ ಲಾಯಕ ಅಲಿ ಹಾಜರಿದ್ದರು. ನಿಜಾಮರು ಹಿಡಿದ ಪಟ್ಟು ಬಿಡಲಿಲ್ಲ. "ನಾನು ಅಸಹಾಯ. ನಾನು ಕೇವಲ ಹೈದರಾಬಾದದ ಘಟನಾತ್ಮಕ ಅಧಿಪತಿ. ಮಂತ್ರಿಮಂಡಳದ ಸಲಹೆಯಿಲ್ಲದೆ ಏನನ್ನೂ ಮಾಡಲಾರೆ. ಖಾಸಗೀ ರೀತಿಯಲ್ಲಿ ಏನನ್ನೂ ಹೇಳಲಾರೆ" ಎಂದು ಅವರು ಹೇಳಿದರು. ಎಂಥ ಸ್ವಾರಸ್ಯ! ಮೇಲಾಗಿ ನಿಜಾಮರು ಪೂರ್ವ ದೇಶಗಳಲ್ಲಿ ಘಟನಾತ್ಮಕ ಅರಸೊತ್ತಿಗೆಗೆ ಏನೂ ಅರ್ಥವಿಲ್ಲೆಂದು ಹೇಳಿ ಕ್ಯಾಂಬೆಲ್ ಜಾನ್ಸನ್ನರಿಗೆ ಮುಸ್ಲಿಂ ತತ್ತ್ವಗಳಲ್ಲಿ ಆಸಕ್ತಿಯನ್ನು ಹುಟ್ಟಿಸಲು ಪ್ರಯತ್ನಿಸಿದರು.

ಇತ್ತ ಸಂಸ್ಥಾನ ಕಾಂಗ್ರೆಸ್ಸಿನ ಚಳವಳಿ ಜನ–ಧನ ಅಭಾವದಿಂದ ಕುಗ್ಗತೊಡಗಿತ್ತು. ಜನರ ತಾಳ್ಮೆ ಮುಗಿದಿತ್ತು. ಭಾರತ ಸರಕಾರ ತಮ್ಮ ಕೈ

ಬಿಟ್ಟಿತೆಂದು ಅವರು ಬಹಿರಂಗವಾಗಿ ಹೇಳತೊಡಗಿದ್ದರು. ಸರಕಾರದಿಂದ ಸಹಾಯವನ್ನು ನಿರೀಕ್ಷಿಸಿದ್ದ ಧುರೀಣರು ಸಂತಾಪಗೊಂಡಿದ್ದರು. ನಮ್ಮಲ್ಲಿದ್ದ ಅವರ ನಂಬಿಕೆ ಅಳಿದಂತಾಗಿತ್ತು.

ರಜವಿ ಮಾತ್ರ ರಜಾಕಾರ ಸಂಸ್ಥೆಯನ್ನು ಸಂಘಟಿಸುತ್ತಲೇ ಇದ್ದ. ಭಾರತದ ವಿರುದ್ಧ ದ್ವೇಷಪೂರ್ಣ ಭಾಷಣಗಳನ್ನು ಮಾಡುತ್ತಿದ್ದ. ೧೫,೦೦೦ ನಿರಾಶ್ರಿತರು ತರಬೇತಿ ಪಡೆಯುತ್ತಿದ್ದರು.

ಮೇ ೧೧ ರಂದು ಜನರಲ್ಲನ (ಅಥವಾ ಮಾರ್ಶಲ್ಲನದೊ?) ಸಮವಸ್ತ್ರ ಧರಿಸಿ ರಜವಿ ೩೦,೦೦೦ ಕ್ಕಿಂತ ಹೆಚ್ಚು ರಜಾಕಾರರಿಂದ ಸಲಾಮು ಸ್ವೀಕರಿಸಿದ. "ಹೈದರಾಬಾದವು ಧರ್ಮವೀರರ ನಂದನವನವಾಗಬೇಕು" ಎಂದಾತ ಹೇಳಿದ.

ಜೂನ ೯ ರಂದು ಆತ ಹೇಳಿದ:

"ಮುಸ್ಲಿಮರು ಯಾವಾಗಲೂ ತಮಗಾಗಿ ಹೊಸ ಭೂಗೋಲವನ್ನು ಸೃಷ್ಟಿಸಿಕೊಂಡಿದ್ದಾರೆ. ಹೈದರಾಬಾದ ಗಡಿ ಶೀಘ್ರದಲ್ಲಿ ದಿಲ್ಲಿಯ ಆಚೆ ಹಬ್ಬಿ ಅಸಫಿಯ ಧ್ವಜ ದಿಲ್ಲಿಯ ಮೇಲೆ ಹಾರುವದು. ಹೌದು, ನಿಜಾಮರು ದಿಲ್ಲಿಯ ಮೇಲೆ ಸ್ವಾರಿ ಹೊರಟಿರುವ ದೃಶ್ಯ ನನಗೆ ಕಾಣಿಸುತ್ತಿದೆ."

ಜೂನ ೧೦ ರಂದು ಆತ ಹೇಳಿದ:

"ದಕ್ಷಿಣದಲ್ಲಿ ಒಂದು ಪಾಕಿಸ್ತಾನವಾದ ಮಾತ್ರಕ್ಕೆ ಮುಸ್ಲಿಮರು ತೃಪ್ತಿಪಟ್ಟುಕೊಳ್ಳುವದಿಲ್ಲ. ಅವರು ಭಾರತ ಮತ್ತು ಜಗತ್ತನ್ನು ಪಾಕಿಸ್ತಾನಕ್ಕೆ ಬೆಸೆಯುವರು. ೧೫೦೦ ವರ್ಷಗಳ ಹಿಂದೆ ಅವರ ಪೂರ್ವಜರು ಹಾಗೆ ಮಾಡಿಲ್ಲವೆ?"

ರಜವಿ ಇಂಥ ಭಾಷಣಗಳನ್ನು ಮಾಡುತ್ತಿದ್ದಾಗ ಹೆಚ್ಚಿನ ಸಂದರ್ಭಗಳಲ್ಲಿ ಲಾಯಕ ಅಲಿ ಮಂತ್ರಿಮಂಡಳದ ಒಬ್ಬರಲ್ಲ ಒಬ್ಬರು ವೇದಿಕೆಯ ಮೇಲೆ ಅವನ ಮಗ್ಗಲಲ್ಲಿ ಕುಳಿತಿರುತ್ತಿದ್ದರು.

ಬೇಗಮರ ಜಾಲ

ಈ ಸಂಧಿಯಲ್ಲಿ ನಾನು ಬೆಂಗಳೂರಿಗೆ ಹೋದೆ. ಅಲ್ಲಿ ನನಗೆ ಒಂದು ಅದ್ಭುತ ಅನುಭವ ಬಂತು. ಪ್ರೌಢವಯಸ್ಸಿನ ಬೇಗಮ್ಮಳೊಬ್ಬಳ ಹಿರಿತನದಲ್ಲಿ ಹೈದರಾಬಾದದ ಕೆಲ ಸುಂದರಿಯರು ನಮ್ಮ ಮಿಲಿಟರಿ ಅಧಿಕಾರಿಗಳ ಸ್ನೇಹ ಸಂಪಾದಿಸತೊಡಗಿದ್ದರು. ಅವರ ಮನೆಯ ಬಾಗಿಲು ಸದಾ ತೆರೆದಿತ್ತು. ಆದರಾತಿಥ್ಯ ಬಿಡುಗೈಯಿಂದ ನಡೆಯುತ್ತಿತ್ತು. ನೃತ್ಯ, ಭೋಜನ, ಭೋಜನ, ನೃತ್ಯಗಳ ಕಾರ್ಯಕ್ರಮ ಎಡೆಬಿಡದೆ ಸಾಗಿರುತ್ತಿತ್ತು.

ಹೈದರಾಬಾದದ ಸುಂದರಿಯರ ಕೂಟಗಳಿಗೆ ಬರುತ್ತಿದ್ದ ಮಿಲಿಟರಿ ಅಧಿಕಾರಿಗಳಿಗೆ ಭಾರತ ಹೈದರಾಬಾದ ಸಂಬಂಧದ ಬದಲಾವಣೆಯು ಕಲ್ಪನೆಯಾಗದೆ ಹೋದುದರಿಂದ ಅವರ ಬಾಯಿಂದ ಅನೇಕ ಸಂಗತಿಗಳು ಹೊರಬೀಳುತ್ತಿದ್ದವು. ಈ ಸಂಭಾಷಣೆಗಳ ವಿಷಯ ಹೆಚ್ಚಾಗಿ ಹೈದರಾಬಾದ ಗಡಿಗಳಲ್ಲಿ ಹಿಂದೀ ಸೈನ್ಯದ ಚಲನವಲನಗಳಿಗೆ ಸಂಬಂಧಪಟ್ಟಿರುತ್ತಿತ್ತೆಂದು ಗುಪ್ತಚಾರರಿಂದ ನಮಗೆ ಗೊತ್ತಾಯಿತು.

ಅದೇ ಸಮಯದಲ್ಲಿ ಪೈಗಾ ಜಾಗೀರದಾರರ ಆರ್ಡರ್ಲಿಯೊಬ್ಬ–ನಿಷ್ಠಾವಂತ ರಜಾಕಾರ–ನನ್ನ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದಾನೆಂದೂ ನನ್ನ ಕೊಲೆಯ ಮಾತನ್ನಾಡುತ್ತಿದ್ದಾನೆಂದೂ ಗೊತ್ತಾಯಿತು. ಮೈಸೂರಿನ ಗೃಹಮಂತ್ರಿ ಮರಿಯಪ್ಪನವರು ಚುರುಕಾಗಿ ಕ್ರಮ ಕೈಕೊಂಡರು. ಆ ಆರ್ಡರ್ಲಿ ಮತ್ತು ಅವನ ಸಂಗಡಿಗರು ಸೆರೆಮನೆ ಕಂಡರು. ಬೇಗಂ ಸಮೂಹದ ಚಲ್ಲಾಟ ನಿಂತು ಅದು ಹೈದರಾಬಾದಕ್ಕೆ ಮರಳಿತು.

ಮೌಂಟಬ್ಯಾಟನ್ನರಿಗೂ ಬುದ್ಧಿ ಬಂತು

ಲಾರ್ಡ್ ಮೌಂಟಬ್ಯಾಟನ್ನರು ಮತ್ತೂ ಸಂದಾನವನ್ನೇ ನೆಚ್ಚಿಕೊಂಡಿದ್ದರು. ಹೈದರಾಬಾದದಲ್ಲಿ ಜವಾಬದಾರ ಸರಕಾರವನ್ನು ಸ್ಥಾಪಿಸಿ ಸಪ್ಟ

ಡೆಯ ವಿಚಾರದಲ್ಲಿ ಸಾರ್ವತ್ರಿಕ ಮತಗಣನೆ ನಡೆಯುವಂತೆ ಲಾಯಕ ಅಲಿಯನ್ನು ಪ್ರೇರೇಪಿಸುವದೇ ಅವರು ಹಿಡಿದ ಹೊಸ ದಾರಿಯಾಗಿತ್ತು.

ಮೇ ೨೬ರಂದು ಲಾರ್ಡ್ ಮೌಂಟಬ್ಯಾಟನ್, ಪಂಡಿತಜಿ, ವಿ. ಪಿ. ಮೆನನ್ ಮತ್ತು ಲಾಯಕ ಅಲಿ ಸಭೆ ಸೇರಿದಾಗ ವಿ ಪಿ. ಮೆನನ್ನರು ತಯಾರಿಸಿದ ಸಂಧಾನದ ತಳಹದಿಯೊಂದಕ್ಕೆ ಲಾಯಕ ಅಲಿ ಒಪ್ಪಿಗೆಯಿತ್ತರು.

ಸಂಧಾನದ ಕರಾರುಗಳು ಇಂತಿದ್ದವು:

೧. ಸಂರಕ್ಷಣ, ವಿದೇಶ ವ್ಯವಹಾರ ಮತ್ತು ಸಂಪರ್ಕ ವಿಷಯಗಳು ಭಾರತ ಸರಕಾರದ ಅಧೀನವಿರಬೇಕು. ಈ ಮೂರು ವಿಷಯಗಳಲ್ಲಿ ಅದಕ್ಕೆ ಕೊನೆಯ ಶಾಸನಾಧಿಕಾರ ವಿರಬೇಕು.
೨. ಹೈದರಾಬಾದದ ಸ್ವಂತ ಸೈನ್ಯಸಂಖ್ಯೆ ೨೦,೦೦೦ಕ್ಕೆ ಮಿಕ್ಕಕೂಡದು. ಇದರಲ್ಲಿ ನೂರಕ್ಕೆ ೬೦ರಷ್ಟು ಜನ ಮುಸ್ಲಿಮೇತರರಾಗಿರತಕ್ಕದ್ದು. ಎಲ್ಲ ಸರಕಾರೇತರ ಸೈನ್ಯಗಳು ವಿಸರ್ಜಿಸಲ್ಪಡಬೇಕು.
೩. ಹೈದರಾಬಾದವು ವಿದೇಶಗಳೊಂದಿಗೆ ರಾಜಕೀಯ ಸಂಬಂಧ ಇಟ್ಟುಕೊಳ್ಳತಕ್ಕದ್ದಲ್ಲ.
೪. ಕನಿಷ್ಠ ನೂರಕ್ಕೆ ೪೦ರಷ್ಟು ಮುಸ್ಲಿಮೇತರ ಮಂತ್ರಿಗಳಿರುವ ತಾತ್ಪೂರ್ತಿಕ ಸರಕಾರ ಕೂಡಲೆ ರಚಿಸಲ್ಪಡಬೇಕು.
೫. ೧೯೪೯, ಜನವರಿ ೧ ರೊಳಗಾಗಿ ಘಟನಾ ಸಮಿತಿಯೊಂದು ರಚಿತವಾಗಬೇಕು. ಅದರಲ್ಲಿ ನೂರಕ್ಕೆ ೬೦ಕ್ಕಿಂತ ಕಡಿಮೆಯಲ್ಲದಷ್ಟು ಸ್ಥಾನಗಳು ಮುಸ್ಲಿಮೇತರರಿಗೆ ಸಿಗಬೇಕು.

ಹೈದರಾಬಾದ ಸಮಸ್ಯೆ ಪರಿಹಾರವಾಯಿತೆಂದು ಹೊಸದಿಲ್ಲಿಯ ವೃತ್ತಗಳು ಉಬ್ಬಿದವು. ಲಾಯಕ ಅಲಿ ಮೂರ್ತಿಮಾನ್ ವಿವೇಕವೇ ಆಗಿದ್ದರು. ಆದರೆ ಸಹಕಾರಿಗಳ ಸಲಹೆ ಪಡೆಯಬೇಕಾದ್ದು ಸಹಜವಲ್ಲವೇ? ಅವರು ಹೈದ-ರಾಬಾದಕ್ಕೆ ಹೋದರು.

ಮರುದಿನವೇ ಲಾಯಕ ಅಲಿ ಕರಡನ್ನು ತಿರಸ್ಕರಿಸಿ, ಭಾರತಕ್ಕೆ ಕೊನೆಯ ಶಾಸನಾಧಿಕಾರ ವಿರಬೇಕೆಂಬ ಮಾತಿಗೆ ತಾನೆಂದೂ ಒಪ್ಪಿಯೇ ಇರಲಿಲ್ಲ ಎಂದು ಬರೆದರು!

ಜೂನ್ ೩ಕ್ಕೆ ಮತ್ತೆ ಸಂಧಾನ ಪ್ರಾರಂಭವಾಯಿತು. ಮಾಂಕ್ಟನ್ನರನ್ನು ನಿಜಾಮರು ಇಂಗ್ಲಂಡಿನಿಂದ ಕರೆಸಿದರು. ಅವರು ಹೊಸ ಕರಡನ್ನು ತಯಾರಿಸಿದರು. ಕರಡು ದಿನದಿನಕ್ಕೆ ಬದಲಾಯಿತು. ನಿಜಾಮರಿಗೆ ವಿದೇಶಗಳೊಡನೆ ಆರ್ಥಿಕಸಂಬಂಧ ಬೆಳೆಸಲು ಅಧಿಕಾರವಿರಬೇಕೆಂದಾಯಿತು. ಜನಮತಗಣನೆಯಿಂದ ಸೇರ್ಪಡೆ ಪ್ರಶ್ನೆಯ ಇತ್ಯರ್ಥವಾಗಬೇಕೆಂದಾಯಿತು.

ಜೂನ್ ೧೦ಕ್ಕೆ ಮಾಂಕ್ಟನ್ನರೂ ಲಾಯಕ ಅಲಿಯೂ ಹೈದರಾಬಾದಕ್ಕೆ ಮರಳಿದರು. ನಿಜಾಮರು ತಮ್ಮ ವಕೀಲನೇ ತಯಾರಿಸಿದ ಈ ಕರಾರುಗಳನ್ನೂ ನಿರಾಕರಿಸಿದರು. ಹೊಸ ಕರಡಿನಂತೆ ಮಂತ್ರಿಮಂಡಲದಲ್ಲಿ ೫೦%ಮುಸ್ಲಿಮೇತರರಿರಬೇಕೆಂಬುದಕ್ಕೂ ಘಟನಾಸಮಿತಿಯಲ್ಲಿ ೬೦% ಮುಸ್ಲಿಮೇತರರಿರಲಿಕ್ಕೂ ಅವರು ಒಪ್ಪಲಿಲ್ಲ.

ಜೂನ್ ೧೨ಕ್ಕೆ ಮಾಂಕ್ಟನ್ನರು ದಿಲ್ಲಿಗೆ ಬಂದು ಮತ್ತೆ ಹೊಸ ಮಾತುಕತೆ ಪ್ರಾರಂಭಿಸಿದರು. ಘಟನಾ ಸಮಿತಿ ಮತ್ತು ಮಂತ್ರಿಮಂಡಲದ ಸ್ವರೂಪವನ್ನು ನಿಜಾಮರೇ ನಿರ್ಧರಿಸಬೇಕು. ಹೈದರಾಬಾದ ಸೈನ್ಯ ೨೦,೦೦೦ ದಿಂದ ೨೮,೦೦೦ಕ್ಕೇರಬೇಕು. ಭಾರತದಲ್ಲೆಲ್ಲ ೧೦೨ನೇ ಕಲಮಿನನ್ವಯ ಗಂಡಾಂತರ ಪರಿಸ್ಥಿಯನ್ನು ಸಾರಿದ ಹೊರತು ಹೈದರಾಬಾದದಲ್ಲಿ ಭಾರತೀಯ ಸೈನ್ಯ ಪ್ರವೇಶಿಸುವಂತಿಲ್ಲ ಎಂದು ನಿಜಾಮರು ತಿದ್ದುಪಡಿ ಸೂಚಿಸಿದ್ದರು.

ಹೊಸ ದಿಲ್ಲಿಯ ಪ್ರಭೃತಿಗಳು ಇದಕ್ಕೂ ಒಪ್ಪಿಕೊಂಡರು. ಅದಕ್ಕನುಸಾರವಾಗಿ ನಿಜಾಮರು ಹೊರಡಿಸಬೇಕಾದ ಫರ್ಮಾನದ ಕರಡೂ ಸಿದ್ಧವಾಯಿತು. ಮಾಂಕ್ಟನ್ನರ ಜಾಲಕ್ಕೆ ಸಿಲುಕಿ ಭಾರತವು ತನ್ನ ಐಕ್ಯಕ್ಕೇ ಕುಠಾರಪ್ರಾಯವಾದ ಕರಾರುಗಳಿಗೆ ಒಪ್ಪಿಕೊಂಡಂತಾಗಿತ್ತು.

ಈ ತಳಹದಿಯನ್ನು ನಿಜಾಮರು ಒಪ್ಪಿದ

ಸಂತೋಷದ ಸುದ್ದಿಯನ್ನು ಜೂನ ೧೫ ರಂದು ಸಂಜೆ ೭-೩೦ಕ್ಕೆ ತಿಳಿಸುವದಾಗಿ ವಚನವಿತ್ತು ಲಾಯಕ ಅಲಿ ಹೈದರಾಬಾದಕ್ಕೆ ತೆರಳಿದರು.

ಗೊತ್ತಾದ ವೇಳೆಗೆ ಸಂಬಂಧಪಟ್ಟವರೆಲ್ಲ ಹೊಸ ದಿಲ್ಲಿಯಲ್ಲಿ ಕಿವಿಗೆ ಟೆಲಿಫೋನು ಹಚ್ಚಿ ಕುಳಿತರು. ನಾನೂ ಬೋಲಾರಾಮದಲ್ಲಿ ಹಾಗೆಯೇ ಕುಳಿತಿದ್ದೆ. ೭-೩೦ರ ಆ ನಿರ್ಣಾಯಕ ನಿಮಿಷ ಬಂದುಹೋಯಿತು. ನಂತರ ನಿಜಾಮರ ಸಂದೇಶ ಬಂತು: "ನನಗೆ ಅವಧಿ ಬೇಕು; ನನ್ನ ಮಂತ್ರಿಮಂಡಳದ ಸಲಹೆಯನ್ನು ನಾನು ಪಡೆಯಬೇಕಾಗಿದೆ."

೧೬ ರಂದು ಸಂಜೆ ನಿಜಾಮರು ಲಾರ್ಡ್ ಮೌಂಟಬ್ಯಾಟನ್ನರಿಗೆ ತಂತಿ ಕಳಿಸಿದರು— ತಾವು ಸೂಚಿತ ಕರಡನ್ನು ಒಪ್ಪುವದಿಲ್ಲ ಎಂದು. ಈ ಕೆಳಗಿನಂತೆ ಅವರ ಆಕ್ಷೇಪಗಳಿದ್ದವು.

೧. ಮತದಾರ ಸಂಘಗಳ ತಳಹದಿ ಗೊತ್ತು ಪಡಿಸುವ ಅಧಿಕಾರ ನಿಜಾಮರಿಗಿರಬೇಕೆಂಬ ಮೂಲಕರಡಿನ ವಾಕ್ಯಗಳನ್ನು ಲಾಯಕ ಅಲಿಗೆ ಗೊತ್ತಿಲ್ಲದಂತೆ ಹಿಂದುಗಡೆ ಕಿತ್ತು ಹಾಕಲಾಗಿದೆ.

೨. ತಾತ್ಪೂರ್ತಿಕ ಸರಕಾರದ ರಚನೆಯಲ್ಲಿ ಬೇರೆ ಬೇರೆ ರಾಜಕೀಯ ಪಕ್ಷಗಳ ಸಲಹೆ ಪಡೆಯಬೇಕೆಂಬುದನ್ನು ಹಿಂದುಗಡೆ ಸೇರಿಸಲಾಗಿದೆ.

೩. ಹೈದರಾಬಾದದ ಆರ್ಥಿಕ ವಾಣಿಜ್ಯ ಹಾಗು ನಾಣ್ಯ ತಯಾರಿಕೆಯ ಸ್ವಾತಂತ್ರ್ಯದ ಬಗ್ಗೆ ಸ್ಪಷ್ಟ ಆಶ್ವಾಸನ ಬೇಕು.

೪. ವಿವಾದ ಪ್ರಸಂಗಗಳುಂಟಾದಲ್ಲಿ ಪಂಚಾಯತಿಗೊಪ್ಪಿಸುವ ಅವಕಾಶವಿರಬೇಕು.

ತಮ್ಮ ಪ್ರಾಮಾಣಿಕತೆಗೇ ಹೆಸರಿಡುವ ಈ ಹೇಳಿಕೆಯನ್ನು ನೋಡಿ ಈಗ ಲಾರ್ಡ್ ಮೌಂಟಬ್ಯಾಟನ್ನರು ಉರಿದೆದ್ದರು. ಅದನ್ನು ಬಲವಾಗಿ ಖಂಡಿಸಿ ಪತ್ರ ಬರೆದರು.

ಸಂಧಾನದ ಮಾತುಕತೆಗಳಲ್ಲಿ ಭಾಗವಹಿಸಿದ ಗಣನೀಯ [ಬ್ರಿಟಿಶ] ವ್ಯಕ್ತಿಗಳ ಮೇಲೆ ಮೋಸದ ಆಪಾದನೆ ಹೊರಿಸಿ ತಾನು ಮೇರೆದಪ್ಪಿದೆನೆಂದು ಕಂಡುಕೊಂಡ ನಿಜಾಮರು ಆ ಆಪಾದನೆಯನ್ನು ಹಿಂತೆಗೆದುಕೊಂಡರು. ಆದರೆ ಮಾಂಕ್ಟನ್ನರೆಷ್ಟೇ ಹೇಳಿದರೂ ಅವರು ತಮ್ಮ ನಾಲ್ಕು ಮುದ್ದೆಗಳಿಗೆ ಅಂಟಿಕೊಂಡದ್ದಲ್ಲದೆ ಐದನೆಯದೊಂದನ್ನೂ ಸೇರಿಸಿದರು: ಸಮಗ್ರ ಭಾರತದಲ್ಲಿ ಗಂಡಾಂತರ ಪ್ರಸಂಗ ಸಾರಲ್ಪಟ್ಟ ಸಮಯದಲ್ಲಿ ಕೂಡ ಭಾರತವು ತನ್ನ ಸೈನ್ಯವನ್ನು ಹೈದರಾಬಾದದಲ್ಲಿ ಇಡತಕ್ಕದ್ದಲ್ಲ— ಎಂದು!

ಜೂನ ೧೯ ರಂದು ಸರ್ ವಾಲ್ಟರ ಮಾಂಕ್ಟನ್ನರು ದಿಲ್ಲಿಯನ್ನು ಬಿಟ್ಟರು — ಬಹುಶಃ ಹತಾಶರಾಗಿ. ನಿಜಾಮರಿಂದ ಅವರು ಬೀಳ್ಕೊಂಡಾಗ ಹೀಗೆ ಸಂಭಾಷಣೆ ನಡೆಯಿತೆಂದು ಕೇಳಿದ್ದೇನೆ:

ಸರ್ ವಾಲ್ಟರರು, "ಹೋಗಿಬರುತ್ತೇನೆ" ಎಂದರಂತೆ. "ಬೇಗನೆ ತಿರುಗಿ ಬರುತ್ತೀರಿ ಎಂದಾಶಿಸುತ್ತೇನೆ" ಎಂದರು ನಿಜಾಮರು.

"ನಾನು ತಿರುಗಿ ಬಂದಾಗ ನೀವಿನ್ನೂ ಹೈದರಾಬಾದದ ನಿಜಾಮರಾಗಿರುತ್ತೀರಿ ಎಂದಾಶಿಸಿದ್ದೇನೆ" ಸರ್ ವಾಲ್ಟರರು ಉತ್ತರವಿತ್ತರಂತೆ.

ಹೈದರಾಬಾದದ ಪ್ರಕರಣದಿಂದ ಸರ್ ವಾಲ್ಟರರು ಹೊರಗಾದದ್ದಕ್ಕೆ ನನಗೆ ಆನಂದವಾಯಿತು.

ಜೂನ ೧೯ ರಂದು ನಾನು ಲಾರ್ಡ್ ಮೌಂಟಬ್ಯಾಟನ್ನರನ್ನು ಬೀಳ್ಕೊಟ್ಟೆ. ಅವರು ನನ್ನೊಡನೆ ತುಂಬ ಆತ್ಮೀಯತೆಯಿಂದ ಮಾತಾಡಿದರು.

"ಮುನ್ಶಿ, ಜೀವನದಲ್ಲಿ ನಾನೆಷ್ಟೋ ಪೆಟ್ಟು ತಿಂದಿದ್ದೇನೆ. ಆದರೆ ಈ ಹೈದರಾಬಾದದ ಜನರು ಕೊಟ್ಟಂಥ ಪೆಟ್ಟು ನನಗೆಂದೂ ಬಿದ್ದಿರಲಿಲ್ಲ."

ನನಗೆ ಬೇಕಾಗಿದ್ದ ಸಂದರ್ಭ ಸಿಕ್ಕಿತು. "ಕಳೆದ ಮಾರ್ಚ ತಿಂಗಳಲ್ಲಿ ನಾನು ನಿಜಾಮ ಸರಕಾರಕ್ಕೆ ನಿಜವಾಗಿಯೂ ಸಂಧಾನ ಬೇಕಾಗಿಲ್ಲ ಎಂದು ತಮಗೆ ಹೇಳಿದ್ದೆ. ಈಗ ತಾವೂ ಅದೇ ಅಭಿಪ್ರಾಯಕ್ಕೆ ಬಂದಿರುವದನ್ನು ಕಂಡು ನನಗೆ ಸಂತೋಷವಾಗಿದೆ."

ಲಾರ್ಡ್ ಮೌಂಟಬ್ಯಾಟನ್ನರು ಜೂನ ೨೧ ರಂದು ಭಾರತದ ಸೀಮೆಯನ್ನು ಬಿಟ್ಟರು.

"ಸಂಧಾನ? ಯಾವ ಸಂಧಾನ?"

ಜೂನ ೧೭ ರಂದು ಪಂಡಿತಜಿ ಒಂದು ಪತ್ರಿಕಾ ಪರಿಷತ್ತನ್ನು ಸೇರಿಸಿ ಸಂಧಾನದ ಕಥೆಯನ್ನು ಸಾರ್ವಜನಿಕರೆದುರು ಇಟ್ಟು, ಇನ್ನು ಮುಂದೆ ಹೊಸ ಮಾತುಕತೆಯನ್ನು ನಡೆಸುವದಿಲ್ಲ ಎಂದು ಸಾರಿದರು.

ಸೆಕ್ರೆಟೇರಿಯಟ್ ಮಟ್ಟದಲ್ಲಿ ಜೂನ ೧೯ರಂದು ಸೇರಿದ ಸಭೆಯಲ್ಲಿ ನಾನೂ ಹಾಜರಿದ್ದೆ. ಅದರಲ್ಲಿ ಇಡೀ ಪರಿಸ್ಥಿತಿಯನ್ನು ಪರಾಮರ್ಶಿಸಿ ಹೈದರಾಬಾದದ ಮೇಲಿನ ಆರ್ಥಿಕ ದಿಗ್ಬಂಧನವನ್ನು ಬಿಗಿಗೊಳಿಸಲು ನಿರ್ಧರಿಸಲಾಯಿತು.

ಮೌಂಟ್‌ಬ್ಯಾಟನ್ನರು ಹೋದ ಬಳಿಕ ಒಂದು ದಿನ ಹೈದರಾಬಾದದ ವಿದೇಶ ಶಾಖೆಯ ಕಾರ್ಯದರ್ಶಿ ಝುಹೀರರು ನನ್ನನ್ನು ಕಂಡು ಮತ್ತೆ ಮೌಂಟ್‌ಬ್ಯಾಟನ್ ಕರಡಿನ ತಳಹದಿಯ ಮೇಲೆ ಸಂಧಾನ ನಡೆಸುವ ಪ್ರಸ್ತಾಪ ತೆಗೆದರು.

ಮರುದಿನ ಸರದಾರರ ಧ್ವನಿ ಫೋನಿನಲ್ಲಿ ಕೇಳಿಸಿತು. ಅವರ ಧ್ವನಿ ಉತ್ಸಾಹಪೂರ್ಣವಾಗಿತ್ತು. "ಏನು ಮುನ್ಶಿ! ಚೆನ್ನಾಗಿದ್ದೀರಾ? ಎಲ್ಲ ಸರಿಯಾಗಿದೆಯೆ? ನಿಮ್ಮ ನಿಜಾಮರೇನನ್ನುತ್ತಾರೆ?"

"ಓ! ಅವರು ಚೆನ್ನಾಗಿದ್ದಾರೆ" ನಾನಂದೆ.

ಬಳಿಕ ಝುಹೀರರ ಸೂಚನೆಯ ವಿಚಾರವನ್ನು ಹೇಳಿದೆ.

"ಸಂಧಾನ? ಯಾವ ಸಂಧಾನ?" ಸಂಧಾನದ ವಿಚಾರವನ್ನೇ ಕೇಳದವರಂತೆ ಸರದಾರರು ಉದ್ಗರಿಸಿದರು.

"ಮೌಂಟಬ್ಯಾಟನ್ ಸಂಧಾನ" ನಾನಂದೆ.

"ಆ ಸಂಧಾನ ಇಂಗ್ಲಂಡಿಗೆ ಹೋಯಿತು ಎಂದು ಅವರಿಗೆ ಹೇಳಿರಿ" ಸರದಾರರು ವ್ಯಂಗ್ಯವಾಗಿ ಹೇಳಿ ನಕ್ಕರು.

ಹೈದರಾಬಾದದ ಆಡಳಿತವರ್ಗದವರು ಹುತಾತ್ಮತ್ವ ಮತ್ತು ಪ್ರತಿಭಟನೆಯ ದೊಡ್ಡದೊಡ್ಡ ಮಾತುಗಳನ್ನಾಡುತ್ತಿದ್ದರೂ ಬಹು ಬೇಗ ಅಲ್ಲಿ ಧೈರ್ಯನಾಶಕ್ಕಾರಂಭವಾಗಿಬಿಟ್ಟಿತು. ಬೀದರ ಜಿಲ್ಲೆಯಲ್ಲಿ ಲಿಂಗಾಯತರನ್ನು ನಡೆಸಿಕೊಂಡ ರೀತಿಯಿಂದ ಆ ಸಮಾಜ ರೊಚ್ಚಿಗೆದ್ದಿತ್ತು. ಮಂತ್ರಿಮಂಡಳದಲ್ಲಿ ಆ ಸಮಾಜದ ಪ್ರತಿನಿಧಿಯಾಗಿದ್ದ ಮಲ್ಲಿಕಾರ್ಜುನಪ್ಪನವರು ನನ್ನ ಸಂಪರ್ಕ ಬೆಳೆಸಿದರು. ಸಮಾಜವು ಅವರಿಗೆ ರಾಜೀನಾಮೆ ಕೊಡಲು ಆದೇಶವಿತ್ತಿತ್ತು. ವಾಣಿಜ್ಯಮಂತ್ರಿ ಜೋಶಿಯವರೂ ರಾಜೀನಾಮೆಯಿತ್ತು ನನಗೆ ತಿಳಿಸಿದರು.

ಜೋಶಿ ರಾಜೀನಾಮೆ ಸಲ್ಲಿಸಿದಾಗ ಲಾಯಕಅಲಿ ಉರಿದೆದ್ದರು. ಹಡಗ ಮುಳುಗುತ್ತಿದೆಯೆಂದು ಅವರಿಗೆ ಗೊತ್ತಾಗಿತ್ತು. ರಾಜೀನಾಮೆಯ ವಿಚಾರವನ್ನು ಗುಪ್ತವಾಗಿಡಲು ಅವರು ತುಂಬ ಪ್ರಯತ್ನಿಸಿದರು. ಆದರೆ ದಿಲ್ಲಿ ಆಕಾಶವಾಣಿಯು ಅದನ್ನು ಅದೇ ದಿನ ಇಡೀ ಜಗತ್ತಿಗೆ ಸಾರಿತು.

ಜೂನ ೪ ರಂದು ಆಗಿನ ಬ್ರಿಟಿಶ್ ಪ್ರಧಾನ ಮಂತ್ರಿ ಆಟ್ಲಿಯವರಿಗೆ ನಿಜಾಮರು ಒಂದು ಪತ್ರ ಬರೆದು ತಮ್ಮ ಸರಕಾರಕ್ಕೂ ಭಾರತ ಸರಕಾರಕ್ಕೂ ಮಧ್ಯಸ್ತಿಕೆ ಮಾಡಿ ಸಂಕಟದಲ್ಲಿ ಒಂದು ದಾರಿ ತೋರಿಸಬೇಕೆಂದು ಕೇಳಿಕೊಂಡರು. ಅದೇ ಸಮಯದಲ್ಲಿ ಪಂಡಿತಜಿಯವರು ಆಟ್ಲಿಯವರಿಗೆ ನಿಜಾಮರ ನಿಲುಮೆಯ ವಿಚಾರದಲ್ಲಿ ಒಂದು ಖಂಡಿತ ಪತ್ರ ಬರೆದರು. ಆಟ್ಲಿಯವರು ನಿಮ್ಮ ವಿನಂತಿಯನ್ನು ಮನ್ನಿಸಲಾರೆ ಎಂದು ನಿಜಾಮರಿಗೆ ತಿಳಿಸಿದರು.

ಯುದ್ಧಕ್ಕಾಗಿ ಹೈದರಾಬಾದದಲ್ಲಿ ನಡೆಯುತ್ತಿದ್ದ ಸಿದ್ಧತೆಗಳ ಮೇಲಿನ ಮುಸುಕು ಈಗ ಬದಿಗೆ ಸರಿಸಲ್ಪಟ್ಟಿತು. ನಗರವು ಯುದ್ಧ ಶಿಬಿರದೋಪಾದಿಯಲ್ಲಿ ಕಾಣಿಸತೊಡಗಿತು. ಭೂಮಾರ್ಗವಾಗಿ ಗೋವೆಯಿಂದ ಮತ್ತು ವಿಮಾನ ಮಾರ್ಗವಾಗಿ ಕರಾಚಿಯಿಂದ ಶಸ್ತ್ರಾಸ್ತ್ರಗಳನ್ನು ತರುವ ಕಾರ್ಯ ತ್ವರಿತಗತಿಯನ್ನು ಹೊಂದಿತು.

ಚಿಕ್ಕ ಶಸ್ತ್ರಗಳನ್ನು ತರುವ ವಿಮಾನಗಳು ಕರಾಚಿಗೆ ಹೋಗಿ ಬಂದು ಮಾಡತೊಡಗಿದವು. ಹೊಸ ಸ್ಟೆನ್‌ಗನ್ನುಗಳೂ ವಿಪುಲವಾಗಿ ಒದಗಿಸಿದ್ದ ಮದ್ದು ಗುಂಡುಗಳೂ ಕಂಡುಬಂದವು. ಆರ್ಯ ಸಮಾಜದ ಅಧ್ಯಕ್ಷ ನಾರಾಯಣ ರಾವ್ ಮತ್ತು ಅವರ ಸಹಕಾರಿಗಳು ತುಂಬ ಗಂಡಾಂತರವನ್ನು ಎದುರಿಸಿ ಈ ವಿಮಾನಗಳು ಮತ್ತು ಅವು ತಂದ ಸಾಮಾನುಗಳು ಎಲ್ಲಿಗೆ ಹೋಗುತ್ತವೆ ಎಂಬ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದರು.

ಕೆಲ ಇತ್ತಿಹಾದೇತರ ಮುಸ್ಲಿಂ ಧುರೀಣರು ಲಾಯಕ ಅಲಿಯನ್ನು ಕಂಡು ಭಾರತದಲ್ಲಿ ಸೇರ್ಪಡೆ ಹೊಂದಲು ನಿಜಾಮರಿಗೆ ಸಲಹೆಯನ್ನೀಯಲು ಬಿನ್ನವಿಸಿಕೊಂಡರು. ಇಲ್ಲವಾದಲ್ಲಿ ಸೈನಿಕ ಕ್ರಮ ಜರುಗೀತು ಎಂದು ಅವರು ವ್ಯಕ್ತಪಡಿಸಿದ ಅಂಜಿಕೆಗೆ ಉತ್ತರವಾಗಿ, "ಭಾರತ ಸರಕಾರವೇನಾದರೂ ಹೈದರಾಬಾದದ ಮೇಲೆ ಕೈಮಾಡಿದ್ದಾದರೆ ಒಂದು ಲಕ್ಷ ಜನ ನಮ್ಮ ಸೈನ್ಯ ಸೇರಲು ಸಿದ್ಧರಿದ್ದಾರೆ. ಮುಂಬಯಿಯ ಮೇಲೆ ಬಾಂಬು ಹಾಕಲು ದಕ್ಷಿಣ ಅರೇಬಿಯದಲ್ಲಿ ನಮ್ಮ ನೂರು ಬಾಂಬರ ವಿಮಾನಗಳಿವೆ" ಎಂದು ಲಾಯಕ ಅಲಿ ಉತ್ತರವಿತ್ತರಂತೆ.

"ಮಯೂರ ವಿಮಾನ ದಲ" ಇನ್ನೂ "ಆಕಾಶ" ದಲ್ಲಿಯೇ ಇತ್ತು !

ಕಿಂಗ್ ಕೋಠಿಯಲ್ಲಿ ಕೋಲಾಹಲ

ಪರಿಸ್ಥಿತಿ ಕೊನೆಯ ಹಂತಕ್ಕೆ ಮುಟ್ಟತೊಡಗಿತ್ತು. ಸಂಧಾನ ಮುರಿದ ಬಳಿಕ ಲಾಯಕ ಅಲಿ ಮತ್ತು ಅವರ ಗುಂಪಿನ ಬಗ್ಗೆ ಪಂಡಿತಜಿ ತುಂಬ ಹೇಸಿಕೊಂಡಿದ್ದರು. ಸರದಾರರ ಆರೋಗ್ಯ ಸುಧಾರಿಸಿ ಅವರು ದಿಲ್ಲಿಗೆ ಮರಳಿದ್ದರು. ಪತಿಯಾಲಾ ಮತ್ತು ಪೂರ್ವ ಪಂಜಾಬ ಒಕ್ಕೂಟದ ಉದ್ಘಾಟನೆ ಮಾಡುತ್ತ ಅವರಂದರು :

"ಅನೇಕರು ನನಗೆ ಪ್ರಶ್ನೆ ಕೇಳಿದ್ದಾರೆ: ಹೈದರಾಬಾದದಲ್ಲಿ ಏನಾಗಲಿದೆ ಎಂದು? ಜುನಾಗಡದಲ್ಲಿ ನಾನು ಮಾತಾಡಿದಾಗ ಹೈದರಾಬಾದವು ಸರಿಯಾಗಿ ವರ್ತಿಸದಿದ್ದರೆ ಅದು ಕೂಡ ಜುನಾಗಡದ ಗತಿಯನ್ನು ಹೊಂದುತ್ತದೆ ಎಂದು ಹೇಳಿದ್ದೆ. ಈ ಮಾತುಗಳು ಇನ್ನೂ ನಿಜವಾಗಿವೆ. ಅವಕ್ಕೆ ನಾನು ಬದ್ಧನಾಗಿದ್ದೇನೆ."

ಈ ಸ್ಪಷ್ಟ ಹೇಳಿಕೆ ದೇಶದಲ್ಲಿ ಹೊಸ ವಾತಾವರಣವನ್ನೂ ಹೈದರಾಬಾದದಲ್ಲಿ ಕೋಲಾಹಲವನ್ನೂ ಹುಟ್ಟಿಸಿತು.

ಯುದ್ಧದ ಕರಿ ಛಾಯೆ ಹೈದರಾಬಾದದ ಮೇಲೆ ಬಿದ್ದಿತ್ತು. ಸ್ವಾಭಾವಿಕವಾಗಿ ಹೈದರಾಬಾದದ ಸೇನಾಪತಿ ಜನರಲ್ ಎಲ್ ಎಡ್ರೂಸರು ಈಗ ರಂಗದಲ್ಲಿ ಕಾಣಿಸಿಕೊಳ್ಳತೊಡಗಿದರು.

ಪ್ರಾರಂಭದಲ್ಲಿ ಅವರು ಇತ್ತಿಹಾದದೊಡನೆ ಸ್ನೇಹದಿಂದಿದ್ದರು. ಸಂಧಾನವು ಕೊನೆಗೂ ಯಶಸ್ವಿಯಾಗುವದು ಎಂಬ ಆಶೆಯಿಂದ ಅವರು ಇತ್ತಿಹಾದದವರನ್ನು ರಮಿಸುತ್ತಿದ್ದರು. ಹಿಂದೀ ಸೈನ್ಯ 'ಬನಿಯಾ' ಸೈನ್ಯವಾಗಿದ್ದು ಅದನ್ನು ಕನಿಷ್ಠ ಆರು ತಿಂಗಳಾದರೂ ಹೈದರಾಬಾದ ಸೈನ್ಯವು ಎದುರಿಸಬಲ್ಲದೆಂಬ ಅವರ ಮತವನ್ನು ರಜಾಕಾರರು ಪಠಿಸುತ್ತಿದ್ದರು. ಆದರೆ ಈಗ ಯುದ್ಧ ಸಂಭವ ಎದುರು ಬಂದಾಗ ಅವರ ನಂಬಿಗೆ ಅಲುಗಿತ್ತು.

ರಜಾಕಾರರು ತಮ್ಮ ಸೈನಿಕ ವ್ಯವಸ್ಥೆಯಲ್ಲಿ ಕೈಹಾಕುವ ಬಗೆಯನ್ನು ಕಂಡು ಎಲ್ ಎಡ್ರೂಸರು ತುಂಬ ಅಸಮಾಧಾನಗೊಂಡರು.

ಜುಲೈ ೨೪ರಂದು ರಜಾಕಾರರ ಮತ್ತು ಅವರ ಸಹಾಯಕ್ಕಾಗಿ ಇತ್ತೀಚೆಗೆ ನೇಮಿಸಿಕೊಳ್ಳಲ್ಪಟ್ಟಿದ್ದ ಪಠಾಣರ ದೊಡ್ಡ ಗುಂಪೊಂದು ಸ್ಥಳಿಕ ಪೋಲೀಸರ ಸಹಾಯದಿಂದ ಹೈದರಾಬಾದದ ನಾನಜ ಹಳ್ಳಿಯಿಂದ ಹಳ್ಳಿಗರನ್ನು ಹೊರಗಟ್ಟಿ ಒಂದು ಕೋಟೆಯಂತಿದ್ದ ಮನೆಯಲ್ಲಿ ಅಡಗಿಕುಳಿತಿತು. ಎಂದಿನಂತೆ ಗಸ್ತಿಗಾಗಿ ಹಿಂದೀ ಸೈನಿಕರ ತಂಡವೊಂದು ಸೊಲ್ಲಾಪುರದಿಂದ ನಾನಜ ಮಾರ್ಗವಾಗಿ ಬಾರ್ಶಿಗೆ ಹೋಗುತ್ತಿದ್ದಾಗ ಈ ಮನೆಯಲ್ಲಿದ್ದ ರಜಾಕಾರರು ಮತ್ತು ಪಠಾಣರು ಅವರ ಮೇಲೆ ಗುಂಡು ಹಾರಿಸಿದರು. ಹಿಂದೀ

ಸೈನಿಕರಲ್ಲಿ ಆರು ಜನ ಸತ್ತರು. ಆರು ಜನ ಗಾಯಗೊಂಡರು. ಸೈನಿಕರು ಕೂಡಲೆ ಸುತ್ತಲೂ ಹರಡಿಕೊಂಡು ಕಡು ಕದನದ ನಂತರ ಹಳ್ಳಿಯನ್ನು ಗೆದ್ದು ಅದನ್ನು ಆಕ್ರಮಿಸಿದರು.

ಭಾರತ ಸರಕಾರ ಮತ್ತು ಹೈದರಾಬಾದ ಸರಕಾರದ ಮಿಲಿಟರಿ ಅಧಿಕಾರಿಗಳು ವಿಚಾರಣೆಗಾಗಿ ನೇಮಿಸಿದ ಜತೆಸಮಿತಿಯು ಈ ಘಟನೆಯ ದೋಷ ರಜಾಕಾರರದು ಎಂದು ಹೇಳಿತು.

ಈ ವರದಿಗೆ ಸಹಿ ಹಾಕಿದ್ದಕ್ಕಾಗಿ ಲೆ. ಕ. ವೆಸ್ಟನ್ನರ ಮೇಲೆ ಖತಿಗೊಂಡ ಕಾಸೀಮ ರಜವಿ ಅವರನ್ನು ಸಸ್ಪೆಂಡ್ ಮಾಡಲು ಎಲ್ ಎಡ್ರೂಸರನ್ನು ಕೇಳಿಕೊಂಡ. ಅವರು ನಿರಾಕರಿಸಿದರು. ಸಿಟ್ಟಿಗೆದ್ದ ರಜವಿ ಉಸ್ಮಾನಾಬಾದದಲ್ಲಿರುವ ಸೈನ್ಯ ತುಕಡಿಗೆ ನಾನಜವನ್ನು ಮರಳಿ ಗೆದ್ದುಕೊಳ್ಳಲು ಅಪ್ಪಣೆ ಕಳಿಸಿದ. ಆ ಸೈನ್ಯದ ಮುಖ್ಯಾಧಿಕಾರಿಗೆ ರಜವಿಯ ಅಪ್ಪಣೆ ಪಾಲಿಸಲಾಗದೆಂದು ಎಲ್ ಎಡ್ರೂಸರು ತಿಳಿಸಿದರು. ಇದರಿಂದ ರಜವಿಗೂ ಸೇನಾಪತಿಗೂ ಗಂಭೀರ ಮನಸ್ತಾಪವುಂಟಾಯಿತು.

ನಿಜಾಮರ ಹಿರಿಯ ಮಗ ವರ್ಹ್ಲಾಡದ ರಾಜಕುಮಾರರು ಕಾಯದೆಯಂತೆ (ನಾಮಮಾತ್ರಕ್ಕೆ) ಸೈನ್ಯದ ಸೇನಾಪತಿಗಳಾಗಿದ್ದರು. ಸಾಮಾನ್ಯವಾಗಿ ಯಾತರಲ್ಲೂ ಕೈಹಾಕದ ಅವರು ಒಮ್ಮಿಂದೊಮ್ಮೆ ಹುರುಪುಗೊಂಡು ಅಗಸ್ಟ ೩ ರಂದು ಹೈದರಾಬಾದದ ಮಿಲಿಟರಿ ಯೋಜನೆ ಮತ್ತು ನಕಾಶೆಗಳ ನಕಲನ್ನು ತಮಗೆ ಪೂರೈಸಲು ಎಲ್ ಎಡ್ರೂಸರಿಗೆ ವಿಧಿಸಿದರು.

ಜನರಲ್ ಎಲ್ ಎಡ್ರೂಸರು ಚಕಿತರಾದರು. ಅವರು ಸಲಹೆಗಾಗಿ ಲಾಯಕ ಅಲಿಯ ಬಳಿಗೆ ಹೋದರು. ರಾಜಕುಮಾರರಿಗೆ ಅವನ್ನು ಕೊಡಲಾಗದು ಎಂದು ಅವರಿಗೆ ತಿಳಿಸಲಾಯಿತು.

ಇದು ಗಂಭೀರ ಮಿಲಿಟರಿ ಗೈರಶಿಸ್ತು ಎಂದು ಹೇಳಿ ಅದನ್ನು ಪ್ರತಿಭಟಿಸುವ ಪತ್ರವೊಂದನ್ನು ರಾಜಕುಮಾರರು ಲಾಯಕ ಅಲಿಗೆ ಬರೆದು, ಜನರಲ್ ಎಲ್ ಎಡ್ರೂಸರು ತನ್ನ ಆಜ್ಞೆ ಪಾಲಿಸದಿದ್ದರೆ ಅವರಾದರೂ ರಾಜೀನಾಮೆ ಕೊಡಬೇಕು ಇಲ್ಲವೆ ತಾನಾದರೂ ಹೋಗುವೆ ಎಂದು ತಿಳಿಸಿದರು.

ಜನರಲ್ ಎಲ್ ಎಡ್ರೂಸರು ೪ನೆಯ ದಿನಾಂಕ ರಾಜೀನಾಮೆಯನ್ನು ಮುಖ್ಯ ಮಂತ್ರಿಗಳಿಗೆ ಕಳಿಸಿದರು. ಮಿಲಿಟರಿ ವ್ಯವಹಾರದಲ್ಲಿ ಕೈಹಾಕಬಾರದು ಎಂದು ನಿಜಾಮರು ರಾಜಕುಮಾರರಿಗೆ ತಿಳಿಸಿದಾಗ ರಾಜಕುಮಾರರು ತಮ್ಮ ಹುದ್ದೆಗೆ ರಾಜೀನಾಮೆಯಿತ್ತರು. ಇದರಿಂದ ಲಾಯಕ ಅಲಿ ಕಿಡಿಕಿಡಿಯಾದರು ಮಾತ್ರವಲ್ಲ, ಹೈದರಾಬಾದದಲ್ಲೆಲ್ಲ ಧೈರ್ಯ ಹ್ರಾಸವಾಯಿತು.

ಅಗಸ್ಟ ತಿಂಗಳಾರಂಭದಲ್ಲಿ ನಿಜಾಮರ ಎರಡನೆಯ ಮತ್ತು ಪ್ರೀತಿಯ ಪುತ್ರ ಮುಜಂ ಜಾಹರು ತಂದೆಗೆ ಪತ್ರ ಬರೆದು ಹೈದರಾಬಾದವನ್ನು ವಿನಾಶದತ್ತ ನಡೆಸುತ್ತಿದ್ದೀರಿ ಎಂದು ಆರೋಪಿಸಿದ್ದರು. ತಂದೆ ತನಗೆ ಕೊಡಲೊಪ್ಪಿದ ಐದು ಕೋಟಿ ರೂ ಗಳನ್ನು ಈಗ ಕೊಡಬೇಕೆಂದೂ ತಾನು ಹೈದರಾಬಾದನ್ನು ಬಿಟ್ಟು ಹೋಗಿ ಭಾರತ ಪ್ರದೇಶದಲ್ಲಿ ಸುರಕ್ಷಿತವಾಗಿ ಇರುವೆನೆಂದೂ ತಿಳಿಸಿದರು.

ಉಪ ಮುಖ್ಯಮಂತ್ರಿ ಪಿಂಗಳೆ ವೆಂಕಟರಾಮರೆಡ್ಡಿಯವರಿಗೆ ವಿಶ್ರಾಂತಿ ಬೇಕೆಂದೆನಿಸಿ ಅವರು ಬೆಂಗಳೂರಿಗೆ ತೆರಳಿದರು.

ನಿಜಾಮರು ಎಚ್ಚತ್ತರು

ಲಾರ್ಡ್ ಮೌಂಟಬ್ಯಾಟನ್ನರು ಹೋದದ್ದರಿಂದ ಮತ್ತು ಸರ್ ವಾಲ್ಟರ್ ಮಾಂಕ್ಟನ್ನರ ಸಹಾಯ ತಪ್ಪಿದ್ದರಿಂದ ನಿಜಾಮರಿಗೆ ಗಾಬರಿಯಾಗಿ ತಾವೇ ಕಟ್ಟಿಕೊಂಡಿದ್ದ ಸೆರೆಮನೆಯಿಂದ ಪಾರಾಗಲು ಕೊನೆಯ ಪ್ರಯತ್ನ ಮಾಡಿದರು.

ಅವರು ಮಾಡಿದ ಮೊಟ್ಟಮೊದಲನೆಯ ಕೆಲಸವೆಂದರೆ ಹೋಶಯಾರ ಜಂಗರೊಂದಿಗೆ ಮನಬಿಚ್ಚಿ ಮಾತಾಡಿದ್ದು. ನಿಜಾಮರು ನನ್ನನ್ನು ಭೆಟ್ಟಿಯಾಗಬೇಕು, ಮಂತ್ರಿಮಂಡಳವನ್ನು ಬದಲಾಯಿಸಬೇಕು, ಭಾರತದಲ್ಲಿ ಸೇರ್ಪಡೆಯಾಗಬೇಕು ಮತ್ತು ಅಗತ್ಯ ಕಂಡಲ್ಲಿ ರಜಾಕಾರರನ್ನು ಬಗ್ಗುಬಡಿಯಲು ಭಾರತದಿಂದ ಸೈನ್ಯ ಸಹಾಯ ಪಡೆಯ

ಬೇಕು ಎಂದು ಹೋಶರು ಸಲಹೆಯಿತ್ತರು. ಈ ಭೆಟ್ಟಿಯಿಂದ ನಿಜಾಮರ ಜಂಘಾಬಲವೇ ಉಡುಗಿ ಹೋಯಿತು.

ಇತ್ತಿಹಾದವು ಕೂಡಲೇ ಬೆಂಕಿಕಾರತೊಡ ತೊಡಗಿತು. ಇತ್ತಿಹಾದ ಪತ್ರಿಕೆಯಾದ "ಪರ್ಚಮ" ನಿಜಾಮರು ತಮ್ಮ ಮಂತ್ರಿಮಂಡಳದ ಕುತ್ತಿಗೆ ಕೊಯ್ಯಲು ಯತ್ನಿಸುತ್ತಿದ್ದಾರೆಂದು ಆರೋಪಿಸಿತು. ಬಾವನೆಗಳು ಉದ್ರಿಕ್ತವಾದವು. ರಜಾಕಾರರು ಖಡ್ಗ ಝುಳಪಿಸಿದರು. ನಿಜಾಮರು ಹಿಂದೀ ಸೈನ್ಯದ ಸಹಾಯ ಕೋರಿದ್ದೇ ಆದರೆ ಸಹಾಯ ಪಡೆಯಲು ನಿಜಾಮರೇ ಉಳಿಯುವದಿಲ್ಲ ಎಂದು ಅತ್ಯಂತ ಸ್ಪಷ್ಟವಾಗಿ ಹೋಶಯಾರ ಜಂಗರಿಗೆ ತಿಳಿಸಲಾಯಿತು.

ಅಗಸ್ಟ ೪ ರಂದು ನಿಜಾಮರು ಲಾಯಕ ಅಲಿಗೆ ನೀನೇ ನನ್ನ ಮತ್ತು ಸಂಸ್ಥಾನದ ಸರ್ವನಾಶ ಮಾಡಿದೆಯೆಂದು ಹೇಳಿದರು. ಅಂದೇ ಸಂಜೆ ಲಾಯಕ ಅಲಿ ರಾಜಿನಾಮೆ ಕೊಟ್ಟರು.

೫ ರಂದು ಲಾಯಕ ಅಲಿಯ ರಾಜೀನಾಮೆ ಸಂಬಂಧದಲ್ಲಿ ನಿಜಾಮರು ಹರ್ಷ ವ್ಯಕ್ತಪಡಿಸಿದರು.

ಆದರೆ ಅದೇ ರಾತ್ರಿ ಲಾಯಕ ಅಲಿ ಮತ್ತು ರಜವಿ ನಿಜಾಮರನ್ನು ಭೆಟ್ಟಿಯಾದರು. ಕೂಡಲೆ ಆಲಾ ಹಜರತರು ಶರಣಾಗತರಾದರು. ೬ನೆಯ ದಿನಾಂಕ ಮುಂಜಾನೆ ನಿಜಾಮರು ಮತ್ತೆ ಪರಾಕ್ರಮ ಕಂಠೀರವರಾಗಿ, "ಏನೇ ಆದರೂ ಮೌಂಟಬ್ಯಾಟನ್ ಕರಡುಗಳಿಗೆ ಸಹಿ ಹಾಕುವದಿಲ್ಲ" ಎಂದು ಅಬ್ಬರಿಸಿದರು.

ರಜವಿ ಕೂಡ ಸಾರ್ವಜನಿಕ ಎಚ್ಚರಿಕೆಯಿತ್ತನು: "ಹೈದರಾಬಾದದ ವಿರುದ್ಧ ಯಾರೇ ಆಗಲಿ ಕೈ ಎತ್ತಿದರೆ ಆ ಕೈಗಳನ್ನು ಕತ್ತರಿಸಿ ಒಗೆಯುವೆವು. ಎತ್ತಿದ ಕೈಗಳನ್ನು ಮಾತ್ರವಲ್ಲ, ಆ ಕೈಗಳನ್ನು ನಿಯಂತ್ರಿಸುವ ಕೈಗಳನ್ನೂ ಕತ್ತರಿಸುವೆವು." ಇದು ನಿಜಾಮರಿಗೇ ಇತ್ತ ಎಚ್ಚರಿಕೆಯಾಗಿತ್ತು.

೯ನೇ ದಿನಾಂಕ ಲಾಯಕ ಅಲಿಯ ಆಮಂತ್ರಣದ ಮೇರೆಗೆ ಅವರೊಡನೆ ಭೋಜನಮಾಡಿದ ನಾನು ಹೇಳಿದೆ: "ಲಾಯಕ ಅಲಿ, ನನ್ನಲ್ಲಿ ನಂಬಿಗೆಯಿದೆಯೆಂದು ಯಾವಾಗಲೂ ಅನ್ನುತ್ತೀರಿ. ನೀವು ಒಮ್ಮೆ ನನ್ನ ಪಕ್ಷಕಾರರಾಗಿದ್ದಿರಿ. ಈಗಿನ ನಿಮ್ಮ ಧೋರಣದಿಂದ ನಿಮಗೇನು ಲಾಭವಿದೆ? ಈ ದೇಶದಲ್ಲಿ ನಾಲ್ಕು ಕೋಟಿ ಮುಸಲ್ಮಾನರಿದ್ದಾರೆಂಬುದನ್ನು ನೆನಪಿಗೆ ತಂದುಕೊಳ್ಳಿರಿ. ನಿಜಾಮರ ಮುಖ್ಯಮಂತ್ರಿಯಾಗಿ ನೀವು ಭಾರತ ಸರಕಾರದೊಂದಿಗೆ ಸಹಕರಿಸಿದರೆ ನೀವು ಭಾರತದ ಹಿಂದು-ಮುಸ್ಲಿಂ ಸಮಸ್ಯೆಯನ್ನು ಬಿಡಿಸುವಿರಿ. ನೀವು ಹೈದರಾಬಾದದಲ್ಲಿ ಹೊಸ ರಾಜ್ಯ ಸೃಷ್ಟಿಸುವಿರಿ. ಇನ್ನು ಕೆಲ ವರ್ಷಗಳಲ್ಲಿ ಶ್ರೇಷ್ಠ ಮುತ್ಸದ್ದಿಯೆಂದು ಭಾರತವು ನಿಮ್ಮನ್ನು ಶ್ಲಾಘಿದರೆ ನನಗೆ ಆಶ್ಚರ್ಯವಾಗದು. ಮೂರು ವಿಷಯಗಳನ್ನು ಕೇಂದ್ರಕ್ಕೆ ಬಿಟ್ಟುಕೊಟ್ಟು ಭಾರತದಲ್ಲಿ ಸೇರ್ಪಡೆಯಾಗಿ ಈ ಪ್ರಕರಣವನ್ನೆಲ್ಲ ಏಕೆ ಮುಗಿಸುವದಿಲ್ಲ ?"

"ಮುನ್ಷಿ, ಜೀವ ಹೋದರೂ ಭಾರತದಲ್ಲಿ ಸೇರ್ಪಡೆಯಾಗುವ ವಿಷಯ ನನಗೆ ಸಮ್ಮತವಾಗುವಂತಿಲ್ಲ."

"ನಿಮ್ಮ ಸದ್ಯದ ಧೋರಣವನ್ನು ಮುಂದುವರಿಸಿ ಪಟ್ಟುಹಿಡಿದರೆ ಆಗುವ ಕಠಿಣ ಪರಿಣಾಮಗಳನ್ನು ನೀವು ಅರಿಯಬೇಕು."

ಅವರು ಒಮ್ಮೆಲೆ ಮುಖ ಮೇಲಕ್ಕೆತ್ತಿದರು. "ಮುನ್ಷಿ, ಶಹಾದತ್—ಹುತಾತ್ಮಪದ—ಎಂಬದೊಂದಿದೆಯಲ್ಲ" ಎಂದರು.

ನನ್ನಲ್ಲಿ ಇದಕ್ಕುತ್ತರವಿರಲಿಲ್ಲ.

ಕೊನೆಯ ಘಟ್ಟ

ಆ ಕಾಲದ ನನ್ನ ದಿನಚರಿಯ ಪುಟಗಳಿವು:

ಅಗಸ್ಟ ೨೨, ೧೯೪೮

'ಇಮ್ರೋಜ' ದ ಸಂಪಾದಕ ಶೋಬುಲ್ಲಾಖಾನರನ್ನು ಗುಂಡಿಕ್ಕಿ ಅವರ ಕೈಗಳನ್ನು ಕತ್ತರಿಸಿ ಹಾಕಿದ್ದಾರೆ. ಅವರ ಭಾವನಿಗೂ ತುಂಬ ಗಾಯಗಳಾಗಿವೆ. ಇತ್ತಿಹಾದದವರು ತಮ್ಮ ಶತ್ರುಗಳನ್ನು ಪಕ್ಕಾ ಫ್ಯಾಸಿಸ್ಟ ಪದ್ಧತಿಯಿಂದ ನಿರ್ನಾಮ ಮಾಡುತ್ತಿದ್ದಾರೆ.

ಆಗಸ್ಟ ೨೩, ೧೯೪೮

ಕಂಟ್ರಾಕ್ಟರರೊಬ್ಬರು ಬಂದು, ೧೬ ನೆಯ ತಾರೀಖಿನ ಸುಮಾರಿಗೆ ಬೋಲಾರಾಮದ ಒಂದು ಮಶೀದೆಯಲ್ಲಿ ಸೇರಿದ್ದ ಸಭೆಯಲ್ಲಿ ರಜಾಕಾರರು ನನ್ನನ್ನು ಕೊಲೆ ಮಾಡಿದವರಿಗೆ ೫,೦೦೦ ರೂ. ಗಳ ಬಹುಮಾನ ಸಾರಿದ್ದಾರೆಂದು ತಿಳಿಸಿದರು.

ರಾತ್ರಿಯೆಲ್ಲ ಮಮ್ಮಿ (ಶ್ರೀಮತಿ ಮುನಶಿ) ಯದೇ ಯೋಚನೆ. ತಡವಾಗಿ ಮಲಗಿದೆ.

ಮಧ್ಯರಾತ್ರಿಯ ನಂತರ ಆವಾರದ ಗೋಡೆಯ ಗುಂಟ ಯಾರೋ ಹರಿದು ಹೋಗುತ್ತಿರುವ ಸಂಶಯ ಕಾವಲುಗಾರರಿಗೆ ಬಂತು. ಭಯಸೂಚಕ ಗಂಟೆ ಬಾರಿಸಲ್ಪಟ್ಟಿತು. ಆ ಜನರು ಓಡಿ ಹೋದರು: ಏನೂ ಸಂಭವಿಸಲಿಲ್ಲ.

ಆಗಸ್ಟ ೨೪, ೧೯೪೮

ಮಾಝುರು ನನಗೆ ತಿಳಿಸಿದ ಮಾತಿದು:

ಭಾರತದೊಂದಿಗೆ ಒಪ್ಪಂದ ಮಾಡಿಕೊಳ್ಳಬಾರದೆಂದು ಜಿನ್ನಾಸಾಹೇಬರು ಲಾಯಕ ಅಲಿಗೆ ಸಲಹೆಯಿತ್ತದ್ದರಿಂದಲೇ ಮೌಂಟಬ್ಯಾಟನ್ನರ ಕೊನೆಯ ಸಂಧಾನಯತ್ನ ವಿಫಲವಾಯಿತಂತೆ.

ಮಮ್ಮಿಯೊಂದಿಗೆ ಟೆಲಿಫೋನಿನಲ್ಲಿ ಮಾತಾಡಿದೆ. ಅವಳು ತುಂಬ ಹೆದರಿಕೊಂಡಿದ್ದಾಳೆ. ನನ್ನ ರುಂಡಕ್ಕಾಗಿ ಬಹುಮಾನವಿಟ್ಟಿರುವ ವಿಚಾರ ಅವಳ ಕಿವಿಗೆ ಬೀಳದಿರಲಿ ಎಂದು ಆಶಿಸುತ್ತೇನೆ.

ಆಗಸ್ಟ ೩೦, ೧೯೪೮

ನಿಜಾಮರ ಸೈನ್ಯದಲ್ಲಿ ಉನ್ನತ ಅಧಿಕಾರಿಗಳಾಗಿರುವ ಒಬ್ಬರು–ನಾವು ಅವರನ್ನು 'ಮೂಕವಾಣಿ' ಎಂದು ಕರೆಯುತ್ತಿದ್ದೆವು – ನಮ್ಮೊಡನೆ ಕೆಲ ಕಾಲದಿಂದ ಸಂಪರ್ಕ ಬೆಳೆಸಿಕೊಂಡಿದ್ದರು. ಈ ಅಧಿಕಾರಿ ಹೈದರಾಬಾದದ ಸೈನ್ಯಬಲ ಇತ್ಯಾದಿಗಳ ವಿವರವಾದ ವರದಿಯನ್ನು ತಯಾರಿಸಿ ಕೊಟ್ಟಿದ್ದಾರೆ. ನಮ್ಮ ಮಿಲಿಟರಿ ಅಧಿಕಾರಿಗಳು ಇದರಿಂದ ಸಂತುಷ್ಟರಾದರೆಂದು ಖಂಡಿತ ಹೇಳಬಲ್ಲೆ.

ಆಗಸ್ಟ ೩೧, ೧೯೪೮

ಶೀಘ್ರದಲ್ಲಿ ಸೈನಿಕಕ್ರಮ ತೆಗೆದುಕೊಳ್ಳಬೇಕು, ಅದಾಗದಿದ್ದರೆ ಕೊನೆಯ ಪಕ್ಷ ಹೈದರಾಬಾದನ್ನು ಸಂಪೂರ್ಣವಾಗಿ ದಿಗ್ಬಂಧಿಸಬೇಕು ಎಂದು ಸರದಾರರಿಗೆ ವಾಯರಲೆಸ್ ಮೂಲಕ ತಿಳಿಸಿದ್ದೇನೆ.

ಲೋಕ ಸಭೆಯಲ್ಲಿ ಸರದಾರರು ಕೊಟ್ಟ ಅಪೂರ್ವಉತ್ತರಗಳನ್ನು ರೇಡಿಯೋದಲ್ಲಿ ಕೇಳಿದೆ. ಹೈದರಾಬಾದದ ಮೇಲೆ ಶೀಘ್ರದಲ್ಲಿಯೆ ಕ್ರಮ ತೆಗೆದುಕೊಳ್ಳುವೆವೆಂದು ಅವರು ಹೇಳಿದರು.

ಸಪ್ಟಂಬರ ೨, ೧೯೪೮

ನಿಜಾಮರು ತುಂಬ ಅಸ್ವಸ್ಥಚಿತ್ತರಾಗಿದ್ದಾರೆ. ಅವರು ಸರ್ ಮಿರ್ಝಾರೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದಾರೆ.

'ಡೇಲಿ ಟೆಲಿಗ್ರಾಫ' ನ ಬ್ರೌನ್ ಎಂಬವರು ಭಾರತವನ್ನು ನಾಝಿ ಜರ್ಮನಿಗೆ, ನನ್ನನ್ನು ರಿಬನ್‌ಟ್ರಾಪನಿಗೆ ಹೋಲಿಸಿ ಮತ್ತು ಹೈದರಾಬಾದನ್ನು ಸುಖಶಾಂತಿಯ ಭೂಮಿ ಎಂದು ವರ್ಣಿಸಿ ಅತ್ಯಂತ ಹೇಯ ಸುದ್ದಿಯನ್ನು ತಮ್ಮ ಪತ್ರಿಕೆಗೆ ಕಳಿಸಿದ್ದಾರೆ. ವಿದೇಶೀ ಸುದ್ದಿಗಾರರಿಗೆ ಇಲ್ಲಿ ಸ್ವರ್ಗತುಲ್ಯ ಅತಿಥ್ಯ ದೊರೆಯುತ್ತಿದೆ; ಅವರಿಗೆ ಜತೆಗಾತಿಯರನ್ನೂ ಒದಗಿಸಲಾಗುತ್ತಿದೆ ಎಂಬ ಅಂಶವನ್ನು ಮಾತ್ರ ಅವರು ಹೇಳಿಲ್ಲ.

ಸಪ್ಟಂಬರ ೬, ೧೯೪೮.

ಮೊಯಿನ ನವಾಜರ ಹಿರಿತನದಲ್ಲಿ ಸಂ. ರಾ. ಸಂಘಕ್ಕೆ ಹೋಗುವ ಹೈದರಾಬಾದ ಶಿಷ್ಟಮಂಡಳವು ಸಿಡ್ನಿ ಕಾಟನ್ನನ ವಿಮಾನದಲ್ಲಿ ಹೊರಡಲಿದೆ.

ಕೆಲ ದಿನಗಳ ಮಟ್ಟಿಗೆಂದು ಕಾಟನ್ ಹೈದರಾಬಾದದಲ್ಲಿದ್ದಾನೆ. ಪಾಕಿಸ್ತಾನದಲ್ಲಿ ಹೈದರಾಬಾದದ ಎಜಂಟ್ ಜನರಲರಾಗಿರುವ ಮುಸ್ತಾಕ ಅಲಿ ಕೂಡ ಪಾಕಿಸ್ತಾನದ ಕೆಲ ವಿಮಾನ ಅಧಿಕಾರಿಗಳೊಡನೆ ಇಲ್ಲಿ ಬಂದಿದ್ದಾರೆಂದು ವದಂತಿಯಿದೆ.

ಸಪ್ಟಂಬರ ೭, ೧೯೪೮

ಲೋಕಸಭೆಯಲ್ಲಿ ಪಂಡಿತಜಿಯವರು " ರಜಾಕಾರರನ್ನು ನಿರ್ಬಂಧಿಸಬೇಕು ಮತ್ತು ಸಿಕಂದರಾಬಾದದಲ್ಲಿ ಭಾರತದ ಸೈನ್ಯವನ್ನು ಪುನಃ ಇರಿಸಿಕೊಳ್ಳಬೇಕು" ಎಂಬೆರಡು ಬೇಡಿಕೆಗಳನ್ನು ನಿಜಾಮರು ಪೂರೈಸಬೇಕೆಂದು ಸಾರಿದರು. ವಾಯರಲೆಸ್ ಮೂಲಕ ಇದೇ ವಿಚಾರದಲ್ಲಿ ವಿ. ಪಿ. ಮೆನನ್ನರಿಂದ ನಮಗೆ ಅಧಿಕೃತ ಪತ್ರ ಬಂತು. ಅದನ್ನು ಮಧ್ಯಾಹ್ನ ೩ ಕ್ಕೆ ಲಾಯಕ ಅಲಿಗೆ ಕಳಿಸಿದೆ.

ಮಧ್ಯಾಹ್ನ ೪ ಗಂಟೆಗೆ ನಿಜಾಮರು ಒತ್ತಾಯದ ಸೈನ್ಯ ಭರತಿ ಆಜ್ಞೆಗೆ ಸಹಿ ಹಾಕಿದರು.

ಸೆಪ್ಟಂಬರ ೭, ೧೯೪೮

ಹೈದರಾಬಾದವು ಗಾಬರಿಗೊಂಡಿದೆ.

ಸೆಪ್ಟಂಬರ ೯, ೧೯೪೮

ಮುಂಜಾನೆ ಸಂಸ್ಥಾನ ಮಂತ್ರಿ ಶಾಖೆಯಿಂದ ವಾಯರಲೆಸ್ ಸಂದೇಶವೊಂದು ಬಂತು. ದಿಲ್ಲಿಯ ಸೈನ್ಯ ಕೇಂದ್ರ ಕಚೇರಿ ಮತ್ತು ಪುಣೆಯ ಸದರ್ನ ಕಮಾಂಡದವರಿಂದ ಟೆಲಿಫೋನುಗಳು ಬಂದವು. ಫ್ರಾಂಯರ ಸಂಪರ್ಕ ಬೆಳೆಸಿದೆ. ಹೈದರಾಬಾದ ದಿಂದ ಯುರೋಪಿಯನ್ನರನ್ನು ಹೊರಗೊಯ್ಯುವ ವಿಮಾನಕ್ಕೆ ಸೌಕರ್ಯ ಕೊಡಬೇಕೆಂದು ಲಾಯಕ ಅಲಿಗೆ ಬರೆದೆ. ಅಂತೂ ಗಾಡಿ ಚಾಲೂ ಆಗಿದೆ.

ಸೆಪ್ಟಂಬರ ೧೦, ೧೯೪೮

೧೧.೧೫ ಕ್ಕೆ ತಮ್ಮ ಸಲಹೆಯನ್ನು ಸ್ವೀಕರಿಸಲು ನಿಜಾಮರಿಗೆ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುವ ರಾಜಾಜಿಯವರ ಸಂದೇಶ ಬಂತು. ಕಿಂಗಕೋಠಿಯಲ್ಲಿ ವಿಚಾರಿಸಿದೆ. ನಿಜಾಮರು ನಿದ್ದೆ ಮಾಡುತ್ತಿದ್ದಾರಂತೆ.

ಬ್ರಿಟಿಶರನ್ನು ಕರೆದೊಯ್ಯಲು ಮತ್ತೆ ಯಾರ್ಕ ವಿಮಾನ ಬಂತು. ಒಟ್ಟಿನಲ್ಲಿ ಸುಮಾರು ೨೦೦ ಜನ ಹೊರಟುಹೋದರು. ಸೈನ್ಯದಲ್ಲಿದ್ದ ಬ್ರಿಟಿಶರು ಹೋಗಲು ನಿರಾಕರಿಸಿ ನಾಗರಿಕ ಅಧಿಕಾರಿಗಳಾಗಿ ಕೆಲಸಮಾಡಲು ನಿರ್ಧರಿಸಿದರು. ಇದೊಂದು ಸೋಗು ಮಾತ್ರ. ಹೋಗುವ ಮನಸ್ಸಾಗದಷ್ಟು ದೊಡ್ಡ ಸಂಬಳ ಅವರಿಗೆ ಇಲ್ಲಿ ಸಿಗುತ್ತಿದೆ. ಹೈದರಾಬಾದಕ್ಕೆ ಸಹಾಯ ಮಾಡಲು ಅರಸು ಫರೂಕರು ಒಪ್ಪಿದ್ದಾರೆಂದು ಸುದ್ದಿಯಿದೆ. ಇದು ನಿಜವಿರಬಹುದೆ?

*

೧೦ ನೆಯ ದಿನಾಂಕ ರಾತ್ರಿ ಹೈದರಾಬಾದದ ಈ ದುರಂತವನ್ನು ಸೃಷ್ಟಿಸಿದ ಮಹಾಪುರುಷ (ಮೊಯಿನ ನವಾಜ) ಭದ್ರತಾ ಮಂಡಳದಲ್ಲಿ ಹೈದರಾಬಾದದ ಶಿಷ್ಟಮಂಡಳದ ಧುರೀಣನಾಗಿ ವಾದಿಸಲು ಸಿಡ್ನಿ ಕಾಟನ್ ವಿಮಾನದಲ್ಲಿ ಹೊರಟರು. ತಮ್ಮ ಕುಟುಂಬವನ್ನೂ ಸರ್ವ ಸಂಪ

ತ್ತನ್ನೂ ಅವರು ವಿಮಾನದಲ್ಲಿ ತಮ್ಮ ಜೊತೆಗೆ ಒಯ್ದರು. ತಮ್ಮ ಕನಸು ಕುಸಿದಿದೆ, ಹೈದರಾ-ಬಾದ ರಾಜ್ಯ ಮತ್ತು ನಿಜಾಮರ ಮಹತ್ವಾಕಾಂಕ್ಷೆಗಳು ಅದರಡಿಯಲ್ಲಿ ಸಮಾಧಿಯಾಗಿವೆಯೆಂದು ಅವರಿಗೆ ಗೊತ್ತಾಗಿತ್ತು, ಅಥವಾ ಆಗಲಿವೆಯೆಂದು ಅನಿಸಿತ್ತು.

ಭಾರತದ ಸೈನ್ಯ ಬಂತು

ಸಪ್ಟಂಬರ ೧೨ ನೆಯ ತಾರೀಖಿನ ಮುಂಜಾನೆ ನಾನು ಟೆಲಿಫೋನಿನಲ್ಲಿ ಸರದಾರ ಪಟೇಲರೊಂದಿಗೆ ಮಾತನಾಡಿದೆ. ಏನೋ ಬಿರುಸಾಗಿ ನಡೆದಿದೆಯೆಂದು ಮಾತ್ರ ಅವರು ಸೂಚಿಸಿದರು. ಗುಜರಾತಿ ಗಾದೆಯೊಂದನ್ನುಪಯೋಗಿಸಿ ಅವರು, " ಎತ್ತಿನ ಗಾಡಿ ಒಂದಿಲ್ಲೊಂದು ದಿನ ಕೆಸರಿನಿಂದ ಹೊರಗೆ ಬರಲೇಬೇಕಲ್ಲ" ಎಂದರು.

ಅಂದೇ ಆಕಾಶವಾಣಿಯಲ್ಲಿ ಪಾಕಿಸ್ತಾನದ ಶಿಲ್ಪಿ ಜಿನ್ನಾರ ನಿಧನ ವಾರ್ತೆ ಬಂತು. ರಜವಿಯ ಶಿಬಿರದಲ್ಲಿ ಜೋರಾಗಿ ಚಟುವಟಿಕೆ ನಡೆದಿತ್ತು. ಭಾರತದ ಸೈನ್ಯದ ಪ್ರವೇಶ ತಡೆಯಲು ಸೇತುವೆಗಳನ್ನು ಹಾರಿಸಬೇಕೆಂದು ಆತ ಆಜ್ಞೆ ಕೊಟ್ಟಿದ್ದ.

ಮುಖ್ಯ ಮಂತ್ರಿ ಲಾಯಕ ಅಲಿಯವರು ಅಂದು ಭೋಜನಕ್ಕೆ ಬರಲು ನನಗೆ ಆಮಂತ್ರಣ ಕಳಿಸಿದರು. ನನಗೆ ಇದು ಅತ್ಯಾಶ್ಚರ್ಯವನ್ನುಂಟುಮಾಡಿದರೂ ನಾನು ಅವರಲ್ಲಿಗೆ ಹೋದೆ. ಏನಾದರೂ ಹೆಚ್ಚು ಕಡಿಮೆ ಸಂಭವಿಸುವ ಮೊದಲೇ ಹೈದರಾಬಾದವನ್ನು ಬಿಟ್ಟು ಹೋಗಲು ಲಾಯಕ ಅಲಿ ನನ್ನನ್ನು ಕೇಳಿಕೊಂಡರು. " ನೀವಿಲ್ಲಿರುವದರಿಂದ ನಮಗೆ ಉಭಯಸಂಕಟವಾಗುವದು. ಬೇಕಾದರೆ ನಿಮ್ಮ ಉಪಯೋಗಕ್ಕಾಗಿ ಒಂದು ವಿಮಾನವನ್ನು ಕೊಡುವೆ '' ಎಂದರವರು.

"ಥೇಂಕ ಯು. ಏನೇ ಆಗಲಿ, ಇಲ್ಲಿರುವದು ನನ್ನ ಕರ್ತವ್ಯ. ನಾನು ಇಲ್ಲಿಯೇ ಉಳಿಯುವೆ" ಎಂದು ನಾನು ಉತ್ತರವಿತ್ತೆ.

ಇನ್ನೂ ಎರಡು ದಿನಗಳ ವರೆಗೆ ಏನೂ ಸಂಭವಿಸಲಿಕ್ಕಿಲ್ಲ ಎಂದು ಲಾಯಕ ಅಲಿಯ ಎಣಿಕೆಯಾಗಿತ್ತು. ಯುದ್ಧ ಪ್ರಸಂಗ ಬಂದದ್ದೇ ಆದರೆ ಭಾರತಸರಕಾರದ ನೌಕರರು ಮಿಡೋಸ ಬರಾಕುಗಳಲ್ಲಿ ಸ್ಥಾನಬದ್ಧರಾಗಿ ಇರಬೇಕೆಂದು ನಾವಿಬ್ಬರೂ ಒಪ್ಪಿಕೊಂಡೆವು. '' ನನ್ನ ಮತ್ತು ನನ್ನ ನೌಕರರ ಮಟ್ಟಿಗೆ ನೀವು ಬಯಸಿದಲ್ಲಿ ಇರಲು ನಾವು ಸಿದ್ಧರಿದ್ದೇವೆ" ಎಂದು ನಾನು ಲಾಯಕ ಅಲಿಗೆ ತಿಳಿಸಿದೆ. ಕೊನೆಗೆ—

"ಲಾಯಕ ಅಲಿ, ನೀವು ಈ ಗಂಡಾಂತರವನ್ನೆಲ್ಲ ಏಕೆ ಮೈಮೇಲೆ ತಂದುಕೊಳ್ಳುತ್ತಿದ್ದೀರಿ ? ಈಗಲೂ ಮನಸ್ಸಿದ್ದರೆ ನೀವು ಬಹಳಷ್ಟನ್ನು ಮಾಡಬಹುದು. ನೀವು ವಿವೇಕಿಗಳು. ನಿಮ್ಮ ನಿಲುಮೆ ನನಗೆ ಅರ್ಥವೇ ಆಗುವದಿಲ್ಲವಲ್ಲ" ಎಂದೆ ನಾನು.

" ಇಲ್ಲ. ಎಂದಿಗೂ ಇಲ್ಲ. ಹೈದರಾಬಾದ ಭಾರತದಲ್ಲಿ ಕೂಡಿಕೊಳ್ಳಲು ನಾನೆಂದೂ ಬಿಡಲಾರೆ" ಎಂದು ಲಾಯಕ ಅಲಿ ಉತ್ತರವಿತ್ತು, " ಶಹಾದತ್ (ಹುತಾತ್ಮತೆ) ಎಂಬದೊಂದಿದೆಯಲ್ಲ" ಎಂಬ ತಮ್ಮ ಹಳೇ ಪಲ್ಲವಿಯನ್ನು ಪುನರುಚ್ಚರಿಸಿದರು.

೧೩ ನೆಯ ದಿನಾಂಕ ಮುಂಜಾನೆ ನಮ್ಮ ಸೈನ್ಯಗಳು ಹೈದರಾಬಾದ ಗಡಿಯನ್ನು ಪ್ರವೇಶಿಸಿದ ವಾರ್ತೆಯನ್ನು ರೇಡಿಯೊ ಬಿತ್ತರಿಸಿತು. ನಾವೆಲ್ಲ ತತ್‌ಕ್ಷಣ ಕಾರ್ಯಪ್ರವೃತ್ತರಾದೆವು. ಮಹತ್ವದ ಕಾಗದ ಪತ್ರಗಳನ್ನೆಲ್ಲ ಕಲೆಹಾಕಿ ಪೆಟ್ರೋಲು ಸುರುವಿ ಬೆಂಕಿ ಹಚ್ಚಿದೆವು.

ಪೋಸ್ಟ್, ಟೆಲಿಗ್ರಾಫ್ ಮತ್ತು ಟೆಲಿಫೋನ್ ಕಚೇರಿಗಳಿಗೆ ನಡೆದದ್ದನ್ನೆಲ್ಲ ಕ್ಷಣಕ್ಷಣಕ್ಕೆ ನನಗೆ ತಿಳಿಸಲು ಸೂಚನೆ ಕಳಿಸಿದ್ದಾಯಿತು. ಟೆಲಿಗ್ರಾಫ್ ಮತ್ತು ಟೆಲಿಫೋನ್ ನಿಯಂತ್ರಣ ಕೋಣೆಯನ್ನು ಹೈದರಾಬಾದ ಸೈನ್ಯವು ಆಕ್ರಮಿಸಲೆತ್ನಿಸಿದರೆ ಅವುಗಳನ್ನು ಕೂಡಲೇ ನಿರುಪ

ಯುಕ್ತವಾಗಿ ಮಾಡಲು ಮೊದಲೇ ವ್ಯವಸ್ಥೆ ಮಾಡಿಸಲಾಗಿತ್ತು.

ಇಷ್ಟೆಲ್ಲ ನಡೆಯುತ್ತಿದ್ದಾಗ ಲಾರಿಗಳ ತುಂಬ ರಜಾಕಾರರು ಆಯುಧಗಳನ್ನು ಝಳಪಿಸುತ್ತ, ದಕ್ಷಿಣಾಸದನಾಭಿಮುಖವಾಗಿ ತಮ್ಮ ಭರ್ಚಿಗಳನ್ನು ಉದ್ರೇಕಪೂರ್ವಕವಾಗಿ ಬೀಸುತ್ತ, ಸಮರ ಘೋಷಣೆಗಳನ್ನು ಕೂಗುತ್ತ ರಸ್ತೆಯಲ್ಲಿ ಅಡ್ಡಾಡುತ್ತಿದ್ದರು.

ಮಧ್ಯಾಹ್ನ ೨ ಗಂಟೆಗೆ ನಿಜಾಮ ಸರಕಾರದ ಇಬ್ಬರು ಅಧಿಕಾರಿಗಳು ಲಾಯಕ ಅಲಿಯ ಪತ್ರವೊಂದನ್ನು ತೆಗೆದುಕೊಂಡು ಬಂದರು.

"ನೀವೇನು ಮಾಡಬೇಕೆನ್ನುತ್ತೀರಿ ಎಂದು ನಾನರಿಯೆ. ನೀವು ವಿಮಾನದಲ್ಲಿ ಹೋಗಬಯಸುವಿರಾದರೆ ನಿಮ್ಮ ಪ್ರವಾಸಕ್ಕೆ ಎಲ್ಲ ಅನುಕೂಲತೆಗಳನ್ನು ಮಾಡಿಕೊಡುವೆವು . . . . ನೀವು ನಿಮ್ಮ ಅಧಿಕಾರಿಗಳೊಂದಿಗೆ ಗ್ರೀನ್ಸ್‌ಲ್ಯಾಂಡ್ಸ್ ಗೆಸ್ಟಹೌಸಿಗೆ ತೆರಳಿ ಅಲ್ಲಿರಬೇಕು. ಅಲ್ಲಿ ನಿಮ್ಮನ್ನು ಸಂರಕ್ಷಿಸಬೇಕಾದ ನಮ್ಮ ಕರ್ತವ್ಯವನ್ನು ಈಡೇರಿಸಲು ನಮಗೆ ಅನುಕೂಲವಾಗುವದು."

ಆದರೆ ಬಂದ ಅಧಿಕಾರಿಗಳಿಗೆ ನಿರ್ದಿಷ್ಟವಾದ ಸೂಚನೆಗಳನ್ನೇನೂ ಕೊಟ್ಟಿರಲಿಲ್ಲ. ಮೇಜರ ಸಿಂಗರಿಗೆ ಅವರೊಂದಿಗೆ ಲಾಯಕ ಅಲಿಯವರ ಬಳಿಗೆ ಹೋಗಿ ವಿವರವಾಗಿ ಎಲ್ಲವನ್ನೂ ತಿಳಿದುಕೊಂಡು ಬರಲು ಹೇಳಿದೆ.

ತುಸು ಹೊತ್ತಿನಲ್ಲಿ ಕಂಟ್ರೋಲ್ ರೂಮಿನವರು ಸಮೀಪದಲ್ಲಿಯೇ ಸೈನ್ಯದ ಚಲನವಲನ ನಡೆದಿದೆಯೆಂದು ತಿಳಿಸಿದರು. ನಾನು ಕೂಡಲೆ ನನ್ನ ಹೆಂಡತಿಗೆ ಟೆಲಿಫೋನ ಮಾಡಿ ನಿರೋಪ ತೆಗೆದುಕೊಂಡೆ. ಸರದಾರರಿಗೂ ಟೆಲಿಫೋನ ಮಾಡಿ ಅವರಿಂದಲೂ ಬೀಳ್ಕೊಂಡೆ. ಇನ್ನು ಕೆಲ ನಿಮಿಷಗಳ ಮೇಲೆ ಟೆಲಿಫೋನು ಕೆಲಸ ಮಾಡಲಾರದು ಎಂದು ತಿಳಿಸಿದೆ.

ಇದರ ಬೆನ್ನ ಹಿಂದೆಯೆ ವಿ. ಪಿ. ಮೆನನ್ನರು ಟೆಲಿಫೋನಿನಲ್ಲಿ, "ಮುನ್ಷಿ, ನೀವೇನೂ ಚಿಂತಿಸಬೇಡಿರಿ. ನೀವೇನೂ ಗಾಬರಿಯಾಗಬೇಕಿಲ್ಲವೆಂದು ನಿಮಗೆ ತಿಳಿಸಲು ನನ್ನ ಸರಕಾರ ಹೇಳಿದೆ. ನಿಮ್ಮಲ್ಲಿ ಸರಕಾರಕ್ಕೆ ಸಂಪೂರ್ಣ ವಿಶ್ವಾಸವಿದೆ. ನೀವು ಏನು ಮಾಡಿದರೂ ಅವರು ನಿಮಗೆ ಬೆಂಬಲವೀಯುವರು..." ಎಂದು ಹೇಳುತ್ತಿದ್ದಂತೆ ಟೆಲಿಫೋನ್ ತಣ್ಣಗಾಯಿತು. ನನಗೆ ಅಂಥ ಪರಿಸ್ಥಿತಿಯಲ್ಲಿಯೂ ತಡೆಯಲಾರದ ನಗು ಬಂತು. ಏಕೆಂದರೆ ಮೆನನ್ನರು ಅಭಯ ಸಂದೇಶವನ್ನು ಕೊಡುತ್ತಿದ್ದ ಆ ಕ್ಷಣದಲ್ಲೇ ದಕ್ಷಿಣಾಸದನದ ಮೇಲೆ ದಾಳಿ ನಡೆದಿತ್ತು !

ನಿಜಾಮರ ಸೈನ್ಯದ ಬ್ರಿಗೇಡಿಯರ ಹಬೀಬರು ನಾಲ್ಕೈದು ಲಾರಿಗಳ ತುಂಬ ಸೈನಿಕರನ್ನು ಜೊತೆಯಲ್ಲಿ ಕರೆದುಕೊಂಡು ದಕ್ಷಿಣಾಸದನದಲ್ಲಿ ನುಗ್ಗಿದರು. ಅವರು ಒಳನುಗ್ಗುವಾಗ ಕುಮಾಂವ ಕಂಪನಿ ಅವರನ್ನೆದುರಿಸಿತು. ನಮ್ಮ ಕೆಲ ಸೈನಿಕರ ಮೇಲೆ ಕೈ ಮಾಡಲಾಯಿತು. ಕೆಲವರು ಗಾಯಗೊಂಡರು. ಪರಿಸ್ಥಿತಿ ಬಿಕ್ಕಟ್ಟಿಗೆ ಬಂದಿತ್ತು. ನಾನು ಮಾಳಿಗೆಯ ಕಟಾಂಜನದಲ್ಲಿ ನಿಂತು ಶಸ್ತ್ರ ಕೆಳಗಿಡಿರೆಂದು ನಮ್ಮ ಸೈನಿಕರಿಗೆ ಕೂಗಿಹೇಳಿದೆ.

ನಮ್ಮ ಕಾವಲುಗಾರರು ಬದಿಗೆ ಸರಿದೊಡನೆ ಆ ಸೈನಿಕರು, "ಪಕಡೋ! ಮಾರೋ!" ಎಂದು ಕೂಗುತ್ತ ಮನೆಯೊಳಗೆ ನುಗ್ಗಿದರು. ಅವರಲ್ಲಿ ಅನೇಕರು ರಜಾಕಾರರಾಗಿದ್ದರು.

ನಿಜಾಮರ ಸೈನಿಕರು ಕೆಳಗಿನ ಪ್ರತಿಯೊಂದು ಕೋಣೆಯಲ್ಲೂ ನುಗ್ಗಿ ಎಲ್ಲ ನೌಕರರನ್ನೂ ಬಂಧಿಸಿದರು. ಇದು ನಡೆದಾಗ ಬ್ರಿಗೇಡಿಯರ ಹಬೀಬರು ಇಬ್ಬರು ಸೈನಿಕರೊಡನೆ ಮಾಳಿಗೆಯನ್ನೇರಿ ಬಂದು ನಾನು ಕುಳಿತ ಕೋಣೆಗೆ ನುಗ್ಗಿದರು. ನನ್ನನ್ನು ಬಂಧಿಸುವವರಂತೆ ಅವರು ಮುಂದೆ ಬಂದು ದರ್ಪದಿಂದ ತಮ್ಮ ಜೊತೆಯಲ್ಲಿ ಗ್ರೀನ್ಸಲ್ಯಾಂಡ್ಸಿಗೆ ಬರಬೇಕೆಂದು ಹೇಳಿದರು.

ನನ್ನ ಸಹನೆ ತಪ್ಪಿತು. ನಾನು ಬ್ರಿಗೇಡಿಯರ ಹಬೀಬರ ಮೇಲೆ ಹರಿಹಾಯ್ದೆ. "ಈ ಉದ್ದಾಮತನದ ಅರ್ಥವೇನು? ನನ್ನ ಕೋಣೆಗೆ ಸಶಸ್ತ್ರ

ಸೈನಿಕರನ್ನು ಕರತಂದು ಹೀಗೆ ಮಾತಾಡುವ ಅಧಿಕಾರವೇನೂ ನಿಮಗಿಲ್ಲ. ಲಾಯಕ ಅಲಿ ಹೇಳಿದಲ್ಲಿಗೆ ಹೋಗಲು ನಾನು ಸಿದ್ಧನಿದ್ದೇನೆ. ಆದರೆ ನೀವು ಸೌಜನ್ಯದಿಂದ ವರ್ತಿಸದಿದ್ದರೆ, ನಿಮ್ಮ ಜನರು ನನ್ನ ಕೋಣೆಯಿಂದ ಹೊರಬೀಳ ದಿದ್ದರೆ ನಾನಿಲ್ಲಿಂದ ಕದಲುವವನಲ್ಲ'' ಎಂದೆ.

ಹಬೀಬರು ಅಪ್ರತಿಭರಾಗಿ ತಮ್ಮ ಸೈನಿಕರಿಗೆ ಹೊರಬೀಳಲು ಆಜ್ಞಾಪಿಸಿದರು.

ಸಂಜೆ ಐದು ಗಂಟೆಯ ಸುಮಾರಿಗೆ ನನ್ನ ಖಾಸಗಿ ಅಧಿಕಾರಿಗಳಾದ ಮೇಜರ್ ಸಿಂಗ್, ಸೆಕ್ಯುರಿಟಿ ಆಫೀಸರ ಕೃಷ್ಣಸ್ವಾಮಿ, ರಾಮರಾವ ಮತ್ತು ಇನ್ನೊಬ್ಬ ಅಸಿಸ್ಟಂಟರೊಂದಿಗೆ ನನ್ನನ್ನು ಗ್ರೀನ್ಸಲ್ಯಾಂಡ್ಸಿಗೆ ಮಿಲಿಟರಿ ಕಾವಲಿನಲ್ಲಿ ಕರೆದೊಯ್ಯಲಾಯಿತು.

ಏಳು ಗಂಟೆಗೆ ಬ್ರಿಗೇಡಿಯರ ಹಬೀಬರ ಅಸಭ್ಯ ವರ್ತನೆಯ ಬಗ್ಗೆ ತಮ್ಮ ಗಂಡನ ಪರವಾಗಿ ಕ್ಷಮೆ ಕೇಳಿಕೊಳ್ಳಲು ಶ್ರೀಮತಿ ಎಲ್ ಎಡ್ರೂಸರು ನನ್ನಲ್ಲಿಗೆ ಬಂದರು. ಅವರು ತುಂಬ ಸ್ನೇಹದಿಂದ ಮಾತಾಡಿದರು. ತಮ್ಮ ಗಂಡ ಅಂದರೊಂದು ರತ್ನ, ಅವರ ಅಭಿಪ್ರಾಯದಲ್ಲಿ ಪೋಲೀಸ ಕ್ರಮ ಮುಗಿಯಲು ಮೂರು ದಿನಗಳಿಗಿಂತ ಹೆಚ್ಚು ಕಾಲ ಹಿಡಿಯಲಿಕ್ಕಿಲ್ಲ ಎಂದು ಅವರು ತಿಳಿಸಿದರು. ಇದು ನಿಜವಾಗಿಯೂ ಕೌತುಕದ ಸುದ್ದಿಯಾಗಿತ್ತು.

೧೪ ನೇ ದಿನಾಂಕ ಮುಂಜಾನೆ ನಮ್ಮನ್ನು ಮಾಂಕ್ಟನ್ನರು ವಾಸಿಸಿದ್ದ ಭವ್ಯ ಅತಿಥಿಗೃಹ '' ಲೇಕ್ ವ್ಯೂ ''ಕ್ಕೆ ಕರೆದೊಯ್ದರು.

ನಾವು ವಾಸ್ತವಿಕವಾಗಿ ಸ್ಥಾನಬದ್ಧರಾಗಿದ್ದೆವು. ಒಬ್ಬ ಮಿಲಿಟರಿ ಅಧಿಕಾರಿಯ ಸ್ವಾಧೀನದಲ್ಲಿದ್ದೆವು. '' ಲೇಕವ್ಯೂ ''ದ ಆವಾರದಲ್ಲಿ, ಅದರ ಜಗಲಿ ಮತ್ತು ಮೊಗಸಾಲೆಯಲ್ಲಿ ಸೈನಿಕರ ಕಾವಲು ಇದ್ದಿತು. ನಾವು ಊಟ ಮಾಡುವಾಗ ಊಟದ ಕೋಣೆಯ ಬಾಗಿಲಲ್ಲಿ ನಾಲ್ವರು ಸೈನಿಕರು ಕಾವಲು ನಿಂತಿರುತ್ತಿದ್ದರು. ಈ ಸ್ಥಿತಿಯಲ್ಲಿ ನಮಗೆ ಎಷ್ಟು ಅನ್ನ ಇಳಿದಿದ್ದೀತು?

ನಾವು ಹೊರಗೆ ಹೋಗುವಂತಿರಲಿಲ್ಲ. ನಮ್ಮ ಬಳಿಗೆ ಬರಲು ಯಾರನ್ನೂ ಬಿಡುತ್ತಿರಲಿಲ್ಲ. ಟೆಲಿಫೋನ್ ಕೂಡ ನಮಗೆ ಲಭ್ಯವಿರಲಿಲ್ಲ. ರೇಡಿಯೊ ಮೂಲಕ ಮಾತ್ರ ನನಗೆ ಬಾಹ್ಯ ಜಗತ್ತಿನ ಸಂಪರ್ಕ ಬರುತ್ತಿತ್ತು. ಭಾರತದ ಆಕಾಶವಾಣಿ ಬಿತ್ತರಣೆಗಳು ಅಸ್ಪಷ್ಟವಾಗಿರುತ್ತಿದ್ದವು ಇಲ್ಲವೆ ಅದು ಕೇಳಿಸದಂತೆ [ನಿಜಾಮ ಆಕಾಶವಾಣಿಯವರು] ಗದ್ದಲ ಮಾಡುತ್ತಿದ್ದರು. ಹೈದರಾಬಾದ ಆಕಾಶವಾಣಿ ಸ್ಪಷ್ಟವಾಗಿ ಕೇಳಿಸುತ್ತಿತ್ತು: '' ಇನ್ಸಾಹ ಅಲ್ಲಾ ! ಹೈದರಾಬಾದ ಸೈನ್ಯವು ವಿಜಯಗಳ ಮೇಲೆ ವಿಜಯಗಳನ್ನು

ಸಂಪಾದಿಸುತ್ತಿದೆ!"

ಅಂದು ಲಾಯುಕ ಅಲಿ ನನ್ನನ್ನು ಕಂಡರು. ನನ್ನ ಯೋಗಕ್ಷೇಮಗಳ ವಿಚಾರದಲ್ಲಿ ಅವರು ತುಂಬ ಆಸ್ಥೆ ವ್ಯಕ್ತಪಡಿಸಿದರು. ಬಳಿಕ "ಏನಿದು? ನಿಮ್ಮ ಸೈನ್ಯಗಳು ಮೂರು ದಿಕ್ಕುಗಳಲ್ಲಿ ಹೈದರಾಬಾದನ್ನು ಪ್ರವೇಶಿಸುತ್ತಿವೆ!" ಎಂದು ಲಾಯುಕ ಅಲಿ ಕೋಪದಿಂದ ಉದರಿಸಿದರು.

"ಅವರು ಹೈದರಾಬಾದನ್ನು ಪ್ರವೇಶಿಸುವ ಮೊದಲು ಪ್ರವೇಶಚೀಟಿ ಕಳಿಸಿ ನಿಮ್ಮ ಅಪ್ಪಣೆ ಪಡೆದುಕೊಳ್ಳುವರೆಂದು ನಿರೀಕ್ಷಿಸಿದ್ದಿರೇನು?" ಎಂದು ನಾನು ಕೇಳಿದೆ.

೧೫ ನೆಯ ದಿನಾಂಕ ತ್ವರಿತ ಗತಿಯಲ್ಲಿ ಹೈದರಾಬಾದ ಸೈನ್ಯ ಜಯ ಸಂಪಾದಿಸುತ್ತಿದೆ ಎಂದು ಹೈದರಾಬಾದ ಆಕಾಶವಾಣಿ ಹೇಳುತ್ತಿದ್ದಾಗ ಭಾರತ ಆಕಾಶವಾಣಿ ಹಿಂದೀ ಸೈನ್ಯ ನಲದುರ್ಗವನ್ನು ವಶಪಡಿಸಿಕೊಂಡಿತು ಎಂದು ಸಾರಿತು. ಇವೆರಡರಲ್ಲಿ ಯಾವದು ಸತ್ಯ ಎಂದು ನಾವು ಗೊಂದಲದಲ್ಲಿ ಬಿದ್ದೆವು.

ಹಿಂದಿನ ದಿನದಂತೆ ನಾನು ಸಂಜೆ ೬-೨೦ ಕ್ಕೆ (ಕಂಪೌಂಡಿನಲ್ಲಿ) ನಿತ್ಯದಂತೆ ಅಡ್ಡಾಟಕ್ಕಾಗಿ ಮಾಳಿಗೆಯಿಂದ ಕೆಳಗಿಳಿಯತೊಡಗಿದೆ. ಮೆಟ್ಟಲು ಇಳಿಯುತ್ತಿದ್ದಾಗ ಆವಾರದಲ್ಲಿ ಕಾವಲಿದ್ದ ಎನ್. ಸಿ. ಓ. ಅಧಿಕಾರಿಯೊಬ್ಬ ನಾನು ತಿರುಗಿ ಒಳಗೆ ಹೋಗಬೇಕೆಂದು ಕೈಬೀಸಿ ಸನ್ನೆಮಾಡಿದ. ನಾನದನ್ನು ಲೆಕ್ಕಿಸದೆ ಕೆಳಗಿಳಿದು ಬಂದೆ.

"ಅಂದರ್ ಚಲೀ ಜಾವ್" ಎನ್. ಸಿ. ಓ. ಕೂಗಿದ.

ನಾನು ಇನ್ನೂ ನಾಲ್ಕು ಹೆಜ್ಜೆ ಮುಂದೆ ನಡೆದೆ. ನನ್ನ ಹಿಂದೆ ಕೆಲ ಅಡಿ ಅಂತರದಲ್ಲಿ ಕೃಷ್ಣಸ್ವಾಮಿ ಇದ್ದರು.

ಕ್ರುದ್ಧನಾದ ಎನ್.ಸಿ.ಓ. ತನ್ನ ಜನರೊಂದಿಗೆ ನನಗೆ ಇಪ್ಪತ್ತೈದು ಅಡಿ ದೂರದ ವರೆಗೆ ಬಂದು ತನ್ನ ಕೈಲಿದ್ದ ಸ್ಟೆನ್‌ಗನ್ನನ್ನು ನನಗೆ ಗುರಿ ಹಿಡಿದು "ಅಂದರ್ ಚಲೀಜಾವ್, ಅಂದರ್ ಜಾವ್" ಎಂದು ಆರ್ಭಟಿಸಿದ.

ನಾನು ನಿಂತಲ್ಲಿಯೇ ನಿಂತೆ. "ನನ್ನೊಡನೆ ಹಾಗೆ ಮಾತಾಡಬೇಡ ಜೋಕೆ! ನಿನ್ನ ಅಧಿಕಾರಿಯನ್ನು ಕರಿ. ಆತ ಒಳಗಿದ್ದಾನೆ" ಎಂದೆ.

ಆ ಎನ್. ಸಿ. ಓ. ಬೆದರಿಕೆ ಹಾಕಿದ: "ನನಗೆ ಆಜ್ಞೆಯಿದೆ. ಒಳಗೆ ಹೋಗು!"

"ನಾನು ನಿನ್ನ ಕೈದಿಯಲ್ಲ. ಒಳಗೆ ಹೋಗುವದಿಲ್ಲ" ನಾನು ಉತ್ತರವಿತ್ತೆ.

ಅದೇ ಸ್ಥಿತಿಯಲ್ಲಿ ೧೦ ನಿಮಿಷಗಳು ಸಂದವು. ನಾನು ಆತನ ಸಮ್ಮುಖದಲ್ಲಿ, ಆತನ ಸ್ಟೆನ್‌ಗನ್ನಿನ ಗುರಿ ನನ್ನೆದೆಯ ಕಡೆ. . . .

"ಒಳಗೆ ಹೋಗು" ಆತ ಮತ್ತೆ ಆರ್ಭಟಿಸಿದ. ಯಾರೋ ಒಬ್ಬ — "ಲೇಕವ್ಯೂ"ದ ವ್ಯಾನೇಜರನಿರಬೇಕು — ಇದನ್ನೆಲ್ಲ ನೋಡಿದ್ದ. ಆತ ಅಧಿಕಾರಿಯ ಬಳಿಗೋಡಿದ.

ಕೆಲ ನಿಮಿಷಗಳಲ್ಲಿ ಒಬ್ಬಾತ ಬಂದು ಎನ್. ಸಿ. ಓ. ಕಿವಿಯಲ್ಲಿ ಏನನ್ನೋ ಉಸುರಿದ. ಆಗ ಆತ ಸ್ಟೆನ್‌ಗನ್ ಕೆಳಗಿಳಿಸಿ ತನ್ನ ಜನರೊಡನೆ ಹೊರಟ.

"ಎಲ್ಲ ಸರಿಯಾಗಿದೆಯೆಂದು ಈಗಾದರೂ ತೃಪ್ತಿಯಾಯಿತೆ?" ನಾನು ಕೇಳಿದೆ.

ಆತ ತಿರುಗಿ ನನ್ನನ್ನು ದುರುಗುಟ್ಟಿ ನೋಡಿ, "ಇನ್ನೂ ಏನೇನೆಲ್ಲ ಸಂಭವಿಸೀತು" ಎಂದು ಅರಚಿದ.

ನಾನೊಂದು ಘೋರ ಪ್ರಸಂಗವನ್ನು ಧೈರ್ಯದಿಂದ ಎದುರಿಸಿದ್ದೆ. ಆದರೆ ಭೋಜನಾನಂತರ ನನ್ನ ಕೋಣೆಯಲ್ಲಿ ಒಬ್ಬನೇ ಕುಳಿತಾಗ ನಾನೆಂಥ ಗಂಡಾಂತರದಲ್ಲಿದ್ದೇನೆ ಎಂಬ ಅರಿವು ಒಮ್ಮೆಲೇ ಬಂತು. ರಜಾಕಾರರು ನನ್ನ ರಕ್ತಕ್ಕಾಗಿ ಹಾತೊರೆಯುತ್ತಿದ್ದರು. ಅಲ್ಲಿದ್ದ ಸುಮಾರು ಇಪ್ಪತ್ತು ಸೈನಿಕರಲ್ಲಿ ಪ್ರತಿಯೊಬ್ಬನೂ ನನ್ನ ದೇಹದಲ್ಲಿ ತನ್ನ ಗುಂಡನ್ನು ನಾಟಿಸಲು ಉತ್ಸುಕನಾಗಿದ್ದ.

ಕೋಣೆಯಲ್ಲಿ ಶತಪಥ ಹಾಕುತ್ತ ನಾನು ನನ್ನ ಜೀವನದ ಅವಸಾನವನ್ನು ಭಾವಿಸತೊಡಗಿದೆ.

ನನ್ನ ಕಲ್ಪನಾಶಕ್ತಿಗೆ ರೆಕ್ಕೆ ಮೂಡಿತ್ತು. ಅದರ ಹಾರಾಟವನ್ನು ನಾನು ಅಂಕೆಯಲ್ಲಿಡಲಾರದಾದೆ. ಆ ನಿಮಿಷದ ವರೆಗೆ ಏನಾದರೊಂದನ್ನು ಸಾಧಿಸಲು ಹೆಜ್ಜೆ ಹೆಜ್ಜೆಗೂ ನಾನು ಪಟ್ಟ ಪರಿಶ್ರಮವನ್ನು ಮೆಲುಕು ಹಾಕಿದೆ. ನನ್ನಲ್ಲಿ ವಿಶ್ವಾಸವಿಟ್ಟಿದ್ದ ನನ್ನ ತಂದೆಯನ್ನು ಕುರಿತು ಯೋಚಿಸಿದೆ. ನನ್ನನ್ನು ಗಾಢವಾಗಿ ಪ್ರೀತಿಸಿದ ತಾಯಿಯನ್ನು ನೆನೆದೆ; ನನ್ನನ್ನು ಸುಖಿಯನ್ನಾಗಿ ಮಾಡಲು ಬಹು ಕಷ್ಟಪಟ್ಟ ಲಕ್ಷ್ಮಿಯನ್ನು, ಈಗ ಪ್ರತಿ ನಿಮಿಷದ ಘಟನೆಗಳನ್ನೂ ನಿರೀಕ್ಷಿಸುತ್ತ ನಾನು ಪಡಬಹುದಾದ ಸಂಕಟಗಳ ವಿಚಾರದಿಂದ ಎದೆಗೆಡುತ್ತಿರುವ ಲೀಲಾಳನ್ನು, ನಮ್ಮ ಮಕ್ಕಳನ್ನು ಕುರಿತು ಯೋಚಿಸಿದೆ.

ನಾನು ಭಗವದ್ಗೀತೆಯನ್ನೋದಿದೆ. ನನ್ನ ಬಾಲ್ಯದಲ್ಲಿ ಪಾಠಮಾಡಿ ಈಗ ಅರ್ಧಮರ್ಧ ಮರೆತಿದ್ದ ಹಾಡುಗಳ ತುಣುಕುಗಳನ್ನೆಲ್ಲ ನೆನೆದುಕೊಂಡು ಹಾಡಿದೆ.

ಈ ವಿಪತ್ತಿನಿಂದ ನಾನು ಪಾರಾಗುವದಿಲ್ಲ ಎಂದು ನನ್ನ ಚಿತ್ತ ಸಾರಿ ಸಾರಿ ಹೇಳುತ್ತಿತ್ತು. ಹಾಗಿದ್ದರೂ ಯಾವದೋ ವಿಲಕ್ಷಣ ಸಮಾಧಾನವೊಂದು ನನ್ನನ್ನಾವರಿಸಿತ್ತು ಎಂದು ನನಗೆ ನೆನಪಿದೆ. ನನಗೆ ಸಾಧ್ಯವಿದ್ದದ್ದನ್ನೆಲ್ಲ ಮಾಡಿದ್ದೆ. ಪಶ್ಚಾತ್ತಾಪಪಡತಕ್ಕದ್ದೇನೂ ಇದ್ದಿಲ್ಲ. ನನ್ನ ಕರ್ತವ್ಯವನ್ನು ನಾನು ಮನಮುಟ್ಟಿ ಪ್ರೀತಿಸಿದ್ದೆ.

ಸುಮಾರು ಮೂರು ಗಂಟೆಗೆ ಸುಖದಿಂದಲೇ ನಿದ್ದೆ ಹೋದೆ. ಬೆಳಿಗ್ಗೆ ತಡವಾಗಿ ಎದ್ದೆ. ಎದ್ದಾಗ ನನ್ನ ಮೈಕಾದಿತ್ತು. ೧೦೦ ಡಿಗ್ರಿ ಜ್ವರವಿತ್ತು.

ನಿಜಾಮರು ಶರಣು ಬಂದರು

ಸಪ್ಟೆಂಬರ ೧೬ರಂದು ನನ್ನ ಜ್ವರ ೧೦೦° ಡಿಗ್ರಿಗಳಿಂದ ೧೦೩° ಡಿಗ್ರಿಗಳ ವರೆಗೆ ಏರಿಳಿಯತೊಡಗಿತು. ರೇಡಿಯೊ ಸುದ್ದಿಗಳೇನೂ ಆಶಾದಾಯಕವಾಗಿರಲಿಲ್ಲ. ಹೈದರಾಬಾದ ಆಕಾಶವಾಣಿ ಹಿಂದೀ ಸೈನ್ಯದ ಸೋಲಿನ ವಾರ್ತೆಗಳನ್ನು ಬಿತ್ತರಿಸುತ್ತಿತ್ತು.

ಅಂದು ರಾತ್ರಿ ಬಹಳ ತಡವಾಗಿ ನನ್ನನ್ನು ಕಾಣಲು ಬಂದ ನವಾಬ್ ದೀನ ಯಾರ ಜಂಗರು, ನಿಜಾಮರು ನನ್ನ ಸಲಹೆಯನ್ನಪೇಕ್ಷಿಸುತ್ತಿದ್ದಾರೆಂದು ಹೇಳಿದರು. ಹೈದರಾಬಾದ ಸೈನ್ಯದ ಸೇನಾಪತಿ ಜನರಲ್ ಎಲ್ ಎಡ್ರೂಸರು ನಿಜಾಮರ ಬಳಿಗೆ ಹೋಗಿ ಇನ್ನು ಮುಂದೆ ಹಿಂದೀ ಸೈನ್ಯವನ್ನು ತಾನೆದುರಿಸಲಾರೆ ಎಂದು ಅತ್ಯಂತ ಸ್ಪಷ್ಟವಾಗಿ ಹೇಳಿದ್ದರಂತೆ.

ಮುಖ್ಯಮಂತ್ರಿ ಲಾಯಕ ಅಲಿಗೆ ರಾಜೀನಾಮೆ ಕೊಡೆಂದು ಹೇಳಿದರೆ ಅವರು ಹಾಗೆ ಮಾಡಲು ನಿರಾಕರಿಸಿ ಹತ್ತು ದಿನಗಳ ಅವಧಿ ಕೊಡಬೇಕೆಂದು ಕೇಳಿಕೊಂಡಿದ್ದರು. ನಿಜಾಮರಿಗೆ ಏನು ಮಾಡಬೇಕೆಂದು ತಿಳಿಯದಾಗಿತ್ತು.

ನಾನಿದ್ದ ಪರಿಸ್ಥಿತಿಯಲ್ಲಿ ನಾನು ದಿಲ್ಲಿಯೊಡನೆ ಸಂಪರ್ಕ ಬೆಳೆಸುವಂತಿರಲಿಲ್ಲ. ನಾನು ದೀನ-ಯಾರ ಜಂಗರಿಗೆ ಕೊಡಬಹುದಾಗಿದ್ದ ಒಂದೇ ಒಂದು ಸಲಹೆಯೆಂದರೆ, ನಿಜಾಮರು ಭಾರತ ಸರಕಾರದ ಬೇಡಿಕೆಗಳನ್ನೆಲ್ಲ ಪೂರೈಸಬೇಕು: ಯುದ್ಧ ನಿಲ್ಲಿಸುವ ಆಜ್ಞೆ ಹೊರಡಿಸಬೇಕು; ಪೋಲೀಸ ಕ್ರಮವನ್ನು ಸ್ವಾಗತಿಸಬೇಕು; ಲಾಯಕ ಅಲಿ ಮಂತ್ರಿಮಂಡಲವನ್ನು ಮನೆಗೆ ಕಳಿಸಬೇಕು; ರಜಾಕಾರ ಸಂಸ್ಥೆಯನ್ನು ಅಕ್ರಮವೆಂದು ಸಾರಬೇಕು; ರಜವಿಯನ್ನು ಬಂಧಿಸಿ ಸ್ವಾಮಿ ರಮಾನಂದ ತೀರ್ಥ ಮತ್ತು ಇತರ ಕಾಂಗ್ರೆಸ್ಸಿಗರನ್ನು ಬಂಧಮುಕ್ತ ಮಾಡಬೇಕು.

ಮರುದಿನ ಮುಂಜಾನೆ ೧೧ ಗಂಟೆಗೆ ಲಾಯಕ ಅಲಿ ಲೇಕ್‌ವ್ಯೂಕ್ಕೆ ಬಂದು ತಾವು ರಾಜೀನಾಮೆ ಕೊಟ್ಟ ಸುದ್ದಿಯನ್ನು ನನಗೆ ತಿಳಿಸಿದರು.

ವಿಚಿತ್ರವೆಂದರೆ, ಹೈದರಾಬಾದ ಆಕಾಶವಾಣಿ ಒಂದೇ ಸವನೆ ನಿಜಾಮರ ಸೈನ್ಯ ಮುನ್ನುಗ್ಗಿ ಗೋವಾ ಗಡಿಯನ್ನು ಸಮೀಪಿಸುತ್ತಿದೆ ಎಂದು ಹೇಳುತ್ತ ಬಂದಿತ್ತು. ಈಗ ಭಾರತದ ಆಕಾಶವಾಣಿ ಹೆಚ್ಚು ಸ್ಪಷ್ಟವಾಗಿ ಕೇಳಿಸತೊಡಗಿತ್ತು. ಹಿಂದೀ ಸೈನ್ಯ ಹೈದರಾಬಾದನ್ನು ಸಮೀಪಿಸು

ತ್ತಿದೆ ಎಂಬಲ್ಲಿ ಸಂದೇಹವೇನೂ ಇರಲಿಲ್ಲ.

ಒಂದು ಗಂಟೆಗೆ ಲಾಯಕ ಅಲಿ ಬಂದು ಗವರ್ನರ ಜನರಲ್ಲರಾದ ರಾಜಾಜಿಯವರಿಗೆ ಕಳಿಸಲೆಂದು ನಿಜಾಮರು ಕೊಟ್ಟಿದ್ದ ಅವರ ಅಂಕಿತವುಳ್ಳ ಸಂದೇಶವೊಂದನ್ನು ನನಗೆ ತಲುಪಿಸಿದರು.

ಆ ಸಂದೇಶ ಹೀಗಿತ್ತು :

"ನನ್ನ ಸರಕಾರ ರಾಜೀನಾಮೆ ಕೊಟ್ಟು ರಾಜಕೀಯ ಪರಿಸ್ಥಿತಿಯನ್ನು ಸಂಪೂರ್ಣವಾಗಿ ನನ್ನ ವಶಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಂಡಿದೆ. . . .

ನಾನು ನನ್ನ ಸೈನ್ಯಕ್ಕೆ ಇಂದು ಸಂಜೆಯೊಳಗಾಗಿ ಯುದ್ಧ ನಿಲ್ಲಿಸಲು ಆಜ್ಞೆಯಿತ್ತಿದ್ದೇನೆ ; ರಜಾಕಾರರನ್ನು ವಿಸರ್ಜಿಸಲು ಕೂಡ ಅಪ್ಪಣೆ ಮಾಡಿದ್ದೇನೆ ; ಹಿಂದೀ ಸೈನ್ಯಗಳು ಬೋಲಾರಾಮು ಮತ್ತು ಸಿಕಂದರಾಬಾದ ಬರಾಕುಗಳನ್ನು ಆಕ್ರಮಿಸಿಕೊಳ್ಳಲು ಅನುವು ಮಾಡಿಕೊಡುತ್ತಿದ್ದೇನೆ ಎಂದು ತಮಗೆ ತಿಳಿಸಬಯಸುತ್ತೇನೆ."

ಇದಲ್ಲದೆ ಹಳೆಯ ನಿಷ್ಠಾವಂತ ಸಾರ್ವಜನಿಕ ಸೇವಕರ ಹೊಸ ಮಂತ್ರಿಮಂಡಳವನ್ನು ರಚಿಸಿರುವದಾಗಿಯೂ ಮುಖ್ಯಮಂತ್ರಿಯಾಗಲು ಸರ್ ಮಿರ್ಜಾ ಇಸ್ಮಾಯಿಲರನ್ನು ಆಮಂತ್ರಿಸಿರುವದಾಗಿಯೂ ನಿಜಾಮರು ತಮ್ಮ ಸಂದೇಶದಲ್ಲಿ ತಿಳಿಸಿದ್ದರು. ಇಂಥ ಹುಡುಗಾಟಿಕೆಯೂ ಉಂಟೇ ಎಂದು ನನಗನಿಸಿತು. ಮಿರ್ಜಾರ ನೇಮಕದ ಸೂಚನೆ ನಿಜಾಮರ ಹೊಸ ಗತ್ತಾಗಿತ್ತು. ಮೌಂಟ್‌ಬ್ಯಾಟನ್ನರು ಹೊರಟು ಹೋದ ಮೇಲೆ ನಡೆದದ್ದನ್ನೆಲ್ಲ ಇದರಿಂದ ಮರೆಸಿಬಿಡಬಹುದೆಂದು ಅವರು ಬಗೆದಿದ್ದರು. "ಭಾರತ ಸರಕಾರಕ್ಕೆ ಈ ನಿಲುಮೆ ಸಮ್ಮತವಾಗಲಿಕ್ಕಿಲ್ಲ, ನಿಮ್ಮ ಸಂದೇಶದ ಮೊದಲಿನ ಭಾಗವನ್ನಷ್ಟೇ ವಾಯರಲೆಸ ಮೂಲಕ ಕಳಿಸಿಕೊಡುವೆ" ಎಂದು ನಾನು ನಿಜಾಮರಿಗೆ ತಿಳಿಸಿದೆ. ನಿಜಾಮರು ಒಪ್ಪಿದರು.

ಮುಂದೆ ತುಸು ಹೊತ್ತಿನಲ್ಲಿ ಲಾಯಕ ಅಲಿಯ ಆಕಾಶವಾಣಿ ಸಂದೇಶ ಕೇಳಿಬಂತು :

"ಭಾರತ ಒಕ್ಕೂಟದ ಪ್ರಬಲ ಸೈನ್ಯವನ್ನೆದುರಿಸಿ ವ್ಯರ್ಥ ಮಾನವರಕ್ತವನ್ನು ಬಲಿಕೊಡುವುದರಲ್ಲಿ ಅರ್ಥವಿಲ್ಲೆಂದು ಇಂದು ನಸುಕಿನಲ್ಲಿ ಮಂತ್ರಿಮಂಡಳಕ್ಕೆ ಅನಿಸಿತು. ಇದನ್ನೆಲ್ಲ ವಿಚಾರಿಸಿ ಮಂತ್ರಿಮಂಡಳವು ರಾಜೀನಾಮೆ ಕೊಟ್ಟು ರಾಜ್ಯಭಾರದ ಹೊಣೆಯನ್ನು ಮಹಾಘನತೆವೆತ್ತ ನಿಜಾಮರ ಕೈಗೊಪ್ಪಿಸಬೇಕೆಂದು ನಿರ್ಧರಿಸಿತು."

ಈ ಆಕಾಶವಾಣಿ ಸಂದೇಶದೊಂದಿಗೆ ಲಾಯಕ ಅಲಿ ಮತ್ತು ಅವರ ಜೊತೆಗೆ ಭಾರತವನ್ನು ನಾಶಗೊಳಿಸಲು ಪ್ರಯತ್ನಿಸಿದ ಇತ್ತೆಹಾದ ಜನರು ತಮ್ಮ ಚರಮಗೀತೆಯನ್ನು ಹಾಡಿ ರಂಗದಿಂದ ಕಣ್ಮರೆಯಾದರು.

ನಿಜಾಮರ ಸಂದೇಶವನ್ನು ದಿಲ್ಲಿಗೆ ಕಳಿಸುವದಕ್ಕಾಗಿ ಮೆಡೋಸ ಬರಾಕುಗಳಲ್ಲಿದ್ದ ಆಪರೇಟರನನ್ನು ಕರೆಯಿಸಿಕೊಂಡು ಅವನ ಮತ್ತು ಮೇಜರಸಿಂಗರ ಜೊತೆಯಲ್ಲಿ ನಾನು ದಕ್ಷಿಣಾಸದನಕ್ಕೆ ಹೊರಟೆ.

ನಮ್ಮ ಮಾರ್ಗದಲ್ಲಿದ್ದ ಹೈದರಾಬಾದ ಮತ್ತು ಸಿಕಂದರಾಬಾದದ ಬೀದಿಗಳೆಲ್ಲ ನಿರ್ಜನವಾಗಿದ್ದವು. ದಕ್ಷಿಣಾಸದನವು ಕೂಡ ದಿಕ್ಕಿಲ್ಲದ ಸ್ಥಿತಿಯಲ್ಲಿತ್ತು. ಅಲ್ಲಿದ್ದ ನಿಜಾಮರ ಕಾವಲುಗಾರರು ಪಲಾಯನ ಹೇಳಿದ್ದರು. ಎಲ್ಲ ಕೋಣೆಗಳೂ ಅಸ್ತವ್ಯಸ್ತ ಸ್ಥಿತಿಯಲ್ಲಿದ್ದವು; ಪಡದೆಗಳನ್ನು ಹರಿದಿದ್ದರು ; ಫೋಟೋಗಳನ್ನು, ಖುರ್ಚಿ ಮೇಜು ಇತ್ಯಾದಿಗಳನ್ನು ಒಡೆದು ಹಾಕಿದ್ದರು ; ಸದನವನ್ನು ಆಕ್ರಮಿಸಿದ ಸೈನಿಕರು ಉಪಯೋಗಿಸುತ್ತಿದ್ದ ಕೆಲ ಪಾತ್ರೆಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಲಾಯಕ ಅಲಿ ಮಂತ್ರಿಮಂಡಳದ ರಾಜೀನಾಮೆಯ ಸುದ್ದಿ ಕಿವಿಗೆ ಬಿದ್ದೊಡನೆ ಸೈನಿಕರು ಎಲ್ಲವನ್ನೂ ಬಿಟ್ಟುಕೊಟ್ಟು ಓಡಿ ಹೋದಂತಿತ್ತು.

ಆ ಮೇಲೆ ಕೆಲ ಹೊತ್ತಿನ ನಂತರ ನಾನು ಹೈದರಾಬಾದದಲ್ಲಿ ಭಾರತದ ಏಜಂಟ ಜನರಲ್ಲನಾಗಿ ಹೋದ ಬಳಿಕ ಮೊಟ್ಟಮೊದಲನೆಯ ಸಲ ಮಹಾಘನತೆವೆತ್ತ ನಿಜಾಮರಿಂದ ವೈಯಕ್ತಿಕ ಪತ್ರ ನನಗೆ ಬಂತು. ಅದು ಹೀಗಿತ್ತು :

"ಪ್ರಿಯ ಮುನ್ಶಿ,

ಇಂದು ಮಧ್ಯಾಹ್ನ ೪ ಗಂಟೆಗೆ ಕೋಠಿಗೆ

ಬಂದು ನನ್ನನ್ನು ಕಾಣುವದು ನಿಮಗೆ ಸಾಧ್ಯವಾದರೆ ತುಂಬ ಉಪಕಾರ. ಬರುವದು ಸಾಧ್ಯವೇ ಎಂದು ದಯವಿಟ್ಟು ತಿಳಿಸುವಿರಾ ?"

೪ ಗಂಟೆಗೆ ನಾನು ಕಿಂಗ್ ಕೋಠಿಗೆ ಹೋದಾಗ ನಿಜಾಮರು ದೈನ್ಯವೇ ಮೂರ್ತಿವೆತ್ತಂತೆ ಕಾಣಿಸಿದರು. ಅವರ ಧೈರ್ಯ ಉಡುಗಿಹೋಗಿತ್ತು. "ಹದ್ದುಗಳು ರಾಜೀನಾಮೆಯಿತ್ತಿವೆ ಏನು ಮಾಡಬೇಕೆಂದು ನನಗೆ ಗೊತ್ತಾಗುವದಿಲ್ಲ" ಎಂದರವರು. ನಡುಗುವ ಕೈಗಳಿಂದ ಅವರು ನನಗೆ ಲಾಯಕ ಅಲಿಯ ರಾಜೀನಾಮೆಯ ನಕಲೊಂದನ್ನು ಕೊಟ್ಟರು.

ಆದರೆ ಹೈದರಾಬಾದದ ನಿಶ್ಶಸ್ತ್ರ ನಾಗರಿಕರ ಯೋಗಕ್ಷೇಮದ ವಿಚಾರ ನನ್ನನ್ನು ಬಾಧಿಸುತ್ತಿತ್ತು. ನಗರದಲ್ಲಿ ಇನ್ನೂ ಸಾವಿರಾರು ಸಶಸ್ತ್ರ ರಜಾಕಾರರು ನಿರಾತಂಕವಾಗಿ ಅಡ್ಡಾಡುತ್ತಿದ್ದರು. ಕಾಸೀಮ ರಜವಿ ಅವರಿಗೆ ಆರು ಸಾವಿರ ರಾಯಫಲ್‌ಗಳನ್ನೊದಗಿಸಿ ಸಾಧ್ಯವಾದಷ್ಟು ಹಿಂದುಗಳನ್ನು ಕೊಲ್ಲಬೇಕೆಂದು ಸೂಚನೆಯನ್ನು ಕೊಟ್ಟಿದ್ದ.

"ಹೈದರಾಬಾದದಲ್ಲಿ ಈ ನಿಮಿಷದಲ್ಲಿ ಯಾವ ಸರಕಾರವೂ ಇಲ್ಲ. ನಗರದಲ್ಲಿಯ ಸೈನಿಕರು ಮತ್ತು ಪೋಲೀಸರು ಕಣ್ಮರೆಯಾಗಿದ್ದಾರೆ. ಮೇಜರ ಜನರಲ್ ಚೌಧರಿಯವರು ಹೈದರಾಬಾದಕ್ಕೆ ಬರಲು ಒಂದೆರಡು ದಿನ ಬೇಕಾದೀತು. ಅದು ವರೆಗೆ ನಗರದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಲು ಜನರಲ್ ಎಲ್ ಎಡ್ರೂಸರಿಗೆ ಅಜ್ಞಾಪಿಸಬೇಕು. ಅವರು ಕೂಡಲೆ ಕ್ರಮ ಕೈಕೊಳ್ಳದಿದ್ದರೆ ನಗರದಲ್ಲಿ ಹಿಂಸೆ ತಾಂಡವವಾಡಿ ನಿರಪರಾಧಿ ಜನರ ಕಗ್ಗೊಲೆಯಾದೀತು" ಎಂದು ನಿಜಾಮರಿಗೆ ಹೇಳಿದೆ.

ನಿಜಾಮರು ತತ್ಕ್ಷಣ ಜನರಲ್ ಎಲ್ ಎಡ್ರೂಸರನ್ನು ಕರೆಸಿ ನಗರದಲ್ಲಿ ಶಾಂತಿ ಸುವವಸ್ಥೆಯನ್ನು ಕಾಪಾಡಿಕೊಳ್ಳಲು ಆಜ್ಞೆಯಿತ್ತರು.

"ಸರ್ ಮಿರ್ಜಾರನ್ನು ಕರತರಲು ಒಂದು ವಿಮಾನವನ್ನು ಕಳಿಸುತ್ತೇನೆ. ಅವರು ಸರಕಾರವನ್ನು ನಡೆಸಿಕೊಂಡು ಹೋಗಬೇಕು" ಎಂದು ನಿಜಾಮರು ಹೇಳಿದರು.

"ನನ್ನ ಸರಕಾರದಿಂದ ಇದುವರೆಗೆ ಯಾವ ಸೂಚನೆಯೂ ಬಂದಿಲ್ಲ. ಸರ್ ಮಿರ್ಜಾರು ಆಡಳಿತ ನಡೆಸುವದಕ್ಕೆ ಸರಕಾರ ಒಪ್ಪುವದೋ ಇಲ್ಲವೋ ಹೇಳಲಾರೆ. ಆದರೆ ಮಧ್ಯಾಂತರದ ಅವಧಿಯಲ್ಲಿ ನಿರಪರಾಧಿಗಳ ರಕ್ತ ಹರಿಯದಂತೆ ನೋಡಿಕೊಳ್ಳಲು ಏನಾದರೊಂದು ಆಡಳಿತ ವ್ಯವಸ್ಥೆಯನ್ನು ಮಾಡಲೇಬೇಕು" ನಾನಂದೆ.

"ಎಡ್ರೂಸ ಮತ್ತು ದೀನ ಯಾರ ಜಂಗರಿಗೆ ಆಡಳಿತ ನಡೆಸಲು ಹೇಳುತ್ತೇನೆ."

ಈ ಇಬ್ಬರು ಗೃಹಸ್ಥರ ಕೈಯಲ್ಲಿ ಲಕ್ಷಾವಧಿ ನಿರಪರಾಧಿ ಹಿಂದುಗಳ ಅದೃಷ್ಟವನ್ನೊಪ್ಪಿಸುವ ವಿಚಾರ ನನಗೆ ಒಪ್ಪಲಿಲ್ಲ.

"ಇನ್ನು ಮುಂದೆ ನೀವು ಯಾವ ಮಂತ್ರಿಮಂಡಳವನ್ನು ನೇಮಿಸುವದಾದರೂ ಸಂಸ್ಥಾನ ಮಂತ್ರಿ ಶಾಖೆಯ ಸಲಹೆ ಪಡೆದೇ ನೇಮಿಸಬೇಕಾಗುವದು. ಜನರಲ್ ಚೌಧರಿಯವರು ಇಲ್ಲಿಗೆ ಬಂದು ಸಂಪರ್ಕ ಸಾಧನಗಳೆಲ್ಲ ಸರಿಪಟ್ಟ ಮೇಲೆಯೇ ಅದು ಸಾಧ್ಯ. ಅಲ್ಲಿಯವರೆಗೆ ಜನರ ವಿಶ್ವಾಸ ಗಳಿಸಲು ಎಡ್ರೂಸ್ ಮತ್ತು ದೀನ ಯಾರ ಜಂಗ್‌ರೊಂದಿಗೆ ಜನಮಾನ್ಯರಾದ ಹಿಂದುಗಳನ್ನು ನೇಮಿಸಬೇಕು."

"ಯಾರು ಇರಲಿ ಎನ್ನುತ್ತೀರಿ ?"

ರಾಮಾಚಾರ್ಯ ಮತ್ತು ಪನ್ನಾಲಾಲ ಪಿಟ್ಟಿಯವರು ಹೈದರಾಬಾದದ ಹಿಂದುಗಳ ವಿಶ್ವಾಸ ಪಾತ್ರರು ಎಂದು ಗೊತ್ತಿದ್ದ ನಾನು ಅವರಿಬ್ಬರ ಹೆಸರು ಸೂಚಿಸಿದೆ.

ಅಂಥ ವಿಷಮ ಗಳಿಗೆಯಲ್ಲೂ ನಿಜಾಮರ ಬುದ್ಧಿವಂತಿಕೆ ಅವರ ಕೈ ಬಿಡಲಿಲ್ಲ. "ಮುಸ್ಲಿಂ ಸಾರ್ವಜನಿಕ ಪ್ರಮುಖರಾದ ಅಬ್ದುಲ್ ಹಸನ ಸಯ್ಯದ ಅಲಿಯವರನ್ನೂ ಯಾಕೆ ಸೇರಿಸಿಕೊಳ್ಳಬಾರದು ?" ಎಂದವರು ಪ್ರಶ್ನಿಸಿದರು.

ನಾನು 'ಹೂಂ' ಎಂದೆ. ನನ್ನ ಸೂಚನೆಯಂತೆ ಈ ಆಡಳಿತ ವರ್ಗಕ್ಕೆ ವರ್ಹಾಡದ ರಾಜಕುಮಾರರು ಮುಖ್ಯರೆಂದು ನೇಮಿಸಲ್ಪಟ್ಟರು.

ಇದೇ ಸಮಯದಲ್ಲಿ ಭದ್ರತಾ ಮಂಡಳದ ಸಭೆ ಪ್ಯಾರಿಸ್ಸಿನಲ್ಲಿ ಸೇರಿ ಭಾರತದ ವಿರುದ್ಧ ಹೈದರಾಬಾದದ ದೂರಿನ ಪ್ರಕರಣದಲ್ಲಿ

ಮೊಯಿನ ನವಾಜರ ವಾದವನ್ನು ಕೇಳಿಕೊಳ್ಳುತ್ತಲಿತ್ತು. ಆದ್ದರಿಂದ ನಿಜಾಮರು ಜಗತ್ತನ್ನುದ್ದೇಶಿಸಿ ಒಂದು ಆಕಾಶವಾಣಿ ಭಾಷಣವನ್ನು ಮಾಡಿ ತಾವು ಪೋಲೀಸ ಕ್ರಮವನ್ನು ಸ್ವಾಗತಿಸಿದ್ದೇವೆ; ಸಂಸ್ಥಾನದಲ್ಲಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಸಹಾಯ ಮಾಡುವದಕ್ಕಾಗಿ ಹಿಂದೀ ಸೈನ್ಯಕ್ಕೆ ಹೈದರಾಬಾದಕ್ಕೆ ಬರಲು ಆಮಂತ್ರಣವಿತ್ತಿದ್ದೇವೆ; ಲಾಯಿಕ ಅಲಿ ಮಂತ್ರಿಮಂಡಳವು ಭದ್ರತಾ ಮಂಡಳಕ್ಕೆ ಮಾಡಿಕೊಂಡಿದ್ದ ಮನವಿಯನ್ನು ತಾವು ಹಿಂತೆಗೆದುಕೊಳ್ಳುತ್ತಿದ್ದೇವೆ, ಎಂದು ತಿಳಿಸಬೇಕು ಎಂದು ನಾನು ನಿಜಾಮರಿಗೆ ಹೇಳಿದೆ.

ಆದರೆ ನಿಜಾಮರು ತಮ್ಮ ಜೀವಮಾನದಲ್ಲಿ ಆಕಾಶವಾಣಿ ಕೇಂದ್ರವನ್ನೇ ಕಂಡಿರಲಿಲ್ಲೆಂದು ತೋರುತ್ತದೆ.

"ಆಕಾಶವಾಣಿ ಭಾಷಣವನ್ನು ಮಾಡುವದು ಹೇಗೆ?" ಎಂದು ಅವರು ಕೇಳಿದರು.

"ಬಹಳ ಸುಲಭ. ನೀವು ಒಂದು ಕೊಳಿವೆಯಲ್ಲಿ ಮಾತಾಡಿದರೆ ತೀರಿತು."

ಅವರ ವಿನಂತಿಯಂತೆ ಅವರ ಭಾಷಣ ಮುಗಿದ ಬಳಿಕ ಕೆಲ ಮಾತುಗಳನ್ನು ಹೇಳಲು ನಾನು ಒಪ್ಪಿದೆ. ಬಳಿಕ ಅವರ ಸಂದೇಶವನ್ನು ಬರೆದು ತಯಾರಿಸಲಾಯಿತು. ನಾನಿತ್ತ ಸಹಾಯಕ್ಕಾಗಿ ನನ್ನನ್ನು ಅಭಿನಂದಿಸುವ ವಾಕ್ಯವೊಂದನ್ನು ಅವರು ಅದರಲ್ಲಿ ಸೇರಿಸಿದರು.

ಲಾಯಿಕ ಅಲಿಯನ್ನು ಭೆಟ್ಟಿಯಾಗಲು ಕಿಂಗ್ ಕೋಠಿಯಿಂದ ನಾನು ಶಾಹಮಂಜಿಲಕ್ಕೆ ತೆರಳಿದೆ. ಅವರು ನನ್ನ ವಿಚಾರದಲ್ಲಿ ತೋರಿದ್ದ ಸೌಜನ್ಯಕ್ಕಾಗಿ ನಾನು ಅವರನ್ನು ಕಂಡು ಅವರ ಉಪಕಾರ ಸ್ಮರಿಸುವದು ನನ್ನ ಕರ್ತವ್ಯವಾಗಿತ್ತು. ಲಾಯಿಕ ಅಲಿ ಅದೃಷ್ಟಕ್ಕೆ ತಲೆ ಬಗ್ಗಿಸಿ ದವಗಂತಿದ್ದರು.

ಬಳಿಕ ನಾನು ಜನರಲ್ ಎಲ್ ಎಡ್ರೂಸರನ್ನು ಕರೆಯಿಸಿಕೊಂಡೆ. ಹೈದರಾಬಾದದ ಸುತ್ತೆಲ್ಲ ಸುರಂಗಗಳನ್ನು ಇಟ್ಟಿದ್ದರೆಂದು ನನಗೆ ಗೊತ್ತಿತ್ತು. ಅವನ್ನೆಲ್ಲ ತೆಗೆಸಲು ವ್ಯವಸ್ಥೆ ಮಾಡಬೇಕೆಂದು ನಾನು ಅವರಿಗೆ ಹೇಳಿದೆ.

ಅಲ್ಲಿಂದ ನಾನು ನೇರವಾಗಿ ವಾಯರಲೆಸ್ ಸ್ಟೇಶನ್ನಿಗೆ ಹೋಗಿ ನನ್ನ ಆಕಾಶವಾಣಿ ಭಾಷಣವನ್ನು ಬರೆದೆ. ನಿಜಾಮರು ನಮ್ಮ ಭಾಷಣ ಪ್ರಾರಂಭಿಸಿದಾಗ ಹೇಗೆ ಮಾತಾಡಬೇಕೆಂದು ತಿಳಿಯದೆ ತಡವರಿಸಿದರು. ಅವರು ತಪ್ಪು ತಪ್ಪಾಗಿ ಓದುತ್ತ ನನ್ನ ಪ್ರಸ್ತಾಪ ಬಂದಾಗ, "ಕೆ ಎಮ್ ಸಾಹೇಬ ಮುನ್ನಿ ಸಾಹೇಬ" ಎಂದು ಓದಿದರು. ಅವರ ಆಕಾಶವಾಣಿ ಭಾಷಣ ಹೀಗಿತ್ತು:

ನನ್ನ ಪ್ರಿಯ ಪ್ರಜೆಗಳೇ,

ನಾನು ಇಂದು ಭಾರತದ ಗವರ್ನರ ಜನರಲ್ ಶ್ರೀ ರಾಜಗೋಪಾಲಾಚಾರಿಯವರಿಗೆ ಈ ಮುಂದಿನ ಸಂದೇಶವನ್ನು ಕಳಿಸಿದ್ದೇನೆ ಎಂದು ತಿಳಿಸಲು ಸಂತೋಷವಾಗುತ್ತಿದೆ:

ನನ್ನ ಸರಕಾರ ರಾಜೀನಾಮೆ ಕೊಟ್ಟು ರಾಜಕೀಯ ಪರಿಸ್ಥಿತಿಯನ್ನು ನನ್ನ ನಿಯಂತ್ರಣದಲ್ಲಿಟ್ಟುಕೊಳ್ಳಲು ಕೇಳಿಕೊಂಡಿದೆ. ಅದಕ್ಕುತ್ತರವಾಗಿ ಹೀಗೆ ಮೊದಲೇ ಮಾಡಬೇಕಾಗಿತ್ತು, ಈಗಿನ ಬಿಕ್ಕಟ್ಟಿನ ಸ್ಥಿತಿಯಲ್ಲಿ ನಾನೇನೂ ಮಾಡಲಾರೆ ಎಂದು ನಾನು ಹೇಳಿದೆ. ಆದರೂ ಯುದ್ಧ ನಿಲ್ಲಿಸಲು ನನ್ನ ಸೈನ್ಯಕ್ಕೆ ಆಜ್ಞೆಯಿತ್ತಿದ್ದೇನೆ. ರಜಾಕಾರ ಸಂಸ್ಥೆ ಅಕ್ರಮವೆಂದು ಸಾರಿದ್ದೇನೆ. ನಾಳೆ ಬೋಲಾರಾಮ ಮತ್ತು ಸಿಕಂದರಾಬಾದಗಳನ್ನು ವಶಕ್ಕೆ ತೆಗೆದುಕೊಳ್ಳಲು ಭಾರತದ ಒಕ್ಕೂಟಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ.

ಸಂಯುಕ್ತರಾಷ್ಟ್ರ ಸಂಘದ ಭದ್ರತಾಮಂಡಳದಲ್ಲಿ ಹೈದರಾಬಾದದ ದೂರನ್ನು ಪ್ರತಿಪಾದಿಸುತ್ತಿರುವ ನನ್ನ ಹಳೆಯ ಮಂತ್ರಿಮಂಡಳದ ಪ್ರತಿನಿಧಿಗಳಿಗೆ ನಾನು ಭಾರತದೊಂದಿಗೆ ಸ್ನೇಹದ ಹೊಸ ಅಧ್ಯಾಯವನ್ನು ಪ್ರಾರಂಭಿಸುತ್ತಿರುವದರಿಂದ ಆ ವಿಷಯವನ್ನು ಮುಂದರಿಸಬಾರದು ಎಂದು ಆಜ್ಞೆ ಕಳಿಸಿದ್ದೇನೆ.

ಬಳಿಕ ನನ್ನ ಭಾಷಣವನ್ನು ಬಿತ್ತರಿಸಿದೆ.

ನಾನು ದಕ್ಷಿಣಾ ಸದನಕ್ಕೆ ತಿರುಗಿ ಹೋಗುತಿದ್ದಾಗ ಹೈದರಾಬಾದ ಮತ್ತು ಸಿಕಂದರಾಬಾದ

ಗಳ ಬೀದಿಬೀದಿಗಳು, ಅತ್ಯಂತ ಉತ್ತೇಜಿತರಾಗಿ ರಾಷ್ಟ್ರೀಯ ಘೋಷಣೆಗಳನ್ನು ಮಾಡುತ್ತಿದ್ದ ಹಿಂದುಗಳಿಂದ ತುಂಬಿ ಹೋದದ್ದನ್ನು ಕಂಡೆ. ಅನೇಕ ಬೀದಿಗಳಲ್ಲಿ ರಾಷ್ಟ್ರಧ್ವಜಗಳ ಮೆರವಣಿಗೆ ಹೊರಟಿತ್ತು. ಜ್ವರ ಕುದಿಯುತ್ತಿದ್ದರೂ ಒಂದೆರಡು ಕಡೆಗಳಲ್ಲಿ ನಾನು ಕಾರಿನಿಂದಿಳಿದು ನೆರೆದ ಜನರನ್ನುದ್ದೇಶಿಸಿ ಮಾತನಾಡಬೇಕಾಗಿ ಬಂತು. ಯಾವದೇ ಮತ ಪ್ರದರ್ಶನ ನಡೆಸಬಾರದು, ಹಿಂಸೆಯಲ್ಲಿ ತೊಡಗಬಾರದು ಎಂದೂ ನಾನು ಹೇಳಬೇಕಾಯಿತು.

ಜನರಲ್ ಎಲ್ ಎಡ್ರೂಸರು ರಜವಿಯ ಮನೆಯ ಸುತ್ತ ಕಾವಲಿರಿಸಿದರು. ಅವನೇನೂ ಪ್ರತಿಭಟನೆ ತೋರಿಲಿಲ್ಲ. ಆ ನಿಮಿಷದಲ್ಲಿ ಅವನು ಹತಾಶನಾಗಿದ್ದನು.

ವಿಜಯ ಪ್ರವೇಶ

ಹೈದರಾಬಾದದ ಮೇಲೆ ಕೈಕೊಳ್ಳುವ ಕ್ರಮಕ್ಕಾಗಿ ಯೋಜಿಸಲ್ಪಟ್ಟ ಸೈನ್ಯದಲ್ಲಿ ಮೊದಲಿನ ತಂಡಗಳು ಮೇ ತಿಂಗಳಲ್ಲೇ ಆಯಕಟ್ಟಿನ ಸ್ಥಳಗಳಿಗೆ ಹೋಗತೊಡಗಿದ್ದವು. ಕೊನೆಯ ತಂಡಗಳು ಜುಲೈ ತಿಂಗಳ ಮಧ್ಯದ ಸುಮಾರಿಗೆ ಅವನ್ನು ಕೂಡಿಕೊಂಡವು. ಮಳೆಗಾಲವಿಡೀ ಅವನ್ನು ದಕ್ಷವಾದ ಪಡೆಯನ್ನಾಗಿ ಮಾಡುವ ಕಾರ್ಯ ನಡೆಯಿತು. ಸಪ್ಟಂಬರ ತಿಂಗಳಲ್ಲಿ ಅದೊಂದು ಸುಮಾರು ೨೦,೦೦೦ ಸೈನಿಕರ ಸುಸಜ್ಜಿತವಾದ, ಆತ್ಮವಿಶ್ವಾಸವನ್ನುಳ್ಳ, ಶಿಸ್ತು-ಸಂಯಮದ ಪಡೆಯಾಗಿ ರೂಪುಗೊಂಡಿತು.

ಹೈದರಾಬಾದದಲ್ಲಿ ಬ್ರಿಟಿಶ ಮಾದರಿಯಲ್ಲಿ ರಚಿತವಾದ ೨೨,೦೦೦ ಕಾಯಂ ಸೈನ್ಯವಿತ್ತು. ತೋಫುಗಳ ಕೊರತೆ ಮಾತ್ರ ಈ ಪಡೆಗಿತ್ತು. ಇದಲ್ಲದೆ ಆಧುನಿಕ ಮಾದರಿಯ ಚಿಕ್ಕ ಶಸ್ತ್ರಾಸ್ತ್ರಗಳನ್ನು ಹೊಂದಿದ ೧೦,೦೦೦ ಜನರ ಹಂಗಾಮಿ ಪಡೆಯಿತ್ತು. ೧೦,೦೦೦ ಸಶಸ್ತ್ರ ಪೋಲೀಸದಳವಿತ್ತು. ಅನೇಕ ಬಗೆಯ ಮದ್ದುಗುಂಡುಗಳುಳ್ಳ, ಆದರೆ ಶಿಸ್ತನ್ನರಿಯದ ೧೦,೦೦೦ ಅರಬರು ಸಂಸ್ಥಾನದಲ್ಲಿದ್ದರು. ೧,೦೦,೦೦೦ ದಷ್ಟು ಇದ್ದ ರಜಾಕಾರರಲ್ಲಿ ೨೦,೦೦೦ ಜನರ ಬಳಿ ಯಾವದಾದರೊಂದು ಬಗೆಯ ಬಂದೂಕು ಇತ್ತು. ಉಳಿದವರಲ್ಲಿ ಖಡ್ಗ, ಭರ್ಚಿಗಳಿದ್ದವು.

ಪೋಲೀಸ ಕ್ರಮಕ್ಕೆಂದು ನಿಯೋಜಿತರಾದ ಹಿಂದೀ ಅಧಿಕಾರಿಗಳಲ್ಲಿ ಹೆಚ್ಚಿನವರಿಗೆ ಪೋಲೀಸ ಕ್ರಮವು ಶೀಘ್ರದಲ್ಲಿ ಯಶಸ್ವಿಯಾಗುವದೆಂಬ ನಂಬಿಕೆ ಇತ್ತು. ಆದರೆ ಭಾರತ ಸೇನೆಯ ಬ್ರಿಟಿಶ ದಂಡನಾಯಕ ಜನರಲ್ ಬುಚರರು ಮಾತ್ರ ಕೊನೆಯ ವರೆಗೂ ಸಾಶಂಕರಾಗಿಯೇ ಇದ್ದರು.

ಜಿನ್ನಾರ ಸಾವಿನ ಸುದ್ದಿ ೧೨ ನೆಯ ದಿನಾಂಕ ಸಿಕ್ಕಿತು. ಅವರ ನಿಧನಕ್ಕೂ ಪೋಲೀಸಕ್ರಮಕ್ಕಾಗಿ ನಿರ್ಧರಿಸಿದ ದಿನಕ್ಕೂ ಸಂಬಂಧವಿತ್ತು ಎಂದು ಕೆಲವರು ಹೇಳುತ್ತಾರೆ. ಆದರೆ ಸಪ್ಟಂಬರ ೧೩ ಕ್ಕೆ ಪೋಲೀಸಕ್ರಮ ಕೈಕೊಳ್ಳಬೇಕೆಂದು ೯ ನೆಯ ದಿನಾಂಕವೇ ನಿಶ್ಚಿತಪಡಿಸಲಾಗಿತ್ತು. ಏಕೆಂದರೆ ಸೈನ್ಯಗಳನ್ನು ಕೊನೆಯ ಘಟ್ಟಕ್ಕೆ ತಂದು ನಿಲ್ಲಿಸಿಕೊಳ್ಳಲು ಮೂರು ದಿನಗಳ ಮುನ್ಸೂಚನೆ ಬೇಕೆಂದು ಸೈನ್ಯಾಧಿಕಾರಿಗಳು ಹೇಳಿದ್ದರು.

ಜನರಲ್ ಬುಚರರು ೧೨ ನೆಯ ದಿನಾಂಕ ಮಧ್ಯರಾತ್ರಿಯಲ್ಲಿ ಸರದಾರರನ್ನು ಟೆಲಿಫೋನಿನಲ್ಲಿ ಮಾತಾಡಿಸಿದರೆಂದು ನನಗೆ ಆ ಮೇಲೆ ತಿಳಿಯಿತು. ಆಗ ಬುಚರರು ಪೋಲೀಸ ಕ್ರಮವನ್ನು ಕೆಲ ದಿನಗಳಮಟ್ಟಿಗಾದರೂ ಮುಂದಕ್ಕೆ ಹಾಕಬೇಕೆಂದು ಸರದಾರರಿಗೆ ಸಲಹೆಯಿತ್ತರು. ಅಹಮದಾಬಾದ ಮುಂಬಯಿಗಳ ಮೇಲೆ ವಿಮಾನ ದಾಳಿಯಾಗಬಹುದಾದ ಸಂಭವವನ್ನೂ ಅವರು ಪ್ರಸ್ತಾಪಿಸಿದರು. ಸರದಾರರು ವಿಚಲಿತರಾಗಲಿಲ್ಲ ಮಹಾಯುದ್ಧ ಕಾಲದಲ್ಲಿ ಲಂಡನ್ ಮೇಲೆ ವಿಮಾನ ದಾಳಿಯಾಗಲಿಲ್ಲವೆ? ಎಂದು ಕೇಳಿ ಲಂಡನ್ನಿನಂತೆ ಮುಂಬಯಿ ಅಹಮದಾಬಾದು

ಗಳೂ ಈ ಸಂಕಷ್ಟವನ್ನು ಸಹಿಸಿಕೊಳ್ಳಬಲ್ಲವು ಎಂದು ಶಾಂತವಾಗಿ ಹೇಳಿದರು.

ಇಲ್ಲಿ ಒಂದು ಮಾತನ್ನು ಹೇಳಲೇಬೇಕು. ಜನರಲ್ ಬುಚರ್ ಮತ್ತು ಪೋಲೀಸಕ್ರಮಕ್ಕೆ ವಿರೋಧಿಗಳಾಗಿದ್ದ ಅವರಂಥ ಇತರರು ಪೋಲೀಸ ಕ್ರಮ ಅನೇಕ ತಿಂಗಳುಗಳ ವರೆಗೆ ನಡೆಯುವದೆಂಬ ಅಭಿಪ್ರಾಯದವರಾಗಿದ್ದರು. ಆದರೆ ಕೆಲ ಹಿಂದೀ ಸೈನ್ಯಾಧಿಕಾರಿಗಳ ಸಲಹೆಯನ್ನು ಪಡೆದಿದ್ದ ಸರದಾರ ಪಟೇಲರು ಪೋಲೀಸ ಕ್ರಮ ಒಂದು ವಾರಕ್ಕಿಂತ ಹೆಚ್ಚು ಕಾಲ ನಡೆಯುವ ಅಗತ್ಯವಿಲ್ಲ ಎಂದು ದೃಢವಾಗಿ ನಂಬಿದ್ದರು. ಇದೇ ದಿನಗಳಲ್ಲಿ ಪೋಲೀಸ ಕ್ರಮ ಮುಗಿದಾಗ ತಮ್ಮ ಅಂದಾಜು ಎರಡು ದಿನಗಳಿಂದ ತಪ್ಪಿದ್ದಕ್ಕಾಗಿ ಸರದಾರರು ಬಹಿರಂಗವಾಗಿ ವಿಷಾದ ವ್ಯಕ್ತಪಡಿಸಿದರು.

ಸಪ್ಟಂಬರ ೧೩ನೆಯ ದಿನಾಂಕ ನಸುಕಿನಲ್ಲಿ ೪ ಗಂಟೆಗೆ ಹಿಂದೀ ಸೈನ್ಯದ ಮುಖ್ಯ ತುಕಡಿ ಸೊಲ್ಲಾಪೂರ ಬದಿಯಿಂದ ಹೈದರಾಬಾದನ್ನು ಪ್ರವೇಶಿಸಿತು. ಬೆಳಗಾಗುವಾಗ ಉಳಿದ ನಾಲ್ಕು ಸಹಾಯಕ ತುಕಡಿಗಳು ಅಹಮದನಗರ, ಮೈಸೂರು, ಮದ್ರಾಸ ಮತ್ತು ಮಧ್ಯಪ್ರಾಂತದ ಗಡಿಗಳಿಂದ ಹೈದರಾಬಾದದೊಳಗೆ ಹೊಕ್ಕವು.

ಅನೇಕ ದಿನಗಳ ವರೆಗೆ ಗ್ರೀನ್ಸಲ್ಯಾಂಡ್ಸ ದಲ್ಲಿ ಆದರಾತಿಥ್ಯ ಪಡದಿದ್ದ ವಿದೇಶೀ ಸುದ್ದಿಗಾರನೊಬ್ಬ ಕಳಿಸಿದ ಸುದ್ದಿ ಇದೇ ಸಮಯದಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಯಿತು. "ಹೈದರಾಬಾದದಲ್ಲಿ ರಕ್ತವೇನಾದರೂ ಹರಿದರೆ ಹಕ್ಕಿಯಂತಿರುವ ಮುನ್ಷಿಯ ರಕ್ತವೇ ಮೊದಲು ಹರಿಯುವದು!"

ಪೋಲೀಸ ಕ್ರಮದ ಸುದ್ದಿ ಜಗತ್ತಿಗೆ ಜಾಹೀರಾದಾಗ ಹೈದರಾಬಾದದ ಗ್ರೀನ್ಸ್‌ಲ್ಯಾಂಡ್ಸದ ಆತಿಥ್ಯಕ್ಕೆ ಪುರಸ್ಕಾರ ದೊರೆಯಿತು. ವಿದೇಶೀ ಪತ್ರಿಕೆಗಳು ಭಾರತವನ್ನು ಕಟುವಾಗಿ ಟೀಕಿಸಿದವು. ಭಾರತದ ಬಗ್ಗೆ ವಿದೇಶೀಯರ ದೃಷ್ಟಿಕೋನಕ್ಕೆ ಇದೊಂದು ಉತ್ತಮ ಉದಾಹರಣೆಯಾಗಿತ್ತು. ಜಾತೀಯ ಸರ್ವಾಧಿಕಾರಿತ್ವದ ತಳಹದಿಯ ಮೇಲೆ ನಿಜಾಮರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟವೇ ಅವರಿಗೆ ಉದಾತ್ತವೆಂದು ಕಾಣಿಸಿತ್ತು. ಹೈದ್ರಾಬಾದದ ಜನರ ಸಂಕಷ್ಟಗಳಿಗಿಂತ ಅಥವಾ ನಾಲ್ಕು ಜಿಲ್ಹೆಗಳಲ್ಲಿ ಕಮ್ಯುನಿಸ್ಟರ ಆಕ್ರಮಣಕ್ಕಿಂತ ಅಥವಾ ರಜಾಕಾರರ ನಿರ್ಮೂಲನದ ಮೇಲೆಯೆ ಭಾರತದ ಪ್ರಜಾಪ್ರಭುತ್ವದ ಅಸ್ತಿತ್ವ ಅವಲಂಬಿಸಿತ್ತೆಂಬುದಕ್ಕಿಂತ ನಿಜಾಮರಲ್ಲೇ ಅವರಿಗೆ ಹೆಚ್ಚು ಆಸಕ್ತಿಯಿದ್ದಿತು.

೧೩ನೆಯ ದಿನಾಂಕ ಭದ್ರತಾ ಮಂಡಳವು ತನ್ನ ಕಾರ್ಯಕ್ರಮ ಪಟ್ಟಿಯಲ್ಲಿ ಭಾರತದ ವಿರುದ್ಧ ಹೈದರಾಬಾದದ ದೂರನ್ನು ಸೇರಿಸಿಕೊಂಡಿತು.

ಪುಣೆಯಲ್ಲಿಯ ಸದರ್ನ ಕಮಾಂಡದ ಸೇನಾಪತಿ ಜನರಲ್ ರಾಜೇಂದ್ರಸಿಂಹಜಿಯವರು ೧೩ನೆಯ ದಿನಾಂಕ ಸೈನ್ಯಕ್ಕೆ ಇತ್ತ ಆಜ್ಞೆಯಿದು: "ನಿಮ್ಮ ಧ್ಯೇಯ ಸಾಧನೆಗಾಗಿ ಮುನ್ನುಗ್ಗಿರಿ. ಪ್ರತಿಭಟನೆಯನ್ನು ನಿರ್ದಾಕ್ಷಿಣ್ಯವಾಗಿ ತುಂಡರಿಸಿರಿ. ಧರ್ಮ, ಜಾತಿ, ಪಂಥಗಳ ಭೇದಭಾವವಿಲ್ಲದೆ ಕಾಯದೆಗನುಸಾರವಾಗಿ ನಡೆಯುವವರನ್ನು ಸಂರಕ್ಷಿಸಿರಿ."

೧೩ನೆಯ ದಿನಾಂಕ ನಸುಕಿನಲ್ಲಿ ಹಿಂದೀ ಸೈನ್ಯ ಹೈದರಾಬಾದನ್ನು ಪ್ರವೇಶಿಸಿದ್ದನ್ನು ಕಂಡು ಹೈದರಾಬಾದದ ನಾಗರಿಕ ಮತ್ತು ಮಿಲಿಟರಿ ಅಧಿಕಾರಿಗಳಿಗೆ ವಜ್ರಾಘಾತವಾಯಿತು.

ಹಿಂದೀ ಸೈನ್ಯವನ್ನು ನಲದುರ್ಗದಲ್ಲಿಯೇ ತಡೆಹಿಡಿದು ನಿಲ್ಲಿಸಿ ಜನರಲ್ ಚೌಧರಿಯವರ ಸೈನ್ಯವನ್ನು ಹಿಂದಕ್ಕೋಡಿಸಲಾಗುವದೆಂದು ಜನರಲ್ ಎಲ್ ಎಡ್ರೂಸ ಮತ್ತು ಕಾಸೀಮ ರಜವಿ ಹೇಳಿದ್ದನ್ನು ಅವರು ನಂಬಿದ್ದರು.

ಹೈದರಾಬಾದ ಸೈನ್ಯವಾಗಲಿ, ಅಸಂಘಟಿತರಾದ ಅರಬರು ಅಥವಾ ರಜಾಕಾರರಾಗಲಿ ಯುದ್ಧೋನ್ಮುಖ ಸೈನ್ಯವನ್ನು ಕಂಡಿರಲಿಲ್ಲ. ದೃಢನಿರ್ಧಾರದಿಂದ, ಯಮಸ್ವರೂಪರಾಗಿ ಕಾರ್ಯ

ಮಾಡುವ ಸೈನಿಕರನ್ನು ಕಂಡಷ್ಟೂ ಅವರಿಗೆ ಯಾರಿಗೆ ಬೇಕು ಯುದ್ಧ ? ಎನಿಸಿತು.

ನಲದುರ್ಗದಲ್ಲಿ ಬಲವಾದ ಸೈನ್ಯವಿದ್ದರೂ ಕೆಲವೇ ತಾಸುಗಳುಲ್ಲಿ ಅದು ಹಿಂದೀ ಸೈನಿಕರ ಕೈವಶವಾಯಿತು.

ಅನಂತರ ಪಲಾಯನ ಯುಗ ಆರಂಭವಾಯಿತು. ಹಿಂದೀ ಸೈನ್ಯಗಳು ಕಾಣಿಸಿದಲ್ಲೆಲ್ಲ ಹೈದರಾಬಾದ ಸೈನ್ಯ ಹೆಸರಿಗಷ್ಟೇ ಪ್ರತಿಭಟಿಸಿತು. ಇಲ್ಲವೆ ಶಸ್ತ್ರಾಸ್ತ್ರಗಳನ್ನು ಚಲ್ಲಿ ಹೈದರಾಬಾದ ನಗರದತ್ತ ಓಡಿತು. ರಜಾಕಾರರೂ ಹಂಗಾಮಿ ಪಡೆಗಳೂ ಒಂದು ಬಗೆಯ ಕೂಟಯುದ್ಧವನ್ನು ಮಾಡಲು ಪ್ರಯತ್ನಿಸಿದರು. ಆದರೆ ಶತ್ರುಗಳ ಮೊದಲನೆಯ ಗುಂಡು ತಮ್ಮ ಮೇಲೆ ಹಾರಿದೊಡನೆ ಕಾಲಿಗೆ ಬುದ್ಧಿ ಹೇಳಿದರು.

ಹೈದರಾಬಾದ ಸೈನ್ಯ ಕೇಂದ್ರದಲ್ಲಿ ಗೊಂದಲವೊ ಗೊಂದಲವಾಗಿತ್ತು. ಅಧಿಕಾರಿಗಳು ಪರಸ್ಪರ ವಿರೋಧಿ ಆಜ್ಞೆಗಳನ್ನು ಹೊರಡಿಸುತ್ತಿದ್ದರು. ಮೊದಲೇ ಅವರ ಆಜ್ಞೆಯನ್ನು ಪಾಲಿಸುವ ಮನಸ್ಸಿಲ್ಲದ ಅವರ ಕೆಳಗಿನ ಅಧಿಕಾರಿಗಳು ಇದರಿಂದ ಇನ್ನಿಷ್ಟು ಕಕ್ಕಾಬಿಕ್ಕಿಯಾಗುತ್ತಿದ್ದರು. ಹೈದರಾಬಾದ ಸೈನ್ಯದ ಕೆಲ ಅಧಿಕಾರಿಗಳು ಸಮರ ಭೂಮಿಯಿಂದ ಪಲಾಯನ ಮಾಡಿ ಕದನಗಳಲ್ಲಿ ವಿಜಯ ಸಂಪಾದಿಸಿದೆವೆಂಬ ವರದಿಗಳನ್ನು ಒಪ್ಪಿಸಿದರು. ಹೈದರಾಬಾದ ಆಕಾಶವಾಣಿ ಅವುಗಳನ್ನು ಬಿತ್ತರಿಸಿತು. ಆದರೆ ಅವರು ಹೇಳಿದ ಕದನಗಳು ಜರಗಿರಲೇ ಇಲ್ಲ! ರಜಾಕಾರರು ಮತ್ತು ಹೈದರಾಬಾದದ ಕಾಯಂ ಸೈನ್ಯದಲ್ಲಿ ಒಬ್ಬರು ಇನ್ನೊಬ್ಬರಿಗೆ ದ್ರೋಹ ಬಗೆದರೆಂಬ ಆರೋಪ ಪ್ರತ್ಯಾರೋಪಗಳು ಹೊರಟು ಕಲಹವೆದ್ದಿತು.

೧೫ ನೆಯ ದಿನಾಂಕ ಹಿಂದೀ ಸಹಾಯಕ ದಲವೊಂದು ವಿಶೇಷ ಶ್ರಮವಿಲ್ಲದೆ ಔರಂಗಾಬಾದನ್ನು ಪ್ರವೇಶಿಸಿತು.

೧೭ನೆಯ ದಿನಾಂಕ ನಿಜಾಮರು ಯುದ್ಧ ಸಮಾಪ್ತಿ ಆಜ್ಞೆ ಹೊರಡಿಸಿದಾಗ ಪೋಲೀಸ ಕ್ರಮ ಆರಂಭವಾಗಿ ಸರಿಯಾಗಿ ೪ ದಿನ ೧೩ ತಾಸುಗಳಾಗಿದ್ದವು. ಮೇಜರ ಜನರಲ್ ಚೌಧರಿಯವರು ಸುಯೋಜಿತವಾಗಿ ಯೋಗ್ಯ ರೀತಿಯಲ್ಲಿ ಕಾರ್ಯಾಚರಣೆಯನ್ನು ನಿರ್ವಹಿಸಿದ್ದರು. ಅದು ಭಾರತದ ಸೈನಿಕ ಸಾಮರ್ಥ್ಯದ ಕೀರ್ತಿಯನ್ನು ಇಡೀ ಜಗತ್ತಿನಲ್ಲಿ ಹೆಚ್ಚಿಸಿತು.

ಹೈದರಾಬಾದ ಸೈನ್ಯದ ವಿಜಯ ವಾರ್ತೆಯನ್ನು ಆಕಾಶವಾಣಿಯಲ್ಲಿ ಕೇಳಿ ಪಾಕಿಸ್ತಾನದವರು ಹುರುಪುಗೊಂಡಿದ್ದರು. ಒಮ್ಮಿಂದೊಮ್ಮೆ ನಿಜಾಮರು ಅನಿರ್ಬಂಧ ಶರಣು ಬಂದರೆಂಬ ಸುದ್ದಿ ಬಂದಾಗ ರೊಚ್ಚಿಗೆದ್ದ ದೊಡ್ಡ ಸಮುದಾಯವು ಪಾಕಿಸ್ತಾನದಲ್ಲಿ ಭಾರತದ ಹಾಯಕಮೀಶನರರಾಗಿದ್ದ ಶ್ರೀ ಶ್ರೀಪ್ರಕಾಶರ ಮನೆಯನ್ನು ಮುತ್ತಿತು. ಮುಖ್ಯ ಮಂತ್ರಿ ಲಿಯಾಕತ ಅಲಿಖಾನರ ಮನೆಗೆ ಹೋಗಿ ಪಾಕಿಸ್ತಾನ ಸೈನ್ಯ ಭಾರತದ ಮೇಲೆ ದಂಡೆತ್ತಿಹೋಗಬೇಕೆಂದು ಈ ಜನರು ಆಗ್ರಹಪಡಿಸಿದರು. ಹಾಗೆ ಮಾಡುವದು ಸಾಧ್ಯವಿಲ್ಲ ಎಂದು ಅವರಿಗೆ ಮನಗಾಣಿಸಿ ಕೊಡಬೇಕಾದರೆ ಲಿಯಾಕತರಿಗೆ ಸಾಕುಸಾಕಾಯಿತು.

ಅತಿ ಮನೋರಂಜಕ ಸುದ್ದಿಯೊಂದು ನನ್ನ ಕಿವಿಗೆ ಬಿತ್ತು. ಅಂದು ಹೈದರಾಬಾದದಲ್ಲಿಯ ಕ್ಷೌರಿಕರಿಗೆ ಸುಗ್ಗಿಯಾಯಿತು. ರಜಾಕಾರರ ಗಡ್ಡಗಳು ಅವರ ಸಮವಸ್ತ್ರ, ಖಡ್ಗ, ಬರ್ಚಿಗಳೊಂದಿಗೆ ಸಮೀಪದ ಕೆರೆ ಭಾವಿಗಳಲ್ಲಿ ತ್ವರಿತ ಜಲಸಮಾಧಿ ಹೊಂದತೊಡಗಿದ್ದವು!

"ಮಯೂರ ವಿಮಾನದಲ" ಬೆಳಕು ಕಾಣಲೇ ಇಲ್ಲ. ಬೀದರ ವಿಮಾನ ನಿಲ್ದಾಣದಲ್ಲಿ ಇಟ್ಟಿದ್ದ ನಾಲ್ಕು "ಡಮ್ಮಿ" ವಿಮಾನಗಳೇ ಈ "ಮಯೂರ ವಿಮಾನ ದಲದ" ಕಲ್ಪನೆಗೆ ಆಧಾರವಾಗಿದ್ದಂತೆ ತೋರುತ್ತದೆ.

೧೮ ನೇ 'ದಿನಾಂಕ ಮಧ್ಯಾಹ್ನ ನಮ್ಮ ಸೈನ್ಯ ಯಾವ ತಡೆಯೂ ಇಲ್ಲದೆ ಹೈದರಾಬಾದವನ್ನು ಪ್ರವೇಶಿಸಿತು. ರಸ್ತೆ ತುಂಬ ನೆರೆದು ರಾಷ್ಟ್ರಧ್ವಜಗಳನ್ನು ಹಾರಿಸುತ್ತ ಜನರು ಭಾರತೀಯ ಸೈನ್ಯದ ಟ್ಯಾಂಕುಗಳನ್ನು ಸ್ವಾಗತಿಸಿದರು.

Edited, printed and published by H. R. Moharay at

Regd. No. B 7487

KASTU

February, 19

A comprehensive Kannada Monthly Digest which circul throughout the New Mysore State and commands the hig number of readers wherever Kannada is spoken in India. caters to all tastes and is appreciated by all alike.

As. 12
(75 nP.)

ಈ ಸಂಚಿಕೆಯಲ್ಲಿ

ಓದದೆ ಬಿಡಲಾರದ ಲೇಖಗಳಲ್ಲಿ ಕೆಲವು . . . . . .

ಅಲ್ಲಾವುದ್ದೀನಖಾನರ ಆತ್ಮಕಥೆ

ಅಜಂತಾ ಸಂಶೋಧನೆ

ಭಾರತೀಯ ವಜ್ರದ ಕಥೆಗಳು

ಹೆಬ್ಬೆರಳಿನ ಗುರುತುಗಳ ಶಾಸ್ತ್ರ

ನ್ಯಾಯದಾನದ ಸಂಕಷ್ಟಗಳು

ಕೆನಡಾದ ಪಂಚಕನ್ಯೆಯರು

. . . . . . ಇತ್ಯಾದಿ ಇತ್ಯಾದಿ

ಪುಸ್ತಕ ವಿಭಾಗ

ಯುಗ ಸಮಾಪ್ತಿ

(ಹೈದರಾಬಾದು ವಿಮೋಚನೆಯ ಬಗ್ಗೆ ಕೆ. ಎಂ. ಮುನಶಿಯವರು ನಗೆ ನಲಿವು ಕಣ್ಣೀರು ತರುವಂತೆ ಬರೆದ ರೋಮಾಂಚಕ ಇತಿಹಾಸ.)

ಲೋಕಶಿಕ್ಷಣ ಟ್ರಸ್ಟಿನ
ಪ್ರಕಾಶನ